ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ಮೇ 7, 2026 ₹25

ತರಂಗ

ಪಿಯುಸಿ ಎಂಬ ತಿರುವು

ಭಾಗ 2

ಯಾವ್ಯಾವ ವೃತ್ತಿ ಏನೇನು ಅವಕಾಶ?

ಸಾಣೆಕಟ್ಟಾ ಉಪ್ಪಿನ ರುಚಿ ಬಲ್ಲವರೇ ಬಲ್ಲರು!



Gujjadi Swarna Jewellers Private Limited

Udupi | Bengaluru | Mangaluru | Kundapura | Hubballi | Dharwad | Sirsi | Koppala

IN-HOUSE MANUFACTURING
GIA SOLITARES
CERTIFIED DIAMONDS
LOWEST GOLD PRICE IN MARKET
LIFETIME MAINTAINENCE
BUYBACK GUARANTEE
100% BIS HALLMARKED

ಕರ್ನಾಟಕದ ಜನಪ್ರಿಯ ಪ್ರವಾಸಗಳ ಪ್ರವರ್ತಕರು ಅರ್ಪಿಸುತ್ತಿದ್ದಾರೆ...

ಕನ್ನಡ ಬಲ್ಲ ಕಾಳಜಿಯುಕ್ತ ಪ್ರವಾಸಿ ಮೆನೇಜರ್ ಸಹಿತ ತಂಡ ಪ್ರವಾಸಗಳು

ಯುರೋಪ್
ಜುಲೈ7,14– 8,14 ದಿನಗಳು

ಸಿಂಗಾಪುರ, ಮಲೇಷ್ಯಾ
ಜೂನ್, ಜುಲೈ 14 –7 ದಿನಗಳು

ಮನಮೋಹಕ ಥೈಲ್ಯಾಂಡ್
ಜುಲೈ 20,ಆಗಸ್ಟ್17 –5ದಿನಗಳು

ಸ್ಕ್ಯಾಂಡಿನೇವಿಯಾ & ಬಾಲ್ಟಿಕ್
ಜುಲೈ8 – 12ದಿನಗಳು

ಭೂತಾನ್– ನೇಪಾಳ
ಅಕ್ಟೋಬರ್9 – 6/9ದಿನಗಳು

ವಿಯೆಟ್ನಾಮ್–ಕಂಬೋಡಿಯಾ
ನವೆಂಬರ್ 5 – 10ದಿನಗಳು

ಶ್ರೀಲಂಕಾ(ರಾಮಾಯಣ)
ನವೆಂಬರ್ 14 – 8ದಿನಗಳು

ದುಬೈ ಸ್ಪೆಶಲ್ 5ದಿನಗಳು
ನವೆಂಬರ್ 20,ಡಿಸೆಂಬರ್11

ಮಸೂರಿ–ನೈನಿತಲ್
ಮೇ 14 – 9 ದಿನಗಳು

ಚಾರ್ ಧಾಮ್ ಯಾತ್ರಾ
ಸೆಪ್ಟೆಂಬರ್ 10–12 ದಿನಗಳು

ಬೆಸ್ಟ್ ಆಫ್ ರಷ್ಯಾ
& ಅಝುರ್ ಬೈಜಾನ್
ಜೂನ್ 3 – 6ದಿನಗಳು

ಮಾಸ್ಕೋ, ಸೈಂಟ್ ಪೀಟರ್ಸ್‌ಬರ್ಗ್ & ಬಾಕು :

ಕಾಶಿ, ಸಾರಾನಾಥ್,ಅಯೋಧ್ಯಾ & ಪ್ರಯಾಗ್‌ರಾಜ್ ಯಾತ್ರೆ
ಜೂನ್ 8,ಜುಲೈ 6,ಆಗಸ್ಟ್10
ಸೆಪ್ಟೆಂಬರ್ 7, ಅಕ್ಟೋಬರ್5
ನವೆಂಬರ್ 16 : 5ದಿನಗಳು

* ಗಯಾ,ಬೊಧ್ ಗಯಾ,ಕಾಶಿ, ಸಾರಾನಾಥ್,ಅಯೋಧ್ಯಾ & ಪ್ರಯಾಗ್‌ರಾಜ್ ಯಾತ್ರೆ : 7ದಿನಗಳು
* ಕಾಶಿ, ಸಾರಾನಾಥ್,ಅಯೋಧ್ಯಾ, ಚಿತ್ರ ಕೂಟ, ನೈಮಿಷಾರಣ್ಯ & ಪ್ರಯಾಗ್‌ರಾಜ್ ಯಾತ್ರೆ : 7ದಿನಗಳು

***ಗುಜರಾತ್ *ರಾಜಸ್ಥಾನ್ *ಮಧ್ಯಪ್ರದೇಶ್ *ಅಂಡಮಾನ್ *ಲೇಹಾ–ಲಡಾಕ್ *ನೋರ್ತ್ ಈಸ್ಟ್ *ಅಂಡಮಾನ್ *ಮಹಾರಾಷ್ಟ್ರ *ಕಾಶ್ಮೀರ *ಒಡಿಶಾ & ಕೊಲ್ಕತಾ *ದಕ್ಷಿಣ ಭಾರತ್ ಯಾತ್ರಾ**

ನಮ್ಮ ಸರ್ವಂತರ್ಗತ ಪ್ರವಾಸಗಳ ವಿಶೇಷತೆಗಳು :
ವಿಮಾನ ಟಿಕೆಟ್‌ಗಳು । ವೀಸಾ ಮತ್ತಿತರ ವೆಚ್ಚಗಳು । ಸ್ಟಾರ್‌ಹೋಟೆಲ್‌ಗಳಲ್ಲಿ ವಸತಿ । ಭಾರತದಿಂದ ಭಾರತಕ್ಕೆ ಕನ್ನಡ ಬಲ್ಲ ಮಾರ್ಗದರ್ಶಿ ಸೇವೆ । ಊಟೋಪಹಾರಗಳು । ಏರ್ ಪೋರ್ಟ್ ಪ್ರವೇಶ ಶುಲ್ಕ । ದೇಶಗಳ ಒಳಗಣ ಮತ್ತು ಪ್ರಾದೇಶಿಕ ಸಾರಿಗೆ । ಕಾಂಪ್ಲಿಮೆಂಟರಿ ಟ್ರಾವೆಲ್ ಕಿಟ್ । ಪ್ರಿ–ಡಿಪಾರ್ಚರ್ ಸಭೆಗಳು । ಟ್ರಾವೆಲ್/ ಮೆಡಿಕಲ್ ಇನ್ಸುರೆನ್ಸ್ । ನಿಗದಿತ ಪ್ರವೇಶ ಶುಲ್ಕ। ಜಿ.ಎಸ್.ಟಿ. ಮತ್ತು ಸ್ಥಳೀಯ ತೆರಿಗೆಗಳು ಸೇರಿವೆ

ವಿವರಗಳಿಗೆ ಸ್ಕ್ಯಾನ್ ಮಾಡಿರಿ

: ಸಂಪರ್ಕಿಸಿರಿ :

APNA HOLIDAYS®
Holidays Redefined !

ಅಪ್ನಾ ಹಾಲಿಡೇಸ್

ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದಿದೆ

ಉಡುಪಿ : ರಾಜ್ ಟವರ್ಸ್, ಸಿಟಿ ಬಸ್ ಸ್ಟ್ಯಾಂಡ್, **ಫೋನ್ : 9164349876.**
ಮಂಗಳೂರು: ಕುಡ್ಲಾವಿಲ್ಲಾ ಕಾಂಪ್ಲೆಕ್ಸ್, ಆರ್ಯ ಸಮಾಜ ರಸ್ತೆ, **ಫೋನ್ : 9164369876.**
ಬೆಂಗಳೂರು : ಗಾಂಧಿ ಬಜಾರ್ ಮುಖ್ಯ ರಸ್ತೆ,ಬಸವನಗುಡಿ, **ಫೋನ್ : 9164448876**

ಫೋನ್ : 8970551100
e.mail :apnaholidays@yahoo.co.in

An ISO 9001-2015 Certified Travel Agency

ವಿಶ್ವದಾದ್ಯಂತ 650ಕ್ಕೂ ಅಧಿಕ ಪ್ರೇಕ್ಷಣೀಯ ಸ್ಥಳಗಳಿಗೆ ನಿಮ್ಮ ಅನುಕೂಲಕ್ಕೆ,ಅಭಿರುಚಿಗೆ ತಕ್ಕಂತೆ ಹಾಲಿಡೇ ಪ್ಯಾಕೇಜ್‌ಗಳನ್ನು ಸಂಯೋಜಿಸಿ ಕೊಡಲಾಗುವುದು.

ತರಂಗ

•ಸಂಪುಟ 44 •ಸಂಚಿಕೆ 19

ಮೇ 7, 2026

ಪ್ರಕಾಶಕರು

ಡಾ|| ಟಿ. ಸತೀಶ್ ಯು. ಪೈ

ವ್ಯವಸ್ಥಾಪಕ ಸಂಪಾದಕರು

ಡಾ|| ಸಂಧ್ಯಾ ಎಸ್. ಪೈ

ಸಂಪಾದಕರು

ಡಾ| ಯು. ಬಿ. ರಾಜಲಕ್ಷ್ಮೀ

ಸಂಪಾದಕೀಯ ವಿಭಾಗ

ಜಯರಾಮ ಕಾರಂತ

ರೇವತಿ

ಸವಿತಾ ಎಸ್. ಹೊಳ್ಳ

ವಿನ್ಯಾಸ ಮತ್ತು ಕಲೆ

ಜೇಮ್ಸ್‌ವಾಜ್

ಸುಬ್ರಹ್ಮಣ್ಯ ಯಾದವ್

ಬಿ. ಗಜೇಂದ್ರ ಆಚಾರ್ಯ

ವಿಳಾಸ

ಮಣಿಪಾಲ ಕಚೇರಿ

'ಉದಯವಾಣಿ' ಕಟ್ಟಡ

ಮಣಿಪಾಲ - 576 104

ಫೋನ್ : (0820) 2205000-4275000

E-mail: taranga@manipalpress.com

ಮುಂಬಯಿ ಕಚೇರಿ

616, ದಲ್‌ಮಾಲ್ ಟವರ್ಸ್

ನರಿಮನ್ ಪಾಯಿಂಟ್

ಮುಂಬಯಿ - 400 021

ಫೋನ್ : (022) 22845248

ಫ್ಯಾಕ್ಸ್: (022) 22851764

ಇಂಟರ್‌ನೆಟ್

http://www.tarangaonline.com

ಮುದ್ರಕರು

ಬಿ. ನರಹರಿ

ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್

ಹಳೆ ಫಾರ್ಮಸಿ ಕಾಲೇಜು ಕಟ್ಟಡ

ಮಣಿಪಾಲ - 576 104

ತರಂಗಾಂತರಂಗ

ಲೇಖನಗಳು

10 ಪಿಯುಸಿ ಎಂಬ ತಿರುವು - ಯಾವ್ಯಾವ ವೃತ್ತಿ ಏನೇನು ಅವಕಾಶ? (ಭಾಗ-2) ★ಎಸ್. ಅನಂತನಾಗ್

34 ಸಾಣೆಕಟ್ಟಾ ಉಪ್ಪಿನ ರುಚಿ ಬಲ್ಲವರೇ ಬಲ್ಲರು! ★ ರಾಘವೇಂದ್ರ ಬೆಟ್ಟಕೊಪ್ಪ

44 ಟಾಪ್ ಟೆನ್ ಸರಣಿ ಮರೆಯಲಾಗದ ಹತ್ತು ಪರಮಾಣು ದುರಂತಗಳು ★ ಚಿನ್ಮಯ್

ಕಥೆಗಳು

40 ಹೃದಯ, ಕಾಯ ತಾ ಇರುವೆ ★ರಂಜಿತಾ ಮಹಾಜನ

50 ತಂದೆ ಯಾರು? ಮೂಲ ಹಿಂದಿ ★ರೇಖಾ ರಾಜವಂಶಿ ಕನ್ನಡಕ್ಕೆ ★ಡಿ. ಎನ್. ಶ್ರೀನಾಥ್

ಹಾಸ್ಯ

54 ಕೊಟ್ಟ ಕಿವಿ ಕರೆದ್ಹಾಂಗ! ★ವಸಂತ ಕಲ್‌ಬಾಗಲ್

ಧಾರಾವಾಹಿ

6 ಛತ್ರಪತಿ ಶಿವಾಜಿ :ವೀರಗಾಥೆ-19 ★ ತುಕಾರಾಮ್ ಜಿ. ಎಸ್.

26 ನಿಗೂಢ ಲಕೋಟೆ! -5 ★ಎಸ್.ಜಿ. ಶಿವಶಂಕರ್

56 ಮುಗಿಯದ ಮೌನ - 8 ★ ಡಾ. ಆರತಿ ವೆಂಕಟೇಶ್

ವಿಧಾನವೀಥಿಯಿಂದ 25 ಶಬ್ದಶಿಲ್ಪ 29 ಚಿಣ್ಣರ ಲೋಕ 30 ರಾಷ್ಟ್ರರಾಜಕೀಯ 53

ಭವಿಷ್ಯದರ್ಪಣ 60 ಸೌಖ್ಯ ಸಂವಾದ 62

ಮುಖಪುಟ ವಿನ್ಯಾಸ : **ಜೇಮ್ಸ್‌ವಾಜ್**

('ತರಂಗ'ದಲ್ಲಿ ಪ್ರಕಟವಾಗುವ ಲೇಖನ, ವಿಚಾರಗಳು, ಕಥೆ - ಕಾದಂಬರಿಗಳಿಗೆಲ್ಲ ಲೇಖಕರೇ ಜವಾಬ್ದಾರರು. - ಸಂಪಾದಕರು)

ಪ್ರಿಯ ಓದುಗರೇ...

ತರಂಗ

7-5-2026

ಅರ್ಥೈಸಿಕೊಳ್ಳದ ಸಂದೇಶದಿಂದ ಬಂದ ಕುತ್ತು

ಒಂದಾನೊಂದು ಕಾಲದಲ್ಲಿ ಒಬ್ಬನಿಗೆ ನರಕವಾಸ ಆಯಿತು. ಭೂಮಂಡಲದಲ್ಲಿ ಬದುಕಿರುವಾಗ ಪರಮ ಸಾತ್ತ್ವಿಕ, ಸಜ್ಜನ ಎಂದೆಲ್ಲಾ ಪ್ರಖ್ಯಾತನಾಗಿದ್ದವ. ಇವನಿಗೆ ನರಕಕ್ಕೆ ಬಂದ ಕೂಡಲೇ ಆಘಾತವಾಯಿತು. ಹಾಗಾದರೆ ಮನುಷ್ಯನಾಗಿದ್ದಾಗ ತಾನು ಮಾಡಿದ ದಾನ -ಧರ್ಮ- ಸತ್ಕರ್ಮಗಳಿಗೆ ಯಾವುದೇ ಬೆಲೆ ಇಲ್ಲವೇ? ಇನ್ನು ಈ ನರಕವಾಸದ ಘೋರ ತಾನು ಸಹಿಸುವುದು ಹೇಗೆ? ಹೀಗೆಲ್ಲಾ ಯೋಚಿಸುತ್ತಾ, ಗೋಳಾಡುತ್ತಾ , ದುಃಖಿಸುತ್ತಿರುವವನನ್ನು ಯಮಧರ್ಮನ ಮುಂದೆ ನಿಲ್ಲಿಸಲಾಯಿತು! ಯಮರಾಜನನ್ನು ನೋಡುತ್ತಲೇ ಇವನ ಗಲಾಟೆ ತಾರಕ್ಕೇರಿತು. ''ಸಾವು ಬರುವುದಂತೂ ಖಂಡಿತ. ಆದರೆ ಯಾವಾಗ ಬರುತ್ತದೆ ಎಂದಾದರೂ ತಿಳಿಸಬೇಕಲ್ಲ!? ನಾನು ನನ್ನ ವ್ಯವಹಾರಗಳನ್ನು 'ಸರಿಪಡಿಸಿ' ನಿಶ್ಚಿಂತೆಯಿಂದ ಬರುತ್ತಿದ್ದೆ'' ಎಂದು ಕಿರುಚಾಡಿದ.
ಯಮ ಸಮಾಧಾನದಿಂದ ಇವನ ಮಾತು ಕೇಳಿದ.

ಇವನ ಉದ್ವೇಗ ಸ್ವಲ್ಪ ಶಾಂತವಾದ ಅನಂತರ ''ನೀನು ಮಿಥ್ಯಾ ನನ್ನ ಮೇಲೆ ಗೂಬೆ ಕೂರಿಸುತ್ತಿರುವೆ. ಒಂದಲ್ಲ, ಎರಡಲ್ಲ, ಮೂರುಸಲ ನಿನ್ನ ಭೂಮಿಯ ಮೇಲಿನ ಕಾಲ ಮುಗಿಯುತ್ತಾ ಬರುತ್ತಿದೆ ಎಂದು ಸೂಚನೆ ಕಳಿಸಿದ್ದೇನೆ. ಆದರೆ ನೀನು ಅವುಗಳನ್ನು ಗಮನಿಸಿಯೂ ನೋಡಲಿಲ್ಲ ಎಂದು ಕಾಣುತ್ತದೆ ಅಲ್ಲವೇ?'' ಎಂದು ಪ್ರಶ್ನಿಸಿದ. ಇವನ ಗಲಾಟೆ ತಣ್ಣಗಾಯಿತು. ''ಸೂಚನೆಗಳೇ? ಏನವು?'' ಎಂದ. ಯಮ, ''ಸರಿಯಾಗಿ ಯೋಚಿಸಿ ನೋಡು. ವೃದ್ಧಾಪ್ಯದಿಂದ ಜರ್ಝರಿತವಾದ ದೇಹದ ತುಂಬಾ ನೆರಿಗೆಗಳು, ನೆಟ್ಟಗೆ ನಿಲ್ಲಲೂ ಸಾಧ್ಯವಾಗದೆ ಕೋಲಿನ ಸಹಾಯದಿಂದ ಹೆಜ್ಜೆ ಇಡುವ ಶಕ್ತಿ ರಹಿತ ಕಾಲುಗಳು, ಮಂದವಾದ ಕಣ್ಣದೃಷ್ಟಿ, ಸುಕ್ಕು ತುಂಬಿದ ವಿಕಾರ ಮುಖ, ಇಂಥ ಮನುಷ್ಯ ಜೀವಿಯನ್ನು ನೀನೆಂದೂ ನೋಡಿಲ್ಲವೇ?'' ಎಂದು ಪ್ರಶ್ನಿಸಿದ.

ಇವ ''ಖಂಡಿತ ನೋಡಿದ್ದೇನೆ. ನಮ್ಮ ಕುಟುಂಬದಲ್ಲಿಯೇ ಇಂಥವರು ಹಲವರಿದ್ದರು ಮತ್ತು ಇದ್ದಾರೆ'' ಎಂದ. ''ಹೌದಲ್ಲ, ಇದು ಸಾವಿನ ಮೊದಲ ಸೂಚನೆ. ದೇಹ ಜರ್ಝರಿತವಾಯಿತು ಎಂದರೆ, ಅದನ್ನು ತ್ಯಜಿಸುವ ಸಮಯ ಸಮೀಪಿಸಿದೆ ಅಥವಾ ಸಮೀಪಿಸುತ್ತಿದೆ ಎಂದು ಅರ್ಥ! ಇದು ಮೊದಲ ಸೂಚನೆ. ಎರಡನೆಯದಾಗಿ ದೀನರೂ , ಆರ್ತರೂ ಕಡು ಬಡವರು, ರೋಗಿಗಳು, ಏಕಾಂಗಿಗಳನ್ನು ನೋಡಿರುವೆಯಾ?'' ಎಂದ ಯಮ.

''ಹೌದು ಹೌದು, ನೋಡಿದ್ದೇನೆ. ಇವರು ಎರಡನೆಯ ಸಂದೇಶವಾಹಕರು. ಸಾವು ಅನಿವಾರ್ಯ , ಎಲ್ಲರೂ ಒಂದಲ್ಲ ಒಂದು ದಿನ ದೇಹತ್ಯಾಗ ಮಾಡಲೇ ಬೇಕು ಎಂಬ ಅರಿವಿರುವಾಗ , ಅಗತ್ಯ ಇರುವವರಿಗೆ ಸಹಾಯ ಹಸ್ತ ಚಾಚುವುದು ಸಹಜ ಸ್ವಭಾವವಾಗಬೇಕು. ಅದಕ್ಕೆ ವಿರುದ್ಧವಾಗಿ ತನಗೆ, ತನ್ನವರಿಗೆ ತನ್ನ ಮುಂದಿನ ಪೀಳಿಗೆಗೆ ಎಂದೆಲ್ಲಾ ಕೂಡಿಡುವುದು ಅಪರಾಧ. ಇದರಿಂದ ಮಾನಸಿಕವಾಗಿ ಮನುಷ್ಯ ಸಾಯುತ್ತಾನೆ. ಕರುಣೆ, ಅನುಕಂಪ, ದಯೆಯಂಥ ಗುಣಗಳು ಇಲ್ಲದ ಮನಸ್ಸು ಕ್ರಮೇಣ ಸಾಯುತ್ತದೆ. ಮುಂದೆ ದೇಹದ ಸಾವಿಗೂ ಇದೊಂದು ಕಾರಣವೂ ಹೌದು.''

''ಇರಲಿ, ನೀನು ಸಾವನ್ನು ಅಂದರೆ, ದೇಹ ಸಾಯುವುದನ್ನು ನೋಡಿರುವೆಯಾ?'' ಎಂದು ಪ್ರಶ್ನಿಸಿದ ಯಮಧರ್ಮ. ''ಹೌದು ಹೌದು ನನ್ನ ತಂದೆ, ತಾಯಿ ಬಹಳ ಮಂದಿ ಹಿರಿಯರು, ಪರಿಚಯದವರು... ಹೀಗೆ ಅನೇಕಾನೇಕರ ಸಾವನ್ನು ಕಂಡಿದ್ದೇನೆ. ಇದರಲ್ಲಿ ಏನು ವಿಶೇಷ?'' ಎಂದ ಇವ! ಯಮ ಪಕಪಕ ನಕ್ಕ. ''ಹೇ ಮೂರ್ಖ! ಬದುಕಿನ ಮೂಲ ತತ್ತ್ವವನ್ನೇ ನೀನು ಅರ್ಥ ಮಾಡಿಕೊಳ್ಳಲಿಲ್ಲ ಎಂದಾಯಿತು. ಇಷ್ಟು ಮಂದಿಯ ಸಾವನ್ನು, ವೃದ್ಧಾಪ್ಯವನ್ನು ರೋಗ ರುಜಿನಗಳನ್ನು ನೋಡಿಯೂ, ನಿನಗೆ ಬದುಕಿನ ಒಳಹರಿವು ಅರ್ಥವಾಗಲಿಲ್ಲ '' ಎಂದಾಯಿತು.

ಅವರಿಗೆ ಆದದ್ದೇ ಮುಂದೊಂದು ದಿನ ನನಗೂ ಆಗುತ್ತದೆ. ಆದುದರಿಂದ ನನ್ನದಾಗಿರುವಷ್ಟು ದಿನ,
ಆ ದಿನಗಳ ಸದ್ವಿನಿಯೋಗ ಆಗಬೇಕು. ತನು- ಮನ-ಧನಗಳಿಂದ ಸಮಾಜದ ಒಳಿತಾಗಾಗಿ ಕೆಲಸ ಮಾಡಬೇಕು.
ಈ ದೇಹ ನಶ್ವರ! ಎಂಬ ಸಂದೇಶ ಪದೇ ಪದೇ ನಿನ್ನ ಮುಂದೆ ಬಂದಿತ್ತು. ಆದರೆ ನೀನು ಇದನ್ನು ಗುರುತಿಸುವುದರಲ್ಲಿ
ವಿಫಲನಾದೆ. ಈ ಸಂದೇಶಗಳನ್ನು ಅರ್ಥಮಾಡಿಕೊಂಡು ಬದುಕಿದ್ದೇ ಆದರೆ, ನಿನ್ನ ಕರ್ಮಭಾರ ಕ್ಷೀಣವಾಗುತ್ತಿತ್ತು.
ಇಲ್ಲಿಗೆ ಬರುವುದು ಕಡಿಮೆಯಾಗುತ್ತಿತ್ತು.

''ಈಗಲೂ ಕಾಲ ಮೀರಿಲ್ಲ. ಈ ಸಂದೇಶಗಳನ್ನು ನೆನಪಿನಲ್ಲಿ ಇಟ್ಟುಕೋ.
ಮುಂಬರುವ ಜನ್ಮಗಳಲ್ಲಿ ಬದುಕಿನಲ್ಲಿ ಅಳವಡಿಸಿಕೋ.
ಕರ್ಮಭಾರ ಕಡಿಮೆಯಾಗಲಿ ಆಗದೇ?'' ಎಂದ ಯಮಧರ್ಮರಾಯ.

ಸಂಧ್ಯಾ ಪೈ

(ವ್ಯವಸ್ಥಾಪಕ ಸಂಪಾದಕರು)

ಛತ್ರಪತಿ ಶಿವಾಜಿ

ಸ್ವರಾಜ್ಯ ಸಂಕಲ್ಪದ ಅಪ್ರತಿಮ ವೀರಗಾಥೆ

ಅಂಬರ್‌ಖಿಂಡಿಯ ಶರಣಾಗತಿ

ಅಧ್ಯಾಯ 19

❑ ತುಕಾರಾಮ್ ಜಿ. ಎಸ್.

ಅಂಬರ್‌ಖಿಂಡಿಯ ಬೆಟ್ಟಗಳ ಮೇಲೆ ಶಿವಾಜಿ ಆಕ್ರಮಣಕ್ಕೆ ತಯಾರಾಗಿ ನಿಂತಿದ್ದ!

ಶಿವಾಜಿಯ ಪುಟ್ಟ ದಂಡು ಅದಾಗಲೇ ರಾಯಗಢದಿಂದ ಹೊರಟು, ಸಹ್ಯಾದ್ರಿಗಳ ಪರಿಚಿತ ಕೊರಕಲುಗಳ ನಡುವೆ ಮಿಂಚಿನಂತೆ ಅಂಬರ್ ಖಿಂಡಿಯ ಮೇಲಿನ ಆಯಕಟ್ಟಿನ ಜಾಗ ತಲಪಿತ್ತು. ಅಲ್ಲಿಗೆ ತನ್ನ ಅಶ್ವಾರೋಹಿ ದಳದೊಡನೆ ಬಂದು ಸೇರುವಂತೆ ನೇತೋಜಿ ಪಾಲ್ಕರ್‌ಗೂ ಶಿವಾಜಿ ಸಂದೇಶ ಕಳಿಸಿದ.

ಕರ್ತಲಬ್‌ಖಾನ್‌ನ ಸೈನ್ಯ ತುಂಗಾರಣ್ಯ ಪ್ರವೇಶಿಸುವ ಮೊದಲೇ ಅಂಬರ್‌ಖಿಂಡ್‌ನ ಬೆಟ್ಟಗಳ ಮೇಲೆ ಮಾವಳಿ ಪಡೆ ಸಜ್ಜಾಗಿತ್ತು.

ಮೂವತ್ತು ಸಾವಿರ ಬಲಾಢ್ಯ ಮೊಘಲ್ ಪಡೆಯ ಮೇಲೆ ಆಕ್ರಮಣಕ್ಕೆ ಸಜ್ಜಾಗಿದ್ದ ಮೂರು ಸಾವಿರ ಬೆಟ್ಟದ ಹುಲಿಗಳು!

ತೋಪುಖಾನೆಯ ಸೈನಿಕರು ತೋಪುಗಳನ್ನು ಎಳೆದು ತಂದಿದ್ದರು. ಒಂದೊಂದು ತೋಪಿಗೂ ಒಂದೊಂದು ಹೆಸರು: ಮಹಾಕಾಳಿ, ಜ್ವಾಲಾಭವಾನಿ, ಅಗ್ನಿಧಾರಾ... ಈ ತೋಪುಗಳನ್ನು ಬಂಡೆಕಲ್ಲುಗಳ ನಡುವೆ ಅಲುಗಾಡದಂತೆ ತೂರಿಸಿ, ಕಣಿವೆದಾರಿಯ ಮೇಲೆ ಗುರಿಯಿಟ್ಟು ಸಜ್ಜಾಗಿದ್ದರು.

ಅವರೆಲ್ಲ ಸರಿಯಾದ ಸಮಯ ಕಾಯುತ್ತಿದ್ದರು.

ಮೊಘಲ್ ಸೈನ್ಯ ಅಂಬರ್‌ಖಿಂಡಿ ಕಣಿವೆ ದಾರಿಯ ನಡುಮಧ್ಯೆ ಇರುವಾಗ ಶಿವಾಜಿ ರಣಕಹಳೆ ಊದಲು ಆದೇಶ ಕೊಟ್ಟ.

ತುತ್ತುರುತ್ತುರೂ!!!

ಬೆಟ್ಟದ ಮೇಲಿನಿಂದ ಎದ್ದ ರಣಕಹಳೆಯ ಸದ್ದು ಕಣಿವೆಯ ಸುತ್ತ ತಿರುಗಿ ಮಾರ್ದನಿ ಕೊಟ್ಟಿತು.

ದನಿ ಕೇಳಿಯೇ ಮೊಘಲ ಸೈನಿಕರ ಎದೆ ನಡುಗಿತು. ಮೊದಲೇ ಹೆಜ್ಜೆ ಹೆಜ್ಜೆಯಲ್ಲಿ ಸಂಚಕಾರ. ಬಾಯಾರಿಕೆಯಲ್ಲಿ ಉಡುಗಿ ಹೋದ ಹುಮ್ಮಸ್ಸು. ಮರಗಳ ನಡುವೆ ಕಣ್ಣು ಕಾಣಿಸದ ಜಾಗದಲ್ಲಿ ವೈರಿಯ ಕಹಳೆ. ಎಲ್ಲಿಂದ ಆಕ್ರಮಣ ಬರಲಿದೆ ಎಂದೇ ತಿಳಿಯದೆ ಭಯದಿಂದ ಅತ್ತಿತ್ತ ನೋಡತೊಡಗಿದರು.

ಕಹಳೆಯ ಬೆನ್ನಿಗೇ ಮೇಲಿನಿಂದ ತೋಪುಗಳು ಸಿಡಿದವು. ಸಹ್ಯಾದ್ರಿಯನ್ನು ನಡುಗಿಸಿದ ಸದ್ದು. ಕಣಿವೆ ದಾರಿಯ ಮೇಲೆ ಅಲ್ಲಲ್ಲಿ ಗುಂಡುಗಳು ಸಿಡಿದು ಬಿದ್ದವು.

'ಯಾ ಖುದಾ!' ದಂಡಿನ ಸಾಲಿನ ನಡುವೆ ಅಲ್ಲಲ್ಲಿಂದ ಸೈನಿಕರ ಕೂಗು, ಹಾಹಾಕಾರ ಕೇಳಿಸಿತು. ಎಲ್ಲಿ ಏನು ನಡೆಯುತ್ತಿದೆ ಎಂದೇ ತಿಳಿಯದೆ ಉಳಿದವರು ಕಂಗಾಲು!

ಮರಾಠಾ ಪಡೆಗಳು ಮರೆಯಿಂದ ಬಾಣಗಳನ್ನು ಎಸೆಯುತ್ತಿದ್ದವು. ಒಂದೊಂದು ಬಾಣವೂ ಗುರಿ ಮುಟ್ಟುತ್ತಿತ್ತು. ಬಾಣ ಎಸೆದವರ ಸುಳಿವೂ ಸಿಗುತ್ತಿರಲಿಲ್ಲ, ಎಲ್ಲಿಂದ ಆಕ್ರಮಣವಾಗುತ್ತದೆ ಎಂದು ತಿಳಿಯದೆ ಮೊಘಲ್ ಸೈನಿಕರು ಗುರಾಣಿ ಅತ್ತಿತ್ತ ತಿರುಗಿಸುತ್ತ ಭಯದಿಂದ ಕಾಡಿನೊಳಗೆ ನೋಡುತ್ತಿದ್ದರು. ದಟ್ಟ ಮರಗಳ ನಡುವೆ ಅವರಿಗೆ ನೆರಳು ಕೂಡ ಪಿಶಾಚಿಯಂತೆ ಕಾಣಿಸುತ್ತಿತ್ತು.

''ಹೋರಾಡಿ! ಹೋರಾಡಿ!'' – ಕರ್ತಲಬ್‌ಖಾನ್ ಕೂಗುತ್ತಿದ್ದ. ಅವನ ಹಶಮ್‌ಗಳೂ ಚೀರುತ್ತಿದ್ದರು. ಆದರೆ ಹೋರಾಟ ಯಾರೊಡನೆ? ಕಾಣದ ಶತ್ರುವಿನತ್ತ ಗುರಿಯಿಡುವುದಾದರೂ ಹೇಗೆ?

ಸೈನ್ಯದ ಮುಂದೆ, ಹಿಂದೆ, ಮಧ್ಯೆ, ಎಲ್ಲೆಂದರಲ್ಲಿ ದಾಳಿ ನಡೆಯುತ್ತಿತ್ತು. ಅಲ್ಲಿ ತೋಪುಗಳ ಸಿಡಿತ, ಇಲ್ಲಿ ಬಾಣಗಳ ಸುರಿಮಳೆ. ಮೊಘಲರ ಶವ ಸಾವಿರಗಟ್ಟಲೆಯಲ್ಲಿ ಬೀಳುತ್ತಿತ್ತು.

ಮೊದಲೇ ದಾಹದಲ್ಲಿ ಅರೆಜೀವವಾಗಿದ್ದ ಸೈನಿಕರಲ್ಲಿ ಯುದ್ಧದ ಉತ್ಸಾಹ ಉಳಿದಿರಲಿಲ್ಲ. ಕೆಲವರು ಶಸ್ತ್ರಗಳನ್ನು ಅಲ್ಲಲ್ಲೇ ಎಸೆದು ಓಡಲು ಆರಂಭಿಸಿದರು. ಭಯದಲ್ಲಿ ಓಡುವಾಗ ಕೆಲವರು ಜಾರಿ ಪ್ರಪಾತಕ್ಕೆ ಉರುಳುತ್ತಿದ್ದರು.

ಸೈನಿಕರು ಮುಂದೆ ಹೋಗುವಂತಿರಲಿಲ್ಲ. ಖಿಂಡಿಯ ಕಣಿವೆಯ ಕೊನೆಯಲ್ಲಿ ಶಿವಾಜಿಯ ಸೈನಿಕರು ಮೊದಲೇ ಬಂಡೆಕಲ್ಲುಗಳನ್ನು ಉರುಳಿಸಿ ದಾರಿಯನ್ನು ಮುಚ್ಚಿದ್ದರು. ಸೈನ್ಯದ ಹಿಂಭಾಗದಿಂದ ನೇತೋಜಿ ಪಾಲ್ಕರ್‌ನ ಅಶ್ವಾರೋಹಿ ದಳ ಆಕ್ರಮಣ ಆರಂಭಿಸಿತ್ತು. ಕೂಟಯುದ್ಧದಲ್ಲಿ ಅವನ ಮಾವಳಿ ಪಡೆಯನ್ನು ಮೀರಿಸಿದವರೇ ಇರಲಿಲ್ಲ.

ಜಾವ್ಳಿಯಲ್ಲಿ ಅಫ್ಜಲ್‌ಖಾನ್‌ನ ಪಡೆಯ ಮಾರಣಹೋಮದ ಬಳಿಕ ಎರಡನೆಯ ಬಾರಿಗೆ ಸಹ್ಯಾದ್ರಿಯಲ್ಲಿ ಹೆಣಗಳ ರಾಶಿ ಬಿದ್ದಿತ್ತು, ಶತ್ರುಗಳ ರಕ್ತ ಹೊಳೆಯಾಗಿ ಹರಿದಿತ್ತು.

ಕರ್ತಲಬ್‌ಖಾನ್ ತೀರಾ ಕಂಗೆಟ್ಟಿದ್ದ. ಈ ಪಿಶಾಚಿ ಕೂಪದಲ್ಲಿ ತನ್ನ ಕೊನೆಗಾಲ ಬಂತು ಎಂದೇ ತಿಳಿದುಕೊಂಡಿದ್ದ.

ರಾಯ್‌ಬಾಗನ್ ಅವನತ್ತ ಕುದುರೆ ನಡೆಸಿದಳು. ''ಇದು ಹುಲಿಯ ಡೇರೆ. ನಾವೀಗ ಹುಲಿಯ ಬಾಯಿಯೊಳಗಿದ್ದೇವೆ. ನನ್ನ ಮಾತು ಈಗಲಾದರೂ ಕೇಳು. ನಾವು ಈ ಯುದ್ಧ ಗೆಲ್ಲುವಂತಿಲ್ಲ. ಶಿವಾಜಿಗೆ ಶರಣಾಗು. ಶಿವಾಜಿ ಧರ್ಮ ಪಾಲಿಸುತ್ತಾನೆ. ಶರಣಾದವರನ್ನು ಕೊಲ್ಲುವುದಿಲ್ಲ. ಜೀವ ಉಳಿಯಬೇಕಾದರೆ ಇದೊಂದೇ ದಾರಿ'' ಎಂದಳು.

ಸೈನ್ಯದ ದಳಪತಿ ಕರ್ತಲಬ್‌ಖಾನ್ ಕೊನೆಗೂ ಬುದ್ಧಿವಂತಿಕೆ ತೋರಿಸಿದ. ರಾಯ್‌ಬಾಗನ್‌ಳ ಸಲಹೆಯಂತೆ ಶರಣಾಗಲು ಒಪ್ಪಿಕೊಂಡ.

ರಾಯ್‌ಬಾಗನ್ ತನ್ನ ಇಬ್ಬರು ಆಪ್ತ ಸಲಹೆಗಾರರನ್ನು ಕರೆದಳು. ಅವರು ಶಿವಾಜಿಯ ಬಳಿಗೆ ಕರ್ತಲಬ್‌ಖಾನ್‌ನ ಸಂದೇಶ ಒಯ್ಯಲು ಒಪ್ಪಿಕೊಂಡರು. ಪೊದೆಗಳ ನಡುವೆ ಜಾಗ್ರತೆಯಾಗಿ ನುಸುಳಿ ಬೆಟ್ಟ ಹತ್ತಿದರು. ದಾರಿಯಲ್ಲಿ ಮಾವಳಿ ಸೈನಿಕರು ಎದುರಾದಾಗ ಪ್ರಾಣಭಿಕ್ಷೆ ಬೇಡಿದರು. ''ಶಿವಾಜಿ ಮಹಾರಾಜರ ಬಳಿಗೆ ಕರೆದುಕೊಂಡು ಹೋಗಿ. ನಮ್ಮ ಸರದಾರ ಶರಣಾಗತಿಗೆ ಒಪ್ಪಿಕೊಂಡಿದ್ದಾರೆ'' ಎಂದು ಅಂಗಲಾಚಿದರು.

ಮಾವಳಿಗಳು ದೂತರನ್ನು ಶಿವಾಜಿಯ ಬಳಿಗೆ ಒಯ್ದರು. ಶಿವಾಜಿ ಬೆಟ್ಟದ ನೆತ್ತಿಯಲ್ಲಿ ಕುದುರೆಯ ಮೇಲೆ ಕುಳಿತಿದ್ದ.

ಶಿವಾಜಿ ಯುದ್ಧದ ಉಡುಗೆಯಲ್ಲಿದ್ದ. ಅವನ ಕೈಯಲ್ಲಿ ಬಿಲ್ಲು, ಇನ್ನೊಂದು ಕೈಯಲ್ಲಿ ಈಟಿ. ಬೆನ್ನಿನಲ್ಲಿ ಬತ್ತಳಿಕೆ, ಸೊಂಟದಲ್ಲಿ ಖಡ್ಗ. ತಲೆಯ ಮೇಲೆ ಶಿರಸ್ತ್ರಾಣ ಧರಿಸಿದ್ದ. ಎದೆಯ ಮೇಲೆ ಕವಚ ತೊಟ್ಟಿದ್ದ. ಹಿಂದಿನಿಂದ ಕೆಂಪಗೆ ಹೊಳೆಯುತ್ತಿದ್ದ ಸಂಜೆ ಸೂರ್ಯನ ಬೆಳಕಿನಲ್ಲಿ ಸಾಕ್ಷಾತ್ ಮೃತ್ಯುದೇವತೆಯಂತೆ ಕಾಣಿಸುತ್ತಿದ್ದ.

ದೂತರು ಶಿವಾಜಿಯ ಮುಂದೆ ಅಡ್ಡಬಿದ್ದರು. ''ಮಹಾರಾಜ, ನಮ್ಮ ಮೇಲೆ ದಯೆ ತೋರಿ. ಸರದಾರ ಕರ್ತಲಬ್‌ಖಾನ್ ನಿಮಗೆ ಶರಣಾಗತರಾಗುತ್ತಾರೆ. ನಮ್ಮ ಸೈನ್ಯವನ್ನು ಇಲ್ಲಿಂದ ಮರಳಿ ಹೋಗಲು ಅನುಮತಿ ಕೊಡಿ'' ಎಂದು ಅಂಗಲಾಚಿದರು.

''ಹುಲಿಯ ಬಿಲಕ್ಕೆ ಪ್ರವೇಶಿಸಿದವರು ಜೀವಂತ ಮರಳುವ ಆಸೆ ಇಟ್ಟುಕೊಳ್ಳುತ್ತಾರೆಯೆ?'' ಶಿವಾಜಿ ನಸುನಕ್ಕ.

''ಮಹಾರಾಜ, ಕರ್ತಲಬ್‌ಖಾನ್ ತಮ್ಮ ಸುಬೇದಾರ ಶೈಸ್ತಾಖಾನ್‌ರ ಆದೇಶ ಪಾಲಿಸಿದರು. ಅವರಿಗೆ ನಿಮ್ಮ ಮೇಲೇನೂ ವೈರ ಇಲ್ಲ. ಅವರು ನಿಮ್ಮ ತೀರ್ಥರೂಪ ಶಹಾಜಿ ರಾಜೇಯವರ ಆಪ್ತರಾಗಿದ್ದರು ಎಂದು ನಿಮಗೆ ಗೊತ್ತೇ ಇರಬೇಕು. ಅದರ ನೆನಪಿನಲ್ಲಿ ನಿಮ್ಮಿಂದ ದಯೆಯನ್ನು ಅಪೇಕ್ಷಿಸುತ್ತಾರೆ. ನಮ್ಮ ಶರಣಾಗತಿ ಸ್ವೀಕರಿಸಿ'' ಎಂದು ದೂತರು ಬೇಡಿಕೊಂಡರು.

ಶಿವಾಜಿ ಕೈ ಎತ್ತಿ ಸೂಚನೆ ನೀಡಿದ. ತುತ್ತೂರಿಯ ಸಂದೇಶ ಹೋಯಿತು. ತೋಪುಗಳು ಸಿಡಿಯುವುದನ್ನು ನಿಲ್ಲಿಸಿದವು. ಕಣಿವೆಯ ಸುತ್ತ ಅಲ್ಲಲ್ಲಿ ಬಾಣ ಹೂಡಿ ಬಲಿತೆಗೆದುಕೊಳ್ಳಲು ತಯಾರಾಗಿ ನಿಂತಿದ್ದ ಮರಾಠಾ ಸೈನಿಕರು ದಾಳಿ ನಿಲ್ಲಿಸಿದರು. ನೇತೋಜಿಯ ಅಶ್ವಾರೋಹಿ ಪಡೆ ಆಕ್ರಮಣ ನಿಲ್ಲಿಸಿ, ತುಸು ದೂರ ಬೆಟ್ಟದ ಮೇಲೆ ಬಂಡೆಗಳ ಮರೆಯಲ್ಲಿ ನಿಂತಿತು.

''ಮೊಘಲ ಸೈನ್ಯದ ಶರಣಾಗತಿಯನ್ನು ಸ್ವೀಕರಿಸುತ್ತೇನೆ. ನಾವು ಶರಣಾದವರ ಮೇಲೆ ಹರಿಹಾಯುವುದಿಲ್ಲ. ಆದರೆ ಕರ್ತಲಬ್‌ಖಾನ್ ಮತ್ತು ಅವನ ಸರದಾರರು ಕಪ್ಪಕಾಣಿಕೆ ಒಪ್ಪಿಸಬೇಕು. ಮೊಘಲ ಸೈನ್ಯ ಎಲ್ಲ ಶಸ್ತ್ರಾಸ್ತ್ರಗಳನ್ನು ಇಲ್ಲೇ ಎಸೆದು ಬರಿಗೈಯಲ್ಲಿ ಬಂದ ದಾರಿಯಲ್ಲಿ ಮರಳಿ ಹೋಗಬೇಕು'' ಶಿವಾಜಿ ಹೇಳಿದ.

ದೂತರು ಕರ್ತಲಬ್‌ಖಾನ್‌ಗೆ ಸಂದೇಶ ತಲಪಿಸಿದರು. ಅವಮಾನಕಾರಿ ಷರತ್ತುಗಳು. ಆದರೆ ಒಪ್ಪದೆ ನಿರ್ವಾಹ ಇರಲಿಲ್ಲ.

ಅವನು ಮತ್ತು ಅವನ ಜೊತೆಗಿದ್ದ ರಜಪೂತ, ಮರಾಠಾ ಸರದಾರರು ಶಿವಾಜಿಗೆ ಕಪ್ಪಕಾಣಿಕೆ ಕಳಿಸಿಕೊಟ್ಟರು. ಮೊಘಲ್ ಸೈನ್ಯಕ್ಕೆ ಪುಣೆಗೆ ಮರಳಿ ಹೋಗಲು ಶಿವಾಜಿ ಅನುಮತಿ ಕೊಟ್ಟ.

ಮೊಘಲ್ ಸೈನಿಕರು ತಮ್ಮ ಶಿರಸ್ತ್ರಾಣ, ಕವಚ, ಶಸ್ತ್ರಾಸ್ತ್ರಗಳನ್ನು ನಿಂತ ಜಾಗದಲ್ಲೇ ನೆಲಕ್ಕೆ ಎಸೆದರು. ಅವರು ಇನ್ನೂ ದಾಹದಲ್ಲಿ ಹಾಹಾಕಾರ ಮಾಡುತ್ತಿದ್ದರು. ನೇತೋಜಿಯ ಅಶ್ವಾರೋಹಿಗಳು

ಲೋಹಗಢಕ್ಕೆ ಸಂದೇಶ ಕಳಿಸಿ ನೀರಿನ ಸರಬರಾಜಿಗೆ ವ್ಯವಸ್ಥೆ ಮಾಡಿದರು.

ಮೊಘಲ್ ಮಾವಳಿ ಸೈನಿಕರ ಮೇಲ್ವಿಚಾರಣೆಯಲ್ಲಿ ಸೈನ್ಯ ಬಂದ ದಾರಿಯಲ್ಲೇ ಹಿಂದೆ ಹೋಯಿತು. ಅಂಬರಖಿಂಡಿಯಲ್ಲಿ ಮೊಘಲ್ ಸೈನ್ಯದ ಇತಿಹಾಸದಲ್ಲೇ ಅತ್ಯಂತ ದಯನೀಯ ಸೋಲಿನ ವೃತ್ತಾಂತ ದಂತಕಥೆಗಳ ಸಾಲಿಗೆ ಸೇರಿಕೊಂಡಿತು.

ಯುದ್ಧಕ್ಕೆ ಹೊರಟದ್ದು ಮೂವತ್ತು ಸಾವಿರಕ್ಕೂ ಹೆಚ್ಚು ಸೈನಿಕರ ಭರ್ಜರಿ ದಂಡು. ಅಂಬರಖಿಂಡಿಯ ಶರಣಾಗತಿಯಿಂದ ಮರಳಿ ಬಂದದ್ದು ಇಪ್ಪತ್ತುಸಾವಿರಕ್ಕೂ ಕಡಿಮೆ ನಿಶ್ಶಸ್ತ್ರ, ಹತಾಶ ಸೈನಿಕರು.

ಅವರು ಪುಣೆ ತಲಪುವ ಮೊದಲೇ ಶೈಸ್ತಾಖಾನ್‌ಗೆ ಸುದ್ದಿ ಹೋಗಿತ್ತು. ಅವನು ಕೋಪದಿಂದ ಕುದಿಯುತ್ತಿದ್ದ. ಕಂಗಾಲು ಪಡೆಯೊಡನೆ ಬರಿಗೈಯಲ್ಲಿ ಮರಳಿ ಬಂದ ಕರ್ತಲಬ್‌ಖಾನ್ ಮೇಲೆ ಎಗರಿ ಬಿದ್ದ. ''ನಿನ್ನ ಮೇಲೆ ವಿಶ್ವಾಸ ಇರಿಸಿದ್ದೆ. ಇಷ್ಟು ದೊಡ್ಡ ಸೈನ್ಯ ತೆಗೆದುಕೊಂಡುಹೋಗಿದ್ದಿ. ಮಂಗಗಳ ಒಂದು ಚಿಕ್ಕ ಪಡೆಯನ್ನು ಎದುರಿಸಲು ಸಾಧ್ಯವಾಗದೆ ಹೋಯಿತೆ? ಮೊಘಲರ ಘನತೆಯನ್ನು ಮಣ್ಣಿಗೆ ಸೇರಿಸಿದಿ!'' ಎಂದು ಹೀನಾಮಾನವಾಗಿ ನಿಂದಿಸಿದ.

ಕರ್ತಲಬ್‌ಖಾನ್ ಸುಮ್ಮನೆ ಕೈಕಟ್ಟಿ ನಿಂತ. ಮೊದಲೇ ಕಡಿಮೆ ಮಾತನಾಡುವ ವ್ಯಕ್ತಿ. ಸೋಲು ವಾಚಾಳಿಗಳನ್ನೂ ಬಾಯಿ ಕಟ್ಟಿಸುತ್ತದೆ.

★ ★ ★

ಅಂಬರ್‌ಖಿಂಡ್‌ನಿಂದ ಶಿವಾಜಿ ರಾಯಗಢಕ್ಕೆ ಮರಳಲಿಲ್ಲ. ಅವನ ಮುಂದೆ ಕೊಂಕಣದ ದಾರಿ ತೆರೆದಿತ್ತು. ಅಲ್ಲಿನ್ನೂ ಕೆಲಸ ಬಾಕಿ ಉಳಿದಿತ್ತು.

ಮೊಘಲ್ ಸೈನ್ಯ ಅಕಸ್ಮಾತ್ ಮರಳಿ ಬರಬಹುದು ಎಂದು ಶಿವಾಜಿಗೆ ಶಂಕೆ ಇತ್ತು. ಅವರನ್ನು ಎದುರಿಸಲು ಅಂಬರ್‌ಖಿಂಡಿಯ ಕಾವಲಿಗೆ ನೇತೋಜಿಯನ್ನು ನಿಲ್ಲಿಸಿದ. ರಾಯಗಢ ಮತ್ತು ಸುತ್ತಲಿನ ಕೋಟೆಗಳಿಂದ ತಾನಾಜಿ ಮಾಲುಸಾರೆ, ಪಿಲಾಜಿ ನೀಲಕಂಠರಾವ್ ನಾಯಕ್, ತ್ರ್ಯಂಬಕ ಭಾಸ್ಕರ್ ಮುಂತಾದ ಸರದಾರರು ಸೈನ್ಯದ ಜೊತೆಗೆ ಬರಲು ಕರೆಕಳಿಸಿದ.

ಅಂಬರ್‌ಖಿಂಡ್‌ಗೆ ಸಮೀಪದ ಪಾಲಿಯಲ್ಲಿ ಜಸ್ವಂತರಾವ್ ದಲ್ವಿಯ ಜಾಗೀರು ಇತ್ತು. ಪನ್ಹಾಲಾದ ಮುತ್ತಿಗೆಯಲ್ಲಿ ಭಾಗವಹಿಸಿದ್ದ ಈತ ಶಿವಾಜಿಯ ಹೆಸರು ಕೇಳಿದರೂ ನಿದ್ದೆಯಿಂದ ಬೆಚ್ಚಿ ಏಳುತ್ತಿದ್ದ.

***1661* ಫೆಬ್ರವರಿ 2ರಂದು ಅಂಬರ್‌ಖಿಂಡ್ (ಅಂಬರ್‌ಖಿಂಡಿ) ಯುದ್ಧದಲ್ಲಿ ಶಿವಾಜಿ ಬಲಾಢ್ಯ ಮೊಘಲ ಪಡೆಯನ್ನು ಸೋಲಿಸಿದ್ದು ಭಾರತದ ಇತಿಹಾಸದಲ್ಲೇ ಒಂದು ಮಹತ್ವದ ಘಟನೆಯಾಗಿತ್ತು. ಇಂದಿಗೂ ಮರಾಠಾ ಲಾವಣಿಗಳಲ್ಲಿ ಚಿತ್ರರವಾಗುವ ಇದರ ಕಥೆ ಕೇಳುಗರಿಗೆ ರೋಮಾಂಚನ ಹುಟ್ಟಿಸುತ್ತದೆ. ಇಂದು ಅಂಬರ್‌ಖಿಂಡ್‌ನಲ್ಲಿ ಅಂಬಾ ನದೀ ತೀರದಲ್ಲಿ 41 ಅಡಿ ಎತ್ತರದ ಒಂದು ಸ್ಮಾರಕ ನಿರ್ಮಾಣವಾಗಿದೆ. ಇಲ್ಲಿ ಪ್ರತಿವರ್ಷ ಫೆಬ್ರವರಿ 2ರಂದು ವಿಜಯೋತ್ಸವ ಜರಗುತ್ತದೆ.**

ಶಿವಾಜಿಯ ಸೈನ್ಯ ಬೆಟ್ಟದ ಮೇಲೆ ಸಜ್ಜಾಗುತ್ತಿರುವ ಸುದ್ದಿ ಕೇಳಿ ಅವನಿಗೆ ದಿಕ್ಕೇ ತೋಚದಂತಾಯಿತು. ಶೃಂಗಾರಪುರಕ್ಕೆ ಪರಾರಿಯಾಗಿ ಸೂರ್ಯರಾವ್ ಸುರ್ವೆಯ ಬಳಿ ಆಶ್ರಯ ಪಡೆದ.

ಶಿವಾಜಿಯ ದಂಡು ಕಣಿವೆ ದಾಟಿ ಪಾಲಿಗೆ ಇಳಿಯಿತು. ಯಾವುದೇ ವಿರೋಧ ಎದುರಿಸದೆ ಪಾಲಿಯನ್ನು ವಶಪಡಿಸಿಕೊಂಡಿತು. ಅಲ್ಲಿಂದ ಕೊಂಕಣದ ಬಯಲುಭೂಮಿಗೆ ಸಾಗಿತು.

ದಾರಿಯಲ್ಲಿ ಮೊದಲು ಸಿಕ್ಕಿದ್ದು ಧಾಬೋಲ್. ಅಲ್ಲಿ ಐತಿಹಾಸಿಕ ದಾಲ್ಬೇಶ್ವರ ಮಹಾದೇವ ಮಂದಿರ ಇತ್ತು. ಶಿವಾಜಿ ಸೈನ್ಯದ ಜೊತೆಗೆ ಮಹಾದೇವನ ದರ್ಶನಕ್ಕೆ ಹೋದ.

ದಾಭೋಲ್‌ನ ವಿವಿಧೆಡೆ ಹಲವಾರು ಆದಿಲ್‌ಶಾಹಿ ಜಹಗೀರುಗಳಿದ್ದವು. ಇಲ್ಲಿ ಅಧಿಕಾರ ಚಲಾಯಿಸುತ್ತಿದ್ದ ಜಾಗೀರುದಾರರಿಗೆ ಶಿವಾಜಿಯ ಆಗಮನದ ಸುದ್ದಿ ತಿಳಿದಾಗ ಕಂಗಾಲಾಗಿದ್ದರು. ಇವರೆಲ್ಲ ಪನ್ಹಾಳಾದ ಮುತ್ತಿಗೆಯಲ್ಲಿ ಸಿದ್ದಿ ಜೋಹರ್‌ನ ಜೊತೆಗೆ ಸೇರಿಕೊಂಡವರು. ಶಿವಾಜಿ ಸೇಡು ತೀರಿಸಲು ಬರುತ್ತಿದ್ದಾನೆ ಎಂಬ ಭೀತಿ ಕಾಡಿತ್ತು. ಶಿವಾಜಿ ದಾಲ್ಬೇಶ್ವರ ದೇವಾಲಯದ ಘಂಟೆ ಬಾರಿಸುತ್ತಿರುವಾಗ ಇವರೆಲ್ಲ ಜಾಗೀರು ಬಿಟ್ಟು ಪರಾರಿಯಾಗಿದ್ದರು. ಹೀಗೆ ದಾಭೋಲ್‌ನ ವಿಶಾಲ ಪ್ರದೇಶ ರಕ್ತಪಾತವಿಲ್ಲದೆ ಶಿವಾಜಿಯ ಸ್ವರಾಜ್ಯಕ್ಕೆ ಸೇರಿಕೊಂಡಿತ್ತು.

ಶಿವಾಜಿ ದಾಲ್ಬೇಶ್ವರ ಮಂದಿರಕ್ಕೆ ದತ್ತಿ ನೀಡಿ, ನಿತ್ಯಪೂಜೆಗೆ ಸೌಕರ್ಯಗಳನ್ನು ಒದಗಿಸಿದ.

ಅಲ್ಲಿಂದ ಶಿವಾಜಿಯ ಸೈನ್ಯ ಚಿಪ್ಲುಣ್‌ಗೆ ಸಾಗಿತು. ಆದಿಲ್‌ಶಾಹಿಗಳ ಕೈಯಲ್ಲಿದ್ದ ಚಿಪ್ಲುಣ್ ಸುಲಭದಲ್ಲಿ ಶಿವಾಜಿಯ ವಶವಾಯಿತು. ಶಿವಾಜಿ ಬೆಟ್ಟದ ಮೇಲೇರಿ, ಪ್ರಾಚೀನ ಶ್ರೀ ಪರಶುರಾಮ ದೇವಾಲಯಕ್ಕೆ ಹೋದ. ಇಲ್ಲಿ ಆಗಾಗ ಸಿದ್ದಿಗಳ ದಾಳಿ ನಡೆಯುತ್ತಿತ್ತು. ಶಿವಾಜಿ ಇದರ ರಕ್ಷಣೆಗೆ ಒಂದು ತುಕಡಿಯನ್ನು ನಿಲ್ಲಿಸಿದ.

ಮಾವಳಿ ಪಡೆ ಶೃಂಗಾರಪುರದತ್ತ ತಿರುಗಿತು.

ಶೃಂಗಾರಪುರ ಒಂದು ಸುಭದ್ರ ಜಹಗೀರು. ಅಲ್ಲಿನ ಜಾಗೀರುದಾರ ಸೂರ್ಯರಾವ್‌ಸುರ್ವೆ ಬಿಜಾಪುರದ ಸುಲ್ತಾನನಿಗೆ ವಿಧೇಯನಾಗಿದ್ದ. ಸಿದ್ದಿ ಜೋಹರ್‌ನ ಪರವಾಗಿ ವಿಶಾಲಗಢಕ್ಕೆ ಮುತ್ತಿಗೆ ಹಾಕಿದವನು ಈತ. ಶಿವಾಜಿ ಪನ್ಹಾಳಾದ ಮುತ್ತಿಗೆಯಿಂದ ಪಾರಾದ ಬಳಿಕ ಸುರ್ವೆಯನ್ನು ವಿಶಾಲಗಢದಿಂದ ಒದ್ದೋಡಿಸಿದ.

ಸೂರ್ಯರಾವ್ ಸುರ್ವೆ ಬಳಿ ಹತ್ತು ಸಾವಿರ ಯೋಧರ ಸೈನ್ಯ ಇತ್ತು. ಪಿಲಾಜಿ ಶಿರ್ಕೆ ಮತ್ತು ತಾನಾಜಿ ಶಿರ್ಕೆ ಎಂಬ ಇಬ್ಬರು ವೀರ ಮರಾಠಾ ಸರದಾರರು ಅವನ ಸೈನ್ಯದ ದಂಡನಾಯಕರಾಗಿದ್ದರು.

ಸೂರ್ಯರಾವ್ ಸುರ್ವೆ ಒಬ್ಬ ಪರಾಕ್ರಮಿ ಮರಾಠಾ ಸರದಾರ ಎಂದು ಶಿವಾಜಿಗೆ ತಿಳಿದಿತ್ತು. ''ನನ್ನ ವಿರುದ್ಧ ಹೋರಾಡಬೇಡ. ಆದಿಲ್‌ಶಾಹಿಗಳ ಊಳಿಗ ಬಿಟ್ಟು ನನ್ನ ರಾಜ್ಯಕ್ಕೆ ನಿಷ್ಠೆ ಒಪ್ಪಿಸು. ನಿನಗೆ ಗೌರವದ ಸ್ಥಾನ ಕೊಡುತ್ತೇನೆ'' ಎಂದು ಸೂರ್ಯರಾವ್‌ಗೆ ಸಂದೇಶ ಕಳಿಸಿದ.

ಶಿವಾಜಿಯ ದೂತರನ್ನು ನೋಡಿ ಸೂರ್ಯರಾವ್ ಅಟ್ಟಹಾಸದಿಂದ ನಕ್ಕ. ''ನೋಡಿದಿರಾ, ಬೆಟ್ಟದ ಇಲಿ ನನ್ನೊಡನೆ ಸಂಧಾನಕ್ಕೆ ಬಂದಿದೆ'' ಎಂದು ಅಹಂಕಾರದಿಂದ ಹೇಳಿದ. ''ಶಿವಾಜಿ ನನಗೆ ಶರಣಾಗಿ ಕಪ್ಪ ಕಾಣಿಕೆ ಒಪ್ಪಿಸಲಿ, ಅನಂತರ ಸಂಧಾನದ ಮಾತನಾಡಲಿ'' ಎಂದು ದೂತರನ್ನು ಮರಳಿಸಿದ.

ಶಿವಾಜಿಯ ಸೈನ್ಯ ಸಂಗಮೇಶ್ವರದ ಬಳಿ ಡೇರೆ ಹಾಕಿತ್ತು. ಪಿಲಾಜಿ ಶಿರ್ಕೆ ಒಂದು ದಂಡಿನೊಡನೆ ಶಿವಾಜಿಯ ಮೇಲೆ ಅನಿರೀಕ್ಷಿತ ಆಕ್ರಮಣ ಮಾಡಿದ. ಆದರೆ ಮಾವಳಿಗಳ ವೀರಾವೇಶದ ಮುಂದೆ ಅವನ ಕೈಸಾಗಲಿಲ್ಲ. ಮಾವಳಿಗಳು ಪಿಲಾಜಿಯನ್ನು ಸೆರೆಹಿಡಿದು ಶಿವಾಜಿಯ ಮುಂದೆ ಉರುಳಿಸಿದರು.

ಮರುದಿನವೇ ಶಿವಾಜಿಯ ಸೈನ್ಯ ಶೃಂಗಾರಪುರದ ಮೇಲೆ ದಾಳಿ ನಡೆಸಿತು. ಶಿವಾಜಿಯ ಹೆಸರು ಕೇಳಿಯೇ ಸುರ್ವೆಯ ಅರ್ಧ ಸೈನ್ಯ ಪರಾರಿಯಾಗಿತ್ತು. ಹೋರಾಟಕ್ಕೆ ನಿಂತವರು ಧೂಳೀಪಟವಾದರು.

ಸುರ್ವೆಯ ಅಹಂಕಾರ ಇಳಿದಿತ್ತು. ಆದರೆ ಜೀವನಪೂರ್ತಿ ಶಿವಾಜಿಯ ವಿರುದ್ಧ ಹಗೆ ಕಾರುತ್ತಿದ್ದ ಸುರ್ವೆ ಶರಣಾಗಲು ಒಪ್ಪಲಿಲ್ಲ. ಸ್ವತಃ ಸೈನ್ಯವನ್ನು ನಡೆಸಿ, ರಣಭೂಮಿಯಲ್ಲಿ ವೀರಾವೇಶದಿಂದ ಹೋರಾಡಿ ಸತ್ತುಹೋದ.

ಸುರ್ವೆ ಸಾಯುತ್ತಲೇ ಅವನ ಸೈನ್ಯ ಓಡಿ ಹೋಯಿತು. ದಳಪತಿ ತಾನಾಜಿ ಶಿರ್ಕೆ ಕೂಡ ತಪ್ಪಿಸಿಕೊಂಡು ಹೋದ.

ತಾನಾಜಿ ಶಿರ್ಕೆಯ ಸಹಿತ ಸುರ್ವೆಯ ಸೈನ್ಯದ ಹಲವು ಸರದಾರರು ಪರಾರಿಯಾಗಿ ಜಂಜೀರಾದಲ್ಲಿ ಆಶ್ರಯ ಪಡೆದಿದ್ದರು. ತಾನಾಜಿ ಶಿರ್ಕೆ ಸಿದ್ದಿಗಳ ಜೊತೆಗೆ ಸೇರಿ ಯುದ್ಧ ಮುಂದುವರಿಸುವ ಸಾಧ್ಯತೆ ಇತ್ತು. ಅದನ್ನು ತಪ್ಪಿಸಲು ಶಿವಾಜಿ ತಾನಾಜಿಯನ್ನು ಸಂಧಾನಕ್ಕೆ ಕರೆದ. ''ನನ್ನ ಸಾಮಂತನಾಗಿ ಶೃಂಗಾರಪುರವನ್ನು ಆಳು'' ಎಂದು ಅವನಿಗೆ ಆಹ್ವಾನ ಕೊಟ್ಟ. ತಾನಾಜಿ ಶಿರ್ಕೆ ಒಪ್ಪಿದ. ಶಿವಾಜಿ ಅವನಿಗೆ ಶೃಂಗಾರಪುರದ ಜೊತೆಗೆ ಸುತ್ತಲಿನ ಕೆಲವು ಜಿಲ್ಲೆಗಳನ್ನು ಇನಾಮು ನೀಡಿದ. ತಾನಾಜಿಯ ಬೇಡಿಕೆಯಂತೆ ಶಿವಾಜಿ ಪಿಲಾಜಿ ಶಿರ್ಕೆಯನ್ನೂ ಬಿಡುಗಡೆ ಮಾಡಿದ.

ಶಿವಾಜಿಯ ಔದಾರ್ಯದ ಸುದ್ದಿ ಕೇಳಿ ಜಂಜೀರಾದಲ್ಲಿ ಸೇರಿಕೊಂಡಿದ್ದ ಸರದಾರರು ಕೂಡ ಶೃಂಗಾರಪುರಕ್ಕೆ ಮರಳಿದರು. ಶಿವಾಜಿ ಅವರಿಗೆ ಆಸ್ತಿಪಾಸ್ತಿಗಳ ಹಕ್ಕನ್ನು ಮರಳಿಸಿದ.

ತಾನಾಜಿ ಶಿರ್ಕೆ ತನ್ನ ಮಗಳನ್ನು ಶಿವಾಜಿಯ ಹಿರಿಯ ಮಗನಿಗೆ ಕೊಟ್ಟು ಮದುವೆ ಮಾಡಿಸಿದ. ಅಲ್ಲಿಗೆ ಕೊಂಕಣದ ಮೇಲೆ ಶಿವಾಜಿಯ ಹಿಡಿತ ಸುಭದ್ರವಾಯಿತು.

ಶಿವಾಜಿ ಕೊಂಕಣದಲ್ಲಿ ಮೂರು ತಿಂಗಳು ಉಳಿದು ರಾಯಗಢಕ್ಕೆ ಮರಳಿದ. ಮೊಘಲ ಸೈನ್ಯ ಇನ್ನೂ ಪುಣೆಯಲ್ಲಿ ಉಳಿದಿತ್ತು. ಶೈಸ್ತಾಖಾನ್ ಅಲ್ಲಿಂದ ಯಾವ ಘಳಿಗೆಯಲ್ಲೂ ಆಕ್ರಮಣ ಮಾಡಲು ಸಾಧ್ಯವಿತ್ತು.

ಅದಕ್ಕೆ ಮೊದಲೇ ದೈತ್ಯನ ತಲೆಕಡಿಯಲು ಶಿವಾಜಿ ನಿರ್ಧರಿಸಿದ್ದ.

(ಮುಂದುವರಿಯುತ್ತದೆ)

ಮುಖಪುಟ

'ತರಂಗ' ಏಪ್ರಿಲ್ 16, 2026ರ ಸಂಚಿಕೆಯಲ್ಲಿ ಪ್ರಕಟವಾದ ತುಕಾರಾಮ್ ಅವರ 'ಡಿಜಿಟಲ್ ಅರೆಸ್ಟ್: ಕಾನೂನಿನ ಸೋಗಿನಲ್ಲಿ ಮೋಸದ ಮಹಾಜಾಲ' ಲೇಖನ ಜಾಗೃತಿ ಮೂಡಿಸಿತು. ಮೋಸದ ಹಲವು ಆ್ಯಪ್‌ಗಳನ್ನು ಕಳುಹಿಸಿ ಡೌನ್‌ಲೋಡ್ ಮಾಡಿಕೊಂಡು ಹಣ ಕಳೆದುಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ತೀರಾ ಸಾಮಾನ್ಯ. ಆನ್‌ಲೈನ್ ಡೇಟಿಂಗ್, ಸ್ಕ್ಯಾಮ್ ಫ್ಯಾಕ್ಟರಿಗಳ ಸಂಪೂರ್ಣ ಮಾಹಿತಿ ಒದಗಿಸಿಕೊಡುವುದರ ಜೊತೆಗೆ ಈ ಮೋಸಜಾಲದಿಂದ ಹೇಗೆ ಹೊರಬರಬೇಕು ಎಂಬ ಸಮಗ್ರ ಮಾಹಿತಿಯನ್ನು ಒದಗಿಸಿತು.

ವೆಂಕಟೇಶ್ ತೂಬಿನಕೆರೆ, ಮಂಡ್ಯ

ಉಪಯುಕ್ತ ಲೇಖನ. ಅನ್ಯಾಯ ಮಾರ್ಗದಲ್ಲಿ ಹಣ ಗಳಿಸಿದವರು, ಕಾನೂನಿಗೆ ಅಂಜುವವರು ಡಿಜಿಟಲ್ ಅರೆಸ್ಟ್ ಅಂದಾಕ್ಷಣ ಭಯಭೀತರಾಗುತ್ತಾರೆ. ಮೋಸದ ಅನೇಕ ತಂತ್ರಗಳಲ್ಲಿ ಇದೂ ಒಂದು. ಬಡಪಾಯಿ ಜನರಿಗೆ ಆಮಿಷ ತೋರಿಸಿ ಬ್ಯಾಂಕ್‌ನ ಕೆಲವು ನೌಕರರ ಸಹಕಾರದಿಂದ ಮ್ಯೂಲ್ ಖಾತೆ ತೆರೆದು ಲಪಟಾಯಿಸಿದ ಹಣ ವರ್ಗಾವಣೆ ಮಾಡುವುದು ಅನ್ಯಾಯ. ಇದನ್ನು ತಡೆಗಟ್ಟಲು ಪೊಲೀಸರೇ ಮುಂದಾಗಬೇಕು.

ಬಾಣಾವರ ನಾಗರಾಜ, ಜೆ.ಪಿ. ನಗರ

ಈ ಹಿಂದೆ ಉತ್ತರ ಭಾರತದ ಯಾವುದೋ ರಾಜ್ಯದಲ್ಲಿ ಕುಳಿತು ಈ ದಂಧೆ ನಡೆಸಲಾಗುತ್ತಿತ್ತು. ಆದರೆ ವಿದೇಶಿ ನೆಲದಲ್ಲಿ ಡಿಜಿಟಲ್ ಅರೆಸ್ಟ್‌ನ ನೂರಾರು ಫ್ಯಾಕ್ಟರಿಗಳೇ ಇವೆ ಎಂಬ ಭಯಾನಕ ಸಂಗತಿ ತಿಳಿದು ಗಾಬರಿಯಾಯಿತು. ವಿದ್ಯಾವಂತರೇ ಈ ಜಾಲದಲ್ಲಿ ಹೆಚ್ಚು ಮೋಸ ಹೋಗುತ್ತಿರುವುದು ವಿಷಾದ.

ಬಿ. ವಾಣಿ, ಮೈಸೂರು

ಕಣ್ಣು ತೆರೆಸುವ ಲೇಖನ. ಹೆಚ್ಚು ಸಂಪತ್ತನ್ನು ಗಳಿಸುವ ಮನುಷ್ಯನ ಸಹಜ ಗುಣವನ್ನು ಬಂಡವಾಳವಾಗಿ ಇಟ್ಟುಕೊಂಡ ಕೆಲವರು ಬಣ್ಣ ಬಣ್ಣದ ನಾಟಕದ ಜಾಹೀರಾತುಗಳಿಂದ ಸಾಮಾನ್ಯರನ್ನು ಮರುಳು ಮಾಡುತ್ತಾರೆ. ಇಂಥ ಕಳ್ಳರಿಗೆ ಶಿಕ್ಷೆಯಾಗದೆ ಹೋದರೆ ಈ ಸಮಸ್ಯೆ ಸರಿಯಾಗದು. ಸಮರ್ಥ ಕಾನೂನು, ಅಧಿಕಾರಿಗಳು, ನ್ಯಾಯಾಧೀಶರು ಇರುವಂಥ ವ್ಯವಸ್ಥೆಯ ಕನಸು ನನಸಾಗಲಿ ಎಂಬುದೇ ನಮ್ಮ ಪ್ರಾರ್ಥನೆ.

ಪ್ರೊ. ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

ಕಲಿಯುಗದಲ್ಲಿ ಧರ್ಮ ನಶಿಸಿ ಅಧರ್ಮ ತಾಂಡವವಾಡುತ್ತಿದೆ. ಡಿಜಿಟಲ್ ಅರೆಸ್ಟ್ ಎಂಬ ರಾಕ್ಷಸೀ ಪ್ರವೃತ್ತಿಗೆ ಹಿರಿಯ ನಾಗರಿಕರೇ ಹೆಚ್ಚಾಗಿ ಬಲಿಪಶುಗಳಾಗುತ್ತಿದ್ದಾರೆ. ಈ ಅಮಾನವೀಯ ಪರಿಸ್ಥಿತಿಯನ್ನು ತಡೆಗಟ್ಟಲು ಹಲವಾರು ಪ್ರಯೋಗಗಳು ನಡೆಯುತ್ತಿವೆ. ಆದರೂ ಈ ವ್ಯಾಧಿ ಮುಂದುವರಿದಿದೆ. ಈ ವಿಷವರ್ತುಲದಿಂದ ಹೊರಬಂದು ನ್ಯಾಯದ ರೀತಿಯಲ್ಲಿ ಜೀವನ ಸಾಗಿಸುವಂತಾಗಬೇಕು.

ಜೆ.ಟಿ. ಸಂಪತ್ತುಮಾರಾಚಾರ್, ಮೈಸೂರು

ಪ್ರಿಯ ಓದುಗರೇ

ಡಾ|| ಸಂಧ್ಯಾ ಪೈ ಅವರ 'ಇಳಿವಯಸ್ಸಿನಲ್ಲಿ ಕನಸು ನನಸಾದ ಆತ್ಮತೃಪ್ತಿ' ಸಂಪಾದಕೀಯ ಉತ್ತಮವಾಗಿತ್ತು. ಕನಸು ಕಂಡರೆ ಸಾಲದು, ನನಸಾಗಲು ಪಣ ತೊಡಬೇಕು. ಸ್ನುಂಗ್‌ರ್ಶುನ್ ಅವರ ವಯಸ್ಸು ಹಾಗೂ ಧೈರ್ಯ ಎರಡಕ್ಕೂ ಸರಿಸಮ ಯಾವುದೂ ಇಲ್ಲ. ಅವರು ಮುದ್ರಿಸಿದ ಗ್ರಂಥಗಳನ್ನು ಇಂದಿಗೂ ಜಪಾನಿನಲ್ಲಿ ವಿದ್ಯಾರ್ಥಿಗಳು ಅಭ್ಯಸಿಸುತ್ತಿರುವುದು ಸಂತೋಷದ ಸಂಗತಿ.

ಹೀರಾ ರಮಾನಂದ್, ಬೆಂಗಳೂರು

'ಸಾಧಿಸುವ ಛಲ ಇದ್ದವನಿಗೆ ಯಾವುದೂ ಅಸಾಧ್ಯವಲ್ಲ' ಎಂಬ ನೀತಿಗೆ ಇದಕ್ಕಿಂತ ಉತ್ತಮ ಕಥೆ ಬೇಕಿಲ್ಲ. ಚೀನೀ ಭಾಷೆಯಲ್ಲಿದ್ದ ಬೌದ್ಧ ಧರ್ಮದ ಗ್ರಂಥಗಳನ್ನು ಜಪಾನೀ ಭಾಷೆಗೆ ಅನುವಾದಿಸಿ ಹಂಚುವ ಗುರಿ ಹೊಂದಿದ್ದ ಈ ಸಾಹಸಿ ಎದುರಾದ ಅಡೆತಡೆಗಳನ್ನು ಎದುರಿಸಿದ ರೀತಿ ಅದ್ಭುತ.

ಆರ್.ಕೆ. ಮಿಜಾರ್, ಮೂಡುಬಿದಿರೆ

ಜನಮನ

ಅಲಿಸಾ ಕಾರ್ಸನ್

ಚಂದ್ರ ಬಾರ್ಕೂರ್ ಅವರ 'ಅಲಿಸಾ ಕಾರ್ಸನ್ ಮಂಗಳ ಮಹಾಯಾನದ ಅಪ್ರತಿಮ ಸಂಕಲ್ಪ' ಲೇಖನ ರೋಮಾಂಚಕಾರಿಯಾಗಿತ್ತು. ಅಲಿಸಾ ಅವರ 'ಬಾರದೂರಿನ ಒಂಟಿ ಪಯಣ' ಊಹೆಗೂ ಮೀರಿದ್ದು. ಈ ಅಲಿಸಾ ಎಂಬ ವಸುಂಧರೆ ಮಂಗಳ ಗ್ರಹಕ್ಕೆ ಪರ್ಯಟಿಸಿ 'ಮಂಗಳ ಧರಿತ್ರಿ'ಯಾಗಲಿ. ಅಲಿಸಾ ಅವರ 'ಮಂಗಳ' ವಾಸ ಸುದೀರ್ಘವಾಗಲಿ ಎಂಬುದು ಹಾರೈಕೆ.

ವಿಶ್ವನಾಥ ತಂಬ್ರಳ್ಳಿ, ಹೊಸಪೇಟೆ

ಬಲಿದಾನ ಬಯಸುವ ಈ ಪಯಣದಲ್ಲಿ ಆಕೆಯ ಕನಸು ನನಸಾಗಲಿ. ಭೂಮಿಗೆ ಆಕೆಯಿಂದ ಸಾಕಷ್ಟು ಪ್ರಯೋಜನ ದೊರೆಯಲಿ. ಮುಂದಿನ ದಿನಗಳಲ್ಲಿ ಮತ್ತಷ್ಟು ಆವಿಷ್ಕಾರಗಳು ನಡೆದು ಮಂಗಳ ಗ್ರಹದಿಂದ ಆಕೆಯನ್ನು ಮರಳಿ ತರುವ ನೌಕೆಗಳ ಸೃಷ್ಟಿಯಾಗಲಿ. ಆಕೆ ಸುರಕ್ಷಿತವಾಗಿ ಭೂಮಿಗೆ ಮರಳುವಂತಾಗಲಿ!

ಸುಶೀಲಾ ಕೆ. ಆರ್. ಬೈಲೂರು

ರಾಜ್ ನೆನಪಿನ 20 ವರ್ಷ

ದಿಯಾ ಅವರ 'ಅಜರ-ಅಮರ ಕನ್ನಡದ ಚೇತನ ರಾಜ್ ನೆನಪಿನ 20 ವರ್ಷ' ಲೇಖನ ಸಮಯೋಚಿತವಾಗಿತ್ತು. ವರನಟ ರಾಜ್‌ಕುಮಾರ್ ಅವರನ್ನು ಎಷ್ಟು ಹೊಗಳಿದರೂ ಕಡಿಮೆಯೇ. ರಾಜ್ ಚಿತ್ರಗಳಲ್ಲಿನ ಸಾಮಾಜಿಕ ಕಳಕಳಿ, ಮಾನವೀಯ ಮೌಲ್ಯಗಳು, ಕನ್ನಡ ಪರ ನಿಲುವು ಅವರನ್ನು ಕನ್ನಡದ ಅಸ್ಮಿತೆಯಾಗಿಸಿವೆ. ಎಷ್ಟೇ ವರ್ಷ ಕಳೆದರೂ ಅವರ 'ಮಂತ್ರಾಲಯ ಮಹಾತ್ಮೆ', 'ಬಂಗಾರದ ಮನುಷ್ಯ', 'ಕಸ್ತೂರಿ ನಿವಾಸ', 'ಸತ್ಯ ಹರಿಶ್ಚಂದ್ರ', 'ಭಕ್ತ ಕನಕದಾಸ', 'ಮಯೂರ' ಚಿತ್ರಗಳನ್ನು ನಾವು ಮರೆಯಲು ಸಾಧ್ಯವೇ ಇಲ್ಲ.

ರಾ. ರಾಮಾರಾಧ್ಯ, ಮೈಸೂರು

ಜಗತ್ತು ಮೆಚ್ಚದ ಹತ್ತು ದೇಶಗಳು

ಚಿನ್ಮಯ್ ಅವರ 'ಜಗತ್ತು ಮೆಚ್ಚದ ಹತ್ತು ದೇಶಗಳು' ಟಾಪ್‌ಟೆನ್ ಸರಣಿ ಹಲವು ಅಚ್ಚರಿಗಳನ್ನು ಪರಿಚಯಿಸಿತು. ಜಗತ್ತಿನಲ್ಲಿ ಹೆಚ್ಚು ಜನರಿಗೆ ಇಷ್ಟವಿಲ್ಲದ ದೇಶಗಳ ಸಮೀಕ್ಷೆಯ ಪ್ರಕಾರ ಚೀನಾ, ಪಾಕಿಸ್ತಾನದ ಜೊತೆ ಅಮೆರಿಕಾ, ರಷ್ಯಾ ದೇಶಗಳ ಹೆಸರನ್ನು ನೋಡಿ ಗಾಬರಿಯಾಯಿತು. ಆದರೆ ಆ ದೇಶಗಳ ಇತ್ತೀಚಿನ ಕೆಲವು ನಿರ್ಧಾರಗಳೇ ಈ ಫಲಿತಾಂಶಕ್ಕೆ ಕಾರಣ ಎಂಬುದಂತೂ ಸ್ಪಷ್ಟ.

ಶಶಿರೇಖಾ ಜಿ., ಬೀದರ್

PUC ಪಿಯುಸಿ ಎಂಬ ತಿರುವು

ಯಾವ್ಯಾವ ವೃತ್ತಿ ಏನೇನು ಅವಕಾಶ?

❑ ಎನ್. ಅನಂತನಾಗ್

ಭಾಗ-2

ವಿದ್ಯಾರ್ಥಿಗಳೇ, ಪಿಯುಸಿ ಅಧ್ಯಯನದ ಬಳಿಕ ನಿಮ್ಮ ಮುಂದಿನ ಬದುಕಿಗೆ ನೆರವಾಗಬಹುದಾದ ಅನೇಕ ಕೋರ್ಸ್‌ಗಳ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಲ್ಲವೆ? ಉತ್ತಮ ಭವಿಷ್ಯ ಕಲ್ಪಿಸಬಲ್ಲ ಇನ್ನಷ್ಟು ಕೋರ್ಸ್‌ಗಳು ಇಲ್ಲಿವೆ. ನಿಮಗಿಷ್ಟಬಂದದ್ದನ್ನು ಆಯ್ದುಕೊಳ್ಳಿ. ನಿಮ್ಮ ಬಾಳು ಉಜ್ವಲವಾಗಲಿ ಎಂದು 'ತರಂಗ' ಹಾರೈಸುತ್ತದೆ.

ಕಂಪೆನಿ ಸೆಕ್ರೆಟರಿ

ಕಂಪೆನಿಗಳ ಯಾವುದೇ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಮತ್ತು ವ್ಯವಸ್ಥಿತವಾಗಿ ನಡೆಸಲು ಕಾರ್ಯಸೂಚಿ ತಯಾರಿಸಿ, ಅಂದಂದಿನ ಪಾಳಿಯ ಕಾರ್ಯನಿರ್ವಹಿಸುವಂತೆ ಮಾಡುವವರು ಕಂಪೆನಿ ಸೆಕ್ರೆಟರಿಗಳು. ಕಂಪೆನಿಗಳಲ್ಲಿ ವರ್ಕ್ ಶೆಡ್ಯೂಲ್, ಮೀಟಿಂಗ್, ಅತಿಥಿಗಳಿಗೆ ಸಮಯ ನೀಡುವವರೂ ಇವರೇ.

ಕಂಪೆನಿ ಸೆಕ್ರೆಟರಿ ಆಗಬೇಕೆಂದರೆ ಪಿಯು ಬಳಿಕ ಸಿಎಸ್ ಫೌಂಡೇಷನ್‌ನಲ್ಲಿ ಪ್ರವೇಶ ಪರೀಕ್ಷೆ ಪಡೆದು ಎಕ್ಸ್‌ಕ್ಲೂಸಿವ್ ಮತ್ತು ಪ್ರೊಫೆಷನಲ್ ಪ್ರೋಗ್ರಾಮ್ ಕೋರ್ಸ್ ಪೂರೈಸಬೇಕು. ಅಥವಾ ಸಿಎಸ್/ಸಿಎ/ಸಿಎಂಎ ಮಾಡಿ ಪದವಿ ಯಾವುದೇ ವಿಷಯ ಅಭ್ಯಸಿಸಿ ಸಿಎಸ್ ಕೋರ್ಸ್ ಪೂರೈಸಿದರೂ ಗುರಿ ಸಾಧಿಸಬಹುದು.

ಇದರೊಂದಿಗೆ ಕಂಪೆನಿ ಕಾರ್ಯಚಟುವಟಿಕೆಗಳ ಬಗ್ಗೆ ತಿಳುವಳಿಕೆ, ಕಂಪೆನಿ ಕಾರ್ಯನಿರ್ವಹಣ ಕೌಶಲ, ಸಂಘಟನಾ ವ್ಯಕ್ತಿತ್ವ, ಸಮಸ್ಯೆಯನ್ನು ಪರಿಹರಿಸಿ ಸೌಹಾರ್ದ ಕಾಪಾಡುವ ಕಲೆ, ಹಲವು ಭಾಷೆಗಳ ಮೇಲೆ ಹಿಡಿತ, ಎರಡು-ಮೂರು ಕೆಲಸಗಳನ್ನು ಒಂದೇ ಸಮಯದಲ್ಲಿ ಮಾಡುವ ಕಲೆ ಅಗತ್ಯ.

ಅವಕಾಶಗಳು

ಕಂಪೆನಿ ಸೆಕ್ರೆಟರಿ ವಲಯ, ವ್ಯಾಪಾರ ನಿರ್ವಹಣ ವಲಯ, ಸರಕಾರಿ ಸಂಬಂಧಿತ ಕಂಪೆನಿ ಮತ್ತು ವ್ಯಾಪಾರ ಕ್ಷೇತ್ರ, ಷೇರು ಮಾರುಕಟ್ಟೆ ವಲಯ, ವಾಣಿಜ್ಯ ಮತ್ತು ಬ್ಯಾಂಕಿಂಗ್ ಕ್ಷೇತ್ರ, ಕಾರ್ಪೊರೇಟ್ ಮತ್ತು ಟ್ರಸ್ಟ್‌ಗಳು, ಸಂಶೋಧನಾ ಕ್ಷೇತ್ರ, ಸ್ವಯಂ ಉದ್ಯೋಗ.

ಕಾಲೇಜುಗಳು

- ಬಿಎಂಎಸ್ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಇಂಡಿಯನ್ ಅಕಾಡೆಮಿ ಡಿಗ್ರಿ ಕಾಲೇಜು, ಬೆಂಗಳೂರು.
- ಇನ್‌ಸ್ಟಿಟ್ಯೂಟ್ ಆಫ್ ಕಂಪೆನಿ ಸೆಕ್ರೆಟರೀಸ್ ಆಫ್ ಇಂಡಿಯಾ, ಬೆಂಗಳೂರು.
- ಮೇವಾ ವ್ಯಾನ್‌ಗಾರ್ಡ್ ಬಿಸಿನೆಸ್ ಸ್ಕೂಲ್, ಬೆಂಗಳೂರು.
- ಎನ್‌ಸಿ - ನ್ಯಾಷನಲ್ ಕಾಲೇಜು, ಬೆಂಗಳೂರು.
- ಬಿಸಿಸಿಎ - ಭರತೇಶ್ ಕಾಲೇಜ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್, ಬೆಳಗಾವಿ.

ರಿಟೇಲ್ ಮ್ಯಾನೇಜರ್

ದೇಶದ ಉತ್ಪಾದನಾ ವಲಯದಲ್ಲಿ ಸರಕನ್ನು ಹೆಚ್ಚು ಪ್ರಮಾಣದಲ್ಲಿ ಖರೀದಿಸಿ ವಿತರಕರ ಮೂಲಕ ಅಂಗಡಿ-ಮುಂಗಟ್ಟುಗಳಿಗೆ ತಲುಪಿಸಿ ಕಂಪೆನಿಗಳಿಗೆ, ವಿತರಕರಿಗೆ ಅನುಕೂಲವಾಗುವ ವಾತಾವರಣ ಸೃಷ್ಟಿಸುವವರು ರಿಟೇಲ್ (ಚಿಲ್ಲರೆ ವ್ಯವಹಾರ) ಮ್ಯಾನೇಜರ್‌ಗಳು. ಇವರು ಉತ್ಪಾದನಾ ಮತ್ತು ಮಾರುಕಟ್ಟೆ ವಲಯದ ಕೊಂಡಿಯೂ ಹೌದು.

ಪಿಯುಸಿ ಬಳಿಕ ರಿಟೇಲ್ ಮ್ಯಾನೇಜ್‌ಮೆಂಟ್ ಸಂಬಂಧಿತ ಸರ್ಟಿಫಿಕೇಟ್/ಪದವಿ/ಡಿಪ್ಲೊಮಾ ಮಾಡಿದರೆ ರಿಟೇಲ್ ಮ್ಯಾನೇಜರ್ ಆಗಬಹುದು.

ಜತೆಗೆ ಪ್ರಭಾವಶಾಲಿ ವ್ಯಕ್ತಿತ್ವ, ಮಾತಿನ ಮೇಲೆ ನಿಗಾ, ಸಂಘಟನಾ ಕೌಶಲ, ವಸ್ತು - ವಿಷಯಗಳ ಬಗ್ಗೆ ವಿಮರ್ಶಾ ಜ್ಞಾನ, ಸೃಜನಾತ್ಮಕ ಕೌಶಲ, ವ್ಯವಸ್ಥಾಪನ ಕೌಶಲ, ಸಮೂಹದಲ್ಲಿ ಮತ್ತು ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕೌಶಲ.

ಅವಕಾಶಗಳು

ಚಿಲ್ಲರೆ ಮಳಿಗೆಗಳು, ಎಕ್ಸ್‌ಪೋರ್ಟ್ ಹೌಸ್‌ಗಳು, ಅಂಗಡಿ ಮಳಿಗೆಗಳು, ಉತ್ಪಾದನಾ ಘಟಕಗಳು, ಮಾರ್ಕೆಟಿಂಗ್, ಫೈನಾನ್ಶಿಯಲ್ ಇನ್‌ಸ್ಟಿಟ್ಯೂಟ್, ಐಟಿ ಮತ್ತು ಬಿಪಿಒ, ಶೈಕ್ಷಣಿಕ ವಲಯ, ಪ್ರಕಾಶನ ಗೃಹಗಳು, ಆರೋಗ್ಯ ಸಂಬಂಧಿತ ವಸ್ತುಗಳ ಉತ್ಪಾದನಾ ಘಟಕ, ಕ್ರೀಡಾ ವಸ್ತುಗಳ ಉತ್ಪಾದನಾ ವಲಯ.

ಕಾಲೇಜುಗಳು

- ಪಿಇಎಸ್ ಯೂನಿವರ್ಸಿಟಿ, ಬೆಂಗಳೂರು
- ಜಿಐಬಿಎಸ್ ಬಿಸಿನೆಸ್ ಸ್ಕೂಲ್, ಬೆಂಗಳೂರು
- ನ್ಯಾಷನಲ್ ಸ್ಕೂಲ್ ಆಫ್ ಬಿಸಿನೆಸ್, ಜೆಪಿ ನಗರ, ಬೆಂಗಳೂರು.
- ಇಂದೂಸ್ ಬಿಸಿನೆಸ್ ಅಕಾಡೆಮಿ (ಐಬಿಎ), ಕನಕಪುರ ರಸ್ತೆ, ಬೆಂಗಳೂರು.
- ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.

ಸ್ಟಾಕ್ ಬ್ರೋಕರ್

ಷೇರು ಮಾರುಕಟ್ಟೆಯ ತಲ್ಲಣಗಳ ಬಗ್ಗೆ ಅಧ್ಯಯನ ಮಾಡುತ್ತಾ ಷೇರು ದರಗಳ ಏರಿಕೆ, ಇಳಿಕೆಗೆ ಅನುಗುಣವಾಗಿ ಬಂಡವಾಳ ಹೂಡಿಕೆ ಮಾಡಿದ ಕಂಪೆನಿಗೆ ಅಥವಾ ವ್ಯಕ್ತಿಗಳಿಗೆ ಲಾಭ ತಂದುಕೊಡುವವರು ಸ್ಟಾಕ್ ಬ್ರೋಕರ್‌ಗಳು. ಷೇರುಪೇಟೆ, ಫಂಡ್ ಮ್ಯಾನೇಜ್‌ಮೆಂಟ್ ಘಟಕಗಳಲ್ಲಿ ಇವರಿಗೆ ಮಾನ್ಯತೆ ಹೆಚ್ಚು.

ಪಿಯುಸಿಯಲ್ಲಿ ವಾಣಿಜ್ಯ ವಿಷಯವನ್ನು ಅಭ್ಯಾಸ ಮಾಡಿ, ಪದವಿಯಲ್ಲಿ ವಾಣಿಜ್ಯ/ಅರ್ಥಶಾಸ್ತ್ರ/ಫೈನಾನ್ಸ್ ವಿಷಯ ಅಧ್ಯಯನ ಮಾಡಬೇಕು. ಜತೆಗೆ ಎನ್ಸಿಎಫ್ಎಂ/ಎಎಂಎಫ್ಐ/ಎನ್ಎಸ್ಇ/ಬಿಸಿಡಿಇ ಸಂಬಂಧಿತ ಸರ್ಟಿಫಿಕೇಷನ್ ಕೋರ್ಸ್ ಮಾಡಿ, ಬ್ರೋಕಿಂಗ್/ಸ್ಟಾಕ್ ಮಾರುಕಟ್ಟೆಯ ತರಬೇತಿ ಪಡೆದರೆ ಗುರಿ ಸಾಧಿಸಿದಂತೆ.

ಇದರೊಂದಿಗೆ ಮಾರುಕಟ್ಟೆ ಉತ್ಪನ್ನಗಳು, ವಿವಿಧ ಕಂಪೆನಿಗಳ ಷೇರುಗಳು, ನಿಫ್ಟಿ-ಫಿಫ್ಟಿ ಬ್ಯಾಂಕುಗಳ ಬಗ್ಗೆ ತಿಳುವಳಿಕೆ, ಮಾರುಕಟ್ಟೆ ವಿಮರ್ಶಾ ಸಾಮರ್ಥ್ಯ ಮತ್ತು ಹಣ ನಿರ್ವಹಣ ತಂತ್ರಗಾರಿಕೆ, ಉತ್ತಮ ಶ್ರವಣ - ಮನನ ಶಕ್ತಿ, ಗಣಕ ಜ್ಞಾನ ಮತ್ತು ಸಂವಹನ ಕೌಶಲ ಅಗತ್ಯ.

ಅವಕಾಶಗಳು

ಬ್ರೋಕಿಂಗ್ (ದಲ್ಲಾಳಿ ವ್ಯವಹಾರ) ಕ್ಷೇತ್ರ, ಬ್ಯಾಂಕಿಂಗ್ ಇನ್ವೆಸ್ಟ್‌ಮೆಂಟ್‌ಗಳು, ಸಾಂಪ್ರದಾಯಿಕ ಬ್ಯಾಂಕುಗಳ ದಲ್ಲಾಳಿ ವ್ಯವಹಾರಗಳು, ಕನ್ಸಲ್ಟೆನ್ಸಿಗಳು, ಇನ್ಶೂರೆನ್ಸ್ ಕಂಪೆನಿಗಳು, ಫೌಂಡೇಷನ್ (ಪ್ರತಿಷ್ಠಾನ)ಗಳು, ಮ್ಯೂಚುಯಲ್ ಮತ್ತು ಪೆನ್ಷನ್ ಫಂಡ್‌ಗಳು, ವಾಣಿಜ್ಯ ಸಾಪ್ತಾಹಿಕ ಮತ್ತು ಪತ್ರಿಕೆಗಳು, ಷೇರು ಸಂಶೋಧನಾ ವಲಯ, ಇತರ ಫೈನಾನ್ಶಿಯಲ್ ಇನ್‌ಸ್ಟಿಟ್ಯೂಟ್‌ಗಳು.

ಕಾಲೇಜುಗಳು

- ಸ್ಟಾಕ್‌ಬೈಟ್ ಸ್ಟಾಕ್ ಮಾರ್ಕೆಟ್ ಇನ್‌ಸ್ಟಿಟ್ಯೂಟ್, ಬೆಂಗಳೂರು.
- ಮನಿ ಮಾರ್ಕೆಟ್ ಅಕಾಡೆಮಿ (ಸ್ಟಾಕ್ ಮಾರ್ಕೆಟಿಂಗ್), ಬೆಂಗಳೂರು.
- ಎಸ್‌ಎಂಟಿಎ ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್ ಅಕಾಡೆಮಿ, ಬೆಂಗಳೂರು.
- ಸ್ಟಾಕ್ ಮಾರ್ಕೆಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು.
- ಆನ್‌ಲೈನ್ ಟ್ರೇಡಿಂಗ್ ಅಕಾಡೆಮಿ, ಲೋವರ್ ಪರೇಲ್, ಮುಂಬೈ.

ವೆಲ್ತ್ ಮ್ಯಾನೇಜರ್

ಕಂಪೆನಿಗಳ ಹೂಡಿಕೆ ನಿರ್ವಹಣೆ ಮಾಡುತ್ತ, ಕಾನೂನು ಮತ್ತು ತೆರಿಗೆ ಸಲಹೆ, ಎಸ್ಟೇಟ್ ಪ್ಲ್ಯಾನಿಂಗ್, ಬ್ಯಾಂಕಿಂಗ್ ಕ್ಷೇತ್ರವನ್ನು ನಿರ್ವಹಿಸುವವರು ವೆಲ್ತ್ ಮ್ಯಾನೇಜರ್‌ಗಳು. ಇವರು ಕಂಪೆನಿಗಳ ಸಂಪತ್ತು ಬೆಳವಣಿಗೆ ಮತ್ತು ಮುಂದಾಗುವ ಗಂಡಾಂತರಗಳ ಬಗ್ಗೆ ಮಾಹಿತಿ ನೀಡುವವರು.

ಪಿಯುಸಿಯಲ್ಲಿ ಕಡ್ಡಾಯವಾಗಿ ವಾಣಿಜ್ಯ ವಿಷಯವನ್ನು ಅಭ್ಯಾಸ ಮಾಡಿ, ಪದವಿಯಲ್ಲಿ ಕಾಮರ್ಸ್ ವಿಷಯ ಅಭ್ಯಸಿಸಿ, ಮತ್ತೆರಡು ವರ್ಷಗಳವರೆಗೆ ಫೈನಾನ್ಶಿಯಲ್ ಪ್ಲಾನರ್/ಫೈನಾನ್ಶಿಯಲ್ ಅನಾಲಿಸ್ಟ್/ಚಾರ್ಟರ್ಡ್ ಅಕೌಂಟೆಂಟ್ ಅಥವಾ ಬ್ಯಾಂಕಿಂಗ್ ವಲಯದಲ್ಲಿ ಅಡ್ವೈಸರಿ ಮ್ಯಾನೇಜ್‌ಮೆಂಟಿನಲ್ಲಿ ಕಾರ್ಯನಿರ್ವಹಿಸಿ, ಇದರೊಂದಿಗೆ ಸರ್ಟಿಫಿಕೇಟ್ ಇನ್ ವೆಲ್ತ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ ಪ್ರಮಾಣ ಪತ್ರ ಪಡೆದರೆ ವೆಲ್ತ್ ಮ್ಯಾನೇಜರ್ ಆಗಬಹುದು.

ಇದರೊಂದಿಗೆ ವಾಣಿಜ್ಯ ಕ್ಷೇತ್ರದ ಇತಿಹಾಸ, ಹಣದ ವರ್ಗಾವಣೆ - ಹೂಡಿಕೆ ಬ್ಯಾಂಕಿಂಗ್ ಕ್ಷೇತ್ರದ ತಿಳುವಳಿಕೆ ಉತ್ತಮ ಸಂವಹನ ಕೌಶಲ, ಭಾಷಾ ಜ್ಞಾನ, ಆರ್ಥಿಕ ನೀತಿಯ ಅರಿವು, ಸಮೂಹ/ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕೌಶಲ, ಬದಲಾವಣೆಗಳಿಗೆ ತೆರೆದುಕೊಳ್ಳುವ ಗುಣ ಅತ್ಯಗತ್ಯ.

ಅವಕಾಶಗಳು

ಹಣಕಾಸು ಸಂಸ್ಥೆಗಳು, ಮ್ಯಾನೇಜ್‌ಮೆಂಟ್ ಕಂಪೆನಿಗಳು, ಬ್ಯಾಂಕುಗಳು, ಹೂಡಿಕೆ ಏಜೆನ್ಸಿಗಳು, ಫಂಡ್ ಮ್ಯಾನೇಜ್‌ಮೆಂಟ್ ವಲಯ, ಕನ್ಸಲ್ಟೆನ್ಸಿಗಳು.

ಕಾಲೇಜುಗಳು

- ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಸ್ಟಡೀಸ್(ಐಐಬಿಎಸ್), ಬೆಂಗಳೂರು.

• ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
• ಪಿಇಎಸ್ ಯೂನಿವರ್ಸಿಟಿ ಬೆಂಗಳೂರು.
• ಇಮರ್ಟಿಕಸ್ ಲರ್ನಿಂಗ್, ಬೇಗಂಪೇಟೆ, ಹೈದಾರಾಬಾದ್.
• ದ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್, ಇಂದ್ರಪ್ರಸ್ಥ, ದೆಹಲಿ.
• ಸಿಎಂಎಸ್ ಬಿಸಿನೆಸ್ ಸ್ಕೂಲ್, ಜೈನ್ ಯೂನಿವರ್ಸಿಟಿ, ಬೆಂಗಳೂರು.

ಅಡ್ವರ್ಟೈಸಿಂಗ್ ಎಕ್ಸಿಕ್ಯೂಟಿವ್

ಕಂಪೆನಿ ಉತ್ಪಾದಿಸಿದ ವಸ್ತುಗಳು ಮಾರುಕಟ್ಟೆಯಲ್ಲಿ ಹೆಚ್ಚು ಪ್ರಚಲಿತದಲ್ಲಿರುವಂತೆ ನೋಡಿಕೊಳ್ಳುವ ಮತ್ತು ಅದನ್ನು ಜನರು ಮರೆಯದಂತೆ ಆಗಿಂದಾಗ್ಗೆ ಪ್ರಚಾರ ನೀಡಿ ವ್ಯಾಪಾರ ಕ್ಷೇತ್ರಕ್ಕೆ ಅನುಕೂಲ ಮಾಡಿಕೊಡುವವರು ಅಡ್ವರ್ಟೈಸಿಂಗ್ ಎಕ್ಸಿಕ್ಯೂಟಿವ್‌ಗಳು. ಇವರು ಮಾಧ್ಯಮ ಮತ್ತು ಉತ್ಪಾದನಾವಲಯದ ಕೊಂಡಿಯಂತೆ ಕಾರ್ಯನಿರ್ವಹಿಸಿ ಉತ್ಪನ್ನವನ್ನು ಜಗಜ್ಜಾಹೀರು ಮಾಡುತ್ತಾರೆ.

ಪಿಯುಸಿ ಬಳಿಕ ಪದವಿಯಲ್ಲಿ ಜಾಹೀರಾತು ವಿಷಯವನ್ನು ಅಭ್ಯಸಿಸಿ, ಸ್ನಾತಕೋತ್ತರ ಪದವಿಯಲ್ಲಿ ಮೀಡಿಯಾ ಮ್ಯಾನೇಜ್‌ಮೆಂಟ್ ಅಭ್ಯಾಸ ಮಾಡಿ, ಅಡ್ವರ್ಟೈಸಿಂಗ್ ಎಕ್ಸಿಕ್ಯೂಟಿವ್ ಆಗಬಹುದು. ಜತೆಗೆ ಮಾಸ್ ಕಮ್ಯುನಿಕೇಷನ್ ನಲ್ಲಿ ಸ್ನಾತಕೋತ್ತರ ಪದವಿ ಗಳಿಸಿಯೂ ಅಡ್ವರ್ಟೈಸಿಂಗ್ ಎಕ್ಸಿಕ್ಯೂಟಿವ್ ಆಗಬಹುದು ಅಥವಾ ಪಿಯುಸಿ (ವಾಣಿಜ್ಯ ವಿಷಯ) ಅಭ್ಯಸಿಸಿ ಬಿ.ಕಾಮ್ ಅಥವಾ ಬಿಬಿಎಂ ವ್ಯಾಸಂಗ ಮಾಡಿ ಅಡ್ವರ್ಟೈಸಿಂಗ್ ಡಿಪ್ಲೊಮಾ ಮಾಡಿಕೊಂಡೂ ಅಡ್ವರ್ಟೈಸಿಂಗ್ ಎಕ್ಸಿಕ್ಯೂಟಿವ್ ಆಗಬಹುದು.

ಇದರ ಜತೆಗೆ ನಾಲ್ಕು-ಐದು ಭಾಷೆಗಳಲ್ಲಿ ಪ್ರಾವೀಣ್ಯ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಕೌಶಲ, ಜನರೊಂದಿಗೆ ಬೆರೆಯುವ ವ್ಯಕ್ತಿತ್ವ, ಸಂವಹನ ಕೌಶಲ, ಮಾಧ್ಯಮಗಳೊಂದಿಗೆ ಸ್ನೇಹ, ಸೌಹಾರ್ದ ಬಾಂಧವ್ಯ ಅಗತ್ಯ. ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯವೂ ಇರಬೇಕು.

ಅವಕಾಶಗಳು

ಜಾಹೀರಾತು ಏಜೆನ್ಸಿಗಳು, ಕಂಪೆನಿಗಳ ಮಾರ್ಕೆಟಿಂಗ್ ಮತ್ತು ಸಾರ್ವಜನಿಕ ವಲಯ, ಸೇವಾವಲಯ, ಮಾರ್ಕೆಟ್ ರಿಸರ್ಚ್ ಕಂಪೆನಿ, ಕಮರ್ಷಿಯಲ್ ರೇಡಿಯೋ ಅಥವಾ ಟಿವಿ/ಪತ್ರಿಕೆಗಳು, ಮಲ್ಟಿ ಮೀಡಿಯಾ ಅಡ್ವರ್ಟೈಸಿಂಗ್ ವಲಯ, ಡಾಟ್‌ಕಾಂ. ಗಳು.

ಕಾಲೇಜುಗಳು

• ಮೌಂಟ್ ಕಾರ್ಮೆಲ್ ಕಾಲೇಜ್ (ಎಂಸಿಸಿ) ಬೆಂಗಳೂರು.
• ಕ್ರಿಸ್ತ ಜಯಂತಿ ಕಾಲೇಜ್, (ಕೆಜೆಸಿ) ಬೆಂಗಳೂರು.
• ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸ್ಟಡೀಸ್, ಬೆಂಗಳೂರು.
• ಐಸಿಎಟಿ ಡಿಸೈನ್ ಆ್ಯಂಡ್ ಮೀಡಿಯಾ ಕಾಲೇಜ್, ಹೊಸೂರು ರಸ್ತೆ, ಬೆಂಗಳೂರು.

ಕ್ಯಾಟಗರಿ ಮ್ಯಾನೇಜರ್

ಕೆಲವೇ ಬೇಡಿಕೆಯುಳ್ಳ ಉತ್ಪನ್ನಗಳ ವ್ಯವಹಾರ ನಡೆಸುತ್ತ, ಗ್ರಾಹಕ ಸೇವೆ, ಬೆಲೆ ನಿಗದಿ, ಸಂಪರ್ಕ, ಪಾಲುದಾರಿಕೆ ನಡೆಸುವವರು ಕ್ಯಾಟಗರಿ ಮ್ಯಾನೇಜರ್‌ಗಳು. ಇವರು ಚಿಲ್ಲರೆ ವ್ಯವಹಾರ ವರ್ಗಕ್ಕೆ ಉತ್ತೇಜಕವಾಗಿ ಕಾರ್ಯನಿರ್ವಹಿಸುತ್ತಾರೆ.

ಪಿಯು ಮತ್ತು ಪದವಿ ಬಳಿಕ ಎಂಬಿಎ ಮಾರ್ಕೆಟಿಂಗ್ ಅಭ್ಯಾಸ ಮಾಡಿ, ಕ್ಯಾಟಗರಿ ಮ್ಯಾನೇಜರ್ ಆಗಬಹುದು. ಪಿಯುಸಿಯಲ್ಲಿ ಕಾಮರ್ಸ್, ಪದವಿ/ ಸ್ನಾತಕೋತ್ತರ ಪದವಿಯಲ್ಲಿ ಫ್ಯಾಷನ್ ಮರ್ಚಂಡೈಸಿಂಗ್ (ಫ್ಯಾಶನ್ ಉತ್ಪನ್ನಗಳ ವಿನ್ಯಾಸ, ಯೋಜನೆ, ಖರೀದಿ ಹಾಗೂ ಮಾರಾಟ ಕುರಿತ) ವಿಷಯ ಅಭ್ಯಸಿಸಿಯೂ ಗುರಿ ಸಾಧಿಸಬಹುದು.

ಇದರೊಂದಿಗೆ ಉತ್ತಮ ಸಂವಹನ ಕೌಶಲ, ಚೌಕಾಶಿ ಬುದ್ಧಿ, ಉತ್ಪನ್ನ ಕುರಿತ ವಿಮರ್ಶಾಜ್ಞಾನ, ನಿರ್ಧಾರ ತೆಗೆದುಕೊಳ್ಳುವ/ಸಮಸ್ಯೆಯನ್ನು ಬಗೆಹರಿಸುವ ಸಾಮರ್ಥ್ಯ, ಮಾರುಕಟ್ಟೆ ವ್ಯವಹಾರ, ನೆಟ್‌ವರ್ಕಿಂಗ್, ಚಿಲ್ಲರೆ ವ್ಯಾಪಾರ ವರ್ಗದೊಂದಿಗೆ ಸೌಹಾರ್ದ ಮತ್ತು ನಾಯಕತ್ವ ಕೌಶಲಗಳನ್ನು ಹೊಂದಿರಬೇಕು.

ಅವಕಾಶಗಳು

ಎಲ್ಲಾ ರೀತಿಯ ದೊಡ್ಡ ಮಟ್ಟದ ಉತ್ಪಾದಕ ವಲಯ, ಇಂಟರ್ನೆಟ್ ಮಾರ್ಕೆಟಿಂಗ್ ಕ್ಷೇತ್ರ, ಸೇವಾ ವಲಯ, ರಿಟೇಲ್ ಕ್ಷೇತ್ರ, ಎಂಟರ್ಟೈನಿಂಗ್ ಮತ್ತು ಗೇಮಿಂಗ್ ಸಂಸ್ಥೆಗಳು, ಜ್ಯುವೆಲ್ಲರಿ/ಗಾರ್ಮೆಂಟ್ ಮರ್ಚಂಡೈಸಿಂಗ್ ಕ್ಷೇತ್ರ.

ಕಾಲೇಜುಗಳು

• ಎಂಬಿಎ ಇನ್ ಮಾರ್ಕೆಟಿಂಗ್ ಕೋರ್ಸ್ ಇರುವ ಎಲ್ಲ ಕಾಲೇಜುಗಳು.
• ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.
• ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಮರ್ಚಂಡೈಸಿಂಗ್, ಬೆಂಗಳೂರು.
• ಐಮ್‌ಫಿಲ್ ಇಂಟರ್‌ನ್ಯಾಷನಲ್, ಬೆಂಗಳೂರು.

ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್

ವ್ಯಾಪಾರ, ವ್ಯವಹಾರ ಕ್ಷೇತ್ರದಲ್ಲಿ ತೊಡಗಿರುವವರಿಗೆ ಮಾರ್ಗದರ್ಶನ ನೀಡುತ್ತ, ಅವರಿಗೆ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುವವರು ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್‌ಗಳು. ಇವರು ಅಕೌಂಟಿಂಗ್, ಮಾನವ ಸಂಪನ್ಮೂಲ ಹಾಗೂ ಇತರ ಕ್ಷೇತ್ರಗಳ ಕೊಂಡಿಯಿದ್ದಂತೆ.

ಪಿಯುಸಿ ಬಳಿಕ ವಾಣಿಜ್ಯ ಸಂಬಂಧಿತ ಪದವಿ, ಸ್ನಾತಕೋತ್ತರ ಪದವಿ ಪೂರೈಸಿ, ದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಆಫ್ ಇಂಡಿಯಾ (ಐಎಂಸಿಐ) ನಿರ್ಧರಿಸಿರುವಂತೆ ಸದಸ್ಯತ್ವ ಪಡೆದು, ಕನ್ಸಲ್ಟಿಂಗ್ ವಿದ್ಯಾಭ್ಯಾಸ ಮಾಡಿದರೆ ಗುರಿ ಸಾಧಿಸಿದಂತೆ.

ವಾಣಿಜ್ಯ ಕ್ಷೇತ್ರದ ಬೆಳವಣಿಗೆ, ಅಲ್ಲಿನ ಬದಲಾವಣೆಗಳು, ಇತಿಹಾಸದ ಅರಿವು, ತಾರ್ಕಿಕ ಚಿಂತನೆ, ಹೊಸ ಆಲೋಚನೆ, ಕ್ಷೇತ್ರ ಪರ್ಯಟನೆ, ಉತ್ತಮ ಬರವಣಿಗೆ ಕೌಶಲ, ಮಾಹಿತಿ ತಂತ್ರಜ್ಞಾನದ ಅರಿವು, ಐದಾರು ಭಾಷೆಗಳ ಮೇಲೆ ಹಿಡಿತ, ಸಾಮಾಜಿಕ ಜಾಲತಾಣಗಳನ್ನು ದುಡಿಸಿಕೊಳ್ಳುವ ಕೌಶಲ ಅಗತ್ಯ.

ಅವಕಾಶಗಳು

ಐಟಿ ಕನ್ಸಲ್ಟೆನ್ಸಿಸ್ ಆಗಿ, ಜನರಲ್, ಸ್ಪೆಷಲಿಸ್ಟ್ ಕನ್ಸಲ್ಟೆನ್ಸಿಸ್, ಪ್ರೊಫೆಷನಲ್ ಪ್ರಾಕ್ಟೀಸ್, ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ, ಸ್ವಯಂ ಉದ್ಯೋಗಿಯಾಗಿಯೂ ಅವಕಾಶಗಳಿವೆ.

ಕಾಲೇಜುಗಳು

• ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು (ಐಐಎಂಬಿ)
• ಟಿಎ ಪೈ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ (ಟ್ಯಾಪ್ಮಿ), ಮಣಿಪಾಲ.
• ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಆಫ್ ಇಂಡಿಯಾ, ಮುಂಬೈ.
• ಸಿಂಬಯಾಸಿಸ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (ಎಸ್‌ಐಬಿಎಂ) ಬೆಂಗಳೂರು.
• ಎಚ್‌ಆರ್– ವನ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
• ಐಎಸ್‌ಬಿಆರ್ ಬಿಸಿನೆಸ್ ಸ್ಕೂಲ್, ಬೆಂಗಳೂರು.

ಕಾರ್ಪೊರೇಟ್ ಲಾಯರ್

ದೇಶದ ಕಾಯ್ದೆ – ಕಾನೂನುಗಳಿಗೆ ಧಕ್ಕೆ ಬಾರದಂತೆ ಕಂಪೆನಿಗಳು ಯಾವುದೇ ಆರ್ಥಿಕ ವ್ಯವಹಾರವನ್ನು ನಡೆಸಲು ಪೂರಕವಾದ ಸಲಹೆ–ಸೂಚನೆ ನೀಡುವವರು ಕಾರ್ಪೊರೇಟ್ ಲಾಯರ್‌ಗಳು. ಕಂಪೆನಿಗಳು ನಡೆಸುವ ನೈತಿಕ–ಅನೈತಿಕ ಆರ್ಥಿಕ ವ್ಯವಹಾರಗಳ ವ್ಯಾಜ್ಯವನ್ನು ಇತ್ಯರ್ಥಪಡಿಸುವುದು ಇವರ ಕೆಲಸ.

ಪಿಯುಸಿ ಬಳಿಕ ಬಿಎ., ಎಲ್‌ಎಲ್.ಬಿ ಪದವಿ, ಎಲ್‌ಎಲ್‌ಎಂ (ಸ್ನಾತಕೋತ್ತರ ಪದವಿ) ಜತೆಗೆ ಕಂಪೆನಿ ಸೆಕ್ಯೂರಿಟಿ, ಬಿಸಿನೆಸ್/ ಕಾರ್ಪೊರೇಟ್ ಲಾ ಅಭ್ಯಾಸ ಮಾಡಿದರೆ ಕಾರ್ಪೊರೇಟ್ ಲಾಯರ್ ಆಗಬಹುದು.

ಅಥವಾ ಕಂಬೈನ್ಡ್ ಲಾ ಆಪ್ಟಿಟ್ಯೂಡ್ ಟೆಸ್ಟ್ ಮತ್ತಿತರ ಪರೀಕ್ಷೆ (ಎಲ್ ಎಸ್‌ಎಟಿ, ಎಐಎಇಟಿ) ತೇರ್ಗಡೆ ಹೊಂದಿರಬೇಕು. ಜತೆಗೆ ಎಲ್‌ಎಲ್‌ಬಿ ಅಭ್ಯಾಸ ಮಾಡಿ, ಆಲ್ ಇಂಡಿಯಾ ಬಾರ್ ಎಕ್ಸಾಮಿನೇಷನ್(ಎಐಬಿಇ)ನಲ್ಲಿ ಉತ್ತೀರ್ಣರಾಗಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಸಂವಿಧಾನ, ಅಪರಾಧ ದಂಡಸಂಹಿತೆ (ಪೀನಲ್ ಕೋಡ್), ಹೈಕೋರ್ಟ್, ಸುಪ್ರೀಂಕೋರ್ಟ್‌ಗಳು ಕಂಪೆನಿಗಳ ಬಗೆಗೆ ನೀಡಿದ ತೀರ್ಪುಗಳ ಅಧ್ಯಯನ, ಕಾರ್ಪೊರೇಟ್ ವಲಯ ಕಾರ್ಯನಿರ್ವಹಿಸುವ ಬಗೆಗಿನ ಅರಿವು,

ವಾಕ್ಚಾತುರ್ಯ, ವಿವಿಧ ದೃಷ್ಟಿಕೋನದಿಂದ ಪ್ರಕರಣ ಪರಿಶೀಲನಾ ತಂತ್ರ. ಉತ್ತಮ ಸಂವಹನ ಕೌಶಲ, ವಿಮರ್ಶಾ ಜ್ಞಾನ, ಸಂಶೋಧನ ಗುಣ ಇರಬೇಕು.

ಅವಕಾಶಗಳು

ಸೇವಾ ವಲಯ, ಕಾರ್ಪೊರೇಟ್ ವಲಯ, ಕಂಪೆನಿ ಮತ್ತು ಕೈಗಾರಿಕಾ ಕ್ಷೇತ್ರ, ಕಾನೂನು ಸಂಬಂಧಿ ಪ್ರಕಾಶನಗಳು, ಕನ್ಸಲ್ಟೆನ್ಸಿಗಳು, ವಾಣಿಜ್ಯಪತ್ರಿಕೆ ಮತ್ತು ಬಿಸಿನೆಸ್ ಮ್ಯಾಗಜೀನ್‌ಗಳು, ವಿಶ್ವವಿದ್ಯಾಲಯಗಳ ಕಾನೂನು ವಿಭಾಗ, ಸಾರ್ವಜನಿಕ ವಲಯದಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಎಲ್ಲ ಸರಕಾರಿ ಲಾ ಕಾಲೇಜುಗಳಲ್ಲಿ ಎಲ್‌ಎಲ್‌ಬಿ, ಎಲ್‌ಎಲ್‌ಎಂ ಓದಬಹುದು.
- ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು.
- ಅಲಯನ್ಸ್ ಸ್ಕೂಲ್ ಆಫ್ ಲಾ, ಅಲಯನ್ಸ್ ಯೂನಿವರ್ಸಿಟಿ, ಬೆಂಗಳೂರು.
- ಕೆಎಲ್‌ಇ ಸೊಸೈಟಿ ಲಾ ಕಾಲೇಜ್, ಬೆಂಗಳೂರು.
- ರೇವಾ ವಿವಿ ಕಾಲೇಜು, ಯಲಹಂಕ, ಬೆಂಗಳೂರು.
- ಸಿಂಬಯಾಸಿಸ್ ಲಾ ಸ್ಕೂಲ್, ವಿಮಾನ್ ನಗರ್, ಪುಣೆ.

ಈವೆಂಟ್ ಪ್ಲಾನರ್

ಲೈವ್ ಶೋ, ರಿಯಾಲಿಟಿ ಶೋ, ವೇದಿಕೆ ಕಾರ್ಯಕ್ರಮಗಳು, ಮದುವೆ ಸಮಾರಂಭ – ಹೀಗೆಯೇ ಮೂಡಿಬರಬೇಕೆಂದು ಮೊದಲೇ ಕಲ್ಪಿಸಿಕೊಂಡು ವೇದಿಕೆ ತಯಾರಿಕೆ ಸೇರಿದಂತೆ ಅಗತ್ಯ ಸಾಮಗ್ರಿಗಳನ್ನು ಪೂರೈಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವವರು ಈವೆಂಟ್ ಪ್ಲಾನರ್‌ಗಳು. ಇವರು ಆಯವ್ಯಯಕ್ಕೆ ತಕ್ಕಂತೆ ಶೋ ರೂಪು-ರೇಷೆಯನ್ನು ನಿರೂಪಿಸುತ್ತಾರೆ.

ಪಿಯುಸಿ ಓದಿನ ಬಳಿಕ ಪದವಿಯಲ್ಲಿ ಬಿಬಿಎ ಈವೆಂಟ್ ಮ್ಯಾನೇಜ್‌ಮೆಂಟ್ ಕೋರ್ಸ್ ಪೂರೈಸಿ ಈವೆಂಟ್ ಪ್ಲಾನರ್ ಆಗಬಹುದು. ಮತ್ತೊಂದು ಮಾರ್ಗದಲ್ಲಿ ಸ್ನಾತಕೋತ್ತರ ಡಿಪ್ಲೊಮಾದಲ್ಲಿ ಕಮ್ಯುನಿಕೇಷನ್/ಈವೆಂಟ್ ಮ್ಯಾನೇಜ್‌ಮೆಂಟ್ ಅಧ್ಯಯನ ಮುಗಿಸಿಯೂ ಗುರಿ ಸಾಧಿಸಬಹುದು. ಎಂಬಿಎ ಈವೆಂಟ್ ಮ್ಯಾನೇಜ್‌ಮೆಂಟ್ ಅಭ್ಯಸಿಸಿಯೂ ಪ್ಲಾನರ್ ಆಗಬಹುದು.

ಓದಿನ ಜತೆಗೆ ಉತ್ತಮ ಸಂವಹನ/ಕಲ್ಪನಾ ಕೌಶಲ, ತುಲನಾತ್ಮಕ ಶಕ್ತಿ, ಮಾರುಕಟ್ಟೆ ಬಗ್ಗೆ ತಿಳುವಳಿಕೆ, ಸಂಘಟನೆಯ ಕುಶಲತೆ, ಚೌಕಾಸಿ ಚಾತುರ್ಯ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಮತ್ತು ಎದುರಾಗಬಹುದಾದ ಸಮಸ್ಯೆಯನ್ನು ಪರಿಹರಿಸುವ ಕೌಶಲ ಅತ್ಯಗತ್ಯ.

ಅವಕಾಶಗಳು

ಜಾಹೀರಾತು ವಲಯ, ಕನ್ಸಲ್ಟೆನ್ಸಿ ಸಂಸ್ಥೆಗಳು, ಕನ್ವೆನ್ಶನ್ ಸೆಂಟರ್‌ಗಳು, ಈವೆಂಟ್ ಕಂಪೆನಿಗಳು, ಪ್ರವಾಸಿ ಸಂಘಟನೆಗಳು, ಸ್ವಯಂ ಉದ್ಯೋಗ ಇತ್ಯಾದಿ.

ಕಾಲೇಜುಗಳು

- ಜಿಇಎಂಎಸ್ ಬಿ ಸ್ಕೂಲ್, ಬೆಂಗಳೂರು.
- ಪಿಇಎಸ್ ಯೂನಿವರ್ಸಿಟಿ, ಬೆಂಗಳೂರು.
- ಆರ್‌ಆರ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, (ಆರ್‌ಆರ್ ಐಎಎಸ್) ಬೆಂಗಳೂರು.
- ಎಎಸ್‌ಕೆ ಇನ್‌ಸ್ಟಿಟ್ಯೂಟ್ ಆಫ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಆ್ಯಂಡ್ ಕುಲಿನರಿ ಆರ್ಟ್ಸ್, ಬೆಂಗಳೂರು.
- ಗಾರ್ಡನ್ ಸಿಟಿ ಯೂನಿವರ್ಸಿಟಿ, ಬೆಂಗಳೂರು.

ಹೊಟೇಲ್ ಮ್ಯಾನೇಜರ್

ಹೊಟೇಲ್‌ಗಳಲ್ಲಿ ಅಗತ್ಯವಸ್ತುಗಳಿವೆಯೇ ಇಲ್ಲವೆ ಎಂಬುದನ್ನು ನೋಡಿಕೊಳ್ಳುತ್ತ, ಶುಚಿಯಾದ, ರುಚಿಯಾದ ಉತ್ತಮ ಖಾದ್ಯಗಳನ್ನು ಸಿದ್ಧಪಡಿಸಿ, ಗ್ರಾಹಕರಿಗೆ ಉತ್ತಮ ಸೇವೆ ಒದಗುವಂತೆ ಮಾಡುವವರು ಹೊಟೇಲ್ ಮ್ಯಾನೇಜರ್‌ಗಳು. ಗ್ರಾಹಕರು ಮತ್ತೆ ತಮ್ಮ ಹೊಟೇಲ್‌ಗೆ ಬರುವಂತೆ ಮಾಡಲು ದರ, ಸೇವೆ, ರುಚಿಯನ್ನು ಕಾಯ್ದುಕೊಳ್ಳುವಲ್ಲಿ ಇವರು ಪರಿಣತರು.

ಪಿಯುಸಿ ಪೂರೈಸಿದ ಬಳಿಕ ಹೊಟೇಲ್ ಮ್ಯಾನೇಜ್‌ಮೆಂಟ್ ಪ್ರವೇಶ ಪರೀಕ್ಷೆ ಪೂರೈಸಿ, ಪದವಿ/ಡಿಪ್ಲೊಮಾದಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಅಧ್ಯಯನ ಮಾಡಿ ಹೊಟೇಲ್ ಮ್ಯಾನೇಜರ್ ಆಗಬಹುದು.

ಪಿಯು ಬಳಿಕ ಪದವಿಯಲ್ಲಿ ಬಿಎಚ್‌ಎಂ (ಬ್ಯಾಚುಲರ್ ಆಫ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್) ಜತೆಗೆ ಹೊಟೇಲ್ ಮ್ಯಾನೇಜ್‌ಮೆಂಟ್ ಪ್ರವೇಶ/ಹೋಮ್ ಅಡ್ಮಿನಿಸ್ಟ್ರೇಶನ್ ಸ್ಪೆಷಲೈಜೇಷನ್ ತರಬೇತಿ ಪಡೆದೂ ಗುರಿ ಸಾಧಿಸಬಹುದು.

ಇದರೊಂದಿಗೆ ಆಹಾರ ತಯಾರಿಕಾ ಘಟಕ, ಆಹಾರ ಪದಾರ್ಥಗಳ ಮಾರುಕಟ್ಟೆ ಬಗೆಗಿನ ತಿಳಿವಳಿಕೆ, ಸಂಘಟನ ಮತ್ತು ಸಂವಹನ ಕೌಶಲ, ಸಮೂಹದಲ್ಲಿ ಕಾರ್ಯನಿರ್ವಹಿಸುವ, ಕಾರ್ಯನಿಯೋಜಿಸುವ ಗುಣ, ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯ ಹೊಂದಿರಬೇಕು.

ಅವಕಾಶಗಳು

ರೆಸ್ಟೋರೆಂಟ್‌ಗಳು, ಕ್ಲಬ್‌ಗಳು, ಫಾಸ್ಟ್ ಫುಡ್ ಜಾಯಿಂಟ್ ಮ್ಯಾನೇಜ್‌ಮೆಂಟ್; ಹೆಲ್ತ್ ಸೆಂಟರ್ ಕ್ಯಾಟರಿಂಗ್, ಹೊಟೇಲ್ ಅಡ್ಮಿನಿಸ್ಟ್ರೇಶನ್ ಆ್ಯಂಡ್ ಕ್ಯಾಟರಿಂಗ್, ಏರ್‌ಲೈನ್ ಕ್ಯಾಟರಿಂಗ್ ಆ್ಯಂಡ್ ಕ್ಯಾಬಿನ್ ಸರ್ವೀಸ್, ಹೊಟೇಲ್ ಆ್ಯಂಡ್ ಕ್ಯಾಟರಿಂಗ್ ಇನ್‌ಸ್ಟಿಟ್ಯೂಟ್, ಹೊಟೇಲ್ ಆ್ಯಂಡ್ ಟೂರಿಸಮ್ ಅಸೋಸಿಯೇಶನ್, ಬ್ಯಾಂಕ್ ಮತ್ತು ಇನ್ಶೂರೆನ್ಸ್ ಹೌಸ್‌ಗಳ ಕ್ಯಾಟರಿಂಗ್ ವಿಭಾಗ, ರೈಲ್ವೆ, ಸೇನೆ, ಮಿನಿಸ್ಟ್ರಿಯಲ್ ಕ್ಯಾಟರಿಂಗ್ ವಿಭಾಗ, ಆಹಾರ ಉತ್ಪಾದನಾ ಘಟಕ, ಫುಡ್ ಪಾರ್ಕ್‌ಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್ (ಐಎಚ್‌ಎಂ) ಬೆಂಗಳೂರು.
- ವೆಲ್‌ಕಂ ಗ್ರೂಪ್ ಆಫ್ ಹೊಟೆಲ್ ಅಡ್ಮಿನಿಸ್ಟ್ರೇಶನ್, ಮಣಿಪಾಲ.
- ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್‌ಮ್ಯಾನೇಜ್‌ಮೆಂಟ್, ಬೆಂಗಳೂರು.
- ಸರೋಶ್ ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಅಡ್ಮಿನಿಸ್ಟ್ರೇಶನ್, ಮಂಗಳೂರು.
- ಪ್ರೆಸಿಡೆನ್ಸಿ ಕಾಲೇಜ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್, ಬೆಂಗಳೂರು.

ಪ್ರಾಡಕ್ಟ್ ಮ್ಯಾನೇಜರ್

ಉತ್ಪಾದನಾ ವಲಯದಲ್ಲಿ ಉತ್ಪನ್ನಗಳ ಸಂಪೂರ್ಣ ಅಭಿವೃದ್ಧಿ, ಬ್ರ್ಯಾಂಡ್ ನಿರ್ವಹಣೆ ಮಾಡುತ್ತ, ಹೊಸ ಉತ್ಪನ್ನಗಳನ್ನು ರಚಿಸಲು, ಮಾರುಕಟ್ಟೆ ಸಂಶೋಧನೆ ಆಧಾರದ ಮೇಲೆ ತಂತ್ರಗಳನ್ನು ತಯಾರಿಸುವವರು ಪ್ರಾಡಕ್ಟ್ ಮ್ಯಾನೇಜರ್‌ಗಳು. ವಸ್ತುಗಳ ಬೆಲೆ, ಮಾರುಕಟ್ಟೆ ಯೋಜನೆ, ವ್ಯಾಪಾರದ ಗುರಿ ನಿರ್ಧರಿಸುವುದು ಉತ್ಪನ್ನ ನಿರ್ವಾಹಕರ ಕೆಲಸ.

ಉತ್ಪನ್ನ ನಿರ್ವಾಹಕರಾಗಲು ಪಿಯುಸಿ ಅಥವಾ ಪದವಿಯಲ್ಲಿ ಗಣಿತ, ಅರ್ಥಶಾಸ್ತ್ರ, ಫೈನಾನ್ಸ್ ವಿಷಯಗಳಿರುವಂತೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಿ, ಬಳಿಕ ಬ್ರ್ಯಾಂಡ್ ಮ್ಯಾನೇಜ್‌ಮೆಂಟ್ ವಿಷಯ ಕುರಿತ ಎಂಬಿಎ ಪದವಿ ಅಥವಾ ಡಿಪ್ಲೊಮಾ ಮಾಡಿ, ಜತೆಗೆ ಕನ್ಸಲ್ಟಿಂಗ್ ಮತ್ತು ಫೈನಾನ್ಸ್ ಸಂಬಂಧಿತ ಇಂಟರ್ನ್‌ಶಿಪ್ ಅಥವಾ ವೃತ್ತಿ ಅನುಭವ ಪಡೆದರೆ ಗುರಿಸಾಧನೆ ಸುಲಭ.

ಇದರೊಂದಿಗೆ ಉತ್ತಮ ಸಂವಹನ ಕೌಶಲ, ಮಾರುಕಟ್ಟೆ, ಉತ್ಪಾದನಾ ವಸ್ತುಗಳ ಬಗ್ಗೆ ತಿಳುವಳಿಕೆ, ನಾಯಕತ್ವ ನಿರ್ವಹಿಸುವ/ಜವಾಬ್ದಾರಿ ಹೊರುವ ಸಾಮರ್ಥ್ಯ, ಸೃಜನಾತ್ಮಕ ಆಲೋಚನೆ, ಗಣಿತ ಮತ್ತು ಗಣಕ ಕೌಶಲ ಅಗತ್ಯ.

ಅವಕಾಶಗಳು

ಉತ್ಪಾದನಾ ವಲಯ, ಇ-ಕಾಮರ್ಸ್ ಕ್ಷೇತ್ರ, ಆಹಾರ ಉತ್ಪಾದನಾ ವಲಯ, ಅಂತರ್ಜಾಲ ವಲಯ, ಸಾಫ್ಟ್‌ವೇರ್ ಡೆವಲಪರ್ಸ್, ಆಟೊಮೊಬೈಲ್ ಕ್ಷೇತ್ರ, ಗೃಹೋತ್ಪನ್ನ ತಯಾರಿಕಾ ಕ್ಷೇತ್ರ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಇನ್‌ಸ್ಟಿಟ್ಯೂಟ್ ಆಫ್ ಪ್ರಾಡಕ್ಟ್ ಲೀಡರ್‌ಶಿಪ್, ಬೆಂಗಳೂರು.
- ಡಬ್ಲ್ಯುಸಿ ಕಾಲೇಜ್ ಆಫ್ ಇಂಡಿಯಾ, ಹುಬ್ಬಳ್ಳಿ.
- ಐಎಸ್‌ಬಿಆರ್ ಬಿಸಿನೆಸ್ ಸ್ಕೂಲ್, ಬೆಂಗಳೂರು.
- ಪಿಇಎಸ್ ಯೂನಿವರ್ಸಿಟಿ, ಬೆಂಗಳೂರು.
- ಅಲಯನ್ಸ್ ಯೂನಿವರ್ಸಿಟಿ ಕಾಲೇಜು, ಆನೇಕಲ್, ಬೆಂಗಳೂರು.

ಪ್ರಾಜೆಕ್ಟ್ ಮ್ಯಾನೇಜರ್

ವಾಣಿಜ್ಯ ಕ್ಷೇತ್ರದ ಬೆಳವಣಿಗೆಗೆ ಯೋಜನೆಯನ್ನು ನಿರ್ಮಿಸಿ, ಅದು ನಡೆಯುವಂತೆ ನೋಡಿಕೊಳ್ಳುವವರು ಯೋಜನಾ ವ್ಯವಸ್ಥಾಪಕರು/ನಿರ್ವಾಹಕರು. ವಾಣಿಜ್ಯೀಕರಣ, ಹಣಕಾಸು ವ್ಯವಹಾರ ನಿರ್ವಹಣೆ ಮಾಡುತ್ತಾ ದೇಶದ ಸಂಪನ್ಮೂಲವನ್ನು ಸಮಗ್ರವಾಗಿ ಬಳಸಲು ಯೋಜನೆ ರೂಪಿಸುವ ಕೆಲಸ ಇವರದು.

ವಿಜ್ಞಾನ ವಿಷಯದಲ್ಲಿ ಪಿಯುಸಿ ಪೂರೈಸಿದ ಬಳಿಕ ಪದವಿಯಲ್ಲಿ ಬಿ.ಟೆಕ್ ಅಧ್ಯಯನ ಮಾಡಬೇಕು. ಎಂ.ಟೆಕ್/ಪ್ರಾಜೆಕ್ಟ್ ಎಕ್ಸ್‌ಪೀರಿಯನ್ಸ್ ಪಡೆದು, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ಟಿಫಿಕೇಟ್ ಸಂಪಾದಿಸಿದರೆ ಪ್ರಾಜೆಕ್ಟ್ ಮ್ಯಾನೇಜರ್ ಆಗಬಹುದು.

ಇದರ ಜತೆಗೆ ಉತ್ತಮ ಯೋಜನಾ ಮತ್ತು ಸಮಯಪಾಲನಾ ಕೌಶಲ, ಡಿಸೈನ್ ಕುರಿತ ತಂತ್ರಾಂಶಗಳ ಬಳಕೆ, ಸಮಸ್ಯೆಯನ್ನು ನಿರ್ವಹಿಸುವ ಮತ್ತು ಬಗೆಹರಿಸುವ ಸಾಮರ್ಥ್ಯ, ನಾಯಕತ್ವ ಗುಣ, ಸಂವಹನ ಕೌಶಲ, ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕೌಶಲ ಅಗತ್ಯ.

ಅವಕಾಶಗಳು

ಕಟ್ಟಡ ನಿರ್ಮಾಣ ಕಂಪೆನಿಗಳು, ವಾಸ್ತುಶಿಲ್ಪ ವಲಯ, ಸಾಫ್ಟ್‌ವೇರ್ ಅಭಿವೃದ್ಧಿ ವಲಯ, ಕಮರ್ಷಿಯಲ್ ರಿಟೇಲರ್ ವಲಯ, ಎಂಜಿನಿಯರಿಂಗ್ ವಲಯ, ಉತ್ಪಾದನಾ ಕ್ಷೇತ್ರ, ಸಾರ್ವಜನಿಕ ಸೇವಾ ಘಟಕಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್, ಬೆಂಗಳೂರು.
- ಪಿಇಎಸ್ ಯೂನಿವರ್ಸಿಟಿ, ಬೆಂಗಳೂರು.
- ರೇವಾ ಯೂನಿವರ್ಸಿಟಿ, ಬೆಂಗಳೂರು.
- ಜೈನ್ ಯೂನಿವರ್ಸಿಟಿ, ಬೆಂಗಳೂರು.
- ಅಜೀಮ್ ಪ್ರೇಮ್‌ಜಿ ಯೂನಿವರ್ಸಿಟಿ, ಬೆಂಗಳೂರು.
- ಅಲಯನ್ಸ್ ಯೂನಿವರ್ಸಿಟಿ, ಬೆಂಗಳೂರು.
- ಮೌಂಟ್ ಕಾರ್ಮೆಲ್ ಕಾಲೇಜ್, ಬೆಂಗಳೂರು

ಸಪ್ಲೈ ಚೈನ್ ಮ್ಯಾನೇಜರ್

ಸರಕು ಮತ್ತು ಸೇವಾ ಕ್ಷೇತ್ರದಲ್ಲಿ ಕಚ್ಚಾವಸ್ತುಗಳ ರಕ್ಷಣೆ, ಉತ್ಪನ್ನಗಳ ಸಂಗ್ರಹಣ, ಗ್ರಾಹಕರ ಆವಶ್ಯಕತೆ ಪೂರೈಕೆ, ವಿತರಕರೊಂದಿಗೆ ಸೌಹಾರ್ದ ಸಾಧಿಸಿ, ಆಮದು ಮತ್ತು ರಫ್ತನ್ನು ಸುಗಮಗೊಳಿಸುವವರು ಸಪ್ಲೈ ಚೈನ್ ಮ್ಯಾನೇಜರ್‌ಗಳು. ಸರಕು ಸಾರಿಗೆ ಮತ್ತು ಸಂಪರ್ಕದಲ್ಲಿ ಇವರಿಗೆ ಮಾನ್ಯತೆ ಹೆಚ್ಚು.

ಪಿಯುಸಿ/ಪದವಿ ಬಳಿಕ ಸಪ್ಲೈ ಚೈನ್ ಅಥವಾ ಲಾಜಿಸ್ಟಿಕ್ ಮ್ಯಾನೇಜ್‌ಮೆಂಟಿನಲ್ಲಿ ಎಂಬಿಎ/ಡಿಪ್ಲೊಮಾ ಪೂರೈಸಿ ಎಪಿಐಸಿಎಸ್‌ನಲ್ಲಿ ಸಪ್ಲೈ ಚೈನ್ ಸರ್ಟಿಫಿಕೇಶನ್ ಪ್ರೋಗ್ರಾಮ್ ಪ್ರಮಾಣ ಪತ್ರ ಪಡೆದರೆ ಅಥವಾ ಸಿಪಿಎಸ್‌ಎಂ/ಸಿಎಸ್‌ಸಿಎಂನಲ್ಲಿ ಸಪ್ಲೈ ಚೈನ್ ಮ್ಯಾನೇಜರ್ ಸರ್ಟಿಫಿಕೇಟ್ ಪಡೆದರೆ ಸಪ್ಲೈ ಚೈನ್ ಮ್ಯಾನೇಜರ್ ಆಗಬಹುದು.

ಇದರ ಜತೆಗೆ ಭೌಗೋಳಿಕ ಪ್ರದೇಶದ ಬಗ್ಗೆ ತಿಳುವಳಿಕೆ, ಉತ್ತಮ ಸಂವಹನ ಕೌಶಲ, ಸಮೂಹವನ್ನು ನಿರ್ದೇಶಿಸುವ ನಾಯಕತ್ವ ಗುಣ, ಚಾಕಾಶಿ ಬುದ್ಧಿ, ಯಾವುದೇ ಸ್ಥಳದಲ್ಲಾದರೂ ಕಾರ್ಯನಿರ್ವಹಿಸುವ ಪ್ರವೃತ್ತಿ, ಸಮಸ್ಯೆಯನ್ನು ಬಗೆಹರಿಸುವ ಮತ್ತು ವಿಮರ್ಶಾ ಸಾಮರ್ಥ್ಯ, ಸಂಘಟನಾ ಕೌಶಲ, ಸಮಯ ನಿರ್ವಹಣ ಕೌಶಲ ರೂಢಿಸಿಕೊಳ್ಳಬೇಕು.

ಅವಕಾಶಗಳು

ಆಟೋಮೋಟಿವ್ ಇಂಡಸ್ಟ್ರಿಗಳು, ಆಹಾರ ಮತ್ತು ಪಾನೀಯ ಘಟಕ, ಕಂಪ್ಯೂಟರ್ ಹಾರ್ಡ್‌ವೇರ್, ಉತ್ಪಾದನಾ ವಲಯ, ಚಿಲ್ಲರೆ ಮತ್ತು ವಿತರಣಾ ವಲಯ, ಗೋದಾಮು ಮತ್ತು ವಿತರಣಾ ಸಂಸ್ಥೆಗಳು, ಸರಕು ಸಾಗಣೆಕ್ಷೇತ್ರ, ಹೆಲ್ತ್‌ಕೇರ್ ಪ್ರೊವೈಡರ್‌ಗಳು, ಸರಕಾರಿ ಸಂಸ್ಥೆಗಳು ಮತ್ತು ಎನ್‌ಜಿಒಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಕ್ಸೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಇಂಟರ್‌ಪ್ರ್ಯೂನರ್‌ಶಿಪ್, ಬೆಂಗಳೂರು.
- ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಸ್ಟಡೀಸ್, ಬೆಂಗಳೂರು.
- ದಯಾನಂದ ಸಾಗರ್ ಬಿಸಿನೆಸ್ ಸ್ಕೂಲ್, ಬೆಂಗಳೂರು.
- ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಆಚಾರ್ಯ ಬೆಂಗಳೂರು ಬಿಸಿನೆಸ್ ಸ್ಕೂಲ್, ಬೆಂಗಳೂರು.

ಕ್ಯಾಟರರ್

ನಮ್ಮ ಸುತ್ತಮುತ್ತ ಕ್ಯಾಟರಿಂಗ್ ಸರ್ವಿಸ್ ಇರುವುದನ್ನು ಕೇಳಿದ್ದೇವೆ, ಒಂದು ಕಡೆ ಆಹಾರವನ್ನು ಸಿದ್ಧಪಡಿಸಿ ಸಭೆ, ಸಮಾರಂಭಗಳಲ್ಲಿ ಊಟ-ತಿಂಡಿ ವ್ಯವಸ್ಥೆಯನ್ನು ಮಾಡಿ, ಅಲ್ಲಿ ಬರುವ ಜನರಿಗೆ ಆಹಾರವನ್ನು ಬಡಿಸುವ ತಂಡವನ್ನು ನಿರ್ವಹಿಸುವ ವ್ಯಕ್ತಿಯನ್ನು 'ಕ್ಯಾಟರರ್' ಎನ್ನಬಹುದು. ಇದು ಒಂದು ಗುಂಪಾಗಿ, ಒಂದು ಮ್ಯಾನೇಜ್‌ಮೆಂಟ್‌ನಂತೆಯೇ ಕೆಲಸ ಮಾಡುತ್ತದೆ.

ಮೆನು ರೀತಿಯಲ್ಲಿ ಇಂತಿಷ್ಟು ಪ್ರಮಾಣದ ಆಹಾರ ಒದಗಿಸುವ ಕಾಂಟ್ರಾಕ್ಟ್ ಒಪ್ಪಿಕೊಂಡು ಅಡುಗೆ ತಯಾರಿಸಲು ಒಂದು ಸ್ಥಳ ನಿಗದಿ ಮಾಡಿಕೊಂಡು, ಅಡುಗೆ ಮಾಡುವವರಿಗೆ ಆಹಾರ ಸಾಮಗ್ರಿ ಒದಗಿಸಿ, ಆಹಾರ ತಯಾರಾದ ಮೇಲೆ ಅವೆಲ್ಲವನ್ನು ನಿಶ್ಚಿತ ಸ್ಥಳಕ್ಕೆ ವಾಹನಗಳ ಮೂಲಕ ತಲುಪಿಸಿ, ಅಲ್ಲಿ ತಮ್ಮ ತಂಡದ ವ್ಯಕ್ತಿಗಳನ್ನು ಇರಿಸಿ, ಜನರಿಗೆ ಅಥವಾ ಸ್ಥಳಕ್ಕೆ ಆಗಮಿಸುವ ಗಣ್ಯರಿಗೆ ನೀರಿನಿಂದ ಹಿಡಿದು, ಊಟದ ಎಲೆ, ಐಸ್‌ಕ್ರೀಮ್, ಬೀಡಾದವರೆಗೆ ಎಲ್ಲವನ್ನೂ ಒದಗಿಸುವುದು ಒಂದು ರೀತಿಯ ಸವಾಲು. ಇದನ್ನು ನಿರ್ವಹಿಸುವುದು ಒಂದು ಕಲೆ. ಇದಕ್ಕೆ ಸಂಘಟನಾ ಶಕ್ತಿಯೂ ಅತ್ಯಗತ್ಯ.

ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿಯಲ್ಲಿ ಯಾವುದೇ ವಿಷಯವನ್ನು ಓದಿದ ಬಳಿಕ 'ಫುಡ್ ಆ್ಯಂಡ್ ರೆಸ್ಟೋರೆಂಟ್' ಸಂಬಂಧಿತ ಡಿಪ್ಲೊಮಾ ಕೋರ್ಸ್ ಮುಗಿಸಿ ಕ್ಯಾಟರರ್ ಆಗಬಹುದು. ಅಥವಾ ಪಿಯುಸಿ ಬಳಿಕ ಪದವಿಯಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮುಗಿಸಿ ಕ್ಯಾಟರರ್ ಆಗಬಹುದು. ಯಾವುದೇ ವಿದ್ಯಾಭ್ಯಾಸದ ಬಳಿಕ ಉತ್ತಮ ಅಡುಗೆ ತಯಾರಕರ ಸಂಪರ್ಕ ಸಾಧಿಸಿ ಒಂದು ತಂಡ ರಚಿಸಿಕೊಂಡು ಕ್ಯಾಟರರ್ ಆಗಬಹುದು.

ಅವಕಾಶಗಳು

ಹೊಟೇಲ್‌ಗಳು, ವಿಮಾನಯಾನ ಸಂಸ್ಥೆಗಳು, ಆಹಾರ ಸಂಶೋಧನ ಪ್ರಯೋಗಾಲಯಗಳು, ಆಹಾರ ಸಗಟು ವ್ಯಾಪಾರಿಗಳು, ಅಡುಗೆ ಸಂಸ್ಥೆಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು ರೆಸ್ಟೋರೆಂಟ್‌ಗಳು, ಆಹಾರ ಸಂಸ್ಕರಣಾ ಕಂಪೆನಿಗಳು, ಪ್ರವಾಸಿ ತಾಣಗಳು, ಶಾಲೆಗಳು ಮತ್ತು ಕಾಲೇಜುಗಳು, ಆಸ್ಪತ್ರೆಗಳು, ಸರಕಾರಿ ಕಚೇರಿಗಳು ಮುಂತಾದವುಗಳಲ್ಲಿ ಅವಕಾಶವಿದೆ. ಅಥವಾ ಸ್ವಂತ ಉದ್ಯೋಗವಾಗಿ ಇದನ್ನು ಬಳಸಿಕೊಳ್ಳಬಹುದು.

ಕಾಲೇಜುಗಳು

- ಚೆನ್ನೈಸ್ ಅಮೃತ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೋಟೇಲ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ವೆಲ್ಕಮ್ ಗ್ರ್ಯಾಜುಯೇಟ್ ಸ್ಕೂಲ್ ಆಫ್ ಹೊಟೇಲ್ ಅಡ್ಮಿನಿಸ್ಟ್ರೇಷನ್, ಮಣಿಪಾಲ.
- ಸಿಐಐ ಇನ್‌ಸ್ಟಿಟ್ಯೂಟ್ ಆಫ್ ಹಾಸ್ಪಿಟಾಲಿಟಿ, ಬೆಂಗಳೂರು.
- ಬ್ಯಾಚುಲರ್ ಇನ್ ಹೊಟೇಲ್ ಮ್ಯಾನೇಜ್‌ಮೆಂಟ್ ಆ್ಯಂಡ್ ಕ್ಯಾಟರಿಂಗ್ ಟೆಕ್ನಾಲಜಿ(ಬಿಎಚ್‌ಎಂಸಿಟಿ), ದಂಕವಾಡಿ, ಪುಣೆ.
- ಲಕ್ಷ್ಯ ಭಾರತೀ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಹೊಟೇಲ್ ಮ್ಯಾನೇಜ್‌ಮೆಂಟ್, ದೆಹಲಿ.

ಬಾರ್‌ಟೆಂಡಿಂಗ್/ಮಿಕ್ಸಾಲಜಿ

ಕ್ಲಬ್‌ಗಳು, ದೊಡ್ಡ ದೊಡ್ಡ ರೆಸ್ಟೋರೆಂಟ್‌ಗಳ ಬಾರ್‌ಗಳಲ್ಲಿ, ಮದ್ಯ ಸೇರಿದಂತೆ ಅದಕ್ಕೆ ಸಂಬಂಧಿಸಿದ ಪಾನೀಯಗಳನ್ನು ಮಿಕ್ಸ್ ಮಾಡಿಕೊಡುವವರು ಬಾರ್‌ಟೆಂಡರ್‌ಗಳು. ಗ್ರಾಹಕರ ಅಭಿರುಚಿಗೆ ಪಾನೀಯವನ್ನು ತಮ್ಮ ನೈಪುಣ್ಯತಾ ಕೌಶಲದ ಮೂಲಕ ಬೆರೆಸಿಕೊಡುತ್ತಾರೆ. ಈ ರೀತಿಯ ಮದ್ಯಕ್ಕೆ ಬೇಡಿಕೆ ಹೆಚ್ಚು. ಉತ್ತಮ ಮಿಕ್ಸಾಲಜಿ ಕಾರ್ಯನಿರ್ವಹಣೆ ಮಾಡುವವರಿಗೂ ಅಧಿಕ ಬೇಡಿಕೆ ಇದೆ.

ಪಿಯು ಮುಗಿದ ಮೇಲೆ ಯಾವುದೇ ಪದವಿಯನ್ನು ಪೂರೈಸಿದ ಬಳಿಕ 4–5 ತಿಂಗಳ ಕ್ರ್ಯಾಶ್ ಕೋರ್ಸ್ ಮಾಡಿ ಬಾರ್‌ಟೆಂಡರ್ ಆಗಬಹುದು. ಅಲ್ಲದೆ ಪಿಯುಸಿ ಮುಗಿಸಿ ಬ್ರೆವರೇಜ್‌ಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಮಾಡಿದ ಬಳಿಕ ಉತ್ತಮ ಟ್ರೈನಿಂಗ್ ಪಡೆದೂ ಬಾರ್ ಟೆಂಡರ್ ಆಗಬಹುದು.

ಇದರ ಜತೆಗೆ ಮದ್ಯ ಸಂಬಂಧಿತ ಪೂರ್ಣ ಜ್ಞಾನ, ಯಾವ ಯಾವ ದೇಶದಲ್ಲಿ ಯಾವ ಯಾವ ಪಾನೀಯ, ಮದ್ಯ ತಯಾರಿಸಲಾಗುತ್ತದೆ ಎಂಬ ತಿಳುವಳಿಕೆ, ಯಾವ ಪಾನೀಯ, ಪದಾರ್ಥಗಳ ಜತೆ ಮತ್ತಾವುದನ್ನು ಎಷ್ಟು ಮಿಶ್ರಣ ಮಾಡಬೇಕು ಎಂಬ ತಿಳುವಳಿಕೆ ಅಗತ್ಯ.

ಅವಕಾಶಗಳು

ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ಡಿಸ್ಕೋ ಆ್ಯಂಡ್ ಬಾರ್‌ಗಳು, ಲೈವ್‌ಬ್ಯಾಂಡ್ ಮತ್ತು ಕ್ಲಬ್‌ಗಳ ಬಾರ್‌ಗಳು, ಮದ್ಯ ಮತ್ತು ಪಾನೀಯ ವಿತರಣಾ ಸಂಸ್ಥೆಗಳು.

ಕಾಲೇಜುಗಳು

- ಫ್ಲೇರ್ ಮೇನಿಯಾ ಬಾರ್‌ಟೆಂಡಿಂಗ್ ಅಕಾಡೆಮಿ, ಬೆಂಗಳೂರು.
- ಯುರೋಪಿಯನ್ ಬಾರ್‌ಟೆಂಡರ್ ಸ್ಕೂಲ್, ಬೆಂಗಳೂರು.
- ಪ್ರೊಫೆಶನಲ್ ಮಿಕ್ಸಾಲಜಿ ಅಕಾಡೆಮಿ, ಬೆಂಗಳೂರು.
- ಬಾರ್ ಸ್ಕ್ವೇರ್ ಅಕಾಡೆಮಿ ಆಫ್ ಬಾರ್‌ಟೆಂಡಿಂಗ್, ಬೆಂಗಳೂರು.

ಎನ್‌ವಯರ್ನಮೆಂಟಲ್ ಎಂಜಿನಿಯರ್

ಪ್ರಸ್ತುತ ದೇಶದಲ್ಲಿ ಮಾಲಿನ್ಯಗಳದ್ದೇ ಮಾತು, ರಾಸಾಯನಿಕಗಳ ದುರ್ಬಳಕೆಯಿಂದ ಗಾಳಿ, ನೀರು ಸೇರಿದಂತೆ ಪರಿಸರ ಕಲುಷಿತವಾಗುತ್ತಿದೆ. ವಾತಾವರಣದ ಕಲುಷಿತವನ್ನು ನಿವಾರಿಸಲು ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಾ ಮಾಲಿನ್ಯ ನಿವಾರಣಾ ತಂತ್ರಗಳನ್ನು ರೂಪಿಸುವವರು ಎನ್‌ವಯರ್ನಮೆಂಟಲ್ ಎಂಜಿನಿಯರ್ಸ್. ಪರಿಸರ ಸಂರಕ್ಷಣೆ, ಗಿಡ–ಮರಗಳ ಕುರಿತು ಕಾಳಜಿ ವಹಿಸುತ್ತಾ ಸರಕಾರಗಳಿಗೆ ಮಾಲಿನ್ಯ ನಿಯಂತ್ರಿಸಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಿಕೊಡುವವರು ಇವರೇ.

ಪಿಯು ಬಳಿಕ ಸಿಇಟಿ ಮುಗಿಸಿ ಎನ್‌ವಯರ್ನಮೆಂಟಲ್ ಎಂಜಿನಿಯರಿಂಗ್ ಅಧ್ಯಯನ ಮಾಡಬಹುದು. ಅಥವಾ ಪಿಯು ಬಳಿಕ ಪರಿಸರ, ಕೃಷಿ ಶಾಸ್ತ್ರದ ಅಧ್ಯಯನವನ್ನು ಪೂರೈಸಿಯೂ ಎನ್‌ವಯರ್ನಮೆಂಟಲ್ ಕೋರ್ಸ್ ಓದಬಹುದು.

ಇದರೊಂದಿಗೆ ಮಣ್ಣು, ಗಾಳಿ, ನೀರು, ಪರಿಸರ ಗಿಡಮರ, ಪಕ್ಷಿ – ಪ್ರಾಣಿಗಳ ಕುರಿತು ಕಾಳಜಿ ಅಗತ್ಯ, ಪರಿಸರಕ್ಕೆ ಹಾನಿಯುಂಟು ಮಾಡುವ ಅನಿಲಗಳು, ವಿವಿಧ ರಾಸಾಯನಿಕಗಳ ಜ್ಞಾನವೂ ಬೇಕು. ದೇಶ ವ್ಯಾಪಿಯಾಗಿ ಸಂಚರಿಸುವ, ದತ್ತಾಂಶ ಸಂಗ್ರಹಿಸುವ, ಸಂವಹನ ನಡೆಸುವ ಸವಾಲುಗಳನ್ನು ಎದುರಿಸುವ ಹಾಗೂ ಪರಿಸರ ಸಂಬಂಧಿತ ರೂಪುರೇಷೆಗಳನ್ನು ನಿರೂಪಿಸುವ ಕ್ಷಮತೆ ಅಗತ್ಯ.

ಅವಕಾಶಗಳು

ಹೊಸ ನಗರಗಳ ನಿರ್ಮಾಣದಲ್ಲಿ, ಕಾರ್ಖಾನೆಗಳ ಗುಣಮಟ್ಟ, ಮಾಲಿನ್ಯ ನಿಯಂತ್ರಣದಲ್ಲಿ, ಸರಕಾರಿ ಹಂತದ ನಗರ ನಿರ್ಮಾಣದಲ್ಲಿ ಕುಡಿಯುವ ನೀರು ನಿರ್ವಹಣೆ, ಚರಂಡಿ ವ್ಯವಸ್ಥೆ ಸುಧಾರಣೆ, ತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆ, ಕೈಗಾರಿಕಾ ಯೋಜನೆಗಳ ಪರಿಸರ ವಿಭಾಗದಲ್ಲಿ, ಎಂಜಿನಿಯರಿಂಗ್ ಕಾಲೇಜುಗಳಲ್ಲಿ, ಖಾಸಗಿ ಸಲಹಾ ಸಂಸ್ಥೆಗಳಲ್ಲಿ ಪರಿಸರ ಅಭಿಯಂತರರಿಗೆ ಅವಕಾಶಗಳಿವೆ.

ಕಾಲೇಜುಗಳು

- ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಸೈನ್ಸ್, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸುರತ್ಕಲ್, ಮಂಗಳೂರು.
- ಜೆಎಸ್‌ಎಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಯೂನಿವರ್ಸಿಟಿ, ಮೈಸೂರು.

ಪೆಟ್ರೋಲಿಯಂ ಎಂಜಿನಿಯರ್

ಸಾಗರದಾಳದಲ್ಲಿ ನಿಕ್ಷೇಪವಾಗಿ ದೊರಕುವ ಪೆಟ್ರೋಲಿಯಂ ಉತ್ಪನ್ನವನ್ನು ಸಂಗ್ರಹಿಸಿ, ಸಂಸ್ಕರಿಸಿ ವಾಹನ ಇತರ ಬಹೂಪಯೋಗಿ ವಸ್ತುಗಳನ್ನಾಗಿ ಸಮಾಜಕ್ಕೆ ನೀಡುವಂತಹ ಕಾರ್ಯ ಮಾಡುವವರು ಪೆಟ್ರೋಲಿಯಂ ಎಂಜಿನಿಯರ್‌ಗಳು. ಇವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಹೆಚ್ಚು.

ಪಿಯುಸಿಯಲ್ಲಿ ವಿಜ್ಞಾನ ಅಭ್ಯಾಸ ಮಾಡಿ, ಅನಂತರ ಜಾಯಿಂಟ್ ಎಂಟ್ರೆನ್ಸ್(ಜೆಇಇ) ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಬಿಇ, ಬಿ.ಟೆಕ್ ಪದವಿ ಪಡೆದರೆ ಪೆಟ್ರೋಲಿಯಂ ಎಂಜಿನಿಯರ್ ಆಗುವುದು ಸುಲಭ. ಜತೆಗೆ ಎಂ.ಟೆಕ್‌ನಲ್ಲಿ ಪೆಟ್ರೋಲಿಯಂ ಎಂಜಿನಿಯರ್ ವಿಷಯ ಅಧ್ಯಯನ ಮಾಡಿದರೆ ಗುರಿ ಸಾಧಿಸಿದಂತೆ.

ನೈಸರ್ಗಿಕ ಉತ್ಪನ್ನ, ನೈಸರ್ಗಿಕ ಅನಿಲ ಸಂರಕ್ಷಣೆಗೆ ತಕ್ಕ ಯೋಜನೆ ರೂಪಿಸುವ ಕೌಶಲ, ಪ್ರಾಕೃತಿಕ ವಿಕೋಪ, ಹವಾಮಾನ ಬದಲಾವಣೆ, ಪ್ರದೇಶವಾರು ಭೂ ಉಷ್ಣತೆಯ ತಿಳುವಳಿಕೆ, ರಿಸರ್ವಾಯರ್, ಡ್ರಿಲ್ಲಿಂಗ್, ಪ್ರೊಡಕ್ಷನ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುವ ಕೌಶಲ, ತಂತ್ರಜ್ಞಾನದ ವಿಶ್ಲೇಷಣೆ ಮಾಡುವ ಸಾಮರ್ಥ್ಯ, ಉತ್ತಮ ನೀಲನಕ್ಷೆ, ಯೋಜನೆ ರೂಪಿಸುವ ಜ್ಞಾನ ಅಗತ್ಯ.

ಅವಕಾಶಗಳು

ತೈಲ ಪರಿಶೋಧನಾ ಸಂಘಟನೆಗಳು, ಪೆಟ್ರೋಲಿಯಂ ಮತ್ತು ತೈಲ ಕಂಪೆನಿಗಳು, ಸಂಸ್ಕರಣಾಗಾರಗಳು, ಖಾಸಗಿ ತೈಲ ಕೈಗಾರಿಕೆಗಳು, ಅನಿಲ ಕಂಪೆನಿಗಳು, ವಿಶ್ವವಿದ್ಯಾಲಯಗಳು, ಪೆಟ್ರೋಲಿಯಂ ಮತ್ತು ತೈಲ ಸಂಶೋಧನ ಸಂಸ್ಥೆಗಳು, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ, ಹಿಂದೂಸ್ತಾನ್ ಆಯಿಲ್ ಎಕ್ಸ್‌ಪ್ಲೊರೇಶನ್ ಕಂಪೆನಿ ಲಿಮಿಟೆಡ್, ಆಯಿಲ್ ಆ್ಯಂಡ್ ನ್ಯಾಷನಲ್ ಗ್ಯಾಸ್ ಕಮಿಷನ್ ಮುಂತಾದ ಸಂಸ್ಥೆಗಳಲ್ಲಿ ಅವಕಾಶ.

ಕಾಲೇಜುಗಳು

- ಪ್ರೆಸಿಡೆನ್ಸಿ ಯೂನಿವರ್ಸಿಟಿ ಕಾಲೇಜು, ಬೆಂಗಳೂರು.
- ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
- ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್ ಸೆಲೈಯೂರ್, ಚೆನ್ನೈ.

- ಮಹಾರಾಷ್ಟ್ರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪುಣೆ.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಜಾರ್ಖಂಡ್, ಮುಂಬೈ

ಟ್ರಾವೆಲ್ ಏಜೆಂಟ್

ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರವಾಸವನ್ನು ಆಯೋಜಿಸುವವರಿಗೆ ಅಗತ್ಯ ಪ್ರವಾಸಿ ಕ್ಷೇತ್ರಗಳ ಬಗ್ಗೆ ಮಾಹಿತಿ ನೀಡಿ, ಪ್ರವಾಸಿಗರಿಗೆ ಉತ್ತಮ ಆಫರ್‌ಗಳ ಪ್ಲ್ಯಾನ್ ತಯಾರಿಸಿ ಪ್ರವಾಸಿ ತಾಣ ಮತ್ತು ಹೊಟೇಲ್‌ಗಳ ವ್ಯವಸ್ಥೆ ಮಾಡುವವರು ಟ್ರಾವೆಲ್ ಏಜೆಂಟ್‌ಗಳು. ಇವರು ಬಸ್, ಟ್ರೈನ್, ವಿಮಾನ ಸಂಸ್ಥೆಗಳ ಮಧ್ಯವರ್ತಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಯಾವುದೇ ವಿಷಯದಲ್ಲಿ ಪಿಯುಸಿ ಪೂರೈಸಿದ ಬಳಿಕ ಟ್ರಾವೆಲ್ ಟೂರಿಸಮ್ ಪದವಿ ಅಭ್ಯಾಸ ಮಾಡಿ ಟ್ರಾವೆಲ್ ಏಜೆಂಟ್ ಆಗಬಹುದು. ಅಥವಾ ಪದವಿಯಲ್ಲಿ ಟ್ರಾವೆಲ್ ಟೂರಿಸಮ್/ಪಬ್ಲಿಕ್ ರಿಲೇಷನ್ ವಿಷಯ ಅಭ್ಯಾಸ ಮಾಡಿ, ಸ್ನಾತಕೋತ್ತರ ಪದವಿಯಲ್ಲಿ ಮಾಸ್ಟರ್ ಆಫ್ ಮ್ಯಾನೇಜ್‌ಮೆಂಟ್ ಮಾಡಿಯೂ ಟ್ರಾವೆಲ್ ಮ್ಯಾನೇಜರ್ ಆಗಬಹುದು. ಐಎಟಿಟಿಎ/ಯುಎಫ್ಟಿಟಿಎ/ಎಫ್‌ಐಎಟಿಟಿಎ ಸರ್ಟಿಫಿಕೇಶನ್ ಕೋರ್ಸ್ ಮಾಡಿ, ಟ್ರಾವೆಲ್ ಏಜೆನ್ಸಿಗಳಲ್ಲಿ ವೃತ್ತಿ ನೈಪುಣ್ಯ ಸಾಧಿಸಿಯೂ ಗುರಿ ಮುಟ್ಟಬಹುದು.

ಇದರ ಜತೆಗೆ ಪ್ರವಾಸಿ ತಾಣಗಳ ಪರಿಚಯ, ಪ್ರಯಾಣ ಸಮಯ, ಮಾರ್ಗ, ಸಂಪರ್ಕ, ಉಳಿದು ಕೊಳ್ಳಲು ಹೊಟೇಲ್ ಇತ್ಯಾದಿಗಳ ಬಗ್ಗೆ ತಿಳುವಳಿಕೆ. ಚಿಕಿತ್ಸಾ ಗುಣ, ಸಂಸ್ಕೃತಿ- ಕಲೆ ಬಗ್ಗೆ ಜ್ಞಾನ, ಉತ್ತಮ ಸಂವಹನಾ ಕೌಶಲ, ವಾತಾವರಣದ ಬಗ್ಗೆ ಅರಿವು ಅಗತ್ಯ.

ಅವಕಾಶಗಳು

ಸರಕಾರಿ ಪ್ರವಾಸಿ ವಿಭಾಗ, ಟ್ರಾವೆಲ್ ಏಜೆನ್ಸಿಗಳು, ಟೂರ್ ಆಪರೇಟರ್‌ಗಳು, ಸಿವಿಲ್ ಏವಿಯೇಷನ್‌ಗಳು, ರೈಲ್ವೇ, ಸ್ವಯಂ ಉದ್ಯೋಗ, ಕ್ರೂಸ್ ಲೈನರ್ ಇತ್ಯಾದಿ.

ಕಾಲೇಜುಗಳು

- ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕ್ರಿಸ್ತ್ ಕಾಲೇಜು, ಬೆಂಗಳೂರು.
- ಮೌಂಟ್ ಕಾರ್ಮೆಲ್ ಕಾಲೇಜು, (ಎಂಸಿಸಿ) ಬೆಂಗಳೂರು.
- ಕ್ರಿಸ್ತು ಜಯಂತಿ ಕಾಲೇಜ್ ಬೆಂಗಳೂರು.
- ಮಂಗಳೂರು ಯೂನಿವರ್ಸಿಟಿ, ಮಂಗಳೂರು.
- ಎಸ್‌ಜೆಇಎಸ್ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಬೆಂಗಳೂರು.

ಫೈನಾನ್ಶಿಯಲ್ ಪ್ಲಾನರ್

ಬಂಡವಾಳ ಹೂಡಿಕೆ, ಇನ್ಶೂರೆನ್ಸ್ ಪ್ಲಾನ್, ಟ್ಯಾಕ್ಸ್ ರಿಟರ್ನ್ಸ್ ಸೇರಿದಂತೆ ಹಣಕಾಸು ಮೂಲವನ್ನು ವೃದ್ಧಿಗೊಳಿಸಿಕೊಳ್ಳಲು ಯೋಜನೆ ರೂಪಿಸುವವರು ಫೈನಾನ್ಶಿಯಲ್ ಪ್ಲಾನರ್‌ಗಳು. ಜನರ ವಾರ್ಷಿಕ ಆದಾಯ ವ್ಯಯಕ್ಕನುಗುಣವಾಗಿ ಇವರು ಯೋಜನೆ ರೂಪಿಸಿಕೊಡುತ್ತಾರೆ.

ಪಿಯುಸಿ/ಪದವಿ ಬಳಿಕ ಸಿಎಫ್‌ಪಿಸಿಎಂ ಸರ್ಟಿಫಿಕೇಷನ್ ಕೋರ್ಸ್ ಆದರ ಜತೆಗೆ ಎನ್‌ಎಸ್‌ಇ ಮತ್ತು ಸಿಎಫ್‌ಪಿ ಎಕ್ಸಾಮ್ ಮಾಡಿದರೆ ಫೈನಾನ್ಶಿಯಲ್ ಪ್ಲಾನರ್ ಆಗಬಹುದು. ಅಥವಾ ವಿಜ್ಞಾನ ಅಥವಾ ವಾಣಿಜ್ಯ ವಿಷಯದಲ್ಲಿ ಪಿಯುಸಿ ಮುಗಿಸಿ, ಬಿ.ಕಾಮ್., ಬಿಬಿಎ ಅಧ್ಯಯನ ಮಾಡಿ, ಸ್ನಾತಕೋತ್ತರ ಪದವಿಯಲ್ಲಿ ಎಂಬಿಎ ಅಥವಾ ಸಿಎ ಪೂರೈಸಿ ಸಿಎಫ್ಪಿಸಿಎಂ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಸಂವಹನ ಕೌಶಲ, ಸಂಶೋಧನೆ ಕುರಿತ ಆಸಕ್ತಿ, ದಾಖಲೆಗಳನ್ನು ಸಂರಕ್ಷಿಸಿಡುವುದು, ವಿಶ್ಲೇಷಣಾತ್ಮಕ ಜ್ಞಾನ, ಒತ್ತಡದಲ್ಲಿ ಕಾರ್ಯನಿರ್ವಹಿಸುವ, ಸಮಸ್ಯೆಗಳನ್ನು ಬಗೆಹರಿಸುವ, ತಮ್ಮ ಕ್ಲೈಂಟ್‌ಗಳಿಗೆ ಮಾರ್ಗದರ್ಶನ ನೀಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು.

ಅವಕಾಶಗಳು

ಷೇರು ಮಾರುಕಟ್ಟೆ, ಫೈನಾನ್ಶಿಯಲ್ ಕನ್ಸಲ್ಟೆನ್ಸಿ ಕಂಪೆನಿಗಳು, ಫೈನಾನ್ಶಿಯಲ್ ರಿಸರ್ಚ್ ಸೆಂಟರ್‌ಗಳು, ಫಂಡ್ ಮ್ಯಾನೇಜಿಂಗ್ ಕಂಪೆನಿಗಳು, ಹೂಡಿಕೆ ಯೋಜನೆ ಬ್ಯಾಂಕುಗಳು, ಲೈಫ್ ಇನ್ಶೂರೆನ್ಸ್ ವಲಯ, ವೆಲ್ತ್ ಮ್ಯಾನೇಜಿಂಗ್ ಕ್ಷೇತ್ರ, ಸ್ವಯಂ ಉದ್ಯೋಗ ಇತ್ಯಾದಿ.

ಕಾಲೇಜುಗಳು

- ಇಂಟರ್‌ನ್ಯಾಷನಲ್ ಕಾಲೇಜ್ ಆಫ್ ಫೈನಾನ್ಶಿಯಲ್ ಪ್ಲಾನಿಂಗ್, ಮೈಸೂರು.
- ಜೈನ್ ಯೂನಿವರ್ಸಿಟಿ, ಬೆಂಗಳೂರು.
- ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು.
- ಇಂಟರ್‌ನ್ಯಾಷನಲ್ ಕಾಲೇಜ್ ಆಫ್ ಫೈನಾನ್ಶಿಯಲ್ ಪ್ಲಾನಿಂಗ್, ಬಹದ್ದೂರ್ ಶಾ ಜಫರ್ ಮಾರ್ಗ್, ದೆಹಲಿ/ಮುಂಬೈ/ಕೋಲ್ಕತ್ತಾ.

ಕ್ರೆಡಿಟ್ ಅನಾಲಿಸ್ಟ್

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಖರ್ಚು, ಜಮೆಗೆ ಸಂಬಂಧಿಸಿದಂತೆ ಫೈನಾನ್ಶಿಯಲ್ ಸ್ಟೇಟ್‌ಮೆಂಟ್ ಮತ್ತು ದತ್ತಾಂಶ ವಿಶ್ಲೇಷಣೆ ಮಾಡಿ, ಖಾತೆ ಹೊಂದಿರುವ ವ್ಯಕ್ತಿಗೆ ಸಾಲ, ಕ್ರೆಡಿಟ್ ಕಾರ್ಡ್ ನೀಡಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವವರು ಕ್ರೆಡಿಟ್ ಅನಾಲಿಸ್ಟ್‌ಗಳು. ಆರ್ಥಿಕ ವ್ಯವಹಾರದಲ್ಲಿ ಮುಂದೆ ಒದಗುವ ಗಂಡಾಂತರದ ಬಗ್ಗೆ ಇವರು ವಿಶ್ಲೇಷಿಸುತ್ತಾರೆ.

ಪಿಯುಸಿಯಲ್ಲಿ ಕಾಮರ್ಸ್ ವಿಷಯ ಅಭ್ಯಾಸ ಮಾಡಿ, ಬಳಿಕ ಪದವಿಯಲ್ಲಿ ಬ್ಯಾಚುಲರ್ ಆಫ್ ಫೈನಾನ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ ಅನಾಲಿಸ್ಟ್ (ಬಿಎಫ್‌ಐಎ) ಅಧ್ಯಯನ ಮಾಡಿ, ಸ್ನಾತಕೋತ್ತರ ಪದವಿಯಲ್ಲಿ ಎಂಬಿಎ (ಫೈನಾನ್ಸ್) ಮಾಡಿ ಕ್ರೆಡಿಟ್ ಅನಾಲಿಸ್ಟ್ ಆಗಬಹುದು. ಪದವಿಯಲ್ಲಿ ಬಿ.ಕಾಮ್ ಓದಿ ಸ್ನಾತಕೋತ್ತರ ಪದವಿಯಲ್ಲಿ ಸರ್ಟಿಫೈಡ್ ಫೈನಾನ್ಶಿಯಲ್ ಅನಾಲಿಸ್ಟ್(ಸಿಎಫ್‌ಎ) ಆಗಿ ಗುರಿ ಸಾಧಿಸಬಹುದು. ಮತ್ತೊಂದು ಮಾರ್ಗದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಸಿಎಫ್‌ಎ ಮತ್ತು ಫೈನಾನ್ಶಿಯಲ್ ರಿಸ್ಕ್ ಮ್ಯಾನೇಜ್‌ಮೆಂಟ್ (ಎಫ್‌ಆರ್‌ಎಂ) ಮಾಡಿಯೂ ಕ್ರೆಡಿಟ್ ಅನಾಲಿಸ್ಟ್ ಆಗಬಹುದು. ಅಲ್ಲದೆ ಕಾಮರ್ಸ್ ಬಳಿಕ ಸ್ನಾತಕೋತ್ತರ ಪದವಿಯಲ್ಲಿ ಸರ್ಟಿಫೈಡ್ ಕ್ರೆಡಿಟ್ ರಿಸರ್ಚ್ ಅನಾಲಿಸ್ಟ್ ಅಭ್ಯಾಸ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಉತ್ತಮ ಗಣಿತ ಜ್ಞಾನ, ಕಂಪ್ಯೂಟರ್ ಕೌಶಲ, ದತ್ತಾಂಶ ಸಂಗ್ರಹಣಾ ಮತ್ತು ವಿಶ್ಲೇಷಣಾ ಕೌಶಲ, ಹೂಡಿಕೆ ಮತ್ತು ಮಾರುಕಟ್ಟೆ ವಲಯದ ಬಗ್ಗೆ ಅರಿವು, ಉತ್ತಮ ಸಂವಹನಾ ಕೌಶಲ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಮತ್ತು ಸಮಸ್ಯೆ ಬಗೆಹರಿಸುವ ಕೌಶಲ ಇದ್ದರೆ ಅನುಕೂಲ.

ಅವಕಾಶಗಳು

ಬ್ಯಾಂಕ್‌ಗಳು, ಕಾರ್ಪೊರೇಟರ್‌ಗಳು, ಕಾರ್ಖಾನೆಗಳು, ಇನ್ವೆಸ್ಟ್‌ಮೆಂಟ್ ಬ್ಯಾಂಕ್‌ಗಳು, ಫೈನಾನ್ಶಿಯಲ್ ಇನ್‌ಸ್ಟಿಟ್ಯೂಟ್‌ಗಳು, ಇನ್ಶೂರೆನ್ಸ್ ಕಂಪೆನಿಗಳು, ಸರಕಾರಿ ಸಾಲ ವಿಭಾಗ, ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು, ಪ್ರೈವೇಟ್ ಈಕ್ವಿಟಿ ವಲಯ ಇತ್ಯಾದಿ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಚಾರ್ಟರ್ಡ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಕೌಂಟೆಂಟ್, ಬೆಂಗಳೂರು.
- ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್, ಬೆಂಗಳೂರು.
- ಇಂಟರ್‌ನ್ಯಾಷನಲ್ ಪ್ರೊಫೆಶನಲ್ ಫೈನಾನ್ಶಿಯಲ್ ಕೆರಿಯರ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೆಕ್ಯುರಿಟೀಸ್ ಮಾರ್ಕೆಟ್ಸ್ (ಎನ್‌ಐಎಸ್‌ಎಂ) ಮುಂಬೈ.

ಇನ್ವೆಸ್ಟ್‌ಮೆಂಟ್ ಬ್ಯಾಂಕರ್

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೂಡಿಕೆಯಾದ ಹಣವನ್ನು ಭದ್ರಗೊಳಿಸಿ ಮತ್ತೊಂದೆಡೆ ಹೂಡುವ, ಸ್ವತ್ತುಗಳನ್ನು ಖರೀದಿಸುವ, ಬಂಡವಾಳವನ್ನು ಹೆಚ್ಚಿಸಿಕೊಳ್ಳಲು ಸರಕಾರ ಮತ್ತು ಖಾಸಗಿ ಕಂಪೆನಿ (ಬ್ಯಾಂಕ್)ಗಳಿಗೆ ಸಹಾಯ ಮಾಡುವವರು ಇನ್ವೆಸ್ಟ್‌ಮೆಂಟ್ ಬ್ಯಾಂಕರ್‌ಗಳು. ಇವರು ಆರ್ಥಿಕ ಭದ್ರತೆ ಕುರಿತು ಸಲಹೆಗಳನ್ನೂ ನೀಡುತ್ತಾರೆ.

ವಾಣಿಜ್ಯ ಅಥವಾ ವಿಜ್ಞಾನ ವಿಷಯದಲ್ಲಿ(ಗಣಿತ, ಫೈನಾನ್ಸ್, ಸೆಕ್ಯುರಿಟಿ ಅನಾಲಿಸೀಸ್, ಕಂಪ್ಯೂಟರ್ ಸೈನ್ಸ್, ಫಿಸಿಕ್ಸ್ ವಿಷಯಗಳಿರುವಂತೆ) ಪಿಯುಸಿ, ಪದವಿಯನ್ನು ಪೂರೈಸಿದ ಬಳಿಕ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್‌ಗಳಲ್ಲಿ ಇಂಟರ್ನ್‌ಶಿಪ್ ಮಾಡಿ ಇನ್ವೆಸ್ಟ್‌ಮೆಂಟ್ ಬ್ಯಾಂಕರ್ ಆಗಬಹುದು ಅಥವಾ ಫೈನಾನ್ಶಿಯಲ್ ಅನಾಲಿಸ್ಟ್ ಅಥವಾ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಆ್ಯಂಡ್ ಈಕ್ವಿಟಿ ರಿಸರ್ಚ್ ವಿಷಯದಲ್ಲಿ ಡಿಪ್ಲೊಮಾ ಅಧ್ಯಯನ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ನಿಫ್ಟಿ-ಫಿಫ್ಟಿ ಬಗ್ಗೆ ಜ್ಞಾನ, ಶಕ್ತಿಯುತ ವಿಶ್ಲೇಷಣಾ ಜ್ಞಾನ, ಗಣಿತದಲ್ಲಿ ಪ್ರಾವೀಣ್ಯತೆ, ಕ್ಷೇತ್ರದ ಮೇಲೆ ಹಿಡಿತ, ಜವಾಬ್ದಾರಿ ಹೊರುವ ಗುಣ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಮತ್ತು ಸಮಸ್ಯೆಯನ್ನು ನಿವಾರಿಸುವ ಕೌಶಲ ಅಗತ್ಯ.

ಅವಕಾಶಗಳು

ಉನ್ನತ ಮಟ್ಟದ ಹೂಡಿಕೆ ಬ್ಯಾಂಕ್ (ಟಾಪ್ ಲೆವೆಲ್ ಇನ್ವೆಸ್ಟ್ ಬ್ಯಾಂಕ್), ಮಿಡ್ಲ್ ಮಾರ್ಕೆಟ್, ಪ್ರಾದೇಶಿಕ ಹೂಡಿಕೆ ಬ್ಯಾಂಕ್ (ರೀಜನಲ್ ಇನ್ವೆಸ್ಟ್ ಬ್ಯಾಂಕ್), ಬಾಂಡ್ ಮತ್ತು ಪ್ರೋಗ್ರಾಮ್ ಟ್ರೇಡಿಂಗ್ ವಲಯ, ಟ್ರೇಡಿಂಗ್ ವಲಯ, ಕ್ಯಾಪಿಟಲ್ ಮಾರ್ಕೆಟ್, ಸರಕಾರಿ ಹಣಕಾಸು ಕ್ಷೇತ್ರ ಇತ್ಯಾದಿ.

ಕಾಲೇಜುಗಳು

- ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್, ಮೈಸೂರು.
- ಮೌಂಟ್ ಕಾರ್ಮೆಲ್ ಕಾಲೇಜ್, ಬೆಂಗಳೂರು.
- ಸ್ಕೂಲ್ ಆಫ್ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್, ನಾರಿಮನ್ ಪಾಯಿಂಟ್, ಮುಂಬೈ.

ರಿಯಲ್ ಎಸ್ಟೇಟ್ ಡೆವಲಪರ್

ವಾಣಿಜ್ಯ ಸಂಕೀರ್ಣ, ವಸತಿ, ಕೈಗಾರಿಕಾ ಕಟ್ಟಡ ಇತ್ಯಾದಿಗಳನ್ನು ನಿರ್ಮಿಸಿ ಮಾರಾಟ ಮಾಡುವವರು ರಿಯಲ್ ಎಸ್ಟೇಟ್ ಡೆವಲಪರ್‌ಗಳು. ಇವರು ಮೂಲಭೂತ ಸೌಕರ್ಯ ಇರುವ ಸ್ಥಳ ಗುರುತಿಸಿ ಆಸ್ತಿಯನ್ನು ಖರೀದಿ ಮಾಡಿ ನಿವೇಶನಗಳನ್ನಾಗಿ ರೂಪಿಸಿ ಮಾರಾಟ ಮಾಡುತ್ತಾರೆ. ಇವರನ್ನು ಬಿಲ್ಡರ್ ಎಂದೂ ಕರೆಯುತ್ತಾರೆ.

ಡೆವಲಪರ್ ಆಗಲು ವಿಜ್ಞಾನ ವಿಷಯ ಕುರಿತ ಪಿಯುಸಿ ವ್ಯಾಸಂಗದ ಬಳಿಕ ಜೆಇಇ ಪ್ರವೇಶ ಪರೀಕ್ಷೆಯನ್ನು ಪೂರೈಸಿ ಪದವಿಯಲ್ಲಿ ಕನ್‌ಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್ ಬಿ.ಟೆಕ್ ಮತ್ತು ಎಂ.ಟೆಕ್ ಮಾಡಿ ಬಿಲ್ಡರ್ ಆಗಬಹುದು. ಅಥವಾ ಕನ್‌ಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್ ಡಿಪ್ಲೊಮಾ ಪೂರೈಸಿಯೂ ಬಿಲ್ಡರ್ ಆಗಬಹುದು.

ಇದರ ಜತೆಗೆ ಭೌಗೋಳಿಕ ಜ್ಞಾನ, ಪ್ರದೇಶವಾರು ಅಭಿವೃದ್ಧಿ ಬಗ್ಗೆ ತಿಳುವಳಿಕೆ, ನಿವೇಶನ ಮತ್ತು ಕಟ್ಟಡಗಳ ಪ್ಲಾನಿಂಗ್ ಮತ್ತು ಸ್ಕೆಚ್ಚಿಂಗ್ ಕೌಶಲ, ಮೆಟೀರಿಯಲ್ ಬಗ್ಗೆ ಅರಿವು, ಉತ್ತಮ ಸಂವಹನಾ ಮತ್ತು ಸಾರ್ವಜನಿಕ ಸಂಬಂಧ, ಸಮಯಪಾಲನಾ ಗುಣ ಅತ್ಯಗತ್ಯ.

ಅವಕಾಶಗಳು

ಕಟ್ಟಡ ನಿರ್ಮಾಣ ವಲಯ, ಸರಕಾರಿ ಸಿವಿಲ್ ವರ್ಕ್ ಪ್ರಾಜೆಕ್ಟ್, ಪ್ರೈವೇಟ್ ರಿಯಲ್ ಎಸ್ಟೇಟ್, ಪ್ರಾಪರ್ಟಿ ಡೆವಲಪ್‌ಮೆಂಟ್ ಫರ್ಮ್‌ಗಳಲ್ಲಿ ಅವಕಾಶವಿದೆ.

ಕಾಲೇಜುಗಳು

- ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು.
- ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಸ್ಕೂಲ್ ಆಫ್ ಕನ್‌ಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಕ್ಸೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಬೆಂಗಳೂರು.

ಏರೋನಾಟಿಕಲ್ ಎಂಜಿನಿಯರ್

ವಿಮಾನಗಳ ವಿನ್ಯಾಸ, ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುತ್ತಾ ತಲೆದೋರುವ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಾನಿಕಲ್ ಸಮಸ್ಯೆಗಳನ್ನು ಬಗೆಹರಿಸುವವರು ಏರೋನಾಟಿಕ್ ಎಂಜಿನಿಯರ್‌ಗಳು. ಇವರು ವಿಮಾನಗಳ 'ಡಾಕ್ಟರ್'.

ವಿಜ್ಞಾನ ವಿಷಯದಲ್ಲಿ ಪಿಯುಸಿ ಪೂರೈಸಿದ ಬಳಿಕ ಐಐಟಿ, ಜೆಇಇ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿಇ/ಬಿ.ಟೆಕ್ ಏರೋನಾಟಿಕ್ ಎಂಜಿನಿಯರ್ ಪದವಿ ಅಧ್ಯಯನ ಮಾಡಿ, ಜಿಎಟಿಇಯಲ್ಲಿ ಪ್ರವೇಶ ಪಡೆದು, ಎಂ.ಟೆಕ್ ಕೋರ್ಸ್ ಪೂರೈಸಿದರೆ ಏರೋನಾಟಿಕಲ್ ಎಂಜಿನಿಯರ್ ಆಗಬಹುದು ಅಥವಾ ಪಿಯುಸಿ ಬಳಿಕ ಏರೋ ಎಂಜಿನಿಯರಿಂಗ್, ಏರೋ ಸೈನ್ಸ್ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ವಿಮಾನಗಳ ವಿನ್ಯಾಸ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ತಿಳುವಳಿಕೆ, ದೈಹಿಕ ಸಾಮರ್ಥ್ಯ ಮತ್ತು ಜವಾಬ್ದಾರಿಯನ್ನು ಹೊರುವ ನಾಯಕತ್ವ ಗುಣ, ತಮ್ಮ ಕ್ಷೇತ್ರದ ವಿಷಯಗಳ ಬಗ್ಗೆ ನಿಖರತೆ ಮತ್ತು ಪ್ರಾವೀಣ್ಯತೆ, ವಿಮಾನ ಸಂಬಂಧಿತ ತಂತ್ರಾಂಶಗಳ ಬಗ್ಗೆ ಅರಿವು, ಸಮೂಹದಲ್ಲಿ ಕಾರ್ಯನಿರ್ವಹಿಸುವ ಮತ್ತು ತಾಂತ್ರಿಕ-ಯಾಂತ್ರಿಕ ಸಮಸ್ಯೆ ಬಗೆಹರಿಸುವ ಕೌಶಲ ಅಗತ್ಯ.

ಅವಕಾಶಗಳು

ಸರಕಾರಿ, ಖಾಸಗಿ ವಿಮಾನ ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆಗಳು, ಫ್ಲೈಯಿಂಗ್ ಕ್ಲಬ್‌ಗಳು, ವಿಮಾನ ನಿರ್ಮಾಣ ಸಂಸ್ಥೆಗಳು (ಏರ್‌ಕ್ರಾಫ್ಟ್ ಮ್ಯಾನುಫ್ಯಾಕ್ಚರಿಂಗ್ ಕಂಪೆನೀಸ್), ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು, ಏರೋನಾಟಿಕಲ್ ಲ್ಯಾಬೋರೇಟರಿಗಳು, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಸಿವಿಲ್ ಏವಿಯೇಷನ್ ವಿಭಾಗ, ಡಿಫೆನ್ಸ್ ಸರ್ವಿಸ್.

ಕಾಲೇಜುಗಳು

- ಆರ್.ವಿ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಹಿಂದೂಸ್ತಾನ್ ಏವಿಯೇಷನ್ ಅಕಾಡೆಮಿ, ಮಾರತ್ತಹಳ್ಳಿ, ಬೆಂಗಳೂರು.
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಎಂಜಿನಿಯರಿಂಗ್, ಮಂಗಳೂರು

ಏರೋಸ್ಪೇಸ್ ಎಂಜಿನಿಯರ್

ಬಾಹ್ಯಾಕಾಶದಲ್ಲಿ ವೈಮಾನಿಕ ಹಾರಾಟ ಮತ್ತು ಮಾನವನ ಉಳಿವಿಗೆ ಒತ್ತಡರಹಿತ ವಾತಾವರಣ ನಿರ್ಮಿಸಲು ಸದಾ ಶ್ರಮಿಸುವವರು ಏರೋಸ್ಪೇಸ್ ಎಂಜಿನಿಯರ್‌ಗಳು. ಇವರು ವಿಮಾನ ಸಂಶೋಧನಾ ಮತ್ತು ಅಭಿವೃದ್ಧಿ ವಲಯದ ಉನ್ನತ ತರಬೇತಿ ಹೊಂದಿದ ಅಭಿಯಂತರರಾಗಿರುತ್ತಾರೆ.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿ, ಜೆಇಇ ಪ್ರವೇಶ ಮತ್ತು ಅಡ್ವಾನ್ಸ್ಡ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಏರೋ ಸ್ಪೇಸ್ ವಿಷಯದಲ್ಲಿ ಬಿಇ/ಬಿ.ಟೆಕ್ ಪದವಿಯನ್ನು ಪಡೆದು, ಜಿಎಟಿಇ ಪರೀಕ್ಷೆ ಮತ್ತು ಏರೋಸ್ಪೇಸ್ ಎಂ.ಟೆಕ್‌ನಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದರೆ ಏರೋಸ್ಪೇಸ್ ಎಂಜಿನಿಯರ್ ಆಗಬಹುದು.

ಇದರೊಂದಿಗೆ ಬುದ್ಧಿವಂತಿಕೆ, ಜವಾಬ್ದಾರಿಯುತ ವ್ಯಕ್ತಿತ್ವ, ದೀರ್ಘಾವಧಿಯಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ದೈಹಿಕ ಸಹನೆ, ವೈಜ್ಞಾನಿಕ ಕುಶಾಗ್ರಮತಿ, ಸವಾಲನ್ನು ಸ್ವೀಕರಿಸುವ, ಸಮಸ್ಯೆಯನ್ನು ಬಗೆಹರಿಸುವ ಕೌಶಲವಿರಬೇಕು.

ಅವಕಾಶಗಳು

ಏರ್‌ಕ್ರಾಫ್ಟ್ ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆಗಳು, ಡಿಫೆನ್ಸ್ ಸರ್ವಿಸ್, ಸರಕಾರಿ ಸಂಬಂಧಿತ ವೈಮಾನಿಕ ಸಂಶೋಧನಾ ವಲಯ, ಬಾಹ್ಯಾಕಾಶ ವಿಜ್ಞಾನ ವಲಯ, ಸ್ಕೈಡೈವಿಂಗ್ ಎಕ್ವಿಪ್‌ಮೆಂಟ್ ಮತ್ತು ಪ್ಯಾರಾಚೂಟ್ ತಯಾರಿಕಾ ಘಟಕ ಇತ್ಯಾದಿ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು.
- ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
- ಹಿಂದೂಸ್ತಾನ್ ಏವಿಯೇಷನ್ ಅಕಾಡೆಮಿ, ಬೆಂಗಳೂರು.
- ಅಲಯನ್ಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಡಿಸೈನ್, ಬೆಂಗಳೂರು.
- ಜೈನ್ ಯೂನಿವರ್ಸಿಟಿ/ದಯಾನಂದ ಸಾಗರ್ ವಿವಿ, ಬೆಂಗಳೂರು.

ಏರ್‌ಕ್ರಾಫ್ಟ್ ಮೈಂಟೆನೆನ್ಸ್ ಎಂಜಿನಿಯರ್

ವಿಮಾನ ನಿಲ್ದಾಣದಲ್ಲಿ ಲೈನ್ ಮೈಂಟೆನೆನ್ಸ್ (ಯಾನ ಮಾರ್ಗ ನಿಭಾವಣೆ), ವಿಮಾನಗಳ ಹಾರಾಟದ ಸಮಯ, ಮಿಷನ್‌ಗಳ ಕಾರ್ಯನಿರ್ವಹಣೆ, ಪರಿಶೀಲನೆ ಮಾಡುವವರು ಏರ್‌ಕ್ರಾಫ್ಟ್ ಮೈಂಟೆನೆನ್ಸ್ ಎಂಜಿನಿಯರ್‌ಗಳು. ಇವರು ವಿಮಾನಗಳ ಮೆಕ್ಯಾನಿಕಲ್‌ಗಳೂ ಹೌದು, ಸೂಪರ್ ವೈಸರ್‌ಗಳೂ ಹೌದು. ಇವರು ಏರೋನಾಟಿಕಲ್ ಎಂಜಿನಿಯರ್ ಕೈಕೆಳಗೆ ಕಾರ್ಯನಿರ್ವಹಿಸುತ್ತಾರೆ.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿ, ಬಳಿಕ ಏರ್‌ಕ್ರಾಫ್ಟ್ ಮೈಂಟೆನೆನ್ಸ್ ಎಂಜಿನಿಯರ್ ಡಿಪ್ಲೊಮಾ ಮಾಡಿ, ಡೈರೆಕ್ಟರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್(ಡಿಜಿಸಿಎ)ತರಬೇತಿ ಪಡೆದು, ಎಎಸ್‌ಐಯಲ್ಲಿ ಸದಸ್ಯತ್ವ ಸಾಧಿಸಿ ಏರ್‌ಕ್ರಾಫ್ಟ್ ಮೈಂಟೆನೆನ್ಸ್ ಎಂಜಿನಿಯರ್ ಆಗಬಹುದು. ಇದರ ಜತೆಗೆ ಗಣಿತ ಜ್ಞಾನ, ಲೆಕ್ಕಪತ್ರ ನಿರ್ವಹಣೆ, ಸಮೂಹದಲ್ಲಿ ದೀರ್ಘಕಾಲ ಕಾರ್ಯನಿರ್ವಹಿಸುವ ಸಾಮರ್ಥ್ಯ, ಜವಾಬ್ದಾರಿ ಹೊರುವ ಗುಣ ಇರಬೇಕು.

ಅವಕಾಶಗಳು

ಫ್ಲೈಯಿಂಗ್ ಕ್ಲಬ್ಸ್ ಮತ್ತು ಅಕಾಡೆಮಿಗಳು, ಖಾಸಗಿ ವಿಮಾನಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಗಣೆ ವಿಮಾನಗಳು, ವಿಮಾನ ಹಾರಾಟ ವಲಯದ ಎಂಜಿನಿಯರಿಂಗ್ ವಿಭಾಗ, ವಿಮಾನ ನಿರ್ಮಾಣ ವಲಯ, ಡಿಆರ್‌ಡಿಒ, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ ಇತ್ಯಾದಿ.

ಕಾಲೇಜುಗಳು

- ಹಿಂದೂಸ್ತಾನ್ ಏವಿಯೇಷನ್ ಅಕಾಡೆಮಿ, ಮಾರತ್ತಹಳ್ಳಿ, ಬೆಂಗಳೂರು.
- ಅಕಾಡೆಮಿ ಆಫ್ ಏವಿಯೇಷನ್ ಆ್ಯಂಡ್ ಎಂಜಿನಿಯರಿಂಗ್, ಬೆಂಗಳೂರು.
- ಆವಲಾನ್ ಅಕಾಡೆಮಿ, ಬೆಂಗಳೂರು/ಹುಬ್ಬಳ್ಳಿ.
- ಇಂಟರ್ ನ್ಯಾಷನಲ್ ಸೆಂಟರ್ ಆಫ್ ಅಪ್ಲೈಡ್ ಸೈನ್ಸ್, ಮಣಿಪಾಲ ವಿವಿ, ಮಣಿಪಾಲ.

ಅಗ್ರಿಕಲ್ಚರ್ ಎಂಜಿನಿಯರ್

ಕೃಷಿ ವಲಯಕ್ಕೆ ಸಂಬಂಧಿಸಿದ ಅಗತ್ಯ ಯಂತ್ರೋಪಕರಣಗಳನ್ನು ತಯಾರಿಸಿಕೊಡುವ ಕಾರ್ಯ ಅಗ್ರಿಕಲ್ಚರ್ ಎಂಜಿನಿಯರ್‌ಗಳದ್ದು. ಇವರು ಕೃಷಿ ಯಂತ್ರಗಳ ರೂಪುರೇಷೆಯನ್ನು ತಯಾರಿಸಿ, ಯಂತ್ರ ನಿರ್ಮಿಸಿ, ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಪರೀಕ್ಷಿಸಿ ಅನಂತರ ಮಾರುಕಟ್ಟೆಗೆ ಪರಿಚಯಿಸುತ್ತಾರೆ. ಜತೆಗೆ ಯಂತ್ರಗಳ ಸರ್ವಿಸ್ ಅನ್ನು ಮಾಡುತ್ತಾರೆ.

ವಿಜ್ಞಾನದಲ್ಲಿ ಪಿಯುಸಿ ಮಾಡಿ, ಜೆಇಇ/ಐಸಿಎಆರ್ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬಳಿಕ ಬಿ.ಟೆಕ್ (ಅಗ್ರಿಕಲ್ಚರ್ ಎಂಜಿನಿಯರಿಂಗ್) ಮತ್ತು ಜಿಎಟಿಇ/ಎಂ.ಟೆಕ್ ಪದವಿ ಗಳಿಸಿದರೆ ಅಗ್ರಿಕಲ್ಚರಲ್ ಎಂಜಿನಿಯರ್ ಆಗಬಹುದು.

ಇದರ ಜತೆಗೆ ಕೃಷಿ ಕ್ಷೇತ್ರದ ಬಗ್ಗೆ ಆಸಕ್ತಿ, ಮೆಕ್ಯಾನಿಕಲ್ ಕೆಲಸದಲ್ಲಿ ಒಲವು, ಗಣಿತದ ಜ್ಞಾನ, ಒತ್ತಡದಲ್ಲಿ ಕಾರ್ಯ ನಿರ್ವಹಿಸುವ, ಜವಾಬ್ದಾರಿ ಹೊರುವ ಸಾಮರ್ಥ್ಯ, ಸದಾ ಸಂಶೋಧನೆಯಲ್ಲಿ ತೊಡಗಿಕೊಳ್ಳುವ ಗುಣ ಅಗತ್ಯ.

ಅವಕಾಶಗಳು

ಕೃಷಿ ಅಭಿಯಂತರ ವಿಭಾಗ, ಜಲ ನಿರ್ವಹಣೆ ಮತ್ತು ನೀರಾವರಿ ಯೋಜನೆಗಳು, ಕೃಷಿ ಯಂತ್ರೋಪಕರಣ ತಯಾರಿಕಾ ಸಂಸ್ಥೆಗಳು, ಭಾರತೀಯ ಆಹಾರ ನಿಗಮ, ರಾಷ್ಟ್ರೀಯ ಬೀಜಗಳ ನಿರ್ವಹಣಾ ನಿಗಮ, ಆಗ್ರೋ ಕಾರ್ಖಾನೆಗಳು, ಕೃಷಿ, ಫೈನಾನ್ಸ್ ಕಾರ್ಪೊರೇಷನ್‌ಗಳು, ಭಾರತೀಯ ಸಂಶೋಧನಾ ಮಂಡಲಿ, ಕೃಷಿ ಹಣಕಾಸು ನಿಗಮ, ನಬಾರ್ಡ್ ಮತ್ತು ಕೃಷಿ ಸಂಘಟನೆಗಳು, ಕೃಷಿ ವಿಶ್ವವಿದ್ಯಾಲಯಗಳು, ಕನ್ಸಲ್ಟೆನ್ಸಿಗಳು, ಉತ್ಪಾದನಾ ವಲಯ ಇತ್ಯಾದಿ.

ಕಾಲೇಜುಗಳು

- ಜಿಕೆವಿಕೆ ಕಾಲೇಜ್ ಆಫ್ ಅಗ್ರಿಕಲ್ಚರಲ್ ಎಂಜಿನಿಯರಿಂಗ್, ಬೆಂಗಳೂರು.
- ಕೃಷಿ ವಿಜ್ಞಾನ ವಿವಿ ಕಾಲೇಜು, ಕೃಷಿ ನಗರ, ಧಾರವಾಡ.
- ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್ (ಯುವಿಸಿಇ), ಬೆಂಗಳೂರು.
- ಕಾಲೇಜ್ ಆಫ್ ಅಗ್ರಿಕಲ್ಚರ್ ಎಂಜಿನಿಯರಿಂಗ್, ರಾಯಚೂರು.
- ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ವಿವೇಕನಗರ, ಬೆಂಗಳೂರು.

ಬಯೋ ಮೆಡಿಕಲ್ ಎಂಜಿನಿಯರ್

ಉಪಕರಣಗಳ ಮೂಲಕ ಜೀವಶಾಸ್ತ್ರೀಯ, ಔಷಧೀಯ ಗುಣಗಳ ಪರಿಣಾಮವನ್ನು ವಿಶ್ಲೇಷಿಸಲು ಮತ್ತು ಆರೋಗ್ಯ ಸುಧಾರಣಾ ಕ್ರಮ ಕೈಗೊಳ್ಳಲು ಸಹಾಯ ಮಾಡುವವರು ಬಯೋಮೆಡಿಕಲ್ ಎಂಜಿನಿಯರ್‌ಗಳು. ಇವರು ತಜ್ಞ ವೈದ್ಯರು, ಬಯಾಲಜಿಕಲ್ ವಿಜ್ಞಾನಿಗಳು, ಫಿಜಿಶಿಯನ್‌ಗಳು, ಕೆಮಿಸ್ಟ್‌ಗಳ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿ, ಜೆಇಇ ಪ್ರವೇಶ ಪರೀಕ್ಷೆಯನ್ನು ಪೂರೈಸಿ, ಜಿಎಟಿಇ ಸೆಲೆಕ್ಷನ್ ಟೆಸ್ಟ್ ಪಾಸ್ ಮಾಡಿ, ಬಯೋಇನ್ ವೆಸ್ಟ್‌ಮೆಂಟೇಶನ್/ ಬಯೋಮೆಕಾನಿಕ್ಸ್/ಬಯೋಕೆಮಿಸ್ಟ್ರಿ ಆಫ್ ಮೆಟಬಾಲಿಸಂ ಆ್ಯಂಡ್ ಲಿಂಬ್ ಮೂಮೆಂಟ್ ಕಂಟ್ರೋಲ್ ವಿಷಯ ಕುರಿತು ಅಭ್ಯಾಸ ಮಾಡಿದರೆ ಬಯೋಮೆಡಿಕಲ್ ಎಂಜಿನಿಯರ್ ಆಗಬಹುದು.

ಇದರ ಜತೆಗೆ ಉತ್ತಮ ಸಂವಹನ ಕೌಶಲ, ಅಳತೆ ಮತ್ತು ಮಾಪನಾ ವಿಮರ್ಶಾತ್ಮಕ ಗುಣ, ವೈಜ್ಞಾನಿಕ ಬುದ್ಧಿವಂತಿಕೆ ಅಗತ್ಯ.

ಅವಕಾಶಗಳು

ಬಯೋಮೆಡಿಕಲ್ ಉತ್ಪಾದನಾ ಕಾರ್ಖಾನೆಗಳು ಆರೋಗ್ಯ ಪಾಲನೆ ಮತ್ತು ವೈದ್ಯಕೀಯ ಸೌಲಭ್ಯಗಳ ಘಟಕಗಳು (ಹೆಲ್ತ್‌ಕೇರ್ ಮತ್ತು ಮೆಡಿಕಲ್ ಫೆಸಿಲಿಟೀಸ್), ಕನ್ಸಲ್ಟೆನ್ಸಿಗಳು, ಸರಕಾರಿ ವೈದ್ಯಕೀಯ ಸಂಸ್ಥೆಗಳು, ಸಂಶೋಧನ ಘಟಕಗಳು ಇತ್ಯಾದಿ.

ಕಾಲೇಜುಗಳು

- ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.
- ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ರಾಜೀವ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಜಿಐಟಿ), ಬೆಂಗಳೂರು.
- ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಕೆಎಲ್‌ಇ/ಡಾ.ಎಂ.ಎಸ್. ಶೇಷಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಳಗಾವಿ.

ಬ್ರಾಡ್‌ಕಾಸ್ಟ್ ಎಂಜಿನಿಯರ್

ಉನ್ನತ ಮಟ್ಟದ ಆಡಿಯೋ ಮತ್ತು ವಿಡಿಯೋ ಉಪಕರಣಗಳನ್ನು ಬಳಸಿಕೊಂಡು ವೇದಿಕೆ ಕಾರ್ಯಕ್ರಮಗಳ ಮೂಲಕ ಪ್ರೇಕ್ಷಕರಿಗೆ ಉತ್ತಮ ಧ್ವನಿ ವ್ಯವಸ್ಥೆಯನ್ನು ಕಲ್ಪಿಸಿಕೊಡುವವರು ಬ್ರಾಡ್‌ಕಾಸ್ಟ್ ಎಂಜಿನಿಯರ್‌ಗಳು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ, ರಿಯಾಲಿಟಿ ಶೋಗಳಲ್ಲಿ ಇವರಿಗೆ ಮಾನ್ಯತೆ ಹೆಚ್ಚು.

ಬ್ರಾಡ್‌ಕಾಸ್ಟ್ ಎಂಜಿನಿಯರ್ ಹುದ್ದೆ ಹೊಂದಲು ವಿಜ್ಞಾನ ವಿಷಯ ಸಂಬಂಧಿತ ಪಿಯುಸಿ ಮುಗಿಸಿ, ಜೆಇಇ ಎಂಜಿನಿಯರಿಂಗ್ ಪ್ರವೇಶ

ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಜತೆಗೆ ಬಿ.ಇ/ಬಿ.ಟೆಕ್‌ನಲ್ಲಿ ಬ್ರಾಡ್‌ಕಾಸ್ಟ್ ಎಂಜಿನಿಯರಿಂಗ್ ಮಾಡಿ, ನ್ಯಾಷನಲ್ ನೆಟ್‌ವರ್ಕ್ ಪ್ರವೇಶ ಮತ್ತು ತರಬೇತಿ ಪಡೆದರೆ ಬ್ರಾಡ್‌ಕಾಸ್ಟ್ ಎಂಜಿನಿಯರ್ ಆಗಬಹುದು. ಮತ್ತೊಂದು ಮಾರ್ಗದಲ್ಲಿ ಪಿಯುಸಿ ಬಳಿಕ ಡಿಪ್ಲೊಮಾ ಬ್ರಾಡ್‌ಕಾಸ್ಟ್ ಎಂಜಿನಿಯರಿಂಗ್ ಮಾಡಿ ಐಇಟಿಇ ಮೆಂಬರ್ ಆಗಿ ಪ್ರವೇಶ ಪಡೆದು ನ್ಯಾಷನಲ್ ನೆಟ್‌ವರ್ಕ್‌ನಲ್ಲಿ ತರಬೇತಿ ಪಡೆದು ಕೊಳ್ಳಬೇಕು.

ಇದರ ಜತೆಗೆ ಮೈಕ್ರೋವೇವ್ ತಾಂತ್ರಿಕತೆಯ ಜ್ಞಾನ, ಕಂಪ್ಯೂಟರ್ ಪ್ರೋಗ್ರಾಮ್ ಬಗ್ಗೆ ತಿಳುವಳಿಕೆ, ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಕೌಶಲ, ಉತ್ತಮ ಮತ್ತು ಉನ್ನತ ಗುಣಮಟ್ಟದ ಧ್ವನಿ ಉಪಕರಣಗಳನ್ನು ಬಳಸುವ ಕುಶಲತೆ ಇರಬೇಕು.

ಅವಕಾಶಗಳು

ಆಕಾಶವಾಣಿ, ನ್ಯಾಷನಲ್ ಟೆಲಿವಿಷನ್ ಜಾಲ, ಖಾಸಗಿ ಟಿವಿ ವಾಹಿನಿಗಳು, ಡಿಶ್ ಟಿವಿ ಇತ್ಯಾದಿ.

ಕಾಲೇಜುಗಳು

- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಪಿಇಎಸ್ ಯೂನಿವರ್ಸಿಟಿ ಬೆಂಗಳೂರು.
- ಬ್ರಾಡ್‌ಕಾಸ್ಟ್ ಎಂಜಿನಿಯರಿಂಗ್ ಸೊಸೈಟಿ(ಇಂಡಿಯಾ), ದೆಹಲಿ.
- ಬಿಇಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.

ಮ್ಯಾನುಫ್ಯಾಕ್ಚರಿಂಗ್ ಎಂಜಿನಿಯರ್

ಕಾರ್ಖಾನೆ ಅಥವಾ ಕೈಗಾರಿಕೆಗಳಲ್ಲಿ ಉತ್ಪಾದನೆ ಪ್ರಕ್ರಿಯೆಯನ್ನು ಸುಗಮಗೊಳಿಸಿ, ತಾಂತ್ರಿಕ ವ್ಯವಸ್ಥೆಯನ್ನು ಸುಧಾರಿಸುವವರು ಮ್ಯಾನುಫ್ಯಾಕ್ಚರಿಂಗ್ ಎಂಜಿನಿಯರ್‌ಗಳು. ಇವರು ಉತ್ಪಾದನಾ ಕ್ಷೇತ್ರದ ಅಭಿವೃದ್ಧಿ ಮತ್ತು ಹೊಸ ಉತ್ಪನ್ನಗಳ ತಯಾರಿಕೆಯಲ್ಲಿ ಶ್ರಮಿಸುತ್ತಾರೆ.

ವಿಜ್ಞಾನ ವಿಷಯದಲ್ಲಿ ಪಿಯುಸಿ ಬಳಿಕ ಜೆಇಇ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಮ್ಯಾನುಫ್ಯಾಕ್ಚರಿಂಗ್ ಸೈನ್ಸ್ ವಿಷಯದಲ್ಲಿ ಬಿಇ/ಬಿ.ಟೆಕ್ ಪದವಿ ಪೂರೈಸಿ, ಎಂ.ಇ/ಎಂ.ಟೆಕ್ ಸ್ನಾತಕೋತ್ತರ ಪದವಿ ಪಡೆದು ಮ್ಯಾನುಫ್ಯಾಕ್ಚರಿಂಗ್ ಎಂಜಿನಿಯರ್ ಆಗಬಹುದು. ಅಥವಾ ಪಿಯುಸಿ ಬಳಿಕ ಬಿ.ಟೆಕ್ ಜತೆಗೆ ಮ್ಯಾನುಫ್ಯಾಕ್ಚರಿಂಗ್ ಎಂಜಿನಿಯರ್ ಪಿಜಿ ಟೆಕ್ನಿಕಲ್ ಡಿಪ್ಲೊಮಾ ಮಾಡಿಯೂ ಗುರಿ ಸಾಧಿಸಬಹುದು.

ಉತ್ಪಾದನಾ ವಲಯದ ತಿಳುವಳಿಕೆ, ವಿಶ್ಲೇಷಣಾತ್ಮಕ ಗುಣ, ತಾಂತ್ರಿಕ ಪ್ರಾವೀಣ್ಯ, ಐಟಿ ಕ್ಷೇತ್ರದ ಬಗ್ಗೆ ಜ್ಞಾನ, ಉತ್ತಮ ಸಂವಹನ ಕಲೆ, ನಾಯಕತ್ವ ಪ್ರವೃತ್ತಿ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಮತ್ತು ಜವಾಬ್ದಾರಿಯನ್ನು ಹೊರುವ, ಸಮಸ್ಯೆಯನ್ನು ಪರಿಹರಿಸುವ ಸಾಮರ್ಥ್ಯ ಇದ್ದರೆ ಒಳಿತು.

ಅವಕಾಶಗಳು

ಉತ್ಪಾದನಾ ವಲಯ, ಸಾರ್ವಜನಿಕ ವಲಯ, ಸಂಸ್ಕರಿಸಿದ ಆಹಾರ ಉತ್ಪಾದನಾ ಕಾರ್ಖಾನೆಗಳು, ಆಟೋಮೊಬೈಲ್ ಮತ್ತು ಭಾರೀ ಗಾತ್ರದ ವಾಹನ ತಯಾರಿಕೆ, ಪಾನೀಯ ಘಟಕಗಳು, ಯಂತ್ರಗಳು ಮತ್ತು ಪೂರಕ ವಸ್ತುಗಳ ತಯಾರಿಕಾ ಘಟಕ, ಕ್ರೀಡಾ ಉಪಕರಣ ತಯಾರಿಕೆ, ಎಲೆಕ್ಟ್ರಾನಿಕ್ಸ್ ಉತ್ಪನ್ನ ತಯಾರಿಕಾ ಕಾರ್ಖಾನೆಗಳು, ಕಂಪ್ಯೂಟರ್ ಹಾರ್ಡ್‌ವೇರ್, ಬೋಧನಾ ವಲಯ ಇತ್ಯಾದಿ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ, ಸುರತ್ಕಲ್.
- ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಬೆಂಗಳೂರು.
- ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಅಹಮ್ಮದಾಬಾದ್.

ಮೆರೈನ್ ಎಂಜಿನಿಯರ್

ವಿವಿಧ ಮಾದರಿಯ ನೌಕೆಗಳು, ಹಡಗುಗಳನ್ನು ವೈವಿಧ್ಯಮಯವಾಗಿ ವಿನ್ಯಾಸಗೊಳಿಸಿ, ಆವಶ್ಯಕತೆಗೆ ಅನುಗುಣವಾಗಿ ಬಳಸುವ ತಂತ್ರಗಾರಿಕೆ ಹೊಂದಿರುವವರು ಮೆರೈನ್ (ಸಾಗರಿಕ) ಎಂಜಿನಿಯರ್‌ಗಳು. ಇವರು ದೇಶದ ನೌಕಾಪಡೆಯಲ್ಲಿ, ಅಲ್ಲದೆ ಬಹುರಾಷ್ಟ್ರೀಯ ಕಂಪೆನಿ ಜತೆ ಒಪ್ಪಂದ ಮಾಡಿಕೊಂಡು ದೇಶ–ವಿದೇಶಗಳಲ್ಲಿ ಕಾರ್ಯನಿರ್ವಹಿಸುವುದೂ ಉಂಟು.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ, ಜೆಇಇ ಮೆರೈನ್ ಪ್ರವೇಶ ಪರೀಕ್ಷೆಯನ್ನು ಪೂರೈಸಿ, ನೇವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪೂರ್ಣಗೊಳಿಸಿ ಮೆರೈನ್ ಎಂಜಿನಿಯರ್ ಆಗಬಹುದು. ಅಲ್ಲದೆ ಜೆಇಇ ಬಳಿಕ ಬಿ.ಟೆಕ್/ಬಿಇ ಪೂರೈಸಿ ಮೆರೈನ್ ಎಂಜಿನಿಯರ್ ಆಗಬಹುದು, ಅಥವಾ ಪಿಯುಸಿ (ಸೈನ್ಸ್) ಮುಗಿಸಿದ ಮೇಲೆ ಬಿ.ಎಸ್ಸಿ ಅಭ್ಯಾಸ ಮಾಡಿ ಅನಂತರ ಆಲ್ಟರ್ನೇಟ್ ಟ್ರೈನಿಂಗ್ ಸ್ಕೀಮ್(ಎಟಿಎಸ್) ಮೂಲಕ ವ್ಯಾಸಂಗ ಮಾಡಿ ಜೂನಿಯರ್ ಮೆರೈನ್ ಎಂಜಿನಿಯರ್ ಆಗಬಹುದು. ಡಿಪ್ಲೊಮಾ ಮುಗಿಸಿ, ವರ್ಕ್ ಶಾಪ್ ಟ್ರೈನಿಂಗ್ ಮಾಡಿ ಜೂನಿಯರ್ ಮೆರೈನ್ ಎಂಜಿನಿಯರ್ ಆಗಬಹುದು.

ವಿವಿಧ ಸಮುದ್ರಗಳಿಗೆ ಸಂಬಂಧಿಸಿದಂತೆ ಹವಾಗುಣ, ಸಮುದ್ರಮಟ್ಟ, ಸಮುದ್ರದಡಿಯ ಮಾಹಿತಿ, ನೀರಿನ ಸಾಂದ್ರತೆ ಬಗ್ಗೆ ವಿಶೇಷ ಜ್ಞಾನ; ಸಮುದ್ರ ನೌಕೆಗಳ ಬಗ್ಗೆ ತಿಳುವಳಿಕೆ, ಅನಿಲ ಟ್ಯಾಂಕರ್‌ಗಳು ಮತ್ತು ಸುರಕ್ಷತೆ, ವಿನ್ಯಾಸದ ಬಗ್ಗೆ ಅರಿವು, ವಿನ್ಯಾಸ ಸಂಬಂಧಿ ತಂತ್ರಾಂಶಗಳ ಬಗೆಗೆ ಅರಿವು, ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ, ವೈಜ್ಞಾನಿಕ ವಿಚಾರಗಳ ಬಗೆಗೆ ಆಸಕ್ತಿ, ಗಣಿತ ಮತ್ತು ಭೌತಶಾಸ್ತ್ರದ ಬಗ್ಗೆ ಉತ್ತಮ ಪ್ರಾವೀಣ್ಯ ಸಾಧಿಸುವುದು, ಹೊಸ ತಂತ್ರಜ್ಞಾನ, ಆಲೋಚನೆ, ವಿಷಯಗಳಿಗೆ ತೆರೆದುಕೊಳ್ಳುವ ಗುಣ ಅತ್ಯವಶ್ಯ.

ಅವಕಾಶಗಳು

ನೌಕಾವಲಯ, ಭಾರತೀಯ ನೌಕಾ ಪಡೆ, ಹಡಗು ನಿರ್ಮಾಣ ಕೇಂದ್ರ, ಎಂಜಿನ್ ನಿರ್ಮಾಣ ಕಂಪೆನಿಗಳು, ಹಡಗು ವಿನ್ಯಾಸವಲಯ, ನೌಕಾ ಸಂಶೋಧನಾ ಕೇಂದ್ರ, ಸಂಶೋಧನಾ ವಿದ್ಯಾಲಯಗಳು, ಮೆರೈನ್ ಎಲೆಕ್ಟ್ರಿಕಲ್ಸ್, ನೇವಿಕಾಮ್ ಟೆಕ್ನಾಲಜಿ ಇಂಟರ್ ನ್ಯಾಷನಲ್ ಪ್ರೈ.ಲಿ., ಟಾರ್ಗೆಟ್ ಶಿಪ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿ. ಇತ್ಯಾದಿಗಳಲ್ಲಿ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸುರತ್ಕಲ್.
- ಇನ್‌ಸ್ಟಿಟ್ಯೂಟ್ ಆಫ್ ಏರೋನಾಟಿಕಲ್ ಆ್ಯಂಡ್ ಮೆರೈನ್ ಎಂಜಿನಿಯರಿಂಗ್, ಬೆಂಗಳೂರು.
- ಮಂಗಳೂರು ಮೆರೈನ್ ಕಾಲೇಜ್ ಆಫ್ ಟೆಕ್ನಾಲಜಿ, ಮಂಗಳೂರು.
- ಇಂಡಿಯನ್ ಮೆರೈನ್ ಯೂನಿವರ್ಸಿಟಿ , ಚೆನ್ನೈ, ತಮಿಳುನಾಡು.
- ಇನ್‌ಸ್ಟಿಟ್ಯೂಟ್ ಆಫ್ ಮೆರೈನ್ ಸ್ಟಡೀಸ್, ವಾಸ್ಕೋ–ಡ–ಗಾಮಾ, ಗೋವಾ.



ರೋಬೋಟಿಕ್ ಎಂಜಿನಿಯರ್

ಮಾನವನ ಸಮಯ, ಶ್ರಮ ಕಡಿಮೆ ಮಾಡುವ ವಸ್ತುಗಳೇ ಯಂತ್ರಗಳು. ಇದರಿಂದ ಮಾನವನ ಜೀವನಕ್ಕೆ ವೇಗ ಸಿಕ್ಕಿದೆ. ವಿಜ್ಞಾನದ ಮತ್ತಷ್ಟು ಸಂಶೋಧನೆಯಿಂದ ರೋಬೋಟ್‌ಗಳನ್ನು ಆವಿಷ್ಕರಿಸಲಾಗಿದೆ. ಇಂಥ ರೋಬೋಟ್‌ಗಳನ್ನು ಸೃಷ್ಟಿಸುವವರೇ ರೋಬೋಟಿಕ್ ಎಂಜಿನಿಯರ್‌ಗಳು. ರೋಬೋಟ್‌ಗಳನ್ನು ವಿನ್ಯಾಸಗೊಳಿಸಿ, ಅವುಗಳ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಕೆಲಸ ಇವರದು.

ವಿಜ್ಞಾನ ವಿಷಯದಲ್ಲಿ ಪಿಯುಸಿ ವಿದ್ಯಾಭ್ಯಾಸದ ಬಳಿಕ ಜಾಯಿಂಟ್ ಎಕ್ಸಲೆನ್ಸ್ ಎಕ್ಸಾಮಿನೇಷನ್ (ಜೆಇಇ) ಜತೆಗೆ ಪದವಿಯಲ್ಲಿ ರೋಬೋಟ್ ಎಂಜಿನಿಯರಿಂಗ್‌ನಲ್ಲಿ ಬಿಇ, ಬಿ.ಟೆಕ್ ಅಭ್ಯಾಸ ಮಾಡಿ, ಬಳಿಕ ಎಂಇ, ಪಿಎಚ್.ಡಿ. ಅಥವಾ ಸ್ನಾತಕೋತ್ತರ ಡಿಪ್ಲೊಮಾ (ಪಿಜಿ) ಪೂರೈಸಿದರೆ ರೋಬೋಟಿಕ್ ಎಂಜಿನಿಯರ್ ಆಗಬಹುದು.

ರೋಬೋಟ್ ಮಾದರಿಗಳು, ಅವುಗಳ ಡಿಸೈನ್ ಮತ್ತು ಪ್ರೋಗ್ರಾಮ್‌ಗಳ ಅಧ್ಯಯನ, ರೋಬೋಟ್ ಹಳೇ ಮಾದರಿಗಳನ್ನು ಉನ್ನತೀಕರಿಸುವ ಕೌಶಲ, ಹೊಸ ತಂತ್ರಾಂಶ, ಡಿಸೈನ್‌ಗಳನ್ನು ರಚಿಸುವ ಕುಶಲತೆ, ನ್ಯಾನೋ ತಂತ್ರಜ್ಞಾನ, ರೋಬೋಟ್ ಮೋಶನ್ ಪ್ಲಾನಿಂಗ್, ಸಿಗ್ನಲ್‌ಗಳ ಜೋಡಣೆ, ಬಳಕೆ ಬಗೆಗೆ ಜ್ಞಾನ. ಉತ್ತಮ ಮೆಕ್ಯಾನಿಕಲ್ ಸ್ಕಿಲ್, ಸಮಸ್ಯೆ ನಿವಾರಿಸುವ ಕೌಶಲ ಅಗತ್ಯ.

ಅವಕಾಶಗಳು

ಕೃಷಿ ಯಂತ್ರಗಳ ಉತ್ಪಾದಕ ವಲಯ, ಮೈನಿಂಗ್ (ಗಣಿ ಸಂಬಂಧಿ) ಕಾರ್ಖಾನೆಗಳು, ಅಣು ವಿದ್ಯುತ್ ಸ್ಥಾವರ (ನ್ಯೂಕ್ಲಿಯರ್ ಪವರ್ ಪ್ಲಾಂಟ್), ಮೆಕ್ಯಾನಿಕಲ್/ಎಲೆಕ್ಟ್ರಿಕಲ್ ಸಂಶೋಧನಾ ವಲಯ, ಸಮುದ್ರ ಪರಿಶೋಧನ ಘಟಕ, ಬಾಹ್ಯಾಕಾಶ ಸಂಶೋಧನ ಸಂಸ್ಥೆ, ಬಯೋಮೆಡಿಕಲ್ ಎಕ್ವಿಪ್‌ಮೆಂಟ್ ಉತ್ಪಾದಕ ವಲಯ, ಗೇಮಿಂಗ್ ಇಂಡಸ್ಟ್ರಿ, ಭಾರತ್ ಅಟೋಮಿಕ್ ಸಂಶೋಧನಾ ಕೇಂದ್ರ, ಟಾಟಾ ಅಟೋಮೋಟೀವ್ಸ್‌ಗಳಲ್ಲಿ ಅವಕಾಶ.

ಕಾಲೇಜುಗಳು

- ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಬೆಂಗಳೂರು.
- ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಜೆಎಸ್ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಷನ್, ಬೆಂಗಳೂರು.
- ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್, ಮಂಗಳೂರು.
- ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.
- ಬಿ.ವಿ. ಭೂಮರೆಡ್ಡಿ ಕಾಲೇಜ್ ಆಫ್ ಎಂಜಿನಿಯರಿಂಗ್. ಹುಬ್ಬಳ್ಳಿ.

ಕಂಪ್ಯೂಟರ್ ನೆಟ್‌ವರ್ಕ್ ಎಂಜಿನಿಯರ್

ಕಂಪೆನಿಗಳಲ್ಲಿ ಕಂಪ್ಯೂಟರ್‌ಗಳಿಗೆ ಅಗತ್ಯ ಸಾಫ್ಟ್‌ವೇರ್ ಅಳವಡಿಸಿ ಮತ್ತು ಒಳ ಸಂಪರ್ಕ ವ್ಯವಸ್ಥೆ ಮಾಡಿ, ನೌಕರರ ಗಣಕ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿ, ಕೆಲಸ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವವರು ಕಂಪ್ಯೂಟರ್ ನೆಟ್‌ವರ್ಕ್ ಎಂಜಿನಿಯರ್‌ಗಳು. ಇಂಟರ್ನೆಟ್, ಸರ್ವರ್‌ಗಳ ನಿರ್ವಹಣೆಯೂ ಇವರದೇ ಹೊಣೆ.

ನೆಟ್‌ವರ್ಕ್ ಎಂಜಿನಿಯರ್ ಆಗಲು ಕಂಪ್ಯೂಟರ್ ಸಂಬಂಧಿತ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಜೆಇಇ ಪ್ರವೇಶ ಪರೀಕ್ಷೆ ಪೂರೈಸಿ, ಬಿಇ, ಬಿ.ಟೆಕ್‌ನಲ್ಲಿ ನೆಟ್‌ವರ್ಕ್ ಎಂಜಿನಿಯರಿಂಗ್ ಅಭ್ಯಸಿಸಿ, ಜತೆಗೆ ಸಿಸಿಎನ್ಎ/ಎಂಎಸ್ಸಿಎ/ಎಂಎಸ್ಸಿಇ/ಎಂಎಸ್ಸಿಪಿಗಳಲ್ಲಿ ಯಾವುದಾದರೊಂದು ಸರ್ಟಿಫಿಕೇಶನ್ ಕೋರ್ಸ್ ಮಾಡಿ, ಕಂಪೆನಿಗಳಲ್ಲಿ ಇಂಟರ್ನ್‌ಶಿಪ್ ಮತ್ತು ವೆಬ್‌ಟ್ರೈನಿಂಗ್ ಮಾಡಿದರೆ ನೆಟ್‌ವರ್ಕ್ ಎಂಜಿನಿಯರ್ ಆಗಬಹುದು. ಮತ್ತೊಂದು ಮಾರ್ಗದಲ್ಲಿ ಪದವಿವರೆಗೆ ಕಂಪ್ಯೂಟರ್ ಸಂಬಂಧಿತ ವಿಷಯದಲ್ಲಿ ಅಭ್ಯಾಸ ಮಾಡಿ, ನೆಟ್‌ವರ್ಕ್ ಸಂಬಂಧಿತ ಸರ್ಟಿಫಿಕೇಷನ್ ಕೋರ್ಸ್, ಇಂಟರ್ನ್‌ಶಿಪ್, ವೆಬ್ ಟ್ರೈನಿಂಗ್ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಸರ್ವರ್ ಕುರಿತ ವಿಶೇಷ ಜ್ಞಾನ, ಅಂತರ್ಜಾಲ ಸಂಬಂಧಿ ತೊಂದರೆಗಳ ಬಗ್ಗೆ ಅರಿವು, ಉತ್ತಮ ಸಂವಹನ ಮತ್ತು ವಿಶ್ಲೇಷಣ ಕೌಶಲ, ಗ್ರಾಹಕರ ಸೇವಾ ಮನೋಭಾವ, ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಮತ್ತು ಸಮಸ್ಯೆಗಳನ್ನು ನಿವಾರಿಸುವ ಸಾಮರ್ಥ್ಯ, ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಬದಲಾವಣೆ ಗಮನಿಸುವ ಮತ್ತು ಹೊಸ ತಂತ್ರಾಂಶಗಳನ್ನು ಅಳವಡಿಸಿಕೊಳ್ಳುವ ಗುಣ ಅಗತ್ಯ.

ಅವಕಾಶಗಳು

ಮಾಹಿತಿ ತಂತ್ರಜ್ಞಾನ ವಲಯ, ಬ್ಯಾಂಕ್‌ಗಳು ಮತ್ತು ಫೈನಾನ್ಶಿಯಲ್ ಸಂಸ್ಥೆಗಳು, ಆನ್ಲೈನ್ ಸ್ಟೋರ್‌ಗಳು, ಎಜ್ಯುಕೇಷನಲ್ ಪೋರ್ಟಲ್‌ಗಳು, ಅಂತರ್ಜಾಲ ಸಂಬಂಧಿತ ವ್ಯಾಪಾರ ಸಂಸ್ಥೆಗಳು, ವಿದ್ಯಾಸಂಸ್ಥೆಗಳು, ಎಲ್ಲ ಮಾದರಿಯ ಕಂಪೆನಿಗಳು, ಸರಕಾರಿ ಐಟಿ ವಲಯ ಇತ್ಯಾದಿ.

ಕಾಲೇಜುಗಳು

- ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.
- ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.
- ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್, ಹೊಸಪೇಟೆ ರಸ್ತೆ, ಬಳ್ಳಾರಿ.
- ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಎಂಜಿನಿಯರಿಂಗ್, ಮಂಗಳೂರು.

ಎಥಿಕಲ್ ಹ್ಯಾಕರ್

ಗಣಕ ವ್ಯವಸ್ಥೆಯಲ್ಲಿ 'ವೈರಸ್'ಗಳನ್ನು ನಿಷ್ಕ್ರಿಯಗೊಳಿಸುವ, ಸೈಬರ್ ಅಪರಾಧ, ಇಂಟರ್ನೆಟ್ ಹ್ಯಾಕಿಂಗ್‌ಗಳನ್ನು ತಡೆದು ಕಂಪ್ಯೂಟರ್‌ಗಳಿಗೆ ರಕ್ಷಣೆ ಒದಗಿಸುವವರೇ ಎಥಿಕಲ್ ಹ್ಯಾಕರ್‌ಗಳು. ಆ್ಯಂಟಿವೈರಸ್‌ಗಳನ್ನು ತಯಾರಿಸಿ ಕೊಡುವ, ಸಾಫ್ಟ್‌ವೇರ್ ಸಂಬಂಧಿತ ಸಲಹೆಗಳನ್ನು ನೀಡುವ, ಗಣಕ ಸಂಬಂಧಿತ ಭಾಷೆಗಳನ್ನು ಬಲ್ಲ ಒಟ್ಟಿನಲ್ಲಿ ಗಣಕ, ಅಂತರ್ಜಾಲದ ರಕ್ಷಣೆ ಮಾಡುವವರು ಇವರು.

ಪಿಯುಸಿಯಲ್ಲಿ ಗಣಕ ಸಂಬಂಧಿತ ವಿಷಯ ವ್ಯಾಸಂಗ ಮಾಡಿ, ಕಂಪ್ಯೂಟರ್ ಸೈನ್ಸ್ ಬಿಇ/ಬಿಟೆಕ್ ಅಧ್ಯಯನ ಮಾಡಿ, ಜತೆಗೆ ಸಿಐಎಸ್ಎಸ್ಪಿ/ಟಿಐಸಿಎಸ್ಎ ಸರ್ಟಿಫೈಡ್ ಕೋರ್ಸ್ ಮಾಡಿದರೆ ಎಥಿಕಲ್ ಹ್ಯಾಕರ್ ಅಗಬಹುದು. ಅಥವಾ ಕಂಪ್ಯೂಟರ್ ಸೈನ್ಸ್ ಬಿಇ/ಬಿ.ಟೆಕ್/ಎಂ.ಟೆಕ್ ಜತೆಗೆ ಗ್ಯಾಟ್ ಅಥವಾ ಇನ್ಫರ್‌ಮೇಷನ್ ಸೆಕ್ಯೂರಿಟಿ, ಸೈಬರ್ ಸೆಕ್ಯೂರಿಟಿ, ಸೈಬರ್ ಪಾರೆನ್ಸಿಸ್ ಕೋರ್ಸ್‌ಗಳನ್ನು ಮಾಡಿ ಗುರಿ ಸಾಧಿಸಬಹುದು.

ಇದರ ಜತೆಗೆ ಗಣಕ ಸಂಬಂಧಿತ ಹೊಸ ತಂತ್ರಜ್ಞಾನ ಬಗ್ಗೆ ನಿಗಾ, ಕಂಪ್ಯೂಟರ್ ಆಪರೇಟಿಂಗ್ ಸಿಸ್ಟಮ್, ಟಿಸಿಪಿ, ಐಪಿ ಪ್ರೋಟೋಕಾಲ್, ಸಿ++ ಲ್ಯಾಂಗ್ವೇಜ್ ಬಳಕೆ, ಅಪ್ಲಿಕೇಷನ್ ಬಳಕೆ, ಎಸ್ಎಂಟಿಪಿ, ಐಸಿಎಂಪಿ, ಎಚ್‌ಟಿಟಿಪಿ ಕಮಾಂಡ್‌ಗಳ ಬಗ್ಗೆ ವಿಶೇಷ ಜ್ಞಾನ, ವಿಶ್ಲೇಷಣಾ ಗುಣ, ಮಾಹಿತಿ ಸಂಗ್ರಹ ಮತ್ತು ಸಂರಕ್ಷಣಾ ಕಲೆ, ವೈರಸ್‌ಗಳು, ಆ್ಯಂಟಿ ವೈರಸ್, ಸೈಬರ್ ಅಪರಾಧಗಳ ಬಗ್ಗೆ ತಿಳುವಳಿಕೆ, ಸವಾಲು ಸ್ವೀಕರಿಸಿ ಸಮಸ್ಯೆ ನಿವಾರಿಸುವ ಸಾಮರ್ಥ್ಯ, ಕಾರ್ಯಕ್ಷೇತ್ರದಲ್ಲಿ ಸೃಜನಶೀಲತೆ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಕ್ಷಮತೆ ಅಗತ್ಯ.

ಅವಕಾಶಗಳು

ಐಟಿ ಮತ್ತು ಐಟಿಇಎಸ್ ಕಂಪೆನಿಗಳು, ಅಂತರ್ಜಾಲ ಸಂಬಂಧಿತ ಬಿಸಿನೆಸ್ ಮತ್ತು ಆರ್ಗನೈಸೇಷನ್, ಫೈನಾನ್ಶಿಯಲ್ ಇನ್‌ಸ್ಟಿಟ್ಯೂಷನ್, ಟೆಲಿಕಮ್ಯುನಿಕೇಷನ್ ಸೆಕ್ಟರ್, ವಾಯುಯಾನ ಉದ್ಯಮ ಘಟಕಗಳು (ಏವಿಯೇಶನ್ ಇಂಡಸ್ಟ್ರಿಗಳು), ಅಂತಾರಾಷ್ಟ್ರೀಯ ಮಟ್ಟದ ಹೋಟೆಲ್‌ಗಳು, ರಕ್ಷಣಾ ವಿಭಾಗದ ಘಟಕಗಳು, ಸೆಕ್ಯೂರಿಟಿ (ಭದ್ರತಾ) ಏಜೆನ್ಸೀಸ್, ಎಮಿಗ್ರೇಷನ್ ಸರ್ವೀಸಸ್, ಸರಕಾರಿ ವಲಯ.

ಕಾಲೇಜುಗಳು

- ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಅಕ್ಷಯ ಗ್ರೂಪ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ದಯಾನಂದ ಸಾಗರ್ ಯೂನಿವರ್ಸಿಟಿ, ಬೆಂಗಳೂರು.
- ಯೇನಪೋಯ ಯೂನಿವರ್ಸಿಟಿ, ಬೆಂಗಳೂರು.

ಸಿಸ್ಟಮ್ ಅನಾಲಿಸ್ಟ್

ಕಂಪ್ಯೂಟರ್ ತಯಾರಿಕೆ, ವಿನ್ಯಾಸ, ತಂತ್ರಾಂಶಗಳ ಅಭಿವೃದ್ಧಿ ಕಾರ್ಯದಲ್ಲಿ ಸಲಹೆ, ಸೂಚನೆ ನೀಡುವ, ಆಪರೇಟಿಂಗ್ ಸಿಸ್ಟಮ್‌ಗಳ ಕೋಡ್‌ಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ನಿರ್ವಹಿಸುವವರು ಸಿಸ್ಟಮ್ ಅನಾಲಿಸ್ಟ್‌ಗಳು. ಇವರು ಯಾವ ಕ್ಷೇತ್ರಕ್ಕೆ ಎಂಥ ಗಣಕ ತಯಾರಿಸಿದರೆ ಒಳಿತು ಎಂಬುದನ್ನು ನಿರ್ಧರಿಸಿ ಸಲಹೆಗಳನ್ನು ನೀಡುತ್ತಾರೆ.

ಗಣಕ ಕುರಿತ ವಿಷಯ ಸಂಬಂಧಿತ ಪಿಯುಸಿ ಓದಿನ ಬಳಿಕ, ಬಿಇ/ಬಿ.ಟೆಕ್/ಬಿಸಿಎ ಪದವಿಯನ್ನು ಅಭ್ಯಾಸ ಮಾಡಿ, ಸ್ನಾತಕೋತ್ತರ ಪದವಿಯಲ್ಲಿ ಎಂಇ/ಎಂ.ಟೆಕ್/ಎಂಸಿಎ ಅಥವಾ ಮ್ಯಾನೇಜ್‌ಮೆಂಟ್ ಆಫ್ ಇನ್‌ಫರ್‌ಮೇಷನ್ ಸಿಸ್ಟಮ್ ಕೋರ್ಸನ್ನು ಪೂರೈಸಿ 'ಸಿಸ್ಟಮ್ ಅನಾಲಿಸ್ಟ್' ಆಗಬಹುದು.

ಇದರ ಜತೆಗೆ ಉತ್ತಮ ಸಂವಹನ ಗುಣ, ವಿಶ್ಲೇಷಣಾ ಕೌಶಲ, ಸೃಜನಾತ್ಮಕ ಶಕ್ತಿ, ಕಂಪ್ಯೂಟರ್ ಲಾಂಗ್ವೇಜ್‌ಗಳು, ಕೋಡ್ ಮತ್ತು ಕಮಾಂಡ್‌ಗಳ ಬಗ್ಗೆ ಜ್ಞಾನ, ಕಸ್ಟಮೈಸ್ ತಂತ್ರಗಾರಿಕೆ, ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಮತ್ತು ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ ಅಗತ್ಯ.

ಅವಕಾಶಗಳು

ಮಾಹಿತಿ ತಂತ್ರಜ್ಞಾನ ವಲಯ, ಸಾಫ್ಟ್‌ವೇರ್ ಕನ್ಸಲ್ಟೆನ್ಸಿಗಳು, ಇಂಟರ್ನೆಟ್ ಬಿಸಿನೆಸ್, ಬಿಸಿನೆಸ್ ಸಂಸ್ಥೆಗಳು, ಬ್ಯಾಂಕ್ ಮತ್ತು ಫೈನಾನ್ಶಿಯಲ್ ಇನ್‌ಸ್ಟಿಟ್ಯೂಟ್‌ಗಳು, ಕಂಪ್ಯೂಟರ್ ಶಿಕ್ಷಣ/ಕಲಿಕೆ ಸಂಸ್ಥೆಗಳು, ಸರಕಾರಿ ಕ್ಷೇತ್ರ, ಉತ್ಪಾದನಾ ವಲಯ, ಸ್ವಯಂ ಉದ್ಯೋಗ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿ, ಬೆಂಗಳೂರು.
- ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್, ಬೆಂಗಳೂರು.
- ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಪಿಇಎಸ್ ಯೂನಿವರ್ಸಿಟಿ, ಬೆಂಗಳೂರು/ದಯಾನಂದ್ ಸಾಗರ್ ಯೂನಿವರ್ಸಿಟಿ, ಬೆಂಗಳೂರು.
- ಎಂಐಟಿ ಸ್ಕೂಲ್ ಆಫ್ ಎಂಜಿನಿಯರಿಂಗ್, ಪುಣೆ.

ಬಯೋಕೆಮಿಸ್ಟ್

ಜೀವರಾಸಾಯನಿಕ ಕ್ರಿಯೆಯಲ್ಲಿ ಕೆಮಿಕಲ್ ಕಾಂಬಿನೇಷನ್‌ನಿಂದ ಜೀವಿಗಳ ಮೇಲಾಗುವ ಪರಿಣಾಮ, ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಸಂಶೋಧನೆ ನಡೆಸುತ್ತಾ ಪರಿಹಾರೋಪಾಯಗಳನ್ನು ಕಂಡುಹಿಡಿಯುವವರು ಬಯೋಕೆಮಿಸ್ಟ್‌ಗಳು. ಇವರು ಪ್ರೊಟೀನ್, ಕಾರ್ಬೋಹೈಡ್ರೇಟ್, ಕೊಬ್ಬು ಇತ್ಯಾದಿ ಅಣುಗಳ ರಚನೆ ಕುರಿತು ಸಂಶೋಧನೆ ನಡೆಸುತ್ತಾರೆ.

ಪಿಯುಸಿ ಸೈನ್ಸ್ ಓದಿನ ಬಳಿಕ ಬಯೋಕೆಮಿಸ್ಟ್ರಿಯಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ. ಮಾಡಿ ಬಯೋಕೆಮಿಸ್ಟ್ ಆಗಬಹುದು. ಅಥವಾ ಪಿಯುಸಿ ಬಳಿಕ ಐಐಟಿ ಜೆಇಇ ಆಯ್ಕೆ ಪರೀಕ್ಷೆ ಮುಗಿಸಿ ಬಯೋಕೆಮಿಸ್ಟ್ರಿ ಕೋರ್ಸ್ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಸಂಶೋಧನಾ ಜ್ಞಾನ, ಕೆಮಿಕಲ್ ಬಗ್ಗೆ ತಿಳುವಳಿಕೆ, ಪರಿಸರ ಮತ್ತು ಜೀವಶಾಸ್ತ್ರದ ಬಗ್ಗೆ ಚೆನ್ನಾದ ಅರಿವು ಮತ್ತು ನಿಗಾ, ಸಂಶೋಧನೆಯಲ್ಲಿ ಸಹನೆ, ನಿರಂತರ ಅಧ್ಯಯನ, ಸಂಶೋಧನಾ ಉಪಕರಣಗಳ ಬಗ್ಗೆ ತಿಳುವಳಿಕೆ, ಗಣಕ ಸಂಬಂಧಿತ ಅರಿವು, ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಮತ್ತು ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ ಇದ್ದರೆ ಒಳಿತು.

ಅವಕಾಶಗಳು

ವೈದ್ಯಕೀಯ ಸಂಶೋಧನ ಸಂಸ್ಥೆಗಳು, ಫಾರ್ಮಸ್ಯೂಟಿಕಲ್ (ಔಷಧೀಯ ಸಂಶೋಧನ ಸಂಸ್ಥೆ) ಇನ್‌ಸ್ಟಿಟ್ಯೂಟ್ ಇನ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆಫ್ ಡ್ರಗ್ಸ್, ಕೃಷಿ ಸಂಶೋಧನ ಸಂಸ್ಥೆಗಳು, ವೈಜ್ಞಾನಿಕ ಸಂಶೋಧನ ಸಂಸ್ಥೆಗಳು. ಪರಿಸರ ರಕ್ಷಣಾ ಸಂಘಟನೆಗಳು, ಮಾಲಿನ್ಯ ನಿಯಂತ್ರಣ ಮಂಡಲಿ, ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳಲ್ಲಿ ಅವಕಾಶಗಳು.

ಕಾಲೇಜುಗಳು

- ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಬೆಂಗಳೂರು.
- ದಯಾನಂದ ಸಾಗರ್ ಯೂನಿವರ್ಸಿಟಿ ಕಾಲೇಜು, ಹೊಸೂರು ರಸ್ತೆ, ಬೆಂಗಳೂರು.
- ಮೈಸೂರು ವಿ.ವಿ. ಕಾಲೇಜು, ಮಾನಸ ಗಂಗೋತ್ರಿ, ಮೈಸೂರು.
- ಜೆಎಸ್‌ಎಸ್ ಕಾಲೇಜ್ ಆಫ್ ಆರ್ಟ್ಸ್, ಕಾಮರ್ಸ್ ಆ್ಯಂಡ್ ಸೈನ್ಸ್, ಮೈಸೂರು.
- ಬೆಂಗಳೂರು ಯೂನಿವರ್ಸಿಟಿ, ಬೆಂಗಳೂರು.

ಬಯೋಟೆಕ್ನಾಲಜಿಸ್ಟ್

ಜೈವಿಕ ತಂತ್ರಜ್ಞಾನ ಬಳಸಿಕೊಂಡು ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುತ್ತಾ ಮಾನವನ ಆರೋಗ್ಯಕ್ಕೆ ಅನುಕೂಲವಾಗುವ ಅಗತ್ಯ ಔಷಧೀಯ ವಸ್ತುಗಳು ಮತ್ತು ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸಿಕೊಡುವವರು ಬಯೋಟೆಕ್ನಾಲಜಿಸ್ಟ್ (ಜೈವಿಕ ತಂತ್ರಜ್ಞರು)ಗಳು.

ಜೈವಿಕ ತಂತ್ರಜ್ಞಾನಿಗಳಾಗಲು ವಿಜ್ಞಾನ ವಿಷಯದಲ್ಲಿ ಪಿಯುಸಿ ಪೂರೈಸಿ, ಪದವಿಯಲ್ಲಿ ಬಯೋಕೆಮಿಸ್ಟ್ರಿ/ಬಾಟನಿ ಜುವಾಲಜಿ/ಜೆನೆಟಿಕ್ ಸೈನ್ಸ್ (ತಳಿ ವಿಜ್ಞಾನ) ವಿಷಯ ಓದಿ, ಜತೆಗೆ ಸಿಇಇಬಿ/ಐಎಆರ್‌ಐ ಪ್ರವೇಶ ಪರೀಕ್ಷೆ ತೇರ್ಗಡೆ ಹೊಂದಬೇಕು. ಬಳಿಕ ಸ್ನಾತಕೋತ್ತರ ಪದವಿಯಲ್ಲಿ ಬಯೋಟೆಕ್ನಾಲಜಿ ಅಭ್ಯಸಿಸಿದರೆ ಬಯೋಟೆಕ್ನಾಲಜಿಸ್ಟ್ ಆಗಬಹುದು. ಐಐಟಿ, ಜೆಇಇ ಪ್ರವೇಶ ಪರೀಕ್ಷೆ ಮುಗಿಸಿ ಪದವಿಯಲ್ಲಿ ಬಯೋಟೆಕ್ನಾಲಜಿ ಪೂರೈಸಿದರೂ ಬಯೋಟೆಕ್ನಾಲಜಿಸ್ಟ್ ಆಗಬಹುದು. ಫಿಸಿಕಲ್/ಲೈಫ್ ಸೈನ್ಸ್‌ನಲ್ಲಿ ಪದವಿ ಮಾಡಿ, ಸಿಇಇಬಿ/ಐಎಆರ್‌ಐ ಪ್ರವೇಶ ಪರೀಕ್ಷೆ ತೇರ್ಗಡೆ ಹೊಂದಿ, ಬಯೋಟೆಕ್ನಾಲಜಿ ಓದಿಯೂ ಗುರಿ ಸಾಧಿಸಬಹುದು. ಪದವಿಯಲ್ಲಿ ಬಿ.ಫಾರ್ಮಾ, ಸ್ನಾತಕೋತ್ತರ ಪದವಿಯಲ್ಲಿ ಬಯೋಟೆಕ್ನಾಲಜಿ ಪೂರೈಸಿ ಜೈವಿಕ ತಂತ್ರಜ್ಞಾನಿಯಾಗಬಹುದು.

ಇದರೊಂದಿಗೆ ಜೈವಿಕ ವಸ್ತುಗಳ ಬಳಕೆ, ಕ್ಷೇತ್ರದ ಮೇಲೆ ಉತ್ತಮ ಪ್ರಾವೀಣ್ಯತೆ, ರಾಸಾಯನಿಕ ವಸ್ತುಗಳ ಪರಿಣಾಮ ಮತ್ತು ಪರಿಮಾಣ ಬಗೆಗೆ ತಿಳುವಳಿಕೆ, ಜೈವಿಕ ವಸ್ತುಗಳ ಸಂಗ್ರಹ, ಸಂರಕ್ಷಣೆ ಕುರಿತ ಅರಿವು, ನಿರಂತರ ಕಾರ್ಯನಿರ್ವಹಿಸುವ ಕ್ಷಮತೆ, ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ ಮತ್ತು ಜ್ಞಾನ ಇರಬೇಕು.

ಅವಕಾಶಗಳು

ಸಂಶೋಧನೆ ಮತ್ತು ಅಭಿವೃದ್ಧಿ ವಲಯ, ಜೈವಿಕ ತಂತ್ರಜ್ಞಾನೀಯ ಪ್ರಯೋಗಾಲಯಗಳು, ಸಂಶೋಧನ ಸಂಸ್ಥೆಗಳು, ಕೇಂದ್ರಗಳು ಉತ್ಪಾದನಾ ವಿಭಾಗಗಳು, ಬಯೋ-ಟೆಕ್ ಮಾರುಕಟ್ಟೆ ಉತ್ಪಾದನಾ ಕಾರ್ಖಾನೆಗಳು, ಆಹಾರ ಸಂಸ್ಕರಣ ಘಟಕಗಳು, ಸರಕಾರಿ ಪ್ರಯೋಗಾಲಯಗಳು,

ಮೆರೈನ್ ಬಯೋಟೆಕ್, ಬಯೋ ಮೆಡಿಸಿನ್, ಬಯೋಮೆಡಿಕಲ್ ಎಂಜಿನಿಯರಿಂಗ್, ಕೃಷಿ ಮತ್ತು ಪರಿಸರ ಜೈವಿಕ ತಂತ್ರಜ್ಞಾನದ ವಿಭಾಗಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಎಚ್.ಎಸ್.ಆರ್. ಲೇಔಟ್, ಬೆಂಗಳೂರು.
- ಮೈಸೂರು ವಿವಿ ಕಾಲೇಜು, ಮೈಸೂರು.
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಎಂ.ಎಸ್.ರಾಮಯ್ಯ ಕಾಲೇಜ್ ಆಫ್ ಆರ್ಟ್ಸ್, ಸೈನ್ಸ್ ಆ್ಯಂಡ್ ಕಾಮರ್ಸ್, ಬೆಂಗಳೂರು.
- ಆಳ್ವಾಸ್ ಕಾಲೇಜು, ಮೂಡಬಿದಿರೆ, ದಕ್ಷಿಣಕನ್ನಡ.

ಬ್ರೂವರ್

ಬಿಯರ್, ವೈನ್, ಜಿನ್ ಮಾದರಿಯ ಮತ್ತೇರಿಸುವ ಪಾನೀಯಗಳನ್ನು ಯಾವ ಯಾವ ಪದಾರ್ಥಗಳನ್ನು ಹಾಕಿ, ಎಷ್ಟು ದಿನಗಳವರೆಗೆ ಸಂರಕ್ಷಿಸಿ ಎಷ್ಟು ದಿನಗಳ ಅನಂತರ ಶೋಧಿಸಿ ಬಳಸುವಂತೆ ಮಾಡಬಹುದು ಎಂಬುದರ ಕುರಿತು ಸಂಶೋಧನೆಗಳನ್ನು ನಡೆಸುವವರು ಬ್ರೂವರ್‌ಗಳು. ಹೊಸ ಮಾದರಿಯ ಪಾನೀಯಗಳನ್ನು ಸಂಶೋಧನೆ ನಡೆಸಿ ಮಾರುಕಟ್ಟೆಗೆ ಪರಿಚಯಿಸುವ ಕೆಲಸವೂ ಇವರದೇ.

ಪಿಯುಸಿಯಲ್ಲಿ ವಿಜ್ಞಾನ ವಿಷಯವನ್ನು ಅಧ್ಯಯನ ಮಾಡಿ, ಬಳಿಕ ರಸಾಯನ ಶಾಸ್ತ್ರ, ಜೀವಶಾಸ್ತ್ರ ಪದವಿಯನ್ನು ಪೂರೈಸಿ, ಸ್ನಾತಕೋತ್ತರ ಪದವಿಯಲ್ಲಿ ಮೈಕ್ರೋ ಬಯಾಲಜಿ ಅಧ್ಯಯನ ಮಾಡಿ ಮದ್ಯ ತಯಾರಿಕೆ ತರಬೇತಿ ಪಡೆದರೆ ಬ್ರೂವರ್ ಅಥವಾ ಮದ್ಯ ತಯಾರಕರಾಗಬಹುದು. (ಬ್ರೂವರಿಂಗ್ ಕೋರ್ಸ್‌ಗಳು ಮೂರು ದಿನದಿಂದ, 10 ತಿಂಗಳವರೆಗೂ ಇವೆ. ಭಾರತದಲ್ಲಿ ಇಂಥ ಕೋರ್ಸ್‌ಗಳ ಕಾಲೇಜುಗಳಿಲ್ಲ).

ಇದರ ಜತೆಗೆ ಮದ್ಯತಯಾರಿಕಾ ಹಂತಗಳ ಬಗೆಗಿನ ಜ್ಞಾನ, ಮದ್ಯತಯಾರಿಕಾ ಕಚ್ಚಾ ವಸ್ತುಗಳ ಗುಣಮಟ್ಟ ಹಾಗೂ ಪ್ರಮಾಣದ ಬಗ್ಗೆ ನಿಗಾ, ಆಹಾರ ವಸ್ತುಗಳ ಜತೆ ಅವುಗಳ ಬಳಕೆ, ಪರಿಣಾಮ, ಉತ್ತಮ ರಸನಾ ಶಕ್ತಿ (ರುಚಿ ನೋಡುವ ಸಾಮರ್ಥ್ಯ), ಫ್ಲೇವರ್ ಬಳಕೆಯ ಅರಿವು, ಉತ್ತಮ

ಸಂಘಟನಾ ಶಕ್ತಿ, ಸಮೂಹದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ಸೃಜನಾತ್ಮಕತೆ, ಶುಚಿತ್ವ ಪಾಲನೆ, ಸಮಸ್ಯೆಗಳನ್ನು ಎದುರಿಸುವ, ಜವಾಬ್ದಾರಿ ಹೊರುವ ನಾಯಕತ್ವ ಗುಣ ಅವಶ್ಯ.

ಅವಕಾಶಗಳು

ಪಾನೀಯ ಘಟಕಗಳು, ರೆಸ್ಟೋರೆಂಟ್‌ಗಳು, ಪಾನೀಯ ನಿರ್ವಹಣಾ ಘಟಕಗಳು, ಡಿಸ್ಟಿಲರಿಗಳು (ಭಟ್ಟಿ ಕೇಂದ್ರಗಳು).

ಕಾಲೇಜುಗಳು (ಮೈಕ್ರೋ ಬಯಾಲಜಿ ಮಾತ್ರ)

- ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಬೆಂಗಳೂರು.
- ಕ್ರಾಫ್ಟ್ ಬಿಯರ್ ಸ್ಕೂಲ್, ಬೆಂಗಳೂರು.
- ಬೆಂಗಳೂರು ಕುಲೀನರಿ ಅಕಾಡೆಮಿ, ಬೆಂಗಳೂರು.
- ಎಂ.ಎಸ್.ರಾಮಯ್ಯ ಕಾಲೇಜ್ ಆಫ್ ಆರ್ಟ್ಸ್, ಸೈನ್ಸ್ ಆ್ಯಂಡ್ ಕಾಮರ್ಸ್ ಕಾಲೇಜು, ಬೆಂಗಳೂರು.

ಕ್ಲಿನಿಕಲ್ ರಿಸರ್ಚರ್

ಔಷಧಿಗಳ ಅನುಕೂಲ ಮತ್ತು ಪ್ರತಿಕೂಲ ಪರಿಣಾಮಗಳನ್ನು ಗ್ರಹಿಸಿ, ಸುರಕ್ಷತೆ ಮತ್ತು ಅಡ್ಡ ಪರಿಣಾಮಗಳ ತಡೆಯುವಿಕೆಗೆ ಸಲಹೆ ಸೂಚನೆ ನೀಡುವವರು ಕ್ಲಿನಿಕಲ್ ರಿಸರ್ಚರ್‌ಗಳು. ಇವರು ಮಾನವ ಪ್ರಯೋಗಗಳನ್ನು ನಡೆಸುತ್ತಿರುತ್ತಾರೆ. ಔಷಧಿಯ ಅಡ್ಡ ಪರಿಣಾಮ ಮತ್ತು ಬದಲಾವಣೆಗಳ ದತ್ತಾಂಶಗಳ ಸಂಗ್ರಹಣೆ ಮಾಡುತ್ತಾರೆ.

ಪಿಯುಸಿ ಬಳಿಕ ಎಂಬಿಬಿಎಸ್/ಬಿಡಿಎಸ್/ಬಯೋಟೆಕ್/ಲ್ಯಾಬ್‌ಟೆಕ್ ಪದವಿ ಪೂರೈಸಿ ಐಸಿಐಆರ್ ಪ್ರವೇಶ ಪರೀಕ್ಷೆ ಬರೆದು, ಒಂದು ವರ್ಷದ ಕ್ಲಿನಿಕಲ್ ರಿಸರ್ಚ್ ಮಾಡಿದರೆ ಕ್ಲಿನಿಕಲ್ ರಿಸರ್ಚರ್ ಆಗಬಹುದು. ಅಥವಾ ಬಿ.ಫಾರ್ಮಾ, ಎಂ.ಫಾರ್ಮಾ ಮಾಡಿ ಕ್ಲಿನಿಕಲ್ ರಿಸರ್ಚ್ ಮಾಡಿಯೂ ಕ್ಲಿನಿಕಲ್ ಸಂಶೋಧಕರಾಗಬಹುದು. ಅಥವಾ ಐಸಿಆರ್ಐ ಪ್ರವೇಶ ಪರೀಕ್ಷೆ ಪೂರೈಸಿ ಕ್ಲಿನಿಕಲ್ ರಿಸರ್ಚ್‌ನಲ್ಲಿ ಪಿಎಚ್.ಡಿ. ಮಾಡಿಯೂ ಕ್ಲಿನಿಕಲ್ ರಿಸರ್ಚರ್ ಆಗಬಹುದು.

ಇದರೊಂದಿಗೆ ಗಣಕ ಸಂಬಂಧಿತ ಜ್ಞಾನ, ವೈಜ್ಞಾನಿಕ ಪ್ರಾವೀಣ್ಯ, ಔಷಧಿಗಳು ಮತ್ತು ಪರಿಣಾಮ ಇವುಗಳ ಬಳಕೆಯ ಬಗೆಗೆ ಅರಿವು, ರೋಗಿಗೆ ನೀಡಿದ ಔಷಧಿಗಳ ಚರಿತ್ರೆ ಅರಿಯುವ ಗುಣ, ಕೇಸ್ ಹಿಸ್ಟರಿಗಳ ದತ್ತಾಂಶ ಸಂಗ್ರಹಣೆ
ಮತ್ತು ಸಂಶೋಧನಾ ಕೌಶಲ, ವಿಶ್ಲೇಷಣಾತ್ಮಕ ಜ್ಞಾನ, ವೈದ್ಯಕೀಯ ವಿವರಣೆಗಳ ಕುರಿತ ನಿರ್ಧಾರ ಗುಣ, ಏಕಾಗ್ರತೆ ಮುಖ್ಯ.

ಅವಕಾಶಗಳು

ಔಷಧೀಯ ಸಂಸ್ಥೆಗಳು, ಜೈವಿಕ ಔಷಧೀಯ ಸಂಸ್ಥೆಗಳು, ಔಷಧ ಸಂಶೋಧನ ಸಂಸ್ಥೆಗಳು, ವೈದ್ಯಕೀಯ ಸಂಶೋಧನ ಸಂಸ್ಥೆಗಳು, ವೈದ್ಯಕೀಯ ಶೈಕ್ಷಣಿಕ ವಿಭಾಗ, ಸರಕಾರಿ ಮತ್ತು ಖಾಸಗಿ ಕ್ಲಿನಿಕಲ್ ಪ್ರಯೋಗಾಲಯಗಳು, ಮೆಡಿಕಲ್ ಉಪಕರಣಗಳ ವಿನ್ಯಾಸ ಮತ್ತು ಉತ್ಪಾದನಾ ವಲಯ, ಸೌಂದರ್ಯವರ್ಧಕ ತಯಾರಿಕಾ ಘಟಕಗಳಲ್ಲಿ ಅವಕಾಶ ಹೆಚ್ಚು.

ಕಾಲೇಜುಗಳು

- ಇನ್‌ಸ್ಟಿಟ್ಯೂಟ್ ಆಫ್ ಕ್ಲಿನಿಕಲ್ ರಿಸರ್ಚ್ ಇಂಡಿಯಾ, ಬೆಂಗಳೂರು/ದೆಹಲಿ/ಮುಂಬೈ.
- ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಬೆಂಗಳೂರು.
- ಜೆಎಸ್ಎಸ್ ಕಾಲೇಜ್ ಆಫ್ ಫಾರ್ಮಸಿ, ಮೈಸೂರು.
- ಕೆಎಲ್ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್, ಬೆಳಗಾವಿ.
- ಅಕಾಡೆಮಿ ಫಾರ್ ಕ್ಲಿನಿಕಲ್ ಎಕ್ಸಲೆನ್ಸ್, ಸಾಂತಾಕ್ರೂಜ್ ಪೂರ್ವ, ಮುಂಬೈ.

ಫುಡ್ ಟೆಕ್ನಾಲಜಿಸ್ಟ್

ಹೊಸ ರೀತಿಯ ಆಹಾರ ಪದ್ಧತಿಗಳನ್ನು ಪರಿಚಯಿಸುವ, ಆಹಾರ ಪದಾರ್ಥಗಳನ್ನು ಸಂಶೋಧಿಸುವ, ಹಾಲು, ಹಣ್ಣು, ತರಕಾರಿಗಳು ಬಹಳ ದಿನಗಳು ಕೆಡದಂತೆ ಕಾಪಾಡಲು ನೆರವಾಗುವವರು ಫುಡ್ ಟೆಕ್ನಾಲಜಿಸ್ಟ್‌ಗಳು. ಜತೆಗೆ ಹೊಸ ಪೀಳಿಗೆಯ ತರಕಾರಿಗಳ ಸಂಶೋಧನೆಯಲ್ಲಿ ಇವರ ಪಾತ್ರವೂ ಇದೆ.

ಪಿಯುಸಿಯಲ್ಲಿ ಪಿಸಿಎಂಬಿ ಅಥವಾ ಕೃಷಿ ವಿಷಯವನ್ನು ಅಧ್ಯಯನ ಮಾಡಿ, ಪದವಿ ತರಗತಿಯಲ್ಲಿ ಫುಡ್ ಟೆಕ್ನಾಲಜಿ, ಕೆಮಿಕಲ್ ಟೆಕ್ನಾಲಜಿ, ಕೆಮಿಸ್ಟ್ರಿ, ಅಗ್ರಿಕಲ್ಚರಲ್ ಸೈನ್ಸ್, ಡೈರಿ ಸೈನ್ಸ್ ಇವುಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಂಡು ಫುಡ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿ ಓದಿದರೆ ಫುಡ್ ಟೆಕ್ನಾಲಜಿಸ್ಟ್ ಆಗಬಹುದು.

ಆಹಾರ ಪದಾರ್ಥ, ವಸ್ತು, ವಿಷಯಗಳ ಬಗ್ಗೆ ವಿಶ್ಲೇಷಣಾ ಜ್ಞಾನ, ಮಾಂಸಾಹಾರಿ, ಸಸ್ಯಾಹಾರಿ ವಸ್ತುಗಳ ಬಗೆಗೆ ಸಾಮಾನ್ಯಜ್ಞಾನ, ಸಂಸ್ಕರಣೆ, ಸಂರಕ್ಷಣೆ, ಜೀವಶಾಸ್ತ್ರೀಯ ಆಹಾರ ಅವಸ್ಥೆಗಳ ಬಗ್ಗೆ ಪರಿಪೂರ್ಣ ಅರಿವು, ಆಹಾರ ಪದಾರ್ಥಗಳ ಪರಿಮಳ, ಪೌಷ್ಟಿಕಾಂಶಗಳ ಬಗ್ಗೆ ತಿಳುವಳಿಕೆ, ಆಹಾರ ಪದಾರ್ಥಗಳ ಮೌಲ್ಯ, ಗುಣಮಟ್ಟ, ಮಾರುಕಟ್ಟೆ ತಲ್ಲಣಗಳ ಕುರಿತ ಅರಿವು, ತಂತ್ರಜ್ಞಾನ, ಯಂತ್ರಗಳ ಬಳಕೆ, ಸಂರಕ್ಷಣಾ ಸಂಬಂಧಿ ರಾಸಾಯನಿಕ ಬಳಕೆ ಕುರಿತು ತಿಳುವಳಿಕೆ ಅಗತ್ಯ.

ಅವಕಾಶಗಳು

ಆಹಾರ ಕೈಗಾರಿಕೆಗಳು, ಪ್ಯಾಕೇಜಿಂಗ್ ಕೈಗಾರಿಕೆಗಳು, ತಂಪು ಪಾನೀಯ ಕಾರ್ಖಾನೆಗಳು, ಮಲ್ಟಿಸ್ಟಾರ್ ಹೋಟೆಲ್‌ಗಳು, ಭಟ್ಟಿ ಇಳಿಸುವ ಕೇಂದ್ರಗಳು (ಡಿಸ್ಟಿಲ್ಲರಿಗಳು), ಮಸಾಲೆ ಮತ್ತು ಆಹಾರ ಧಾನ್ಯ ಸಂರಕ್ಷಣಾ ಘಟಕಗಳು, ಫುಡ್ ಪಾರ್ಕ್‌ಗಳು, ಆಹಾರ ಸಂಶೋಧನಾ ಘಟಕಗಳು ಇತ್ಯಾದಿ.

ಕಾಲೇಜುಗಳು

- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್, ಧಾರವಾಡ/ಬೆಂಗಳೂರು.
- ಕಾಲೇಜ್ ಆಫ್ ಹಾರ್ಟಿಕಲ್ಚರಲ್ ಎಂಜಿನಿಯರಿಂಗ್ ಆ್ಯಂಡ್ ಫುಡ್ ಟೆಕ್ನಾಲಜಿ, ದೇವಿ ಹೊಸೂರು, ಹಾವೇರಿ.
- ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ, ಬೆಳಗಾವಿ.
- ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಜೈನ್ ಯೂನಿವರ್ಸಿಟಿ, ಬೆಂಗಳೂರು.
- ಜೆಎಸ್ಎಸ್ ಅಕಾಡೆಮಿ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್, ಮೈಸೂರು.

ಆ್ಯಂಥ್ರೋಪಾಲಜಿಸ್ಟ್

ಮಾನವ ಸಮುದಾಯದ ಬೆಳವಣಿಗೆಯ ವಿವಿಧ ಹಂತವನ್ನು ಹುಡುಕುತ್ತಾ, ನಾಗರಿಕತೆಗಳ ಮೂಲ ಹುಡುಕಿಕೊಟ್ಟವರು ಮಾನವಶಾಸ್ತ್ರಜ್ಞರು. ವ್ಯಕ್ತಿಯ ಸ್ವಭಾವ, ಆಕಾರ, ವ್ಯಕ್ತಿತ್ವ, ಮಾತು, ನಡೆ-ನುಡಿ ಎಲ್ಲವೂ ವಂಶವಾಹಿಯ ಪ್ರವಹನದ ಫಲವಾಗಿದ್ದು, ಈ ನಿರಂತರ ಪ್ರವಹಿಸುವಿಕೆಯ ಪರಿಣಾಮ ಯಾವುದೋ ಅವಸ್ಥೆಯಲ್ಲಿ ಮಂಗ ಮಾನವನಾಗಿ ಬದಲಾಗಿದ್ದಾನೆ ಎಂದು ಹೇಳಿದವರೇ ಮಾನವ ಶಾಸ್ತ್ರಜ್ಞರು.

ಪಿಯುಸಿಯಲ್ಲಿ ವಿಜ್ಞಾನದ ಪಿಸಿಬಿ ವಿಷಯವನ್ನು ಆಯ್ಕೆ ಮಾಡಿಕೊಳ್ಳಿ, ಪದವಿಯಲ್ಲಿ ಆ್ಯಂಥ್ರೋಪಾಲಜಿ ವಿಷಯವನ್ನು ತೆಗೆದುಕೊಂಡು ಮಾನವ ಶಾಸ್ತ್ರಜ್ಞರಾಗಬಹುದು. ಅಥವಾ ಪಿಯುಸಿಯಲ್ಲಿ ಹ್ಯುಮಾನಿಟೀಸ್ ವಿಷಯ ಅಭ್ಯಾಸ ಮಾಡಿ, ಆ್ಯಂಥ್ರೋಪಾಲಜಿ ವಿಷಯದಲ್ಲಿ ಪದವಿ, ಸ್ನಾತಕೋತ್ತರ

ಪದವಿ ಪಡೆದು ಮಾನವ ಶಾಸ್ತ್ರಜ್ಞರಾಗಬಹುದು. ಇದರಲ್ಲಿ ಫಿಸಿಕಲ್, ಆರ್ಕಿಯಾಲಜಿಕಲ್, ಸೋಶಿಯೋ- ಕಲ್ಚರಲ್, ಲಿಂಗ್ವಿಸ್ಟಿಕ್, ಅಪ್ಲೈಡ್ ಆ್ಯಂಥ್ರೋಪಾಲಜಿಸ್ಟ್ ಎಂಬ ವಿವಿಧ ಬಗೆಗಳಿವೆ.

ಇತಿಹಾಸ, ವಿವಿಧ ಸಂಸ್ಕೃತಿ, ಸಮುದಾಯ, ಬುಡಕಟ್ಟುಗಳ ಬಗೆಗೆ ಜ್ಞಾನ, ತಾತ್ವಿಕ ಚಿಂತನೆ, ತುಲನಾತ್ಮಕ ಜ್ಞಾನ ಮತ್ತು ಭಾಷಿಕ ಅಧ್ಯಯನ ನಡೆಸುವ ಸಾಮರ್ಥ್ಯ, ಕಾಡಿನಲ್ಲಿ ಅಲೆಯುವ, ಬುಡಕಟ್ಟಿನ ಜತೆ ಬದುಕುವ, ಭೂಗರ್ಭದ ಪುರಾತನ ಅಸ್ಥಿಪಂಜರ, ವಾಸ್ತುಶಿಲ್ಪ ಇತ್ಯಾದಿಗಳ ಅಧ್ಯಯನಕ್ಕೆ ಮುಂದಾಗುವ ಪ್ರವೃತ್ತಿ, ಸಾಕ್ಷ್ಯ ದಾಖಲೆ ಮಾಡುವ, ಅವಸ್ಥಾಂತರಗಳನ್ನು ಕಲ್ಪಿಸಿಕೊಳ್ಳುವ ಕೌಶಲ. ಮಾನವನ ಜೀವನ ಪದ್ಧತಿ, ರೂಢಿಪದ್ಧತಿಗಳ ಬಗೆಗಿನ ತಿಳುವಳಿಕೆ, ಪ್ರದೇಶದಿಂದ ಪ್ರದೇಶಕ್ಕೆ ಭಾಷೆ, ವ್ಯಕ್ತಿ, ಉಡುಪು ಆಲೋಚನೆಗಳಲ್ಲಿ ವ್ಯತ್ಯಾಸ ಕುರಿತ ಸಾಮಾನ್ಯಜ್ಞಾನ ಅತ್ಯಗತ್ಯ.

ಅವಕಾಶಗಳು

ಅಂತಾರಾಷ್ಟ್ರೀಯ ಸಂಘಟನೆಗಳಾದ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ), ಯೂನಿಸೆಫ್, ಯುನೆಸ್ಕೋ, ವೈದ್ಯಕೀಯ ಸಂಶೋಧನಾಲಯ, ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳ ಸಾಂಸ್ಕೃತಿಕ ಅಧ್ಯಯನ, ವಿಶ್ವವಿದ್ಯಾಲಯಗಳು, ಮ್ಯೂಸಿಯಂ ಮತ್ತು ಆರ್ಟ್ ಗ್ಯಾಲರಿ, ಪುರಾತತ್ವ ಇಲಾಖೆ ಸರ್ವೇ ಕಾರ್ಯಾಲಯ, ಜೈವಿಕ ಸಮೀಕ್ಷಾ ಸಂಸ್ಥೆ.

ಕಾಲೇಜುಗಳು

- ಮೈಸೂರು ಯೂನಿವರ್ಸಿಟಿ ಕಾಲೇಜು, ಮೈಸೂರು.
- ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್, ಬೆಂಗಳೂರು.
- ನಿಮ್ಸ್ ಸ್ಕೂಲ್ ಆಫ್ ಹ್ಯುಮಾನಿಟೀಸ್ ಆ್ಯಂಡ್ ಸೈನ್ಸ್, ಜಯಪುರ.
- ಆಂಧ್ರ ಯೂನಿವರ್ಸಿಟಿ ಕಾಲೇಜು, ವಿಶಾಖ ಪಟ್ಟಣ, ಆಂಧ್ರಪ್ರದೇಶ.
- ಮದ್ರಾಸ್ ಯೂನಿವರ್ಸಿಟಿ ಕಾಲೇಜು, ಚೇಪಾಕ್, ಚೆನ್ನೈ.

ಮೀಟಿಯೋರಾಲಜಿಸ್ಟ್

ದೇಶದಲ್ಲಿನ ಮಳೆ, ಬಿಸಿಲು, ಗಾಳಿ ವಾತಾವರಣದ ಬಗ್ಗೆ ಮಾಹಿತಿ ನೀಡುತ್ತಾ, ದೇಶದಲ್ಲಿ ನಡೆಯುವ ಪ್ರಕೃತಿ ವಿಕೋಪಗಳ ಅತಿವೃಷ್ಟಿ-ಅನಾವೃಷ್ಟಿ, ಚಂಡಮಾರುತಗಳ ಬಗ್ಗೆ ಎಚ್ಚರಿಸುತ್ತಾ ರಾಷ್ಟ್ರ ರಕ್ಷಣೆಯ ಕಾರ್ಯ ನಿರ್ವಹಿಸುವವರು ಹವಾಮಾನ (ಪವನ) ಶಾಸ್ತ್ರಜ್ಞರು. ಕರಾವಳಿ ಅಂಚಿನ ಮೀನುಗಾರರಿಂದ ತೊಡಗಿ ಕೃಷಿಗಾಗಿ ಬೀಜ ಬಿತ್ತುವ ರೈತರವರೆಗೂ ಅಗತ್ಯವುಳ್ಳ ಹವಾಮಾನ ವೈಪರೀತ್ಯದ ಕುರಿತು ಮಾಹಿತಿ ನೀಡುವವರು ಇವರೇ.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮಾಡಿ, ಬಳಿಕ ಪದವಿ, ಭೌತಶಾಸ್ತ್ರ ಗಣಿತ ವಿಷಯಗಳಿರುವಂತೆ ನೋಡಿಕೊಳ್ಳಿ. ಸ್ನಾತಕೋತ್ತರ ಮಟ್ಟದಲ್ಲಿ ಮೀಟಿಯರಾಲಜಿ ಅಧ್ಯಯನ ಮಾಡಿ ಮೀಟಿಯೊರಾಲಜಿಸ್ಟ್ ಆಗಬಹುದು. ಪದವಿ ಬಳಿಕ ಭಾರತೀಯ ಮೀಟಿಯೋರಾಲಜಿಕಲ್ ಆಯ್ಕೆ ಪರೀಕ್ಷೆ ತೇರ್ಗಡೆ ಹೊಂದಿಯೂ ಗುರಿ ಸಾಧಿಸಬಹುದು.

ಹವಾಮಾನ ವರದಿಗಳು, ನಕ್ಷೆಗಳು ಹಾಗೂ ಮ್ಯಾಪ್, ರೇಖಾ ಸಂಕೇತ (ಡಯಾಗ್ರಮ್)ಗಳ ಬಗ್ಗೆ ಜ್ಞಾನ, ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಚಂಡ ಮಾರುತ, ಭೂಕಂಪಗಳ ಬಗ್ಗೆ ವಿಶ್ಲೇಷಣಾ ಅರಿವು; ಭೌಗೋಳಿಕ ಪರಿಸರ ಮತ್ತು ಮಾಲಿನ್ಯ ನಿಯಂತ್ರಣದ ಬಗ್ಗೆ ತಿಳುವಳಿಕೆ, ಉಪಗ್ರಹ ಆಧಾರಿತ ಹವಾಮಾನ ತಂತ್ರಜ್ಞಾನ ಕುರಿತ ಅರಿವು, ಹವಾಮಾನ ವಿಷಯಾಧಾರಿತ ದತ್ತಾಂಶ ಸಂಗ್ರಹಣೆ, ಸಂಶೋಧನೆ, ವರದಿ ಸಲ್ಲಿಕೆ ಕೌಶಲ ಇರಬೇಕು.

ಅವಕಾಶಗಳು

ಭಾರತೀಯ ಹವಾಮಾನ ಇಲಾಖೆ, ವ್ಯೋಮ ಶಾಸ್ತ್ರ ಸಂಶೋಧನ ಕೇಂದ್ರ, ವಾಯುಪಡೆ, ನೌಕಾ ಪಡೆ, ಹವಾಮಾನ ಸಾಧನ ವಿನ್ಯಾಸ ಮತ್ತು ತಯಾರಿಕಾ ಸಂಸ್ಥೆ, ಏರ್‌ಕ್ರಾಫ್ಟ್ ಮತ್ತು ಕ್ಷಿಪಣಿ ತಯಾರಿಕಾ ಘಟಕ, ಕೃಷಿ ಇಲಾಖೆ, ರಾಜ್ಯ, ಕೇಂದ್ರ ಕೃಷಿ ವಿವಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕಾರ್ಖಾನೆಗಳ ಮಾಲಿನ್ಯ ನಿಯಂತ್ರಣಾ ಘಟಕ ಇತ್ಯಾದಿ.

ಕಾಲೇಜುಗಳು

- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್ (ಯುಎಎಸ್), ಜಿಕೆವಿಕೆ ಬೆಂಗಳೂರು.
- ಕೊಚಿನ್ ಯೂನಿವರ್ಸಿಟಿ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಕೊಚ್ಚಿ, ಕೇರಳ.
- ತಮಿಳುನಾಡು ಅಗ್ರಿಕಲ್ಚರ್ ಯೂನಿವರ್ಸಿಟಿ, ಕೊಯಮತ್ತೂರು, ತಮಿಳುನಾಡು.
- ಜೆಎನ್‌ಟಿಯುಎಚ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಕುಕಟ್ಪಲ್ಲಿ, ಹೈದರಾಬಾದ್.

ಪ್ಯಾಲಿಯಂಟಾಲಜಿಸ್ಟ್

ಗತಕಾಲದ ಪಳೆಯುಳಿಕೆಗಳ ಬಗ್ಗೆ ಅಧ್ಯಯನ ನಡೆಸುತ್ತ ಭೂಮಿಯಲ್ಲಿ ಹುದುಗಿ ಹೋಗಿರುವ ನಿಧಿ, ನಿಕ್ಷೇಪಗಳ ಬಗ್ಗೆ ವಿಶ್ಲೇಷಣೆ ಮಾಡುತ್ತ ಐತಿಹಾಸಿಕ ವಿಷಯಗಳನ್ನು ಸಂಶೋಧನೆ ನಡೆಸುವವರು ಪ್ರಾಗ್ಜೀವ ವಿಜ್ಞಾನಿಗಳು. ಪ್ರಾಚೀನ ಸಂಶೋಧನೆಯ ಜತೆಗೆ ತೈಲ ನಿಕ್ಷೇಪ, ಲೋಹ ನಿಕ್ಷೇಪಗಳ ಹುಡುಕುವಿಕೆಯಲ್ಲೂ ಇವರ ಪಾತ್ರ ಹಿರಿದು.

ಪಿಯುಸಿಯಲ್ಲಿ ಭೌತಶಾಸ್ತ್ರ ಆಯ್ಕೆ ಮಾಡಿಕೊಂಡು, ಡಿಗ್ರಿಯಲ್ಲಿ ಭೂವಿಜ್ಞಾನ ಅಧ್ಯಯನ ಮುಗಿಸಿ, ಸ್ನಾತಕೋತ್ತರ ಪದವಿಯಲ್ಲಿ ಪ್ಯಾಲಿಯಂಟಾಲಜಿ (ಪ್ರಾಗ್ಜೀವ ಶಾಸ್ತ್ರ) ಬಗ್ಗೆ ವಿಶೇಷ ಜ್ಞಾನ ಸಂಪಾದಿಸಿದರೆ ಪ್ರಾಗ್ಜೀವಶಾಸ್ತ್ರೀಯ ವಿಜ್ಞಾನಿ ಆಗಬಹುದು.

ಪಳೆಯುಳಿಕೆಗಳ ಬಗ್ಗೆ ಅರಿವು, ಐತಿಹಾಸಿಕ ದಾಖಲೆಗಳ ಕುರಿತು ಜ್ಞಾನ, ಸಂಶೋಧನಾಸಕ್ತಿ, ಪಳೆಯುಳಿಕೆಗಳ ಅನ್ವೇಷಣೆ, ಅಧ್ಯಯನಕ್ಕೆ ಸಂಬಂಧಿಸಿದ ಎಲೆಕ್ಟ್ರಾನ್ ಸೂಕ್ಷ್ಮ ದರ್ಶಕಗಳು, ಕ್ಯಾಮೆರಾ, ಎಕ್ಸ್ ರೇ ಯಂತ್ರ, ಸಿಟಿ ಸ್ಕ್ಯಾನರ್‌ಗಳ ತಿಳುವಳಿಕೆ, ವಿವಿಧ ಕಾಲಮಾನಗಳ ಭೌಗೋಳಿಕತೆ, ಹವಾಮಾನ, ಜನರ ಜೀವನಶೈಲಿ, ಗೃಹ – ಸಾಮಾಜಿಕ ವಸ್ತುಗಳ ಬಳಕೆ ಬಗೆಗಿನ ಅರಿವು; ಪ್ರಾಣಿವರ್ಗ, ಪಕ್ಷಿವರ್ಗ, ಜೀವಸಸ್ತನಿಗಳ ದೈಹಿಕ ರಚನೆ, ತುಲನಾತ್ಮಕ ಜೀವರಾಸಾಯನಿಕ ವಿಶ್ಲೇಷಣಾ ಗುಣ, ದತ್ತಾಂಶ ಸಂಗ್ರಹಣೆ, ಕಿರುಟಿಪ್ಪಣಿ ಸಂಗ್ರಹ, ಪ್ರಸ್ತುತತೆ ವಿಮರ್ಶೆ, ಸವಾಲನ್ನು ಸ್ವೀಕರಿಸುವ ಗುಣ ಅಗತ್ಯ.

ಅವಕಾಶಗಳು

ನೈಸರ್ಗಿಕ ಇತಿಹಾಸ ವಸ್ತು ಸಂಗ್ರಹಾಲಯ, ತೈಲ ಕಂಪೆನಿಗಳು, ತೈಲ ಪರಿಶೋಧನ ಸಂಸ್ಥೆಗಳು, ಭಾರತೀಯ ಭೂವಿಜ್ಞಾನ ಸಮೀಕ್ಷಾ ಕೇಂದ್ರ, ಆರ್ಕಿಯಾಲಜಿ ಅಸೋಸಿಯೇಷನ್ ಆಫ್ ಇಂಡಿಯಾ, ಭೌಗೋಳಿಕ ಮಾಹಿತಿ ಪ್ರಕಾಶನಾಲಯ, ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು.
- ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್, ಮಣಿಪಾಲ.
- ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ, ಬಂಡ್ಲಗೂಡ, ಹೈದರಾಬಾದ್.

ಜೆನೆಟಿಸ್ಟ್

ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಯ ಜನರ ಅಥವಾ ಪ್ರಾಣಿವರ್ಗದ ವಂಶವಾಹಿ ಬದಲಾವಣೆಯ ಗುಣಲಕ್ಷಣಗಳ ಪ್ರವಹಿಸುವಿಕೆಯಿಂದ ಆಗುವ ಬದಲಾವಣೆಗಳನ್ನು ಸಂಶೋಧನೆ ನಡೆಸುವವರು ಜೆನೆಟಿಸ್ಟ್‌ಗಳು. ಪ್ರಾಣಿ, ಮಾನವರ ಅಂಗಾಂಗಗಳ ಮೂಲಕ ವಂಶವಾಹಿ ಪತ್ತೆ ಹಚ್ಚುವಲ್ಲಿ ಇವರ ಸಹಾಯ ಅತ್ಯಗತ್ಯ.

ವಿಜ್ಞಾನ ವಿಷಯ ಕುರಿತ ಪಿಯುಸಿ ಬಳಿಕ ಜೆನೆಟಿಕ್/ಅಗ್ರಿಕಲ್ಚರ್/ಹ್ಯೂಮನ್ ಬಯಾಲಜಿ ಇವುಗಳ ಪೈಕಿ ಯಾವುದಾದರೂ ಒಂದು ವಿಷಯದಲ್ಲಿ ಪದವಿಯನ್ನು ಮಾಡಿ, ಎಂ.ಎಸ್ಸಿ (ಜೆನೆಟಿಕ್ಸ್) ಮತ್ತು ಪಿಎಚ್.ಡಿ ಮಾಡಿದರೆ ತಳಿ ವಿಜ್ಞಾನಿಯಾಗಬಹುದು. ಅಥವಾ ಪಿಯುಸಿ ಬಳಿಕ ಹ್ಯೂಮನ್ ಬಯಾಲಜಿ ಪದವಿ ಪೂರೈಸಿ, ಜೆನೆಟಿಕ್ಸ್ ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಮಾಡಿಯೂ ಗುರಿ ಸಾಧಿಸಬಹುದು. ಇದರಲ್ಲಿ ಪಾಪ್ಯುಲೇಷನ್ ಜೆನೆಟಿಸಿಸ್ಟ್, ಬಯೋ ಜೆನೆಟಿಸಿಸ್ಟ್, ಮೊಲಾಕ್ಯುಲರ್ ಜೆನೆಟಿಸಿಸ್ಟ್, ಸೈಟೋಜೆನೆಟಿಸಿಸ್ಟ್ ಮುಂತಾದ ವಿವಿಧ ಮಾದರಿಗಳಿವೆ.

ಇದರೊಂದಿಗೆ ಮಾನವ ಅಥವಾ ಪ್ರಾಣಿವರ್ಗದ ಹುಟ್ಟು, ಬೆಳವಣಿಗೆ ಇತಿಹಾಸದ ಅರಿವು, ಜೈವಿಕ ಅವಸ್ಥಾಂತರದ ಬಗ್ಗೆ ತಿಳುವಳಿಕೆ, ಕ್ಷೇತ್ರದ ಹಿಡಿತ, ಉತ್ತಮ ಗಣಿತ ಜ್ಞಾನ ಮತ್ತು ವಿಶ್ಲೇಷಣಾತ್ಮಕ ಕೌಶಲ, ಸಂಶೋಧನೆಯಲ್ಲಿ ಕಾರ್ಯಕ್ಷಮತೆ ಮತ್ತು ಸಹನೆ, ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ, ಜವಾಬ್ದಾರಿ ಹೊರುವ ಮತ್ತು ಸವಾಲನ್ನು ಸ್ವೀಕರಿಸುವ ನಾಯಕತ್ವ ಪ್ರವೃತ್ತಿ ಹೊಂದಿರಬೇಕು.

ಅವಕಾಶಗಳು

ವೈದ್ಯ ವಿಜ್ಞಾನ ಮತ್ತು ಕೃಷಿ ವಿಜ್ಞಾನ ಸಂಸ್ಥೆಗಳ ಪ್ರಯೋಗಾಲಯಗಳು, ರಾಷ್ಟ್ರೀಯ ವಿಜ್ಞಾನ ಮತ್ತು ಸಂಶೋಧನ ಸಂಸ್ಥೆಗಳ ಸಂಶೋಧನ ವಿಭಾಗ, ಜೆನೆಟಿಕ್ ಟೆಸ್ಟಿಂಗ್ ಲ್ಯಾಬ್‌ಗಳು, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಇತ್ಯಾದಿ.

ಕಾಲೇಜುಗಳು

- ಜೈನ್ ಡೀಮ್ಡ್ ಯೂನಿವರ್ಸಿಟಿ, ಬೆಂಗಳೂರು.
- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್, ಬೆಂಗಳೂರು.
- ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಆರ್ಟ್ಸ್, ಸೈನ್ಸ್ ಆ್ಯಂಡ್ ಕಾಮರ್ಸ್, ಬೆಂಗಳೂರು.
- ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಬೆಂಗಳೂರು.
- ಮಣಿಪಾಲ್ ಸ್ಕೂಲ್ ಆಫ್ ಲೈಫ್ ಸೈನ್ಸ್, ಮಾಹೆ, ಮಣಿಪಾಲ.

ಸ್ಪೀಚ್ ಥೆರಪಿಸ್ಟ್

ಮನುಷ್ಯರು ಮಾತನಾಡುವಾಗ ಉಂಟಾಗುವ ಧ್ವನಿ ಅಸಸ್ಪಷ್ಟತೆಯನ್ನು ನಿವಾರಿಸಿ, ಧ್ವನಿ ಪೆಟ್ಟಿಗೆ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸುವವರು ಸ್ಪೀಚ್ ಥೆರಪಿಸ್ಟ್‌ಗಳು. ಇವರು ಧ್ವನಿ ಸಮನ್ವಯ (ವಾಯ್ಸ್ ಮಾಡ್ಯುಲೇಷನ್) ಬಗ್ಗೆಯೂ ತಿಳಿ ಹೇಳುತ್ತಾರೆ. ದೊಡ್ಡ ಮತ್ತು ಚಿಕ್ಕ ವಯಸ್ಸಿನವರಲ್ಲಿ ಉಂಟಾಗುವ ತೊದಲು ನುಡಿ ಸಮಸ್ಯೆಯ ನಿವಾರಣೆಯಲ್ಲಿ ಇವರು ಸಿದ್ಧ ಹಸ್ತರು.

ಪಿಯುಸಿಯಲ್ಲಿ ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಆಲ್ ಇಂಡಿಯಾ ಟೆಸ್ಟ್ ಅಥವಾ ಮೆರಿಟ್ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಸ್ಪೀಚ್ ಥೆರಪಿ ಅಧ್ಯಯನ ನಡೆಸಿ ಸ್ಪೀಚ್ ಥೆರಪಿಸ್ಟ್ ಆಗಬಹುದು.

ಇದರ ಜತೆಗೆ ಉತ್ತಮ ಸಂವಹನ ಕೌಶಲ, ಧ್ವನಿ ಸಮಸ್ಯೆ, ಕ್ಲಿಷ್ಟ ಪದ ಸಮಸ್ಯೆ, ಅಕ್ಷರ ಕ್ಲಿಷ್ಟ ಸಮಸ್ಯೆಗೆ ವಿವಿಧ ಎಕ್ಸರ್‌ಸೈಜ್ ಮಾಡಿಸುವ ಅರಿವು, ಧ್ವನಿ ಪೆಟ್ಟಿಗೆ ತೊಂದರೆಗೆ ಚಿಕಿತ್ಸೆ ನೀಡುವ ಪ್ರಾವೀಣ್ಯತೆ, ಥೈರಾಯ್ಡ್, ಗಂಟಲು ಬೇನೆ ಸಂಬಂಧಿತ ರೋಗದ ಬಗ್ಗೆ ತಿಳುವಳಿಕೆ, ಭಾಷೆಗಳ ಬಗ್ಗೆ ಜ್ಞಾನ, ರೆಕಾರ್ಡ್ ನಿರ್ವಹಣೆ, ಕಾರ್ಯಕ್ಷಮತೆ, ಸಹನೆ ಅಗತ್ಯ.

ಅವಕಾಶಗಳು

ಆಡಿಯಾಲಜಿ ಆಸ್ಪತ್ರೆಗಳು, ಸ್ಪೀಚ್ ಕ್ಲಿನಿಕ್‌ಗಳು, ರಿಹ್ಯಾಬಿಲಿಟೇಷನ್ ಸೆಂಟರ್‌ಗಳು, ಸ್ಪೀಚಿಸ್ಟ್ ಶಾಲೆಗಳು, ಅಂಗವಿಕಲ ಶಾಲೆಗಳು, ಕ್ಯಾನ್ಸರ್ ರಿಹ್ಯಾಬಿಲಿಟೇಷನ್ ಸೆಂಟರ್, ಲಿಂಗ್ವಿಸ್ಟಿಕ್ ಟೀಚರ್‌ಗಳು.

ಕಾಲೇಜುಗಳು

- ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಇಯರಿಂಗ್, ಮೈಸೂರು.
- ಜವಾಹರಲಾಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜ್ಯುಯೇಟ್ ಮೆಡಿಕಲ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್, ಪಾಂಡಿಚೇರಿ.
- ಭಾರತಿ ವಿದ್ಯಾಪೀಠ ಡೀಮ್ಡ್ ಯೂನಿವರ್ಸಿಟಿ , ಸದಾಶಿವ ಪೇಟೆ, ಪುಣೆ.

ಆಪ್ಟೋಮೆಟ್ರಿಸ್ಟ್

ದೂರ ಮತ್ತು ಸಮೀಪ ದೃಷ್ಟಿ ದೋಷ (ಪ್ಲಸ್ ಮತ್ತು ಮೈನಸ್) ಎಷ್ಟು ಪ್ರಮಾಣದಲ್ಲಿದೆ ಎಂಬುದನ್ನು ತಿಳಿಸಿಕೊಡುವವರೇ ಆಪ್ಟೋಮೆಟ್ರಿಸ್ಟ್‌ಗಳು. ಅಗತ್ಯ ಮಾಪನವನ್ನು ಬಳಸಿ ರೋಗಿಯ ದೃಷ್ಟಿ ದೋಷ, ಪೊರೆ ಮುಂತಾದ ಸಮಸ್ಯೆಗಳ ಬಗ್ಗೆ ತಿಳಿಸಿಕೊಡುತ್ತಾರೆ; ಅಗತ್ಯ ಕನ್ನಡಕಗಳನ್ನು ಶಿಫಾರಸು ಮಾಡುತ್ತಾರೆ.

ವಿಜ್ಞಾನ ವಿಷಯದಲ್ಲಿ ಪಿಯುಸಿ ವ್ಯಾಸಂಗದ ಬಳಿಕ, ಪದವಿಯಲ್ಲಿ ಆಪ್ತಾಲಮಿಕ್ ಟೆಕ್ನಾಲಜಿ ಅಭ್ಯಾಸ ಮಾಡಿ ಆಪ್ಟೋಮೆಟ್ರಿಸ್ಟ್ ಆಗಬಹುದು. ಅಥವಾ ಆಫ್ತಾಲ್ಮಿಕ್ ಡಿಪ್ಲೊಮಾ ಮಾಡಿಯೂ ಗುರಿ ಸಾಧಿಸಬಹುದು.

ಕಣ್ಣು ಮತ್ತು ದೃಷ್ಟಿ ಸಂಬಂಧಿ ಸಮಸ್ಯೆಗಳ ಬಗ್ಗೆ ತಿಳುವಳಿಕೆ, ಕಣ್ಣಿನ ಔಷಧಿಗಳ ಕುರಿತ ಅರಿವು, ಕ್ಷೇತ್ರದ ಹಿಡಿತ, ದೂರ-ಸಮೀಪ ದೃಷ್ಟಿ ದೋಷ ಕಂಡು ಹಿಡಿಯುವ ಸಾಮರ್ಥ್ಯ, ರೆಕಾರ್ಡ್ ನಿರ್ವಹಣೆ, ಉತ್ತಮ ಸಂವಹನ ಮತ್ತು ಗ್ರಾಹಕರ ಬಾಂಧವ್ಯ ಬೆಸೆಯುವ ಕಲೆ ತಿಳಿದಿರಬೇಕು.

ಅವಕಾಶಗಳು

ಆಪ್ತಮಾಲಜಿಸ್ಟ್, ಆಸ್ಪತ್ರೆ ಮತ್ತು ಕ್ಲಿನಿಕ್‌ಗಳು, ಕಣ್ಣಿನ ಆರೈಕೆ ಕೇಂದ್ರಗಳು, ಕನ್ನಡಕ ಶೋ ರೂಮ್‌ಗಳು, ಲೆನ್ಸ್ ಲ್ಯಾಬ್‌ಗಳಲ್ಲಿ ಅವಕಾಶ.

ಕಾಲೇಜುಗಳು

- ನಾರಾಯಣ ನೇತ್ರಾಲಯ ಕಾಲೇಜ್ ಆಫ್ ಆಪ್ಟೋಮೆಟ್ರಿ, ಬೆಂಗಳೂರು.
- ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
- ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಷನ್ಸ್, ಮಣಿಪಾಲ.
- ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್, ಬೆಳಗಾವಿ.
- ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಕಟ್ಟನ್‌ಕುಳತ್ತೂರ್, ಚೆನ್ನೈ.

ಕೋಸ್ಟ್ ಗಾರ್ಡ್

ಕಡಲ ತಡಿಗಳ ಮತ್ತು ಇತರ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಭಾರತೀಯ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವವರು ಕೋಸ್ಟ್ ಗಾರ್ಡ್‌ಗಳು. ಇವರು ಟಾಸ್ಕ್ ಫೋರ್ಸ್ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಾ ದೇಶದ ರಕ್ಷಣೆ ಮಾಡುತ್ತಾರೆ. ಇವರಲ್ಲಿ ಕೋಸ್ಟ್ ಗಾರ್ಡ್ ಅಧಿಕಾರಿಗಳು, ಪ್ರಭಾರ ಶಾಖಾಧಿಕಾರಿ, ನೇವಿಯೇಟರ್, ಎಲೆಕ್ಟ್ರಿಕಲ್ ಎಂಜಿನಿಯರ್ ಶಾಖೆಗಳ ಅಧಿಕಾರಿಗಳು ಇರುತ್ತಾರೆ.

ಪಿಯುಸಿ ಮತ್ತು ಪದವಿ ಬಳಿಕ ಡೆಪ್ಯೂಟಿ ಶಾಖೆಯ ಪ್ರವೇಶ ಮತ್ತು ತರಬೇತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅಸಿಸ್ಟೆಂಟ್ ಕಮಾಂಡೆಂಟ್/ಜನರಲ್ ಡೆಪ್ಯೂಟಿ/ಪೈಲೆಟ್ ಕೋಸ್ಟ್ ಗಾರ್ಡ್ ಆಗಬಹುದು. ವಿಜ್ಞಾನ ವಿಷಯದಲ್ಲಿ ಪಿಯುಸಿ, ಪದವಿ ಪೂರೈಸಿ, ಡೆಪ್ಯೂಟಿ ಶಾಖೆಯ ಪ್ರವೇಶ ಮತ್ತು ತರಬೇತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಅಸಿಸ್ಟೆಂಟ್ ಕಮಾಂಡೆಂಟ್ 'ಟೆಕ್ನಿಕಲ್ ಕೋಸ್ಟ್ ಗಾರ್ಡ್' ಆಗಬಹುದು. ಇದೇ ರೀತಿ ಪದವಿಯಲ್ಲಿ ಎಲೆಕ್ಟ್ರಿಕಲ್/ಮೆಕ್ಯಾನಿಕಲ್ ಎಂಜಿನಿಯರಿಂಗ್ ಮಾಡಿದರೆ 'ಯಾಂತ್ರಿಕ್ ಕೋಸ್ಟ್ ಗಾರ್ಡ್' ಆಗಬಹುದು. ಪದವಿ ಬಳಿಕ ಡೆಪ್ಯೂಟಿ ಶಾಖೆಯ ಪ್ರವೇಶ ಮತ್ತು ತರಬೇತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ 'ನಾವಿಕ್ ಕೋಸ್ಟ್ ಗಾರ್ಡ್' ಆಗಬಹುದು.

ಇದರ ಜತೆಗೆ ದೈಹಿಕ ಮತ್ತು ದೃಷ್ಟಿ ಸಾಮರ್ಥ್ಯ, ವಿಷಯ ಮತ್ತು ಕ್ಷೇತ್ರದ ಬಗ್ಗೆ ಪ್ರಾವೀಣ್ಯ, ಸಮುದ್ರ, ಸಮುದ್ರಾಂತರ ವಿಷಯಗಳ ಬಗ್ಗೆ ತಿಳುವಳಿಕೆ; ಸುನಾಮಿ, ಚಂಡಮಾರುತ, ಪ್ರಾಕೃತಿಕ ವಿಕೋಪಗಳ ವೇಳೆ ರಕ್ಷಣಾ ಕಾರ್ಯದಲ್ಲಿ ತೊಡಗುವ ನಾಯಕತ್ವಗುಣ, ವಾಯು, ಜಲ ಸೇನಾ ತುಕಡಿಗಳ ಬಗ್ಗೆ ಅರಿವು, ಸಮುದ್ರ ತೀರದ ಸಾರ್ವಜನಿಕರೊಂದಿಗೆ ಸ್ನೇಹಸಂಬಂಧ, ಉತ್ತಮ ಸಂಘಟನಾ ಶಕ್ತಿ, ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕೌಶಲ ಇರಬೇಕು.

ಅವಕಾಶಗಳು

ಸರಕಾರಿ ವಲಯ, ರಕ್ಷಣಾ ಸಚಿವಾಲಯ, ನೌಕಾಪಡೆ, ವಾಯು ಪಡೆಗಳಲ್ಲಿ

ತರಬೇತಿ

ಕೋಸ್ಟ್‌ಗಾರ್ಡ್ ಕೋರ್ಸ್ ಪಡೆಯಲು ಯಾವುದೇ ಕಾಲೇಜುಗಳು ಇಲ್ಲ. ಹೀಗಾಗಿ ಹಿಂದೆ ತಿಳಿಸಿದಂತೆ ಆಯಾ ಸಾಮಾನ್ಯ ಓದಿನ ಬಳಿಕ ಪ್ರವೇಶ ಪರೀಕ್ಷೆ ಎದುರಿಸಬೇಕಾಗುತ್ತದೆ.

ಭಾರತದ ಈಸ್ಟರ್ನ್ ಝೋನ್ (ಪೂರ್ವ ವಲಯ)ನ ಕೋಸ್ಟ್ ಗಾರ್ಡ್ ರೀಜನ್ ಫೋರ್ ಡಿ (ಸೈಂಟ್ ಜಾರ್ಜ್, ಚೆನ್ನೈ)ಯಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಒರಿಸ್ಸಾ ಅಭ್ಯರ್ಥಿಗಳು ದೈಹಿಕ ಸಾಮರ್ಥ್ಯ, ದೃಷ್ಟಿ ಪರೀಕ್ಷೆ ಜತೆಗೆ ಪ್ರವೇಶ ಪರೀಕ್ಷೆ ಗಳಲ್ಲಿ ಉತ್ತೀರ್ಣರಾಗಿ ತರಬೇತಿ ಪಡೆಯಬೇಕಾಗುತ್ತದೆ.ಇದೇ ರೀತಿ ಪಶ್ಚಿಮ, ಈಶಾನ್ಯ, ಉತ್ತರ ಹಾಗೂ ಅಂಡಮಾನ್-ನಿಕೋಬಾರ್ ವಲಯಗಳಲ್ಲಿ ಪ್ರದೇಶವಾರು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ.

■

ಕುರ್ಚಿ ಕದನ: ಇಲ್ಲಿ ಸಮಾಧಾನ, ಅಲ್ಲಿ ಮೌನ!

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಬೆಂಬಲಿಗರೀಗ ನೆಮ್ಮದಿಯ ನಿಟ್ಟುಸಿರು ಬಿಡುತ್ತಿರುವುದಕ್ಕೆ ಬಲವಾದ ಕಾರಣವಿದೆ. ಏನು ಈ ಕಾರಣ? ಡಿ.ಕೆ. ಶಿವಕುಮಾರ್ ಅವರ ಬೆಂಬಲಿಗರು ಮೇಲ್ನೋಟಕ್ಕೆ ಮೌನವಾಗಿರುವಂತೆ ಕಂಡರೂ ಒಳಗಿಂದೊಳಗೆ ಆಡುತ್ತಿರುವ ಮಾತೇನು?

❑ ಫಲ್ಗುಣಿ

ಕೆಲವು ದಿನಗಳ ಹಿಂದೆ ನಡೆದ ಒಂದು ಬೆಳವಣಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಪಾಳೆಯಕ್ಕೆ ಸಮಾಧಾನ ತಂದಿದೆ.

ಅದೇಂದರೆ, ಇತ್ತೀಚೆಗೆ ದೆಹಲಿಯಲ್ಲಿ ನಡೆದ ಎಐಸಿಸಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪಕ್ಷದ ನಾಯಕ ರಾಹುಲ್ ಗಾಂಧಿಯವರ ಜತೆ ಮುಖಾಮುಖಿ ಭೇಟಿಯಾಗಿದ್ದಾರೆ.

ಗಮನಿಸಬೇಕಾದ ಸಂಗತಿ ಎಂದರೆ, ಎಐಸಿಸಿಯ ಕಾರ್ಯಕಾರಿ ಸಮಿತಿ ಸಭೆ ನಡೆದಾಗ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕಾಂಗ್ರೆಸ್ ವರಿಷ್ಠರು ದೆಹಲಿಗೆ ಕರೆದಿರಲಿಲ್ಲ. ಅರ್ಥಾತ್, ಎಐಸಿಸಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ಹೋಗಿದ್ದ ಸಿದ್ಧರಾಮಯ್ಯನವರು ಮುಕ್ತವಾಗಿ ರಾಹುಲ್ ಗಾಂಧಿಯವರ ಜತೆ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನೇರವಾಗಿ ತಮ್ಮ ಕಷ್ಟಗಳನ್ನು ತೋಡಿಕೊಂಡರಂತೆ.

''ಸಾರ್, ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಯ ಬಿಕ್ಕಟ್ಟಿನ ಬಗ್ಗೆ ಹೈಕಮಾಂಡ್ ಸ್ಪಷ್ಟ ನಿಲುವು ತಾಳದೆ ಇರುವುದರಿಂದ ಗೊಂದಲ ಉಂಟಾಗಿದೆ. ಇದು ಸರಕಾರದ ಆಡಳಿತ ಯಂತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಹೀಗಾಗಿ ಮೊದಲು ಈ ಅಧಿಕಾರ ಹಂಚಿಕೆಯ ಮಾತಿಗೆ ಸ್ಪಷ್ಟ ಉತ್ತರ ನೀಡಿ. ಅಂದ ಹಾಗೆ, ನೀವು ಸೂಚನೆ ನೀಡಿದರೆ ನಾನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯಲು ಸಿದ್ಧ. ಹೀಗಾಗಿ ನೀವು ಈ ವಿಷಯದಲ್ಲಿ ಸ್ಪಷ್ಟವಾಗಿ ತೀರ್ಮಾನ ಕೈಗೊಳ್ಳಬೇಕು'' ಎಂದು ಸಿದ್ಧರಾಮಯ್ಯ ವಿವರಿಸಿದ್ದಾರೆ.

ಅಷ್ಟೇ ಅಲ್ಲ, ''ಅಧಿಕಾರ ಹಂಚಿಕೆಯ ಬಿಕ್ಕಟ್ಟು ಪರಿಹಾರವಾಗಿ ರಾಜ್ಯ ಸಚಿವ ಸಂಪುಟ ಪುನಾರಚನೆಗೆ ಅನುಮತಿ ನೀಡಿದರೆ ಸರಕಾರದ ವರ್ಚಸ್ಸು ಹೆಚ್ಚಾಗುವಂಥ ಸಚಿವರ ತಂಡವೊಂದನ್ನು ಕಟ್ಟಬಹುದು. ಹೀಗಾಗಿ ಈ ಎರಡು ವಿಷಯಗಳಲ್ಲಿ ಸ್ಪಷ್ಟ ತೀರ್ಮಾನ ಕೈಗೊಳ್ಳಿ'' ಎಂದು ವಿವರಿಸಿದ್ದಾರೆ.

ಯಾವಾಗ ಸಿದ್ಧರಾಮಯ್ಯನವರು ಇಷ್ಟೊಂದು ಸ್ಪಷ್ಟವಾಗಿ ಹೇಳಿದರೋ, ಆಗ ರಾಹುಲ್ ಗಾಂಧಿಯವರು, ''ಈ ವಿಷಯದಲ್ಲಿ ಯಾವ ಗೊಂದಲವೂ ಬೇಡ; ನೀವು ಮುಂದಿನ ತಿಂಗಳು ಸರಕಾರಕ್ಕೆ ಮೂರು ವರ್ಷ ಭರ್ತಿಯಾದ ತತ್‌ಕ್ಷಣ ಸಚಿವ ಸಂಪುಟವನ್ನು ಪುನಾರಚಿಸುತ್ತೀರಂತೆ'' ಎಂದು ಹೇಳಿದ್ದಾರೆ. ಇದಾದ ಅನಂತರ ಸಿದ್ಧರಾಮಯ್ಯ ಅವರ ಪಾಳೆಯದ ಶಾಸಕರು ಸಮಾಧಾನದಲ್ಲಿದ್ದಾರೆ.

ರಾಹುಲ್ ಹೇಳಿಕೆಯ ಹಿಂದಿನ ಸಂದೇಶ

ಕಾರಣ, ರಾಹುಲ್ ಗಾಂಧಿಯವರ ಮಾತಿನಲ್ಲಿ ಅವರಿಗೆ ಎರಡು ಸಂದೇಶಗಳು ಸ್ಪಷ್ಟವಾಗಿ ಸಿಕ್ಕಿವೆ. ಮೊದಲನೆಯದಾಗಿ, ಸಿದ್ಧರಾಮಯ್ಯನವರನ್ನು ಅಧಿಕಾರದಿಂದ ಕೆಳಗಿಳಿಸುವ ಯಾವ ಲೆಕ್ಕಾಚಾರವೂ ರಾಹುಲ್ ಗಾಂಧಿ ಅವರಿಗಿಲ್ಲ ಎಂಬುದು. ಎರಡನೆಯದಾಗಿ, ಮುಂದಿನ ದಿನಗಳಲ್ಲಿ ಯಾವ ಕಾರಣಕ್ಕೂ ಸಚಿವ ಸಂಪುಟ ಪುನಾರಚನೆಗೆ ಅಡ್ಡಿಯಾಗುವುದಿಲ್ಲ ಎಂಬುದು.

ಸಿದ್ಧರಾಮಯ್ಯ ಅವರ ಆಪ್ತರ ಪ್ರಕಾರ, ರಾಜ್ಯ ಸರಕಾರಕ್ಕೆ ಮೂರು ವರ್ಷ ಭರ್ತಿಯಾದ ಅನಂತರ ಸಂಪುಟ ಪುನಾರಚನೆ ಕಾರ್ಯವನ್ನು ಕೈಗೆತ್ತಿಕೊಳ್ಳಿ ಎಂದು ರಾಹುಲ್ ಗಾಂಧಿ ಹೇಳಿದ್ದಾರೆಂದರೆ ಇನ್ನು ನಾಯಕತ್ವ ಬದಲಾವಣೆಯ ಮಾತೆಲ್ಲಿ? ಆದ್ದರಿಂದ ಹಲವು ಕಾಲದಿಂದ ಜೀವಂತವಾಗಿರುವ ನಾಯಕತ್ವ ಬದಲಾವಣೆಯ ಮಾತು ಇನ್ನು ಮುಂದೆ ಕ್ಷೀಣವಾಗಲಿದೆ.

ಸಿದ್ಧರಾಮಯ್ಯ ಅವರ ಆಪ್ತರು ಇಂಥ ವಿಶ್ವಾಸವನ್ನು ವ್ಯಕ್ತಪಡಿಸತೊಡಗಿದ ಬೆನ್ನಿಗೇ ಮುಖ್ಯಮಂತ್ರಿ ಹುದ್ದೆಗಾಗಿ ಪಟ್ಟು ಹಿಡಿದಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಬಣ ಮೌನಕ್ಕೆ ಶರಣಾಗಿದೆ.

ಮುಂಚೆಲ್ಲ ಡಿಕೆಶಿ ಯಾವಾಗ ಸಿಎಂ ಆಗುತ್ತಾರೆ ಎಂಬ ಪ್ರಶ್ನೆ ಕೇಳಿದರೆ ಸಾಕು, ಡಿಕೆಶಿ ಬಣದ ಪ್ರಮುಖರಾದ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರು, 'ಇಂಥ ದಿನ ಡಿಕೆಶಿ ಸಿಎಂ ಆಗಲಿದ್ದಾರೆ' ಎಂದು ಘೋಷಿಸುತ್ತಿದ್ದರು. ಆದರೆ ಒಂದಲ್ಲ, ಎರಡಲ್ಲ, ಹಲವು ಬಾರಿ ಅವರು ಗಡುವು ಕೊಟ್ಟು ಕೊಟ್ಟು ಪರಿಸ್ಥಿತಿ ಹೇಗಾಗಿದೆ ಎಂದರೆ, ಇದು 'ತೋಳ ಬಂತು ತೋಳ' ಕತೆಯಂತೆ ಆಗಿ ಹೋಗಿದೆ.

ಹೀಗಾಗಿ ಈ ಸಲ ಸಿದ್ಧರಾಮಯ್ಯ ಅವರು ಎಐಸಿಸಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಬಂದ ಅನಂತರ ಡಿ.ಕೆ.ಶಿವಕುಮಾರ್ ಅವರು ಕೂಡ ಬಹಿರಂಗವಾಗಿ ಏನನ್ನೂ ಹೇಳುತ್ತಿಲ್ಲ. ಬದಲಿಗೆ ಈ ಕುರಿತು ಪ್ರಶ್ನೆ ಎದುರಾದರೆ, ''ಕಾಲವೇ ಎಲ್ಲದಕ್ಕೂ ಉತ್ತರ ನೀಡುತ್ತದೆ'' ಎನ್ನುತ್ತಾರೆ.

ಅರ್ಥಾತ್, ಇತ್ತೀಚಿನ ದಿನಗಳಲ್ಲಿ ನಾಯಕತ್ವ ಬದಲಾವಣೆಯ ಹೇಳಿಕೆಗಳ ಕಾವು ಕಡಿಮೆಯಾಗಿದೆ. ಹಾಗೆಂದರೆ ನಾಯಕತ್ವ ಬದಲಾವಣೆಯ ವಿಷಯ ಧ್ವನಿ ಕಳೆದುಕೊಂಡು ಬಿಟ್ಟಿದೆ ಎಂದರ್ಥವಲ್ಲ. ಯಾಕೆಂದರೆ ಬಹಿರಂಗವಾಗಿ ಅಲ್ಲದಿದ್ದರೂ ಆಳದಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಡಿ.ಕೆ. ಶಿವಕುಮಾರ್ ಅವರ ಪ್ರಯತ್ನ ನಿರಂತರವಾಗಿ ಸಾಗಿದೆ.

ಅವರ ಆಪ್ತ ಬಣ ಈ ಕುರಿತು ಬಹಿರಂಗವಾಗಿ ಧ್ವನಿ ಎತ್ತದಿದ್ದರೂ ಮುಂದಿನ ತಿಂಗಳು, ಅಂದರೆ ಸರಕಾರಕ್ಕೆ ಮೂರು ವರ್ಷ ಭರ್ತಿಯಾದ ಅನಂತರ ಸಿದ್ಧರಾಮಯ್ಯ ಅವರು ನಾಯಕತ್ವ ಬಿಟ್ಟುಕೊಡಲಿದ್ದಾರೆ ಎನ್ನುತ್ತಿದೆ.
ಈ ಮಾತನ್ನು ಬಹಿರಂಗವಾಗಿ ಏಕೆ ಹೇಳುವುದಿಲ್ಲ ಎಂದರೆ ಕಾಂಗ್ರೆಸ್ ಹೈಕಮಾಂಡ್ ರಾಜಿಸೂತ್ರವೊಂದನ್ನು ರಚಿಸತೊಡಗಿದ್ದು, ಅದರ ಪ್ರಕಾರ ಸಿದ್ಧರಾಮಯ್ಯ ಕೆಳಗಿಳಿಯುವುದು, ಡಿಕೆಶಿ ಮುಖ್ಯಮಂತ್ರಿ ಹುದ್ದೆಗೇರುವುದು ನಿಶ್ಚಿತ ಎನ್ನುತ್ತಿದೆ.

ಆದರೆ ಸಿದ್ಧರಾಮಯ್ಯ ಅವರ ಆಪ್ತರು ಈ ಮಾತನ್ನು ಒಪ್ಪುವುದಿಲ್ಲ. ಅವರ ಪ್ರಕಾರ ನಾಯಕತ್ವ ಬದಲಾವಣೆಗೆ ರಾಹುಲ್ ಗಾಂಧಿಯವರ ಸಹಮತವಿಲ್ಲ. ಅಂದ ಮೇಲೆ ಯಾರು ರಾಜಿಸೂತ್ರ ರೂಪಿಸಿದರೂ ಅದಕ್ಕೆ ಕಿಮ್ಮತ್ತಿಲ್ಲ ಎನ್ನುತ್ತಾರೆ.

ಪರಿಣಾಮ, ಕಾಂಗ್ರೆಸ್‌ನಲ್ಲೀಗ ನೀರವಮೌನ ಆವರಿಸಿದೆ. ಈ ನೀರವಮೌನ ಸಿದ್ಧರಾಮಯ್ಯ ಅವರ ಗೆಲುವಿನ ಸಂಕೇತ ಎಂಬುದು ಅದರ ನಂಬಿಕೆ.

ಅದರ ನಂಬಿಕೆ ನಿಜವಾಗುತ್ತದೆಯೇ? ಗೊತ್ತಿಲ್ಲ. ಆದರೆ ಇಂಥ ನಂಬಿಕೆಗಳ ನಡುವೆ ಸಿದ್ಧರಾಮಯ್ಯ ಅವರ ಆಪ್ತರು ನಿರ್ಣಾಯಕ ಹೋರಾಟವೊಂದಕ್ಕೆ ಸಜ್ಜಾಗಲು ಸಿದ್ಧರಾಮಯ್ಯ ಅವರನ್ನು ಪ್ರೇರೇಪಿಸುತ್ತಿದ್ದಾರೆ. ಹೀಗೆ ಅವರು ಪ್ರೇರೇಪಿಸಲು ಮುಖ್ಯ ಕಾರಣ ಡಿಕೆಶಿ ಬಣದ ನಂಬಿಕೆಗೆ ನಿರ್ಣಾಯಕ ಹೊಡೆತ ಕೊಡಬೇಕು ಎಂಬುದು. ಅರ್ಥಾತ್, ಈಗಲ್ಲದಿದ್ದರೂ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಪದವಿ ಖಚಿತ ಎಂಬ ಡಿಕೆಶಿ ಬಣದ ನಂಬಿಕೆಯನ್ನು ಹೊಡೆದು ಹಾಕುವುದು.

ಹೀಗಾಗಿಯೇ ಮೊನ್ನೆ ಸಿದ್ಧರಾಮಯ್ಯ ಬಣದ ಪ್ರಮುಖರಾದ ಮಾಜಿ ಸಚಿವ ಕೆ.ಎನ್. ರಾಜಣ್ಣ ಮತ್ತು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕುತೂಹಲಕಾರಿ ಮಾತುಗಳನ್ನಾಡಿದರು. ಕೆ.ಎನ್. ರಾಜಣ್ಣ ಅವರು, ''ಇತ್ತೀಚಿನ ದಿನಗಳಲ್ಲಿ ಸಿದ್ಧರಾಮಯ್ಯ ಅಸಹಾಯಕರಾಗಿದ್ದಾರೆ. ಅವರ ವಿರುದ್ಧ ಯಾರೋ ಮಾಟ–ಮಂತ್ರ ಮಾಡಿಸಿದ್ದಾರೆ. ಹೀಗಾಗಿ ಅವರು ಹಿಂದಿನಂತಿಲ್ಲ'' ಎಂದರೆ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, ಸಿದ್ಧರಾಮಯ್ಯ ಇತ್ತೀಚಿನ ದಿನಗಳಲ್ಲಿ ರಾಜಿಹೊಂದಾಣಿಕೆ ಅಭ್ಯರ್ಥಿ ಆಗಿದ್ದಾರೆ ಎಂದರು. ಇವರಿಬ್ಬರ ಹೇಳಿಕೆಯ ಅರ್ಥವೆಂದರೆ, ಪದೇ ಪದೇ ನಾಯಕತ್ವ ಬದಲಾವಣೆಯ ಮಾತುಗಳನ್ನಾಡುತ್ತಿರುವ ಡಿಕೆಶಿ ವಿರುದ್ಧ ನಿರ್ಣಾಯಕ ಹೋರಾಟಕ್ಕೆ ಅಣಿಯಾಗಿ ಎಂದು ಒತ್ತಾಯಿಸುವುದು. ಸಿಟ್ಟು ಬರಿಸಿದರೆ ತಾನೇ ಸಿದ್ಧರಾಮಯ್ಯ ನಿರ್ಣಾಯಕ ಹೋರಾಟಕ್ಕೆ ಸಜ್ಜಾಗುವುದು– ಎಂಬುದು ಅವರ ಲೆಕ್ಕಾಚಾರ.

ಒಂದು ಕಡೆ ಸಿದ್ಧರಾಮಯ್ಯ ಬಣ ನೆಮ್ಮದಿಯ ಹಳಿಗೆ ಮರಳುತ್ತಿರುವಾಗಲೇ ಮತ್ತೊಂದೆಡೆ ಅದೇ ಪಾಳೆಯದ ನಾಯಕರು ಈ ನೆಮ್ಮದಿ ಮುಂದಿನ ಎರಡು ವರ್ಷ ಉಳಿಯಲು ನಿರ್ಣಾಯಕ ಹೋರಾಟದ ಅಗತ್ಯವಿದೆ ಎಂದು ಸೂಚಿಸುತ್ತಿರುವುದು ಕುತೂಹಲಕಾರಿ. ■

ನಿಗೂಢ ಲಕೋಟೆ

ಅಧ್ಯಾಯ – 5

❑ ಎಸ್. ಜಿ. ಶಿವಶಂಕರ್

> **ಹಿಂದಿನ ಸಂಚಿಕೆಯಿಂದ...**
>
> ಯಶವಂತಪ್ಪನ ಜೊತೆ ಜಗಳವಾಡಿದ ಕೆಲಸದಾಳು ಗಂಗಾಧರ ಕಿಲಾಡಿ ಮನುಷ್ಯ. ವಿಕ್ರಮ್ ಸಹಾಯಕ ಶರತ್ ಕೈಯಿಂದ ಹಣ ಪಡೆದು ಯಶವಂತರಾಯರ ಹಳೆಯ ಜಗಳಗಳ ಕುರಿತು ಹೇಳಿದ. ವಿಕ್ರಮ್ ಅಂಚೆ ಕಚೇರಿ ನಡೆಸುತ್ತಿದ್ದವನನ್ನು ವಿಚಾರಿಸಿ, ಕೃಷ್ಣನ ಗೆಳತಿಯನ್ನು ಪತ್ತೆ ಹಚ್ಚಿ ಅವಳಿಗೂ ಕೃಷ್ಣನಿಗೂ ಸಂಬಂಧವೇನೆಂದು ವಿಚಾರಿಸತೊಡಗಿದ.
>
> **ಮುಂದೆ ಓದಿ...**

ಕೃಷ್ಣನ ಗೆಳತಿ ರಾಣಿಯ ಮಾತಿಗೆ ಶರತ್ ಮನಸ್ಸು ಕರಗಿತು. ಬಡತನ, ಅಸಹಾಯಕತೆ ಎಂಥ ಸ್ಥಿತಿಗೆ ತಳ್ಳುತ್ತದೆ ಎನ್ನುವುದು ನೆನೆದು ಮನಸ್ಸು ಮರುಗಿತು.

''ಅಮ್ಮಾ... ಪ್ಲೀಸ್... ಸುಮ್ಮನೆ ಒಳಗೆ ಹೋಗು. ನಾನು ಕೃಷ್ಣನ ಹತ್ರ ಮಾತಾಡ್ತೀನಿ...''

ರಾಣಿ ಬೇಡಿಕೊಂಡಳು.

''ಆಯ್ತುಮ್ಮ ಹೋಗ್ತೀನಿ. ಆದ್ರೆ... ಇನ್ನು ಹೆಚ್ಚು ದಿನ ಇದೆಲ್ಲಾ ನಾನು ಸಹಿಸೋದಿಲ್ಲ... ಇದು ಚೆನ್ನಾಗಿ ತಿಳ್ಕೋ...''

''ಆಯ್ತುಮ್ಮ... ನೀನೀಗ ಒಳಗೆ ಹೋಗು... ಇವರೇನೋ ಮಾತಾಡೋಕೆ ಬಂದಿದಾರೆ...''

ಆಕೆಯೇ ರಾಣಿಯ ತಾಯಿ ಎನ್ನುವುದು ಶರತ್ ತಿಳಿದುಕೊಂಡ. ಜೊತೆಗೆ ಆಕೆ ಅಂಧಳು ಎನ್ನುವುದೂ ಸ್ಪಷ್ಟವಾಗಿತ್ತು. ನಿಜವಾಗಿಯೂ ಕೃಷ್ಣ, ರಾಣಿಯನ್ನು ಮದುವೆಯಗುತ್ತಾನಾ...? ಇಲ್ಲಾ ಇವಳ ಬಡತನ, ತಾಯಿಯ ಅಂಧತ್ವದ ದುರುಪಯೋಗಪಡಿಸಿಕ್ಕೊಳ್ಳುತ್ತಿದ್ದಾನಾ? ಯೋಚನೆ ಇನ್ನೊಂದು ದಿಕ್ಕಿಗೆ ಹರಿಯುತ್ತಿರುವುದು ಅರಿವಾಯಿತು. ಅರೆ, ನನ್ನ ಕೆಲಸದಿಂದ ವಿಮುಖನಾಗುತ್ತಿದ್ದೇನಲ್ಲ? ಇದು ಸರಿಯಲ್ಲ... ನಾನು ಕೆಲಸದ ಬಗೆಗೆ ಗಮನ ಹರಿಸಬೇಕು ಎಂದು ತನ್ನನ್ನು ತಾನು ಎಚ್ಚರಿಸಿಕೊಂಡ.

''ಓ.ಕೆ. ರಾಣಿಯವರೆ, ಡಿಸೆಂಬರ್ ಇಪ್ಪತ್ತನೆಯ ತಾರೀಕು ಶನಿವಾರ ನಿಮ್ಮ ಮನೇಲಿ, ಅಂದ್ರೆ ಇಲ್ಲಿ ಕೃಷ್ಣ ಇದ್ದ. ಅವತ್ತು ಏನು ನಡೀತು ಹೇಳಿ...''

''ಬೆಳಿಗ್ಗೆ ಸುಮಾರು ಒಂಬತ್ತು ಗಂಟೆ ಸಮಯದಲ್ಲಿ ಅವರ ಊರಿಂದ ಯಾರೋ ಬಂದರು. ಅವರ ತಾತ ತೀರಿಕೊಂಡ ವಿಷಯ ಹೇಳಿದರು. ಹತ್ತು ನಿಮಿಷಗಳ ಅನಂತರ ಅವರ ಜೊತೆ ಕೃಷ್ಣ ಆಚೆ ಹೋದರು.''

ಆಕೆ ಮೊದಲಿನ ಗಾಂಭೀರ್ಯದಿಂದಲೇ ಹೇಳಿದಳು. ಶರತ್ ಅವಳನ್ನು ಹೆದರಿಸಿದ್ದರೂ ಆಕೆ ಹೆದರಿರಲಿಲ್ಲ.

''ಬಂದಿದ್ದ ವ್ಯಕ್ತಿ ಹೇಗಿದ್ದ?''

ರಾಣಿ ಬಂದಿದ್ದ ವ್ಯಕ್ತಿಯ ಚಹರೆ ಹೇಳಿದಳು. ಅದು ಮೂರ್ತಿಯ ಹೋಲಿಕೆ! ಅಂದರೆ ಕೃಷ್ಣ ಮತ್ತು ರಾಣಿಯ ಸಂಬಂಧ ಮೂರ್ತಿಗೆ ತಿಳಿದಿದೆ!

ಅಪರಾಧಿ ಯಾರು?



''ಆ ವ್ಯಕ್ತಿ ಹಿಂದೆ ನಿಮ್ಮ ಮನೆಗೆ ಬಂದಿದ್ದರೆ?''

''ಇಲ್ಲ. ಅದೇ ಮೊದಲನೆಯ ಸಲ ಬಂದಿದ್ದು.''

''ಸುದ್ದಿ ಗೊತ್ತಾದಾಗ ಕೃಷ್ಣನ ಪ್ರತಿಕ್ರಿಯೆ ಹೇಗಿತ್ತು?''

''ಅಪ್‌ಸೆಟ್ ಆದರು. ಆದರೆ ಅತ್ತು ರಂಪ ಏನೂ ಮಾಡಲಿಲ್ಲ. ಮುಖ ಸಪ್ಪಗಾಗಿತ್ತು...''

''ಇನ್ನೊಂದು ಪ್ರಶ್ನೆ–ವೈಯಕ್ತಿಕವಾದದ್ದು. ಆದರೆ ನಿಮ್ಮ ಹರ್ಟ್ ಮಾಡಬೇಕೂನ್ನೋದು ನನ್ನ ಉದ್ದೇಶವಲ್ಲ. ಕೃಷ್ಣ ಮತ್ತು ನಿಮ್ಮ ಪರಿಚಯ ಹೇಗಾಯ್ತು?''

''ಅವರು ಪುರುಷ, ನಾನು ಸ್ತ್ರೀ.''

ಮೊದಲ ಸಲ ಅವಳು ತುಸು ನಕ್ಕಳು.

''ಅದೇನೋ ನಿಜ. ಪುರುಷ–ಸ್ತ್ರೀ, ಪ್ರಕೃತಿ–ಸಹಜವೇ. ಆದರೆ ಅವುಗಳ ಸಂಯೋಗಕ್ಕೆ ಅವಕಾಶ ಬೇಕಲ್ಲ?''

''ನಾನೊಂದು ಷಾಪಿಂಗ್ ಸೆಂಟರ್‌ನಲ್ಲಿ ಸೇಲ್ಸ್‌ಗರ್ಲ್ ಕೆಲಸದಲ್ಲಿದ್ದೆ. ಒಂದ್ಸಲ ಇವರು ಬಂದಿದ್ದರು. ಆಮೇಲೆ ಮತ್ತೆ ಮತ್ತೆ ನನ್ನ ಕೌಂಟರಿಗೇ ಬರುತ್ತಿದ್ದರು; ನನಗಾಗೇ ಬರುತ್ತಿದ್ದರು... ಮುಂದಿಂದು ಹೇಳಬೇಕಾಗಿಲ್ಲ.''

''ಮನೇಲಿ ಎಷ್ಟು ಜನ ಇದೀರಿ?''

''ನಾನು, ನನ್ನ ತಾಯಿ ಇಬ್ಬರೇ.''

''ನೀವೊಬ್ಬಳೇ ಮಗಳೇನು?''

''ಹೌದು. ನನ್ನ ತಾಯಿಗೆ ನಾನೊಬ್ಬಳೇ ಮಗಳು.''

''ನಿಮ್ಮ ಮದುವೆ ಯಾವಾಗ?''

''ಕೃಷ್ಣನ್ನ ಕೇಳಬೇಕು.''

''ಆಗ್ಲಿ, ಅವರನ್ನೇ ಕೇಳ್ತೀನಿ... ತಪ್ಪು ತಿಳೀಬೇಡಿ. ಒಂದು ಮಾತು ಕೇಳ್ತೀನಿ. ಅಕಸ್ಮಾತ್ ಕೃಷ್ಣ ನಿಮ್ಮನ್ನ ಒಪ್ಪದಿದ್ದರೆ...? ಏನ್ಮಾಡ್ತೀರಿ...? ನಿಮ್ಮ ಹತ್ರ ಏನು ಸಾಕ್ಷ್ಯ ಇದೆ...?''

ಶರತ್ ಪ್ರಶ್ನೆಗೆ ಆಕೆಯ ಮುಖದಲ್ಲಿ ಚಿಂತೆಯ ಛಾಯೆ ಕಂಡಿತು. ಒಂದು ಕ್ಷಣ ವಿಚಲಿತಳಾದಳು.

''ಅವರ ಜೊತೆ ತೆಗೆಸಿಕೊಂಡಿರೋ ಫೋಟೋಗಳಿವೆ...''

''ಅದು ಪರಸ್ಪರ ಗೆಳೆತನವಷ್ಟೆ ಎಂದರೆ...?''

''ಅವರು ಬರೆದ ಒಂದು ಪತ್ರ ಇದೆ. ಅದರಲ್ಲಿ ಮದುವೆಯಾಗ್ತೀನಿ ಅನ್ನೋದು ಸ್ಪಷ್ಟವಾಗಿ ಬರೆದಿದ್ದಾರೆ.''

''ಅದು ಕಾನೂನು ಒಪ್ಪುತ್ತಾ...?''

''ಖಂಡಿತಾ ಒಪ್ಪುತ್ತೆ...''

''ನನಗೆ ಅನುಮಾನ...''

''ಒಂದ್ನಿಮಿಷ ಆ ಪತ್ರ ತೋರಿಸ್ತೀನಿ...''

ಆಕೆಯ ಮುಖದಲ್ಲಿ ಕೋಪವಿತ್ತು. ಅಂದರೆ ಆ ಪತ್ರದಲ್ಲಿದ್ದುದು ಕೃಷ್ಣನನ್ನು ಕಾನೂನಿನಲ್ಲಿ ಸಿಕ್ಕಿಸಬಹುದಾದಂಥದ್ದೆ...? ಅದು ಪ್ರೇಮಪತ್ರವಿದ್ದೀತು? ಆದರೆ ಅದನ್ನು ತೋರಿಸುವ ಎಂದಾಗ ತಾನೇಕೆ ಬೇಡ ಎನ್ನಲಿಲ್ಲ ಎನಿಸಿತು ಶರತ್‌ಗೆ.

ಐದು ನಿಮಿಷದಲ್ಲಿ ರಾಣಿ ಒಂದು ಪತ್ರ ತಂದಳು. ಅದನ್ನು ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರಿನಲ್ಲಿ ಜತನ ಮಾಡಿದ್ದಳು. ಇಡೀ ಪತ್ರದ ಒಂದು ನೋಟ ಮಾತ್ರ ಸಿಕ್ಕಿತು. ಆಕೆ ಅದನ್ನು ಮಡಿಸಿ ಎರಡು ಸಾಲು ಮಾತ್ರ ಕಾಣುವಂತೆ ಶರತ್‌ಗೆ ತೋರಿಸಿದಳು.

''ನೀವು ಒಪ್ಪಿದರೆ ನಿಮ್ಮನ್ನು ಮದುವೆಯಾಗಲು ನಾನು ಪ್ರಿಪೇರ್ ಆಗಿದ್ದೇನೆ. ಪ್ಲೀಸ್ ಇಗ್ನೋರ್ ಮಾಡ್ಬೇಡಿ.''

''ಓದಿ... ಸ್ಪಷ್ಟವಾಗಿಲ್ಲವೆ? ಇದು ಸಾಲದೆ...? ಇದರಿಂದ ಅವರು ಮದುವೆಯಾಗುವಂತೆ ಕಾನೂನಿನ ಮೂಲಕ ಕಟ್ಟಿಹಾಕ್ತೀನಿ...''

ಆಕೆಯ ಮಾತುಗಳಲ್ಲಿ ಗಟ್ಟಿತನವಿತ್ತು.

''ಓ... ಶೂರ್... ಇಷ್ಟು ಸಾಕು... ಅವರು ಎಸ್ಕೇಪಾಗಲು ಸಾಧ್ಯವಿಲ್ಲ. ಯೂ ಆರ್ ನಾಟ್ ಓನ್ಲಿ ಬ್ಯೂಟಿಫುಲ್... ಯೂ ಆರ್ ಅಲ್ಸೋ ಇಂಟೆಲಿಜೆಂಟ್.''

ಶರತ್ ಮಾತಿಗೆ ರಾಣಿ ಉಬ್ಬಿದಳು.

''ನಿಮಗೆ ತೊಂದರೆಯಾಗೊಲ್ಲ ಎಂದರೆ ಒಂದು ಲೋಟ ಕಾಫಿ ಸಿಗಬಹುದೆ...?''

ಶರತ್ ಕೇಳಿದ. ಅವನಿಗೆ ಒಂದು ಕ್ಷಣ ಕಾಲಾವಕಾಶ ಬೇಕಾಗಿತ್ತು.

''ಆಫ್‌ಕೋರ್ಸ್...ಐದು ನಿಮಿಷ.''

ಶರತ್ ಹೊಗಳಿಕೆಯಿಂದ ಉಬ್ಬಿದ್ದ ಆಕೆ ನಸುನಗುತ್ತಾ ಒಳಗೆ ಹೋದಳು. ಕೃಷ್ಣ ಆಕೆಗೆ ಬರೆದಿದ್ದ ಪತ್ರ ಸೋಫಾ ಮೇಲಿಟ್ಟು ಹೋಗಿದ್ದಳು!

ಶರತ್ ತತ್‌ಕ್ಷಣ ಎದ್ದು ಮೊಬೈಲಿನಲ್ಲಿ ಆ ಪತ್ರದ ಫೋಟೋ ತೆಗೆದುಕೊಂಡು ಏನೂ ಆಗಿಲ್ಲದನಂತೆ ತನ್ನ ಮೊಬೈಲ್ ನೋಡುತ್ತಾ ಕೂತಿದ್ದ.

ರಾಣಿ ಕಾಫಿ ತಂದಾಗ ಶರತ್ ಏನೂ ಆಗಿಲ್ಲದವನಂತೆ ತಣ್ಣಗೆ ಕೂತಿದ್ದ.

''ಥ್ಯಾಂಕ್ಸ್ ಫಾರ್ ದಿ ಇನ್‌ಫರ್ಮೇಶನ್ ಆ್ಯಂಡ್ ಕಾಫಿ.''

ಶರತ್ ಮುಗುಳ್ನಗುತ್ತಾ ಕಾಫಿ ಕಪ್ಪು ಕೈಗೆ ತೆಗೆದುಕೊಂಡ.

''ಇಟ್ಸ್ ಓ.ಕೆ.''

ತಾನು ತಂದಿಟ್ಟಿದ್ದ ಲೆಟರ್ ಯಥಾಸ್ಥಿತಿಯಲ್ಲಿರುವುದು ನೋಡಿ ರಾಣಿ ನೆಮ್ಮದಿಯಿಂದ ನಕ್ಕಳು.

''ಮೆನಿ ಮೆನಿ ಥ್ಯಾಂಕ್ಸ್ ಆ್ಯಂಡ್ ವಿಷ್ ಯೂ ಆಲ್ ದಿ ಬೆಸ್ಟ್.''

ಶರತ್ ಮುಗುಳ್ನಗುತ್ತಾ ಎದ್ದು ನಿಂತ. ಇನ್ನು ಈತ ತೊಲಗುವುದು ಗ್ಯಾರಂಟಿ ಎಂಬ ಕಾರಣದಿಂದಲೋ ಏನೋ, ಆಕೆಯೂ ನೆಮ್ಮದಿಯಿಂದ ನಕ್ಕಳು.

ಐದು ನಿಮಿಷದ ಅನಂತರ ಶರತ್ ಆಟೋದಲ್ಲಿ ಕುಳಿತಿದ್ದ. ತಲೆಯಲ್ಲಿ ಯಶವಂತರಾಯರ ಕೊಲೆಗಾರನ ಬಗೆಗೆ ಹತ್ತಾರು ಚಿಂತೆಗಳು. ಆತ ಯಾರು? ಎಲ್ಲಿರುವನು? ಏಕೆ ಕೊಲೆ ಮಾಡಿದ? ಕೊಲೆ ಮಾಡಿದವನು ತಮ್ಮ ನಡುವೆಯೇ ಇರುವನೋ? ನಮ್ಮ ನಡುವೆಯೇ ಇದ್ದರೆ ಯಾರವನು? ಕೃಷ್ಣನೇ ಇರಬಹುದೇ? ಆಸ್ತಿಗಾಗಿ ಕೊಲೆ ಮಾಡಿರುವನೆ?

ರಾಮಣ್ಣನೆ? ಮಾವ ಸತ್ತರೆ ಆಸ್ತಿ ಕೃಷ್ಣನಿಗೆ. ಕೃಷ್ಣನಿಗೆ ಹೇಗಾದರೂ ಮಾಡಿ ಚಿತ್ರಾಳನ್ನ ಗಂಟು ಹಾಕಿದರೆ ಆಸ್ತಿ ತಮ್ಮದೇ ಆಗುವುದೆಂದೆ?

ಇಲ್ಲಾ ಮೂರ್ತಿಯೆ?! ಮೂರ್ತಿಗೆ ಯಶವಂತರಾಯರನ್ನು ಕೊಲೆ ಮಾಡಲು ಕಾರಣವೇ ಇಲ್ಲ. ಯಶವಂತರಾಯರು ಸತ್ತರೆ ತನ್ನ ಹೆಂಡತಿ ಸರಳಾಳಿಗೆ ಅರ್ಧ ಆಸ್ತಿ ಮಾತ್ರ ಬರುತ್ತದೆ, ಆದರೆ ಪೂರ್ತಿ ಆಸ್ತಿ ಬರುವುದಿಲ್ಲ ಎಂದು ಗೊತ್ತು. ಆಸ್ತಿಯ ಸಿಂಹಪಾಲು ಕೃಷ್ಣನಿಗೇ ದಕ್ಕುತ್ತದೆ. ಹಾಗಿರುವಾಗ ಇಂಥ ಹುಚ್ಚು ಕೆಲಸ ಮಾಡಿ ಮತ್ತೆ ಕೊಲೆಗಾರನನ್ನು ಹುಡುಕಿ ಎಂದು ತಮ್ಮ ಬಳಿಗೇ ಕೇಸು ತಂದೊಪ್ಪಿಸುತ್ತಿದ್ದನೆ?

ಆಟೋ ನಿಂತಿತು. ಅಲ್ಲೇ ಕಾಯುವಂತೆ ಆಟೋದವನಿಗೆ ಹೇಳಿ ಶರತ್ ಹತ್ತಿರದಲ್ಲಿದ್ದ ಲ್ಯಾಬೋರೇಟರಿಯನ್ನು ಪ್ರವೇಶಿಸಿದ. ಒಳಗೆ ಹೋಗಿ ಚೀಫ್ ಕೆಮಿಸ್ಟ್‌ನ ಭೇಟಿ ಮಾಡಿ ಒಂದು ರಿಪೋರ್ಟು ಪಡೆದ. ಅದನ್ನು ನೋಡಿ ಅವನ ಹುಬ್ಬುಗಳು ಗಂಟಿಕ್ಕಿದ್ದವು. ಅನಂತರ ಅದನ್ನು ತನ್ನ ಲೆದರ್ ಬ್ಯಾಗಿನಲ್ಲಿಟ್ಟುಕೊಂಡು ಈಚೆ ಬಂದು ಆಟೋದಲ್ಲಿ ಕುಳಿತ. ಆಟೋ ಹೊರಟಿತು.

ಇಷ್ಟಕ್ಕೂ ಯಶವಂತರಾಯರ ಶವ ಎಲ್ಲಿರಬಹುದು? ಹೇಗೆ ಮಾಯವಾಯಿತು? ಇದ್ದರೆ ಅದು ಯಾವ ಸ್ಥಿತಿಯಲ್ಲಿದ್ದೀತು? ಅದನ್ನು ರಕ್ಷಣೆ ಖಂಡಿತಾ ಮಾಡಿರಲಾರರು. ಅದಕ್ಕೆ ಸೂಕ್ತ ರೀತಿಯ ರಕ್ಷಣಾ ರಾಸಾಯನಿಕಗಳು ಬೇಕು. ಕೊಲೆ ಮಾಡಿದವರು ಅದನ್ನು ಆದಷ್ಟು ಬೇಗನೆ ಬೇರೆಡೆ ಹೂತಿರುತ್ತಾರೆ! ಆ ಜಾಗ ಯಾರಿಗೂ ತಿಳಿಯದಂತೆ ಎಚ್ಚರವಹಿಸಿರುತ್ತಾರೆ. ಏಕೆಂದರೆ ಶವ ಕಾನೂನಿನ ಕೈಗಳಿಗೆ ಸಿಕ್ಕರೆ ತನ್ನ ಕೈಗೆ ಬೇಡಿ ಬೀಳುವುದು ಕೊಲೆಗಾರನಿಗೆ ಚೆನ್ನಾಗಿ ಗೊತ್ತು! ಇದು ಯಾರ ಕೆಲಸ ಇರಬಹುದು? ಕೊಲೆ ಮಾಡಿದವನು ಮತ್ತೆ ಶವ ಅಪಹರಿಸುವ ಕೆಲಸ ಯಾಕೆ ಮಾಡಿದ? ಅಪಹರಿಸಿ ಅದನ್ನೇನು ಮಾಡಿದ? ಶವವನ್ನು ಪತ್ತೆ ಹಚ್ಚುವುದಾದರೂ ಹೇಗೆ? ಶರತ್‌ನ ಯೋಚನೆ ವೇಗವಾಗಿತ್ತು. ಹಾಗೇ ಆಟೋ ಸಹ ವೇಗವಾಗಿ ಓಡುತ್ತಿತ್ತು.

ಆಟೋ ಚಿಕ್ಕಪೇಟೆ ಪ್ರವೇಶಿಸಿದಾಗ ಅಲ್ಲಿನ ಗದ್ದಲಕ್ಕೆ, ಜನಸಂದಣಿಗೆ ಆಟೋದವ ನಿಮಿಷಕ್ಕೊಂದು ಸಲ ಬ್ರೇಕ್ ಹಾಕುತ್ತಿದ್ದುದಕ್ಕೆ ಶರತ್‌ನ ಯೋಚನೆಗಳು ತುಂಡಾದುವು.

ಮೂರ್ತಿಯ ಅಂಗಡಿಗೆ ಸಮೀಪದಲ್ಲಿ ಆಟೋ ನಿಲ್ಲಿಸಿ ಶರತ್ ಆಟೋದಿಂದಿಳಿದು, ಡ್ರೈವರ್‌ಗೆ ಹಣ ಕೊಟ್ಟು ಅಂಗಡಿಯ ಕಡೆಗೆ ನಡೆದ.

''ಓಹೋ... ಬನ್ನಿ... ಬನ್ನಿ...''

ಮೂರ್ತಿ ಆದರದಿಂದ ಸ್ವಾಗತಿಸಿದ. ಅಂಗಡಿಯ ತುಂಬಾ ಗಿರಾಕಿಗಳಿದ್ದರು. ಇನ್ನು ಇವರಿಂದ ಬಿಡಿಸಿಕೊಳ್ಳೋಕೆ ಟೈಮಾಗಬಹುದು ಎಂದುಕೊಂಡ ಶರತ್.

''ಕೂತ್ಕೊಳ್ಳಿ, ಒಂದೈದೇ ನಿಮಿಷ...ಏಯ್...ಕಾಫಿ ತಗೊಂಡು ಬಾರೋ...'' ಹುಡುಗನಿಗೆ ಹೇಳಿದ.

''ಪರ್ವಾಗಿಲ್ಲ ಮೂರ್ತಿಯವರೆ. ಆಗಲೇ ಆಗಿದೆ.''

''ಇರಲಿ ನನಗೆ ಕಂಪೆನಿ ಕೊಟ್ಟ್ರಾಯ್ತು.''

ಶರತ್ ಅಂಗಡಿಯನ್ನು ಅವಲೋಕಿಸುತ್ತಾ ಕುಳಿತು ಮೂರ್ತಿಗೆ ವ್ಯಾಪಾರ ಜೋರಾಗಿರೋ ಹಾಗಿದೆ. ಲಾಭ ಕೂಡ ಚೆನ್ನಾಗಿರಬಹುದು. ಯಶವಂತರಾಯರ ಸಾವಿನಿಂದ ಇವನಿಗೆ ಬರುವ ಆಸ್ತಿ, ಹಣ ಗೌಣವೆ? ಹಾಗಿದ್ರೆ ಮೂರ್ತಿಯನ್ನು ಗುಮಾನಿಗಳ ಪಟ್ಟಿಯಿಂದ ಬಿಡಬಹುದೆ?

ಕಾಫಿ ಬರುವ ಸಮಯಕ್ಕೆ ಮೂರ್ತಿಯೂ ಬಿಡುವಾದ. ಒಂದು ಲೋಟ ಶರತ್ ಕೈಗೆ ಕೊಟ್ಟು ತಾನೊಂದನ್ನು ಕೈಗೆ ತೆಗೆದುಕೊಂಡ. ಕಾಫಿ ತಂದ ಹುಡುಗ ಕೇವಲ ಎರಡೇ ಎರಡು ತಂದಿರಲಿಲ್ಲ, ಒಟ್ಟು ಐದು ತಂದಿದ್ದ. ಇವರಿಬ್ಬರಿಗೆ ಕೊಟ್ಟು ಉಳಿದ ಮೂರನ್ನು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕೊಡಲು ಹೋದ.

''ಊರಿಂದ ಯಾವಾಗ ಬಂದ್ರಿ?'' ಮೂರ್ತಿ ಕೇಳಿದ.

''ಸುಮಾರು ಹನ್ನೆರಡು ಗಂಟೆಗೆ ಬಂದೆ.''

''ಏನಾದ್ರೂ ಪ್ರೋಗ್ರೆಸ್ ಆಯ್ತಾ?''

''ಇಲ್ಲ, ಇನ್ನೂ ಏನೂ ಖಚಿತವಾದ ಸುಳಿವು ಸಿಕ್ಕಿಲ್ಲ...''

''ಹಾ! ನೀವು ಕೊಟ್ಟ ಮಾತ್ರೆ ಕೆಮಿಕಲ್ ಕಾಂಪೋಜಿಷನ್...''

ಮೂರ್ತಿ ಕ್ಯಾಷ್ ಬಾಕ್ಸಿನಿಂದ ಒಂದು ಕವರ್ ತೆಗೆದುಕೊಟ್ಟ. ಶರತ್ ಬಿಡಿಸಿ ಓದಿದ.

''ನನಗೇನೂ ಅರ್ಥವಾಗಲಿಲ್ಲ, ನಿಮಗರ್ಥವಾಗುತ್ತೇನೋ ನೋಡಿ'' ಮೂರ್ತಿ ಕಾಫಿ ಹೀರುತ್ತಾ ಹೇಳಿದ.

ಮೂರ್ತಿ ಕೊಟ್ಟದ್ದು ಮತ್ತು ತಾನು ಮಾಡಿಸಿದ್ದು ಎರಡಕ್ಕೂ ತಾಳೆಯಾಗುತ್ತಿದೆಯಲ್ಲ ಎಂದು ಅಚ್ಚರಿಗೊಂಡ ಶರತ್! ಹಳ್ಳಿಯಲ್ಲಿ ಮಾತ್ರೆಯನ್ನು ಹೊನ್ನಿ ತಂದಾಗ, ಮೂರ್ತಿ ತಾನೇ ಅದರ ಕೆಮಿಕಲ್ ಅನಾಲಿಸಿಸ್ ಮಾಡಿಸ್ತೇನೆ ಎಂದು ಉತ್ಸಾಹ ತೋರಿದ್ದ. ಅದನ್ನು ನೋಡಿದಾಗ ಶರತ್‌ಗೆ ಬೇರೆ ಯೋಚನೆ ಬಂದಿತ್ತು. ಮೂರ್ತಿ ಅದರ ರಿಪೋರ್ಟು ಬದಲಾವಣೆ ಮಾಡಿಸಬಹುದು ಎನ್ನಿಸಿತ್ತು. ಆದರೆ ಹಾಗಾಗಿರಲಿಲ್ಲ, ಮೂರ್ತಿ ಅಸಲು ರಿಪೋರ್ಟನ್ನೇ ಕೊಟ್ಟಿದ್ದ. ಹಾಗಾದರೆ ಮೂರ್ತಿಯ ಮೇಲೆ ಅನುಮಾನಪಟ್ಟಿದ್ದು ತಪ್ಪೆ?

''ರಿಪೋರ್ಟಿಗೆ ಥ್ಯಾಂಕ್ಸ್.''

''ಅರೆ! ಇದಕ್ಕೆ ಥ್ಯಾಂಕ್ಸ್ ಯಾಕೆ? ಇದು ನನ್ನ ಕೆಲಸ. ನಾನು ಮಾಡದೆ ಇದ್ದರೆ ಹೇಗೆ?''

ಮೂರ್ತಿ ನಕ್ಕ.

''ಹಾ! ಇನ್ನೊಂದು ವಿಷಯ. ಯಶವಂತರಾಯರು ಸತ್ತ ಸುದ್ದಿ ನಿಮಗೆ ಮೊದಲು ತಿಳಿಸಿದವರು ಯಾರು?''

''ರಾಮಣ್ಣ...ಅವರೇ ಫೋನ್ ಮಾಡಿದ್ದರು''

''ಆಮೇಲೆ?''

''ಆಮೇಲೆ ಕೃಷ್ಣನಿಗೆ ವಿಷಯ ತಿಳಿಸಬೇಕು ಅಂತ ಹೇಳಿದರು. ಆದ್ರೆ ಕೃಷ್ಣ ಎಲ್ಲಿರ್ತಾನೆ, ಹೇಗೆ ಹುಡುಕೋದೂಂತ ಕೇಳಿದ್ದಕ್ಕೆ ನಾಲ್ಕು ವಿಳಾಸ ಕೊಟ್ಟರು. ಆ ನಾಲ್ಕು ವಿಳಾಸದಲ್ಲಿ ಒಂದು ಕಡೆ ಇರ್ತಾನೇಂತ ಹೇಳಿದರು.

''ಯಾಕೆ ಕೃಷ್ಣನ ಮೊಬೈಲಿಗೆ ಫೋನು ಮಾಡಬಹುದಿತ್ತಲ್ಲ?'' ಶರತ್ ಒಮ್ಮೆಲೇ ಅನುಮಾನಿಸಿದ.

''ಅಷ್ಟು ಸುಲಭದಲ್ಲಿ ಮನೆಯವರಿಂದ ಫೋನನ್ನು ಅವನು ರಿಸೀವ್ ಮಾಡೋದಿಲ್ಲ! ಅದಕ್ಕೇ ಖುದ್ದಾಗಿ ಅವನಿಗೆ ತಿಳಿಸಬೇಕಾಗಿತ್ತು''

''ಆ ನಾಲ್ಕು ವಿಳಾಸ ಯಾವ್ಯಾವು?''

''ಒಂದು ಅವನು ಬೆಂಗಳೂರಲ್ಲಿರೋವಾಗ ಉಳಿದುಕೊಳ್ಳೋ ಹೋಟೇಲ್. ಎರಡನೆಯದು ಒಂದು ಕ್ಲಬ್ಬು. ಅಲ್ಲಿ ಸದಾ ಇಸ್ಪೀಟಾಟ ನಡೆಯುತ್ತೆ. ಉಳಿದೆರಡು ಇಬ್ಬರು ಹುಡುಗಿಯರದು. ಹೋಟೇಲು ಮತ್ತು ಕ್ಲಬ್‌ಗೆ ಫೋನ್ ಮಾಡಿ ಕೇಳಿದೆ. ಕೃಷ್ಣ ಇರಲಿಲ್ಲ. ಈ ಹುಡುಗಿಯರ ವಿಳಾಸ ಹುಡುಕಿದೆ, ಮೊದಲನೆಯ ಮನೇಲೇ ಕೃಷ್ಣ ಸಿಕ್ಕಿದ.''

''ಆಕೆ ಹೆಸರು?''

''ರಾಣಿ.''

''ಕೃಷ್ಣನ ರಹಸ್ಯ ಜೀವನ ರಾಮಣ್ಣೋರಿಗೆ ಪೂರಾ ಗೊತ್ತಿರೊ ಹಾಗಿದೆ ಅಲ್ವಾ?''

''ಬೇರೆಯವರ ವ್ಯವಹಾರಕ್ಕೆ ನಾನು ತಲೆ ಹಾಕೋದಕ್ಕೆ ಹೋಗೋದಿಲ್ಲ.''

''ಯಶವಂತರಾಯರಿಗೆ ತಮ್ಮ ಮೊಮ್ಮಗ ಕೃಷ್ಣನ ಸೀಕ್ರೆಟ್ ಲೈಫ್ ಗೊತ್ತಿತ್ತೆ?''

''ಅವರು ಬುದ್ಧಿವಂತರು, ನೇರವಾಗಿ ತಿಳಿದುಕೊಳ್ಳೋದಕ್ಕೆ ಪ್ರಯತ್ನ ಪಡದೆ ಇದ್ದರೂ ಊಹಿಸಿರ್ತಾರೆ.''

''ಥ್ಯಾಂಕ್ಸ್ ಫಾರ್ ದಿ ಇನ್‌ಫಾರ್ಮೇಷನ್.''

''ಯೂ ಆರ್ ವೆಲ್‌ಕಮ್.''

''ಫ್ಯಾಮಿಲಿ ಕರ್ಕೊಂಡು ಬಂದ್ರಾ?''

''ಇಲ್ಲ, ಊರಲ್ಲೇ ಬಿಟ್ಟು ಬಂದಿದೀನಿ. ಹನ್ನೊಂದು ದಿವಸದ ಕೆಲಸ ಮುಗಿಸಿಕೊಂಡು ಬರಲಿಂತ.''

''ಬೈ...''

ಶರತ್ ಮೂರ್ತಿಯ ಅಂಗಡಿಯಿಂದ ಈಚೆ ಬಂದ. ತಲೆ ಬಿಸಿಯಾಯಿತು. ಅವನ ಮತ್ತು ವಿಕ್ರಮ್ ಊಹೆ ತಲೆಕೆಳಗಾಗಿತ್ತು! ಮಾತ್ರೆಯ ಲ್ಯಾಬ್ ರಿಪೋರ್ಟನ್ನು ಮೂರ್ತಿ ತಿರುಚಿಸಬಹುದು ಎಂದುಕೊಂಡಿದ್ದರು. ಆದರೆ ಹಾಗಾಗಿರಲಿಲ್ಲ! ಮೂರ್ತಿ ಅವರ ಊಹೆಯನ್ನು ತಲೆಕೆಳಗು ಮಾಡಿದ್ದ ಕೃಷ್ಣನ ಪ್ರೇಯಸಿ ರಾಣಿಯ ಮನೆಯ ವಿಳಾಸ ತಾನಾಗೇ ಹುಡುಕಿರಲಿಲ್ಲ, ಅದೂ ರಾಮಣ್ಣ ತಿಳಿಸಿದ್ದು!

★ ★ ★

ರಾಜಾಜಿನಗರದಲ್ಲಿ ಡಾಕ್ಟರ್ ರಮೇಶ್ ಅವರ ಕಮಲ ಕ್ಲಿನಿಕ್ ಹುಡುಕುವುದು ಶರತ್‌ಗೆ ಕಷ್ಟವಾಯಿತು. ಗೂಗಲ್ ಮ್ಯಾಪು ತೋರಿಸುತ್ತಿದ್ದ ಸ್ಪಾಟಿನ ಬಳಿ ಬಂದಿದ್ದರೂ ಕ್ಲಿನಿಕ್ಕು ಕಾಣಿಸುತ್ತಿರಲಿಲ್ಲ, ಅಥವಾ ಅದೆಲ್ಲಿದೆಯೋ ಅದನ್ನು ಗುರುತಿಸಲು ಶರತ್‌ಗೆ ಆಗಿರಲಿಲ್ಲ. ಎರಡು ಮೂರು ಸಲ ಸುತ್ತಾಡಿ, ಒಂದಿಬ್ಬರನ್ನು ಕೇಳಿದ ಮೇಲೆ ಸಿಕ್ಕಿತು ಕಮಲ ಕ್ಲಿನಿಕ್.

ಎರಡನೆಯ ಮುಖ್ಯರಸ್ತೆಯ ಹಳೆಯ ಎರಡು ಮಹಡಿ ಕಟ್ಟಡವೊಂದರಲ್ಲಿ ಕಮಲ ಕ್ಲಿನಿಕ್ ಬೋರ್ಡು ಕಂಡಿತು. ಮಹಡಿ ಮೆಟ್ಟಿಲುಗಳನ್ನು ಹತ್ತಿ ಕ್ಲಿನಿಕ್ ಪ್ರವೇಶಿಸಿದ ಶರತ್‌ನನ್ನು ಬಾಗಿಲಲ್ಲೇ ಯುವತಿಯೊಬ್ಬಳು ತಡೆದಳು.

''ಇವತ್ತು ಇನ್ಯಾರಿಗೂ ಟೋಕನ್ ಇಲ್ಲ, ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಬನ್ನಿ.''

ಮೇಜಿನ ಹಿಂದೆ ಕೂತಿದ್ದವಳು ಶರತ್‌ಗೆ ಹೇಳಿದಳು.

''ನಾನು ಪೇಷಂಟ್ ಅಲ್ಲಮ್ಮ. ಚಿಕ್ಕಪೇಟೆ ಟೆಕ್ಸ್‌ಟೈಲ್ ಮರ್ಚೆಂಟ್ ಮೂರ್ತಿ ಅವರ ಕಡೆಯಿಂದ ಬಂದಿದ್ದೀನಿ. ಡಾಕ್ಟರ್ ಹತ್ರ ಮಾತಾಡ್ಬೇಕಾಗಿತ್ತು.''

ಇನ್ನು ಮೂರು ಜನ ಪೇಷಂಟ್ಸ್ ಇದ್ದಾರೆ ಅವರಾದ್ಮೇಲೆ, ಅವರು ಒಪ್ಪಿದರೆ ನೀವು ಡಾಕ್ಟರ್ ನೋಡಬಹುದು.'' ಯುವತಿ ಹೇಳಿದಳು.

''ಮತ್ತೆ ಪೇಷಂಟ್ಸು ಬರ್ತಾನೇ ಇರ್ತಾರಲ್ವಾ?'' ಶರತ್ ಕೇಳಿದ.

''ಇಲ್ಲ, ಇನ್ನು ಯಾರಿಗೂ ಟೋಕನ್ ಕೊಡಬೇಡಾಂತ ಡಾಕ್ಟರು ಹೇಳಿದಾರೆ. ಅವರ ಮಗಳ ಬರ್ತ್‌ಡೇ ಇವತ್ತು. ಅದಕ್ಕೆ ಬೇಗ ಹೋಗ್ತಾರೆ. ಈ ಮೂರು ಜನ ಹೋದ್ಮೇಲೆ ನೀವು ಡಾಕ್ಟರ್ ನೋಡಬಹುದು.''

ಶರತ್ ಕುರ್ಚಿಯ ಮೇಲೆ ಕುಳಿತು ಕಾಯತೊಡಗಿದ.

ಡಾಕ್ಟರ್ ರಮೇಶ್ ಅವರ ಕಮಲ ಕ್ಲಿನಿಕ್ ತುಂಬಾ ಹಳೆಯದಂತೆ ಕಾಣಿಸುತ್ತಿತ್ತು. ಬಹುಶಃ ರಮೇಶ್ ಕೂಡ ನಡು ವಯಸ್ಸು ದಾಟಿದವರೇ ಇರಬೇಕು ಎಂದುಕೊಂಡ ಶರತ್.

ಪೇಷಂಟ್‌ಗಳು ಕುಳಿತಿದ್ದ ಜಾಗ ಇಪ್ಪತ್ತು ಅಡಿ ಉದ್ದ ಮತ್ತು ಮೂವತ್ತು ಅಡಿ ಅಗಲವಿತ್ತು. ಅವನು ಕೂತಿದ್ದ ಜಾಗದ ಎದುರಿಗೆ ಒಂದು ಕ್ಯಾಬಿನ್ ಕಾಣಿಸುತ್ತಿತ್ತು. ಅದು ಡಾಕ್ಟರ್ ರಮೇಶ್ ಅವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆ, ಸಲಹೆ ನೀಡುವ ಜಾಗ ಎಂದುಕೊಂಡ ಶರತ್.

ಸುಮಾರು ಇಪ್ಪತ್ತು ನಿಮಿಷಗಳಲ್ಲೇ ಅಲ್ಲಿದ್ದ ಎಲ್ಲಾ ಪೇಷಂಟುಗಳೂ ಡಾಕ್ಟರ್ ಜೊತೆ ತಮ್ಮ ಸಂದರ್ಶನ ಮುಗಿಸಿ ಈಚೆ ಬಂದಿದ್ದರು.

''ಇನ್ನು ಯಾರಾದರೂ ಪೇಷಂಟ್ಸ್ ಇದ್ದಾರ?''

ಒಳಗಿಂದ ಬಂದ ಧ್ವನಿ ಡಾಕ್ಟರ್ ರಮೇಶ್ ಅವರದ್ದೇ ಇರಬೇಕು ಎಂದು ಶರತ್ ಎದ್ದುನಿಂತ.

''ಇಲ್ಲ ಸರ್. ಮೂರ್ತಿ ಅವರ ಕಡೆಯಿಂದ ನಿಮ್ಮನ್ನು ನೋಡಬೇಕು ಅಂತ ಒಬ್ಬರು ಬಂದಿದ್ದಾರೆ.''

''ಒಳಗೆ ಹೋಗಿ'' ಯುವತಿ ಹೇಳಿದ್ದು ಶರತ್‌ಗೆ ಕೇಳಿಸಿತು.

''ಕಳಿಸು ಅವರನ್ನ.''

ಆಕೆ ಈಚೆ ಬರುವ ಸಮಯಕ್ಕೆ ಶರತ್ ಆಗಲೇ ರಮೇಶ್ ಅವರ ಕ್ಯಾಬಿನ್ನಿನ ಪ್ರವೇಶದ ಬಳಿ ನಿಂತಿದ್ದ.

''ಸರ್ ಒಳಗೆ ಹೋಗಿ.''

''ನಮಸ್ಕಾರ ಡಾಕ್ಟರ್.''

ಶರತ್ ಕ್ಯಾಬಿನ್ ಒಳಗೆ ಪ್ರವೇಶಿಸಿದ.

ಎದುರಿಗೆ ಸಣ್ಣ ಟೇಬಲ್ಲಿನ ಹಿಂದೆ ಡಾಕ್ಟರ್ ರಮೇಶ್ ಕುಳಿತಿದ್ದರು. ಅವರ ಪಕ್ಕದಲ್ಲಿ ಪೇಷಂಟ್‌ಗಳು ಕುಳಿತುಕೊಳ್ಳಲು ಒಂದು ಸ್ಟೂಲ್, ಅದರಾಚೆ ಪೇಷಂಟ್‌ಗಳು ಮಲಗಿಕೊಳ್ಳಲು ಎತ್ತರದ ಒಂದು ಮಂಚವಿತ್ತು.

ಶರತ್ ಊಹಿಸಿದಂತೆ ಡಾಕ್ಟರ್ ರಮೇಶ್ ಸುಮಾರು ಐವತ್ತು ವರ್ಷ ವಯಸ್ಸಿನ ಚೂಪು ಮೂಗಿನ, ಅತೀವ ಚಟುವಟಿಕೆಯ ವ್ಯಕ್ತಿ ಎನಿಸಿತು. ತಲೆಯ ಮಧ್ಯಭಾಗದ ಕೂದಲುಗಳು ಉದುರಿಹೋಗಿ ಎರಡು ಪಕ್ಕಗಳಲ್ಲಿ ಮಾತ್ರ ಕೂದಲಿತ್ತು. ಅವರ ಚುರುಕು ಕಣ್ಣುಗಳು ಶರತ್‌ನನ್ನು ತಿವಿಯುವಂತಿದ್ದವು.

''ಹೇಳಿ ನನ್ನ ಕಡೆಯಿಂದ ಏನಾಗಬೇಕು?''

ಮಾತಿನಲ್ಲೂ ವೇಗವಿತ್ತು. ಆತುರದಲ್ಲಿ ಮಾತಾಡುವ ವ್ಯಕ್ತಿಯಂತೆ ಕಂಡರು ಡಾಕ್ಟರ್ ರಮೇಶ್.

''ನನ್ನ ಹೆಸರು ಶರತ್. ಪ್ರೈವೇಟ್ ಡಿಟೆಕ್ಟಿವ್. ಯಶವಂತರಾಯ ಅವರ ಸಾವಿನ ಸಂಬಂಧದಲ್ಲಿ ಮೂರ್ತಿಯವರು ನಮ್ಮನ್ನು ಅಪಾಯಿಂಟ್ ಮಾಡಿದ್ದಾರೆ.''

''ಓಹೋ ಹಾಗಾದ್ರೆ ಯಶವಂತರಾಯರ ಸಾವು ಇಷ್ಟಕ್ಕೆ ನಿಂತಿಲ್ಲ. ಸರಿ ನನ್ನಿಂದ ಏನಾಗಬೇಕು ಹೇಳಿ. ನಿಮಗೆ ಐದು ನಿಮಿಷ ಟೈಮ್ ಕೊಡ್ತೀನಿ ಅಷ್ಟೇ.''

''ತಮಗೆ ಅವರ ಸ್ಥಿತಿ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಅವರಿಗೆ ಏನು ಕಾಯಿಲೆ ಇತ್ತು, ಅವರು ಸಾಯೋದಕ್ಕೆ ಏನು ಕಾರಣ? ಅದು ಸಹಜವಾದ ಸಾವೇ? ಇಲ್ಲ ಯಾರಾದರೂ ಕೊಲೆ ಮಾಡಿರುವ ಸಾಧ್ಯತೆ ಇದೆಯೇ? ಈ ಬಗ್ಗೆ ತಮ್ಮ ಅಭಿಪ್ರಾಯ ಬೇಕಾಗಿತ್ತು.''

ಶರತ್ ವಿನಯದಿಂದ ಕೇಳಿದ.

''ಏನು ಕೊಲೇನಾ..? ನಿಮ್ಮ ತಲೆಗೆ ಈ ವಿಷಯ ಯಾರು ತುಂಬಿದರು?''

ಡಾಕ್ಟರ್ ರಮೇಶ್ ಅಚ್ಚರಿ ವ್ಯಕ್ತಪಡಿಸಿದರು.

''ಹೌದು ಸಾರ್. ಅವರ ಕೊಲೆಯಾಗಿದೆ ಅಂತ ಒಂದು ಮೂಕರ್ಜಿ ಪೊಲೀಸಿಗೆ ಕಳಿಸಿದ್ದಾರೆ. ಪೊಲೀಸ್ ಇಲಾಖೆ ಶವ ಪರೀಕ್ಷೆಗೆ ಸಮಾಧಿಯಿಂದ ತೆಗೆಯೋಕೆ ಹೋದಾಗ ಅಲ್ಲಿ ಶವ ಇರಲಿಲ್ಲ, ಇದನ್ನೆಲ್ಲಾ ನಿಮಗೆ ಮೂರ್ತಿಯವರು ಹೇಳಿರಬೇಕಲ್ಲ?''

''ಹೂ... ಹೇಳಿದಾರೆ... ಇದಕ್ಕೆ ನನ್ನಿಂದ ಏನಾಗಬೇಕು?''

''ಅವರು ನಿಮ್ಮ ಪೇಶಂಟಾಗಿದ್ದರು. ಅವರ ದೇಹಸ್ಥಿತಿ ತಮಗೆ ಗೊತ್ತು. ಅವರ ಸಾವಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು ಅನ್ನೋದು ತಿಳಿಸಿ.''

''ಯಶವಂತ ರಾಯರು ನನ್ನತ್ರ ಕನ್ಸಲ್ಟೇಶನ್‌ಗೆ ಬರುತ್ತಿದ್ದರು. ಅವರಿಗೆ ರಕ್ತದೊತ್ತಡ ಇತ್ತು, ಶುಗರ್ ಇತ್ತು, ಆಗ್ಗಾಗ್ಗೆ ಮೈಗ್ರೇನ್ ತಲೆನೋವು ಬರುತ್ತಿತ್ತು. ಆದ್ರೆ ಸಾಯೋ ಅಂಥ ಯಾವ ಲಕ್ಷಣಗಳೂ ಇರಲಿಲ್ಲ, ಆದರೆ ಸಾವಿನ ವಿಷಯ ಹೀಗೇಂತ ಹೇಳೋಕಾಗಲ್ಲ.''

''ಅವರ ಕೊಲೆ ಯಾಕಿರಬಹುದು?''

''ಏನ್ರೀ... ನನ್ನ ಬಾಯಿಂದ ಹೀಗೆಲ್ಲಾ ಹೇಳಿ ಸಿಕ್ಕಿಸಬೇಕೂಂತಿದ್ದೀರಾ? ಯಾವ ಡಾಕ್ಟರು ಅವರು ಸತ್ತಾಗ ನೋಡಿದರೋ ಅವರನ್ನ ಹೋಗಿ ಕೇಳಿ. ಕೊಲೆ ಅನ್ನೋ ಅನುಮಾನ ಇದ್ರೆ ಪೋಸ್ಟ್ ಮಾರ್ಟಮ್ ಮಾಡಿಸಿ.''

ರಮೇಶ್ ಒಮ್ಮೆಲೇ ರೇಗಿದರು.

''ಸಾರಿ ಡಾಕ್ಟರೇ... ನೀವು ಅವರ ಫ್ಯಾಮಿಲಿ ಡಾಕ್ಟರ್... ಅಂದ್ರೆ ಅವರು ಸತ್ತಾಗ ತಾವು ಅವರನ್ನ ನೋಡಲು ಹೋಗಲಿಲ್ಲವೆ?''

''ಕರೆದ್ರೆ ಹೋಗಬಹುದು. ಕರೀದಿದ್ರೆ ನಾನ್ಯಾಕೆ ಮೂಗು ತೂರಿಸ್ಕೊಂಡು ಹೋಗಲಿ?''

''ಸಾರಿ, ತಾವು ಅವರ ಸಾವಿನ ಸಮಯದಲ್ಲಿದ್ದು ಅವರನ್ನ ಎಕ್ಸಾಮಿನ್ ಮಾಡಿದ್ದೀರಾಂತ ಕೇಳಿದೆ. ಹೋಗಲಿ... ಅವರ ಯಾವುದಾದರೂ ಅಭ್ಯಾಸಗಳು ಅವರು ಸಾಯೋದಕ್ಕೆ ಕಾರಣ ಆಗಿರಬಹುದೆ?''

''ಅದನ್ನೆಲ್ಲಾ ನನ್ನನ್ನ ಯಾಕ್ರೀ ಕೇಳ್ತೀರಾ...? ಮೆಡಿಕಲ್ ರಿಪೋರ್ಟ್ ನೋಡಿ ತಿಳ್ಕೊಳ್ಳಿ...''

''ಸರಿ ಡಾಕ್ಟರ್. ನಿಮಗೆ ಹೇಳೋಕೆ ಮನಸ್ಸಿದ್ದ ಹಾಗೆ ಕಾಣಿಸ್ತಿಲ್ಲ. ಯಶವಂತರಾಯರ ಕೇಸು ಸ್ವಲ್ಪ ಕಾಂಪ್ಲಿಕೇಟೆಡ್ ಆಗೋ ಥರಾ ಇದೆ. ನಾವು ಖಾಸಗಿ ಡಿಟೆಕ್ಟೀವ್ಸ್ ಅದಕ್ಕೇ ನಮ್ಮ ಪ್ರಶ್ನೆಗಳಿಗೆ ಉತ್ತರ ಹೇಳೋಕೆ ನೀವು ಮನಸ್ಸು ಮಾಡ್ತಿಲ್ಲ. ಇದು ಪೊಲೀಸ್ ಕಡೆಯಿಂದ ಬಂದ್ರೆ...? ಆಗಲೂ ನೀವು ರೆಫ್ಯೂಸ್ ಮಾಡೋಕಾಗೊಲ್ಲ...''

''ಏನ್ರೀ ಹೆದ್ರಿಸ್ತಿದ್ದೀರ?'' ಡಾಕ್ಟರ್ ರಮೇಶ್ ಮತ್ತೆ ರೇಗಿದರು.

''ಹೆದ್ರಿಸ್ತಿಲ್ಲ ಸಾರ್... ನಮಗೆ ಬೇಕಾದ ಇನ್‌ಫಾರ್ಮೇಶನ್ ಪಡ್ಕೊಳ್ಳೋಕೆ ಇರೋ ದಾರಿ ಹೇಳಿದೆ. ನನ್ನ ಪ್ರಶ್ನೆಗೆ ನೀವು ಉತ್ತರಿಸೊಲ್ಲ ಅಂದ್ರೆ ನಾನು ಪೊಲೀಸ್ ಕಡೆಯಿಂದ ಬರ್ತೀನಿ...''

ಶರತ್ ಮಾತಿನಲ್ಲೇ ಚುರುಕು ಮುಟ್ಟಿಸಿದ.

''ಏನು? ಧಮಕೀನಾ...?''

''ಛೆ... ಛೆ... ಹಾಗ್ಯಾಕೆ ತಿಳೀತೀರ...? ರಿಕ್ವೆಸ್ಟು ಅಷ್ಟೆ.'' ಶರತ್ ಡಾಕ್ಟರ್ ರಮೇಶ್ ಮನ ಒಲಿಸುವ ಪ್ರಯತ್ನ ಮಾಡಿದ. ರಮೇಶ್ ಬಿಗಿದಿದ್ದ ಮುಖ ಸಡಿಲವಾಯಿತು.

''ಅವರ ಹಾರ್ಟು ವೀಕಾಗಿತ್ತು. ಎಚ್ಚರಿಕೆಯಿಂದ ಇರೋಕೆ ಹೇಳಿದ್ದೆ, ಅವರಿಗೆ ಡ್ರಿಂಕ್ಸ್ ತಗೊಳ್ಳೋ ಅಭ್ಯಾಸ ಇತ್ತು. ಅದರ ಜೊತೇಲೇ ಟ್ಯಾಬ್ಲೆಟ್ಸ್ ಕೂಡ ತಗೋತಿದ್ದರು. ಒಂದೆರಡು ಸಲ ಅವುಗಳಿಂದ ರಿಯಾಕ್ಷನ್ ಆಗಿ ತೊಂದರೆಯಾಗಿತ್ತು. ಎರಡು

ದಿವಸ ನರ್ಸಿಂಗ್ ಹೋಮಲ್ಲಿದ್ದರು. ಅಂಥದ್ದೇ ಈ ಸಲ ಕೂಡ ಆಗಿರಬಹುದು. ಅದು ಕೊಲೆ ಅಂತ ಹೇಳೋಕೆ ನಾನಲ್ಲಿ ಇರಲಿಲ್ಲ. ಅವರ ಬಾಡಿ ಚೆಕಪ್ ಮಾಡಿಲ್ಲ. ಅವರ ಪೋಸ್ಟ್ ಮಾರ್ಟಮ್ ರಿಪೋರ್ಟು ಕೂಡ ನೋಡಿಲ್ಲ. ಹಾಗಂದ ಮಾತ್ರಕ್ಕೆ ಅವರು ಕೊಲೆಯಾಗಿದ್ದಾರೆ ಅಂತ ಹೇಳೋದೂ ತಪ್ಪು. ರಕ್ತದೊತ್ತಡ ಇದ್ದಿದ್ದರಿಂದ ಅವರು ಹಾರ್ಟ್ ಅಟ್ಯಾಕ್ ಆಗಿರಬಹುದು. ಇದಿಷ್ಟು ಮಾತ್ರ ನಾನು ಹೇಳಬಲ್ಲೆ. ಅದು ಕೊಲೆಯೋ ಅಲ್ಲವೋ... ಅದನ್ನ ನಾನು ಹೇಳಲಾರೆ...''

ಡಾಕ್ಟರ್ ರಮೇಶ್ ಈ ಸಲ ಉಡಾಫೆ ಮಾಡದೆ ಹೇಳಿದರು. ಅವ್ರ ಮಾತು ನಂಬಬಹುದು ಎನ್ನಿಸಿತು ಶರತ್‌ಗೆ. ''ಸಾರಿ, ಇವತ್ತು ನನ್ನ ಮಗಳ ಬರ್ತ್‌ಡೇ ಇದೆ... ಬೇಗ ಹೋಗಬೇಕು... ಬೇರೆ ಏನಾದ್ರೂ ಬೇಕಾದ್ರೆ ಫೋನ್ ಮಾಡಿ. ಛಾಯಾ... ಇವರಿಗೆ ನನ್ನ ಕಾರ್ಡ್ ಕೊಡು... ಮತ್ತೆ ಕ್ಲಿನಿಕ್ ಕ್ಲೋಸ್ ಮಾಡು'' ಎಂದು ಹೇಳಿದ ಡಾಕ್ಟರ್ ರಮೇಶ್ ಶರತ್ ಉತ್ತರಕ್ಕೂ ಕಾಯದೆ ಎದ್ದರು.

''ಥ್ಯಾಂಕ್ಯು ಡಾಕ್ಟರ್... ಸಾರಿ, ನನ್ನಿಂದ ನೀವು ಮನೆಗೆ ಹೋಗೋದಕ್ಕೆ ಸ್ವಲ್ಪ ತೊಂದ್ರೆಯಾಯ್ತು.''

''ಇಟ್ಸ್ ಓಕೆ.''

ಶರತ್ ಆಚೆ ಕೂತಿದ್ದ ಛಾಯಾಳಿಂದ ರಮೇಶ್ ಅವರ ವಿಸಿಟಿಂಗ್ ಕಾರ್ಡು ಪಡೆದು ಕ್ಲಿನಿಕ್‌ನ ಬಾಗಿಲಾಚೆ ಕಾಲಿಡುತ್ತಲೇ ಬಾಗಿಲಾಚೆ ನಿಂತಿದ್ದ ಒಬ್ಬ ವ್ಯಕ್ತಿಗೆ ಢಿಕ್ಕಿ ಹೊಡೆಯಲಿದ್ದ! ಸಾವರಿಸಿಕೊಂಡು ಪಕ್ಕಕ್ಕೆ ಸರಿದು ಆ ವ್ಯಕ್ತಿಯನ್ನು ಗದರಿದ ಶರತ್.

''ಸ್ವಲ್ಪ ಪಕ್ಕಕ್ಕೆ ಸರಿದು ನಿಲ್ಲಬಾರದೆ?''

''ಸಾರಿ ಸಾರ್'' ಎಂದವನೇ ಸರಸರನೆ ಮಹಡಿಯ ಮೆಟ್ಟಿಲುಗಳ ಕಡೆ ಧಾವಿಸಿದ.

ಶರತ್‌ಗೆ ಅವನ ವರ್ತನೆಯಲ್ಲಿ ಏನೋ ಅಸಹಜತೆ ಕಾಣಿಸಿತು. ಬಹುಶಃ ಆತ ಒಳಗಿನ ಮಾತುಗಳನ್ನು ಕೇಳಿಸಿಕ್ಕೊಳ್ಳುತ್ತಿದ್ದ ಎನಿಸಿತು. ಆದರೆ ಏಕೆ? ಯಾರಾತ? ಇದ್ದಕ್ಕಿದ್ದಂತೆ ಆ ವ್ಯಕ್ತಿಯನ್ನು ಎಲ್ಲೋ ನೋಡಿರುವೆ ಎನಿಸಿತು! ಎಲ್ಲಿ...? ಮಿಂಚಿನಂತೆ ಹೊಳೆಯಿತು! ಅವನು ಮೂರ್ತಿಯವರ ಅಂಗಡಿಯಲ್ಲಿ ಕಂಡಿದ್ದ. ಅಂದರೆ ಮೂರ್ತಿಯ ಅಂಗಡಿ ಕೆಲಸದವನು! ಅವನನ್ನು ಮೂರ್ತಿ ಕಳಿಸಿದ್ದರೆ? ತಾನು ಡಾಕ್ಟರ್ ಬಳಿ ಏನು ಮಾತನಾಡುತ್ತಿದ್ದೆ ಎಂದು ಕೇಳಿಸಿಕೊಳ್ಳಲು ಕಳಿಸಿದ್ದರೆ? ಅಂದರೆ ಮೂರ್ತಿ ಈ ಕೊಲೆಯಲ್ಲಿ ಭಾಗವಹಿಸಿರುವರೆ? ಆದರೆ ಅವರೇ ತಮಗೆ ಕೇಸು ಒಪ್ಪಿಸಿದ್ದಾರೆ...? ಏನಿದು ವಿಚಿತ್ರ? ಢಿಕ್ಕಿ ಹೊಡೆಯಲಿದ್ದವನು ಮೂರ್ತಿಯ ಕೆಲಸದವ ಎನ್ನುವುದು ಮಿಂಚುತ್ತಲೇ ಶರತ್ ಓಡುತ್ತಾ ಮೆಟ್ಟಿಲುಗಳನ್ನು ಇಳಿದು, ಆ ವ್ಯಕ್ತಿಯನ್ನು ಹಿಡಿಯುವ ಪ್ರಯತ್ನ ಮಾಡಿದ. ಆದರೆ ತಡವಾಗಿತ್ತು! ಶರತ್ ಮೆಟ್ಟಿಲಿಳಿದಾಗ ಬೈಕ್ ಅಗಾಧ ಶಬ್ದ ಮಾಡುತ್ತಾ ವೇಗವಾಗಿ ಬಿಲ್ಲಿನಿಂದ ಬಂದ ಬಾಣದಂತೆ ಚಿಮ್ಮಿ ರಸ್ತೆಯ ಕೊನೆಯ ತಿರುವಿನಲ್ಲಿ ಮಾಯವಾಯಿತು!

ಡಾಕ್ಟರ್ ರಮೇಶ್ ಭೇಟಿಯಿಂದ ಯಾವುದೇ ಅನುಕೂಲವಾಗಿರಲಿಲ್ಲ, ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತಾಡಿದ್ದರು. ಡಾಕ್ಟರ್ ರಮೇಶ್ ಭೇಟಿಯಿಂದಾಗದ ಲಾಭ ಮೂರ್ತಿಯ ಅಂಗಡಿ ಕೆಲಸದವನಿಂದ ಆಗಿತ್ತು!! ಯಶವಂತರಾಯರ ಕೊಲೆಯಲ್ಲಿ ಮೂರ್ತಿಯನ್ನು ಪ್ರಮುಖ ಆರೋಪಿಯ ಸ್ಥಾನದಲ್ಲಿ ನಿಲ್ಲಿಸಿತ್ತು!

(ಮುಂದುವರಿಯುವುದು)

ಶಬ್ದಶಿಲ್ಪ

▯ ಪ್ರಹ್ಲಾದ್

ಎಡದಿಂದ ಬಲಕ್ಕೆ

1. ಕಾಳಿದಾಸನಿಗೆ ಆಶ್ರಯ ನೀಡಿದ್ದ ಸಾಹಿತ್ಯ ಪ್ರೇಮಿ ರಾಜ................................ 2
3. ಜನರನ್ನು ಬಲ್ಲೆ ಎಂದ ಪ್ರಿಯಕರನ ಪ್ರೇಮಿ.. 2
4. ಕನ್ನಡ ವಿಶ್ವವಿದ್ಯಾಲಯ ಪ್ರದಾನ ಮಾಡುವ ಪ್ರತಿಷ್ಠಿತ ಪ್ರಶಸ್ತಿ 3
6. ಕದಂಬವೃಕ್ಷದ ಕೆಳಗೆ ನಿಂತ ಗಂಡುಕುದುರೆ 3
7. ಪಣ ತೊಟ್ಟು ಗಳಿಸಿದ ಐಶ್ವರ್ಯ.. 3
9. ಈಗಲೇ ನಾಶಮಾಡಬಲ್ಲ ಶಿವ 2
10. ಸವಾರ ಧರಿಸಿದ ಮಾಲೆ... 2
12. ವಸಂತಮಾಸದಲ್ಲಿನ ಗಿಡ – ಮರಗಳ ಚಿಗುರು... 5
13. ತವಕದಿಂದ ಒಲೆಯ ಮೇಲಿರಿಸಿದ ದೋಸೆ ಹೆಂಚು 2
15. ಸತ್ತವರ ಆತ್ಮ ಸೆಳೆಯಲು ಯಮ ಹಿಡಿದ ಹಗ್ಗ.. 2
16. ವರನ ಬಗ್ಗೆ ಪತ್ರಕರ್ತ ತಂದ ಸುದ್ದಿ.. 3
18. ಮಾರ್ಜಾಲ ಮುಖ ತೊಳೆದುಕೊಂಡ ಬಗೆ 3
19. ಬಣ್ಣದ ಬದಲಾವಣೆ ಕಂಡು ಉಂಟಾದ ವೈರಾಗ್ಯ 3
20. ಈತ ಧನಿಕನಾಗಲು ಕಾರಣವಾದ ಸಂಪತ್ತು 2
21. ಆತ ಹೊಟ್ಟೆ ತುಂಬಿಸಿಕೊಳ್ಳಲು ಬಳಸಿದ ತಣಿಗೆ 2

ಮೇಲಿನಿಂದ ಕೆಳಕ್ಕೆ

2. ಮಾತು ತಪ್ಪಿದ ರಾಜಕಾರಣಿ ಎದುರಿಸಬೇಕಾದ ಮಂದಿಯ ಸಿಟ್ಟು.......................... 4
3. ಒಂಬತ್ತು ವಿಧದ ಅಭಿನಯ ಕಲೆ 4
5. ಬಂಗಾರ ಧರಿಸುವ ಸಮಯಕ್ಕೆ ಬಂದ ಮುಪ್ಪು.. 2
6. ಕರ್ಣನ ರಥ ಹೂತು ಹೋದ ಯುದ್ಧಾಂಗಣ.. 2
8. 'ಇದಂ ಶರೀರಂ' ಎಂದು ಹೇಳುತ್ತಾ ಬೇರೆಯವರಿಗೆ ಮಾಡಿದ ಸಹಾಯ................. 5
9. ಈತನ ಪರಿಪರಿಯಾದ ಇಷ್ಟಾರ್ಥ ಬಯಕೆ.. 3
11. ರಮೆಯ ಪತಿಯಾದ ಶ್ರೀಮನ್ನಾರಾಯಣ... 3
14. ವರ್ಧಿಸುತ್ತಾ ಹೋಗುವ ಮಹಾವೀರ 4
15. ಅಪಾರವಾಗಿ ಸಕಲ ವಿದ್ಯೆಗಳನ್ನು ಬಲ್ಲವನೀತ 4
16. ವದನಕ್ಕೆ ತಂಪು ನೀಡಿದ ತೋಟ 2
17. ದಿವಾನದ ಮೇಲೆ ಕುಳಿತಾಗ ಬಂದ ದಿವಸ... 2



(ಉತ್ತರ: ಮುಂದಿನವಾರ)

ಕಳೆದ ವಾರದ ಶಬ್ದಶಿಲ್ಪದ ಉತ್ತರಗಳು

ಎಡದಿಂದ ಬಲಕ್ಕೆ : 1. ಆರೋಹಣ 3. ತಿಲೋತ್ತಮೆ 6. ರಮಾ 8. ಮತ 9. ಪದ 11. ರಮಣಿ 12. ಬಗೆ 13. ಮನ 14. ಕನಕ 16. ಗವಿ 18. ಹಣ 19. ಸವಿ 21. ರಸಾಯನ 22. ಪ್ರಕರಣ.

ಮೇಲಿನಿಂದ ಕೆಳಕ್ಕೆ: 1. ಆಶಾದೀಪ 2. ಹಗುರ 4. ಲೋಹಿತ 5. ಮೆಲುನಗೆ 7. ಮಾರ 8. ಮಣಿ 10. ದರ್ಶನ 12. ಬಡಗ 13. ಮಧುಕರ 14. ಕಣ 15.ಕಸ 17. ವಿಭೂಷಣ 18. ಹರೆಯ 20. ವಿವೇಕ.

ರತ್ನಾವತಿಯ ಕಥೆ

❑ಡಾ॥ ಸಂಧ್ಯಾ ಪೈ

ಮುದ್ದೂ,

ಈ ವಾರ ಹತ್ತೊಂಬತ್ತನೆಯ ಕಥೆ ಹೇಳ್ತಾ ಇದೀನಿ. ಹೇಗೆ ನಿನಗೆ ಕಥೆಗಳು ಖುಷಿ ಆದವಾ? ಬುದ್ಧಿಗೆ ಗ್ರಾಸ ಆದವಾ ಹೇಗೆ? ಈಗ ಕಥೆ ಶುರುಮಾಡೋಣವಾ...

ರಾಜಾ ವಿಕ್ರಮಾದಿತ್ಯ ಮುತ್ತುಗದ ಮರದ ಮೇಲೆ ನೇತಾಡುತ್ತಿದ್ದ ಬೇತಾಳ ಹಿಡಿದುಕೊಂಡಿದ್ದ ಹೆಣವನ್ನು ಹೆಗಲಿಗೇರಿಸಿ ಒಂದಿಷ್ಟು ದೂರ ನಡೆಯುತ್ತಿರುವ ಹಾಗೆ ಬೇತಾಳ ಗಹಗಹಿಸಿ ನಗತೊಡಗಿತು. ವಿಕ್ರಮಾದಿತ್ಯ ಹಾಂ ಹೂಂ ಅನ್ನಲಿಲ್ಲ. ಬಾಯಿ ತೆರೆದರೆ, ಶವ ಮಾಯವಾಗುತ್ತದಲ್ಲ! ಕಡೆಗೆ ಬೇತಾಳ ಹೇಳಿತು, ''ವಿಕ್ರಮಾದಿತ್ಯ, ಮೆಚ್ಚಿದೆ ನಿನ್ನ ಛಲಕ್ಕೆ. ಈಗ ಒಂದು ಕಥೆ ಕೇಳು, ಮಾರ್ಗಾಯಾಸ ಕಡಿಮೆ ಆಗುತ್ತದೆ.

ಒಂದಾನೊಂದು ಕಾಲದಲ್ಲಿ ವಾರಣಾಸಿಯಲ್ಲಿ ಒಬ್ಬ ಸಿರಿವಂತ ವ್ಯಾಪಾರಿ ಇದ್ದ. ಅವನಿಗೊಬ್ಬ ಮಗಳಿದ್ದಳು. ಹೆಸರು ರತ್ನಾವತಿ. ವ್ಯಾಪಾರಿ ರತ್ನಾವತಿಯನ್ನು ಯೋಗ್ಯ ರೀತಿಯಲ್ಲಿ ಬೆಳೆಸಿದ್ದ. ಸುಶೀಲೆಯೂ ಆಜ್ಞಾಕಾರಿಯೂ ಆಗಿದ್ದ ಇವಳು ರೂಪವತಿಯೂ ಆಗಿದ್ದಳು.

ಹೀಗೆ ಮುಂದುವರಿಯುತ್ತಾ ಅವಳು ವಿವಾಹಯೋಗ್ಯಳಾದಳು. ವ್ಯಾಪಾರಿ ಅವಳಿಗೆ ಯೋಗ್ಯನಾದ ವರನ ಹುಡುಕಾಟದಲ್ಲಿದ್ದಾಗ, ಅವನ ಬಾಲ್ಯದ ಮಿತ್ರನ ಮಗನೊಬ್ಬ ಆ ಊರಿಗೆ ಬಂದ. ಹೆಸರು ವಿಶ್ವನಾಥ. ವ್ಯಾಪಾರಿಯ ಭೇಟಿಗಾಗಿ ಬಂದವ. ಅಂದು ವ್ಯಾಪಾರಿಯ ಮನೆಯಲ್ಲಿ ಉಳಿದುಕೊಂಡ. ಅವನ ರೀತಿ-ನೀತಿಗಳಿಂದ ಸುಪ್ರೀತನಾದ ವ್ಯಾಪಾರಿ ರತ್ನಾವತಿಯನ್ನು ಅವನಿಗೆ ಮದುವೆ ಮಾಡಿಕೊಡುವ ಪ್ರಸ್ತಾವ ತೆಗೆದ. ವಿಶ್ವನಾಥ, ತಾನೊಬ್ಬ ಅನಾಥ ಎಂದೂ ರತ್ನಾವತಿಯ ಕೈಹಿಡಿಯುವುದು ತನ್ನ ಪೂರ್ವ ಜನ್ಮದ ಸುಕೃತ ಎಂದೂ ಹೇಳಿದ. ಒಳ್ಳೆಯದೇ ಆಯಿತು. ಮನೆ ಅಳಿಯ ಸಿಕ್ಕ ಎಂದು ಸಂತೋಷಗೊಂಡ ವ್ಯಾಪಾರಿ. ರತ್ನಾವತಿ ಮತ್ತು ವಿಶ್ವನಾಥನ ವಿವಾಹ ನಡೆದುಹೋಯಿತು.

ಇಲ್ಲಿ ವ್ಯಾಪಾರಿಗೆ ತಿಳಿದಿಲ್ಲದ ವಿಚಾರ ಎಂದರೆ, ವಿಶ್ವನಾಥ ಒಬ್ಬ ಧೂರ್ತ ಎನ್ನುವುದು. ಇವನೊಬ್ಬ ಜೂಜುಕೋರನಾಗಿದ್ದ. ಜೂಜಿನಲ್ಲಿ ಸಮಸ್ತ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದ. ಇದೇ ಚಿಂತೆಯಿಂದ ಇವನ ಹೆತ್ತವರು ತೀರಿಕೊಂಡಿದ್ದರು. ವಿಶ್ವನಾಥ ಹೆಂಡತಿಯ ಮನೆಯಲ್ಲಿ ಸುಖವಾಗಿದ್ದ. ಆದರೆ, ಕೆಲವೇ ದಿನಗಳಲ್ಲಿ ಅವನಿಗೆ ಜೂಜು ಕಾಡತೊಡಗಿತು. ಒಂದು ದಿನ ಹೆಂಡತಿಯನ್ನು ಕುರಿತು, 'ಇಲ್ಲಿಂದ ಅನತಿ ದೂರದಲ್ಲಿ ದುರ್ಗಾದೇವಿಯ ದೇವಸ್ಥಾನ ಇದೆ. ಪ್ರತಿ ಹುಣ್ಣಿಮೆಗೆ ಅಲ್ಲಿ ದೊಡ್ಡ ಪೂಜೆ ನಡೆಯುತ್ತದೆ. ಈ ಬಾರಿ ನನಗೂ ಹೋಗುವ ಆಸೆ ಇದೆ' ಎಂದ.

ಅವನ ಮಾತಿನಂತೆ ರತ್ನಾವತಿಯೂ ಸಕಲಾಭರಣಭೂಷಿತೆಯಾಗಿ ಅವನೊಂದಿಗೆ ಹೊರಟಳು. ಎಷ್ಟು ದೂರ ನಡೆದರೂ ದೇವಸ್ಥಾನದ ಸುಳಿವಿಲ್ಲ! ವಿಶ್ವನಾಥ, 'ದಾರಿ ತಪ್ಪಿದೆ ಎಂದು ಕಾಣುತ್ತದೆ. ನೀನು ಈ ಮರದ ಅಡಿ ಕುಳಿತುಕೋ. ನಾನು ದಾರಿ ಕೇಳಿ ಬರುತ್ತೇನೆ. ನಿನ್ನ ಮೈಮೇಲೆ ಈ ಪಾಟಿ ಚಿನ್ನ ಇರುವುದು ಸುರಕ್ಷಿತವಲ್ಲ. ಅದು ನನ್ನಲ್ಲಿರಲಿ' ಎಂದ. ಅವನನ್ನು ನಂಬಿದ ರತ್ನಾವತಿ ಹಾಗೆಯೇ ಮಾಡಿದಳು. ಚಿನ್ನದ ಗಂಟು ಹಿಡಿದು ಹೊರಟ ವಿಶ್ವನಾಥ ಮರಳಿ ಬರಲೇ ಇಲ್ಲ. ಸೂರ್ಯ ಕಂತಿದ, ಕತ್ತಲಾಗತೊಡಗಿತು. ಹೆದರಿದ ರತ್ನಾವತಿ ಬಲು ಕಷ್ಟದಿಂದ ತನ್ನ ಮನೆಗೆ ಮರಳಿದಳು.

ಮಾರನೆಯ ಬೆಳಗು ವಿಶ್ವನಾಥನೂ ವಾಪಸ್ಸು ಬಂದ. ಮೈ-ಮುಖಗಳೆಲ್ಲಾ ಮಲಿನವಾಗಿ, ಬಟ್ಟೆ ಹರಿದುಕೊಂಡಿದ್ದ. ದರೋಡೆಕೋರರಿಂದ ಈ ಗತಿ ಆಗಿದೆ ಎಂದ. ಅಸಲಿಗೆ ಜೂಜಾಡಿ ರತ್ನಾವತಿಯ ಆಭರಣಗಳನ್ನು ಕಳೆದುಕೊಂಡಿದ್ದ. ಇವನ ಸುಳ್ಳನ್ನು ಎಲ್ಲರೂ ನಂಬಿದರು. ಈಗ ಇವನಿಗೆ ಇವರನ್ನು ಬೇಕುಬೇಕಾದ ಹಾಗೆ ಮೋಸಗೊಳಿಸಬಹುದು ಎಂದು ಮನವರಿಕೆ ಆಯಿತು. ಕೆಲವು ದಿನ ಕಳೆಯಿತು. ಮತ್ತೆ ಇವನೆಂದ, ''ಎಷ್ಟು ಕಾಲ ಮನೆ ಅಳಿಯ ಆಗಿರುವುದು? ಒಂದಿಷ್ಟು ಮೂಲಧನ ಸಿಕ್ಕಿದರೆ ಏನಾದರೂ ವ್ಯವಹಾರ ಮಾಡಬಹುದು. ಹಾಗೇ ನನ್ನೂರ ಕುಲದೇವರ ದೇವಸ್ಥಾನಕ್ಕೆ ಹೋಗಿ ಬರುವ ಆಸೆ ಇದೆ'' ಎಂದ. ವ್ಯಾಪಾರಿ ನಂಬಿದ.

ಒಂದು ಸಣ್ಣ ಸಂಚಿ ಹೊನ್ನ ನಾಣ್ಯಗಳನ್ನು ಕೊಟ್ಟ. ವಿಶ್ವನಾಥ ಸಾಲಂಕೃತ ಪತ್ನಿಯೊಂದಿಗೆ ಹೊರಟ.

ಈ ಸಲ ವಿಶ್ವನಾಥನ ಯೋಜನೆ ಬೇರೆಯೇ ಇತ್ತು. ದಟ್ಟ ಅರಣ್ಯದಲ್ಲಿ ವಿಶ್ವನಾಥ ಹೆಂಡತಿಯನ್ನು ಕೊಂದುಹಾಕಿದ. ಅವಳ ಆಭರಣಗಳು ಮತ್ತು ವರಹಗಳ ಸಂಚಿಯನ್ನು ತೆಗೆದುಕೊಂಡು ಪರಾರಿಯಾದ.'' ಇಷ್ಟು ಕಥೆ ಹೇಳಿದ ಬೇತಾಳ ಪ್ರಶ್ನಿಸಿತು, ''ರಾಜಾ, ರತ್ನಾವತಿಯ ಸಾವಿಗೆ ಕಾರಣರು ಯಾರು? ಅವಳ ತಂದೆಯೋ? ಅವಳೋ? ಯಾರು? ಉತ್ತರಿಸು. ಇಲ್ಲದಿದ್ದರೆ ನಿನ್ನ ತಲೆ ನೂರು ಹೋಳಾಗುತ್ತದೆ'' ಎಂದಿತದು.

ವಿಕ್ರಮಾದಿತ್ಯ, ''ಮತ್ತೆ ಬಾಯಿ ತೆರೆಯುವಂತೆ ಮಾಡಿದೆ. ಈ ಪ್ರಶ್ನೆಗೆ ಉತ್ತರ ನಿನಗೂ ತಿಳಿದಿದೆ. ಆಕೆಯ ಸಾವಿಗೆ ರತ್ನಾವತಿಯೇ ಕಾರಣ. ಒಬ್ಬ ಮನುಷ್ಯನ ಯೋಗ್ಯತೆಯನ್ನು ಅವನ ಪತ್ನಿ ಅರ್ಥಮಾಡಿಕೊಳ್ಳುವಷ್ಟು ಬೇರೆ ಯಾರೂ ತಿಳಿಯಲಾರರು. ಮೊದಲ ಬಾರಿ ತನ್ನನ್ನು ಕಾಡಿನಲ್ಲಿ ಪರಭಾರೆ ಮಾಡಿಹೋದ ವಿಶ್ವನಾಥ. ಮಾರನೆಯ ದಿನ ಬಂದಾಗಲೇ ಅವಳಿಗೆ ತಿಳಿಯಬೇಕಾಗಿತ್ತು.

ತಮಗೆ ಬೇಕಾದ ವಸ್ತುಗಳು ಸಿಕ್ಕಿದ ಕೂಡಲೇ ಯಾವ ದರೋಡೆಕೋರರೂ ಅಲ್ಲಿ ನಿಲ್ಲುವುದಿಲ್ಲ. ಇವನು ಏನಿದ್ದರೂ ಸ್ವಲ್ಪ ಸಮಯದಲ್ಲಿಯೇ ಮರಳಿ ಬರಬೇಕಿತ್ತು. ಎರಡನೆಯ ಬಾರಿ ಅವನು ಆಭರಣಗಳನ್ನು ಧರಿಸಲು ಹೇಳಿದಾಗ, ಇವಳಿಗೆ ಸಂಶಯ ಬರಬೇಕಿತ್ತು ಮತ್ತು ಅವಳು ತನ್ನ ಸಂಶಯವನ್ನು ತಂದೆಯೊಂದಿಗೆ ಹೇಳಬೇಕಾಗಿತ್ತು. ಅವಳು ಹಾಗೆ ಮಾಡಲಿಲ್ಲ. ಆದುದರಿಂದ ತನ್ನ ಸಾವನ್ನು ತಾನೇ ಕರೆದುಕೊಂಡ ಹಾಗಾಯಿತು ಮತ್ತು ಅವಳ ತಂದೆಯದೂ ತಪ್ಪಿದೆ. ಬಾಲ್ಯದ ಮಿತ್ರನ ಮಗ ಎಂದು ತಿಳಿದಾಗ ಆ ಮಿತ್ರನ ಮತ್ತು ಅವನ ಸಂಸಾರದ ಬಗ್ಗೆ ವಿಚಾರಿಸಬೇಕಿತ್ತು. ಅವರ ಸಾಮಾಜಿಕ ಸ್ಥಾನ-ಮಾನ, ಆರ್ಥಿಕ ಸ್ಥಿತಿಗಳನ್ನು ತಿಳಿದುಕೊಳ್ಳಬೇಕಾಗಿತ್ತು. ಮುಖ್ಯವಾಗಿ ವಿಶ್ವನಾಥನ ಗುಣಸ್ವಭಾವಗಳನ್ನು ತಿಳಿಯಬೇಕಾಗಿತ್ತು. ಅಸಲಿಗೆ ಅವನು ತನ್ನ ಬಾಲ್ಯಮಿತ್ರನ ಮಗ ಹೌದೋ ಅಲ್ಲವೋ ಎಂಬುದನ್ನೂ ವಿಚಾರಿಸದೆ, ಏಕಾಏಕಿ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟದ್ದೂ ರತ್ನಾವತಿಯ ಸಾವಿಗೆ ಕಾರಣ'' ಎಂದು ಹೇಳಿ ಮುಗಿಸಿದ ವಿಕ್ರಮಾದಿತ್ಯ!

ಮಂಡೂರಾಯನ ಸಾಹಸ
ಚಿತ್ರ–ಕಥೆ: ಟಿ.ಜಿ.
ನಕಲಿ ರಾಜನ ಕಥೆ ಭಾಗ-1
ಮಂಡೂರಾಯನಿಗೆ ಮೀನು ತಿನ್ನುವ ಆಸೆಯಾಗಿತ್ತು. ಅದಕ್ಕೆ-
ಹ್ಹಾ!
ನನ್ನ ಗಾಳಕ್ಕೆ ದೊಡ್ಡ ಮೀನೇ ಸಿಕ್ಕಿರಬೇಕು. ಜೋರಾಗಿ ಎಳೀತಿದೆ.
ಮೇಲೆ ಬಾರೋ!
ಆದರೆ-
ಆ್ಞಂ?
ಆ್ಞಂ?
ಓಯ್!
ನೀರಿಗೆ ಕೊಕ್ಕೆ ಇಳಿಸಿದ್ದು ನೀನೇನಾ?
ಆ್ಞಂ?
ಮಾತನಾಡುವ ಮೀನು!
ಒಳ್ಳೆಯದಾಯ್ತು ನೀನು ಸಿಕ್ಕಿದ್ದು. ನನ್ನ ಕೊಕ್ಕೆ ಕಚ್ಚಿದ ಮೀನು ಎಲ್ಲಿ ಹೋಯ್ತು ನೋಡಿದ್ಯಾ?
ಹೌದು. ಅದು ನಾನೇ!
ತೆಪ್ಪಗೆ ನನ್ನ ಜೊತೆಗೆ ಬಾ, ನಮ್ಮ ರಾಜರ ಬಳಿಗೆ ಒಯ್ಯುತ್ತೇನೆ. ನಿನ್ನನ್ನು ಅವರೇ ನೋಡಿಕೊಳ್ಳಲಿ!
ಮೀನುಗಳ ರಾಜ? ವ್ಹಾರೆವ್ಹಾ! ಅವರ ಬಳಿ ತುಂಬಾ ಮೀನು ಇರಬಹುದು! ನನಗೆರಡು ಕೊಟ್ಟಾರು!
ಸರಿ! ನಡಿ, ಹೋಗೋಣ!

ನೀರಿನಡಿಯ ಭವ್ಯ ಅರಮನೆ ನೋಡಿ ಮಂಡೂರಾಯ ದಂಗಾದ.
ಅಬ್ಬಾ! ಎಷ್ಟು ದೊಡ್ಡ ಅರಮನೆ!
ನನಗಿಲ್ಲಿ ಕೆಲಸ ಸಿಗಬಹುದು!
ರಾಜನ ಆಸ್ಥಾನದಲ್ಲಿ–
ಮಹಾರಾಜ, ಈ ಮನುಷ್ಯ ನದಿಯ ಮೇಲಿನಿಂದ ನಮ್ಮವರನ್ನು ಕೊಕ್ಕೆ ಹಾಕಿ ಹಿಡೀತಿದ್ದ.
ನಿಮ್ಮ ಕಾನೂನಿನಂತೆ ಇವನನ್ನು ಸೆರೆ ಹಿಡಿದು ತಂದಿದ್ದೇನೆ.
ನಮಸ್ಕಾರ ಸರ್!
ನನಗೆ ಮೀನು ಸಿಗಲಿಲ್ಲ, ಕೊಕ್ಕೆ ಕಚ್ಚಿದ್ದ ಕಳ್ಳ ಮೀನು ತಪ್ಪಿಸಿಕೊಂಡು ಹೋಯಿತು. ಅದರ ಬದಲಿಗೆ ನೀವು ಬೇರೆ ಕೊಡಿಸಿದರೂ ನಡೆಯುತ್ತದೆ.
ಮೂರ್ಖ!
ನೀವು ನೆಲದ ಮೇಲಿನವರೆಲ್ಲ ಶತಮೂರ್ಖರು! ದುಷ್ಟರು!
?!!
ನೀವು ನೀರಿಗೆ ಕಸ ಎಸೀತೀರಿ. ಪ್ಲಾಸ್ಟಿಕ್ ಡಬ್ಬ, ಚೀಲಗಳನ್ನು ರಾಶಿ ಹಾಕ್ತೀರಿ. ಪರಿಸರದ ಬಗ್ಗೆ ಕಾಳಜಿಯೇ ಇಲ್ಲ ನಿಮಗೆ!
ನನ್ನ ಮೀನಿಗೂ ನಿಮ್ಮ ಪರಿಸರಕ್ಕೂ ಸಂಬಂಧ ಏನಿದೆ ಸರ್?
ನಿಮ್ಮಿಂದಾಗಿ ನಮ್ಮವರು ಸಾಯುತ್ತಿದ್ದಾರೆ. ಅದೇ ಸಂಬಂಧ.
ಇವನನ್ನು ಗಲ್ಲಿಗೇರಿಸಿ!
ಇದೇನೋ ವಿಚಿತ್ರ ನಡೀತಿದೆ. ನಾನು ಇಲ್ಲಿಂದ ತಪ್ಪಿಸಿಕೊಳ್ಳಬೇಕು...
ಏಯ್, ನಿಲ್ಲೋ!
ಹಿಡೀರಿ! ತಪ್ಪಿಸಿಕೊಳ್ಳಲು ಬಿಡಬೇಡಿ.
ಮುಂದಿನವಾರ
ಮಂಡೂರಾಯನ ಗತಿ ಏನಾಯಿತು?

ಇಲ್ಲಿಯ ಉಪ್ಪಿನ ಆಗರದ ವಿನ್ಯಾಸವನ್ನು ರೂಪಿಸಿದವರು ನಿವೃತ್ತ ಅಧಿಕಾರಿ, ಸಂಶೋಧಕ ವಿ.ಪಿ. ಚೌಧರಿ ಅವರು.

ಸಾಣೆಕಟ್ಟಾ ಉಪ್ಪಿನ ರುಚಿ

ಬಲ್ಲವರೇ ಬಲ್ಲರು!

❑ ರಾಘವೇಂದ್ರ ಬೆಟ್ಟಕೊಪ್ಪ

ಚಿತ್ರಗಳು: ● ಷಣ್ಮುಖ ಕವಲಕ್ಕಿ

ಕರ್ನಾಟಕದ ಪ್ರಸಿದ್ಧ ತೀರ್ಥಕ್ಷೇತ್ರ ಉತ್ತರಕನ್ನಡ ಜಿಲ್ಲೆಯ ಗೋಕರ್ಣಕ್ಕೆ ಹೋಗುವ ಮಾರ್ಗದಲ್ಲಿ, ಕುಮಟಾ ತಾಲೂಕಿನ ಸಾಣೆಕಟ್ಟಾ ಗ್ರಾಮದಲ್ಲಿ ಬಿಳಿ ಮರುಭೂಮಿಯಂತೆ ಹೊಳೆಯುವ ಗದ್ದೆಗಳನ್ನು ಗಮನಿಸಿದ್ದೀರಾ?

ಇವು ನೈಸರ್ಗಿಕವಾಗಿ ಉತ್ಪತ್ತಿಯಾಗುವ ಅರ್ಥಾತ್ ರಾಸಾಯನಿಕ ಮುಕ್ತವಾಗಿರುವ ವನಸ್ಪತಿಯ ಸತ್ತ್ವ ಹಾಗೂ ಖನಿಜಾಂಶಗಳಿಂದ ತುಂಬಿರುವ ಕಂದು ಮಿಶ್ರಿತ ಗುಲಾಬಿ ವರ್ಣದ ವಿಶಿಷ್ಟ ರುಚಿಯ ಆರೋಗ್ಯಕರವೆನಿಸಿದ 'ಸಾಣೆಕಟ್ಟಾ' ಉಪ್ಪಿನ ಆಗರಗಳು. ಅರಬ್ಬೀಸಮುದ್ರದ ಹಿನ್ನೀರು ಪ್ರದೇಶದಲ್ಲಿ ಅಘನಾಶಿನಿ ನದಿಯ ನೀರಿನ ಸಮ್ಮಿಲನದೊಂದಿಗೆ ಯಂತ್ರಗಳ ನೆರವಿಲ್ಲದೆ ಸ್ಥಳೀಯ ಜನರ ಪರಿಶ್ರಮದಿಂದಲೆ ಸೂರ್ಯನ ಬಿರು ಬಿಸಿಲು ಮತ್ತು ಗಾಳಿಯನ್ನೆ ಉತ್ಪಾದಕ ಶಕ್ತಿಯಾಗಿಸಿ ಸಿದ್ಧಪಡಿಸುವ ದೇಶದ ಏಕೈಕ ನೈಸರ್ಗಿಕ ಉಪ್ಪಿನ 'ಕಾರ್ಖಾನೆ' ಇದು. 300 ವರ್ಷಗಳ ಇತಿಹಾಸವಿರುವ ಈ ಪಾರಂಪರಿಕ ಉಪ್ಪು ತಯಾರಿಕಾ ಕೇಂದ್ರದ ಸಾರಥ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಇಲ್ಲಿನ 'ನಾಗರಬೈಲ್ ಉಪ್ಪಿನ ಮಾಲೀಕರ ಸಂಸ್ಥೆ' ಯೊಂದಿಗೆ ಈ ಪ್ರದೇಶದ ಮಠಗಳು, ದೇವರುಗಳು ಕೂಡಾ ಸಾಣೆಕಟ್ಟಾ ಉಪ್ಪಿನ ಪಾಲುದಾರರು ಎಂದರೆ ಸೋಜಿಗವಲ್ಲವೆ? 'ಕೃಷಿ ಪ್ರವಾಸೋದ್ಯಮ' ಕ್ಕೆ ಮಾದರಿಯಾಗಬಲ್ಲ ಅದ್ಭುತ ಹಿನ್ನೆಲೆಯಿರುವ ಸಾಣೆಕಟ್ಟಾ ಉಪ್ಪಿನ ತಯಾರಿಯ ಸ್ವಾರಸ್ಯಕರ ಕಥನವಿದು.

'ಉಪ್ಪಿಗಿಂತ ಬೇರೆ ರುಚಿಯಿಲ್ಲ' ಎನ್ನುತ್ತಾರೆ. ಆದರೆ, ಕುಮಟಾ ತಾಲೂಕಿನ ಗೋಕರ್ಣ ಸಮೀಪದ ಸಾಣೆಕಟ್ಟಾದ ಉಪ್ಪಿನ ಕಥೆಯೇ ಬೇರೆ. ಇಲ್ಲಿ ತಯಾರಾಗುವ ಉಪ್ಪು ಬೇರೆಡೆಗಳಲ್ಲಿ ಉತ್ಪತ್ತಿಯಾಗುವ ಉಪ್ಪಿಗಿಂತಲೂ ಅತ್ಯಂತ ರುಚಿಕರ, ಹಿತಕರ ಹಾಗೂ ಆರೋಗ್ಯಕರ. ಯಾಕೆಂದರೆ, ಈ ಉಪ್ಪು ತಯಾರಾಗುವುದೇ ನೈಸರ್ಗಿಕವಾಗಿ.

ಸಾಣೆಕಟ್ಟಾ ಉಪ್ಪಿನ ಕಥೆ

ಸಾಣೆಕಟ್ಟಾ ಉಪ್ಪಿನ ಆಗರಕ್ಕೆ ಮೂರು ಶತಮಾನಗಳ ಸುದೀರ್ಘ ಇತಿಹಾಸವಿದೆ. 1720ರ ವೇಳೆಗೆ ಅರಬ್ಬೀ ಸಮುದ್ರದ ಹಿನ್ನೀರು ಮತ್ತು ಅಘನಾಶಿನಿ ನದಿಯ ಅಳಿವೆ ಬಳಸಿಕೊಂಡು ಇಲ್ಲಿ ಉಪ್ಪಿನ ತಯಾರಿಕೆ ಪ್ರಾರಂಭವಾಯಿತು. 1750ರ ತನಕ ಕೇವಲ 50 ಎಕರೆ ಪ್ರದೇಶದಲ್ಲಿ ಸುತ್ತಲಿನ ಹಳ್ಳಿಗಳ (ಇಂದಿನ ಕಡಮೆ, ಗೊನೆಹಳ್ಳಿಯ ಉತ್ತರ ಭಾಗದಲ್ಲಿ) ಮನೆ ಬಳಕೆಗಾಗಿ ಮಾತ್ರ ಈ ಉಪ್ಪನ್ನು ಉತ್ಪಾದಿಸುತ್ತಿದ್ದರು.

1775ರಲ್ಲಿ, ತಾಂತ್ರಿಕ ಪರಿಣತರೆನಿಸಿದ ಈ ಭಾಗದ ಹಿರಿಯ ಧುರೀಣ ಸಾಣು ನಾಯ್ಕ ಎಂಬವರ ನೇತೃತ್ವದಲ್ಲಿ ಸಮುದ್ರದ ಹಿನ್ನೀರು ಅಘನಾಶಿನಿ ಅಳಿವೆಯ ಮೂಲಕ ಒಳ ನುಗ್ಗುವ ಕೊಲ್ಲಿಗೆ ಒಂದು ಒಡ್ಡನ್ನು ಕಟ್ಟಲಾಯಿತು. ಈ ಒಡ್ಡು ಎರಡು ಗುಡ್ಡಗಳನ್ನು ಜೋಡಿಸಿ ತೊರ್ಕೆ ಹಾಗೂ ಗೋಕರ್ಣದಿಂದ ತದಡಿಗೆ ಹೋಗುವ ಮಾರ್ಗಗಳನ್ನು ಸೇರಿಸಿತು. ಮುಂದೆ ಇದೇ ಸಾಣೆಕಟ್ಟಾ-ಹೆಬ್ಬಳ ರಸ್ತೆಯಾಗಿ ಅಭಿವೃದ್ಧಿಯಾಯಿತು. ಅಂದು ಸಾಣು ನಾಯ್ಕರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ನಿರ್ಮಿಸಿದ ದೂರದೃಷ್ಟಿಯ ಈ ಒಡ್ಡಿನಿಂದಾಗಿ ಈ ಪ್ರದೇಶ 'ಸಾಣೆಕಟ್ಟಾ' ಎಂದು ಖ್ಯಾತಿಪಡೆಯಿತು. ಈ ಒಡ್ಡು ಕಟ್ಟಿದ್ದರಿಂದಾಗಿ ಸುಮಾರು 400 ಎಕರೆಯಷ್ಟು ವಿಶಾಲವಾದ ಭೂಮಿ ಉಪ್ಪಿನ ತಯಾರಿಕೆಗೆ ಲಭ್ಯವಾಗಿ ಉತ್ಪಾದನೆಯೂ ಗಣನೀಯವಾಗಿ ಹೆಚ್ಚಾಯಿತು ಎನ್ನುವುದು ವಿಶೇಷ. (ಆದರೆ ರಾಜಕೀಯ ಅನಿಶ್ಚಿತತೆ, ಆರ್ಥಿಕ ಹಿನ್ನಡೆ, ಬೇಡಿಕೆಯ ಕೊರತೆ

ಸೋಜಿಗದ ಅಳತೆ... ತೂಕ ಮಾತ್ರ ಪಕ್ಕಾ!

ನಿತ್ಯವೂ ಸಾವಿರಾರು ಉಪ್ಪಿನ ಪ್ಯಾಕೆಟ್‌ಗಳನ್ನು ಇಲ್ಲಿ ಮಹಿಳೆಯರೇ ಸಿದ್ಧಪಡಿಸುತ್ತಾರೆ. ಉಪ್ಪಿನ ರಾಶಿಯಿಂದ ಬುಟ್ಟಿಗೆ ತುಂಬಿ ಅಯೋಡಿನ್ ಸೇರಿಸಿ ತಲಾ ಒಂದು ಕೆ.ಜಿ. ಪ್ಯಾಕೆಟ್‌ಗಳಿಗೆ ತೂಕ ನೋಡದೇ ಉಪ್ಪು ತುಂಬುವ ಇವರ ಕೈಚಳಕದ ಚಾಕಚಕ್ಯತೆ ಎಷ್ಟಿದೆ ಎಂದರೆ, ಈ ಪ್ಯಾಕೆಟ್‌ಗಳನ್ನು ತೂಕ ಮಾಡಿದಾಗ ಉಪ್ಪು 50 ಗ್ರಾಂ ಹೆಚ್ಚೇ ಇರುತ್ತದೆ!

‘ದಮಡಿ ಚೌಕಿ’

ಬ್ರಿಟಿಷ್ ಆಳ್ವಿಕೆಯಲ್ಲಿ ಸಾಣೆಕಟ್ಟಾ ಉಪ್ಪನ್ನು ಅಳಿವೆ ಮೂಲಕ ದೋಣಿಯಲ್ಲಿ ತಂದಾಗ ಅಳಿವೆಯ ‘ದಮಡಿ ಚೌಕಿ’ಯಲ್ಲಿ ಬ್ರಿಟಿಷರಿಗೆ ಒಂದು ಚೀಲ ಉಪ್ಪಿಗೆ ಒಂದು ದಮಡಿ ಹಣ ಪಾವತಿಸಬೇಕಿತ್ತು. ಇದಕ್ಕೆ ಸ್ಥಳೀಯ ಅನೇಕ ಉಪ್ಪು ಬೆಳೆಗಾರರ ವಿರೋಧವಿತ್ತು. ಉಪ್ಪಿನ ಕರ ಪಾವತಿಸದೆ ಹೋದರೆ ಅಥವಾ ಕರ ತಪ್ಪಿಸಿ ಮಾರಾಟ ಮಾಡಿದರೆ ಬ್ರಿಟಿಷರು ಜೈಲಿಗೆ ಹಾಕುತ್ತಿದ್ದರು. ಈಗಲೂ ಇರುವ ಈ ಜೈಲಿನ ಕಟ್ಟಡ ಸಣ್ಣ ಹಾಗೂ ಗೃಹ ಕೈಗಾರಿಕೆ ಇಲಾಖೆಯ ಕಚೇರಿಯಾಗಿದೆ. ದಮಡಿ ಚೌಕಿಯ ಕುರುಹುಗಳೂ ಕಾಣಸುತ್ತವೆ.

24ವರ್ಷಗಳ ಹಿಂದೆ ಸ್ಥಾಪನೆಗೊಂಡ ನಾಗರಬೈಲ್ ಉಪ್ಪಿನ ಮಾಲೀಕರ ಸಹಕಾರಿ ಸಂಘ

ಹೀಗಿತ್ತು ಬ್ರಿಟಿಷರ ಕಾಲದ ಜೈಲು.

ಉಪ್ಪಿನ ಗದ್ದೆಗಳಲ್ಲಿ ಪತಿ ಉಪ್ಪಿನ ಹರಳನ್ನು ಕೋಲಿಗೆ ಕಟ್ಟಿದ ಹಲಗೆಯಿಂದ ಎಳೆಯುತ್ತಿದ್ದರೆ ಪತ್ನಿ ಅದನ್ನು ದಂಡೆಯ ಮೇಲೆ ರಾಶಿ ಹಾಕುತ್ತಾಳೆ.

ಬಿರುಬಿಸಿಲು- ಗಾಳಿಗೆ ನೀರು ಬಾಷ್ಪೀಭವನಗೊಂಡು ಸೃಷ್ಟಿಯಾದ ಸ್ಫಟಿಕ ರೂಪದ ಉಪ್ಪು.

ಉಪ್ಪು...ದಿನಸಿ ವಸ್ತು!

ಅಂಕೋಲಾದಿಂದ ಭಟ್ಕಳ ತನಕ ಬಿದನೂರು ರಾಜಾಳ್ವಿಕೆ (ಕೆಳದಿ ನಾಯಕರ ಕೊನೆಯ ಅವಧಿ) ಇದ್ದ ಕಾಲದಲ್ಲಿ 1769ರ ತನಕವೂ ಉಪ್ಪನ್ನು 'ದಿನಸಿ ವಸ್ತು' ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ ಅನಂತರ ಬಂದ ಮೈಸೂರಿನ ಸುಲ್ತಾನರಾದ ಹೈದರಾಲಿ, ಟಿಪ್ಪುಸುಲ್ತಾನ್ ಈ ಉಪ್ಪಿಗೆ ಕರ ವಿಧಿಸಿದ್ದರಂತೆ. ಬಳಿಕ ಆಳ್ವಿಕೆ ಮಾಡಿದ ಬ್ರಿಟಿಷರು ಮಾತ್ರ ಉಪ್ಪನ್ನೂ ಆದಾಯದ ಮೂಲವಾಗಿಸಿಕೊಂಡರು. 1930ರಲ್ಲಿ ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಕರ್ನಾಟಕದ 'ಸೀಬರ್ಡ್' ಖ್ಯಾತಿಯ ಅಂಕೋಲಾದಲ್ಲಿ ಉಪ್ಪಿನ ಕರ ನಿರಾಕರಣೆಯ ಸತ್ಯಾಗ್ರಹ ನಡೆದಾಗ, ಸಾಣೆಕಟ್ಟಾದ ಉಪ್ಪಿನ ಆಗರಗಳು ಕೂಡ ಆ ಚಳವಳಿಯ ಬಿಸಿ ಅನುಭವಿಸಿದ್ದವು. ಬ್ರಿಟಿಷರ ಉಪ್ಪಿನ ಕಾನೂನು ಮುರಿಯಲು ಇಲ್ಲಿನ ಸ್ಥಳೀಯರು ತೋರಿದ ಧೈರ್ಯ ಇತಿಹಾಸದ ಪುಟ ಸೇರಿದೆ.ಸ್ವಾತಂತ್ರ್ಯದ ಬಳಿಕ ಈ ಉಪ್ಪಿಗೂ ಕರದಿಂದ ಮುಕ್ತಿ ಸಿಕ್ಕಿತು!

ಸಾಣೆಕಟ್ಟಾ ಉಪ್ಪಿನ ಪರಂಪರೆ, ವಿಶಿಷ್ಟತೆ, ತಯಾರಿಕಾ ಪದ್ಧತಿ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಪರಿಗಣಿಸಿ ಇದಕ್ಕೆ 'ಭೌಗೋಳಿಕ ಸೂಚಿ' (ಜಿಯಾಗ್ರಾಫಿಕಲ್ ಇಂಡಿಕೇಶನ್-GI)ಯ ಮಾನ್ಯತೆ ದೊರೆತರೆ ಕಂದು - ಗುಲಾಬಿ ವರ್ಣದ ಈ ಕಲ್ಲುಪ್ಪು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕರಾವಳಿಯ ವಿಶಿಷ್ಟ ಬ್ರ್ಯಾಂಡ್ ಆಗಿ ಗುರುತಾಗಲಿದೆ.

ಇಲ್ಲಿ ದೇವರುಗಳು ಸದಸ್ಯರೂ ಹೌದು ಪಾಲುದಾರರೂ ಹೌದು!

ಸ್ವಾರಸ್ಯವೆಂದರೆ ಚಿತ್ರಾಪುರ, ಕವಳೆ, ಪರ್ತಗಾಳಿ ಮಠಗಳು, ಗೋಕರ್ಣ ಮಹಾಬಲೇಶ್ವರ, ಇಲ್ಲಿನ ಕಾಶಿ ವಿಶ್ವೇಶ್ವರ, ಬಂಕಿಕೊಡ್ಲದ ಬಂಕನಾಥೇಶ್ವರ, ಸೀತಾರಾಮೇಶ್ವರ ದೇವರೂ ಈ ಸೊಸೈಟಿಯ ಸದಸ್ಯರೇ! ಈ ದೇವರುಗಳಿಗೆಲ್ಲ ಉಪ್ಪಿನ ಪಾಲಿನ ಲಾಭಾಂಶ ಸಲ್ಲುತ್ತದೆ. ಗೋಕರ್ಣ ಮಹಾಬಲೇಶ್ವರನ ಅನ್ನಪ್ರಸಾದಕ್ಕೆ ಸೇವಾರೂಪದಲ್ಲಿ ಸಲ್ಲಿಕೆಯಾಗುವುದು ಕೂಡ ಸಾಣೆಕಟ್ಟಾ ಉಪ್ಪೇ.

ಇಲ್ಲಿನ ನಾಡಕರ್ಣಿ, ಕುಲಕರ್ಣಿ ಬಲವಳ್ಳಿ, ಕಾಯ್ಕಿಣಿ, ಮುರ್ಡೇಶ್ವರ, ಮಾಸುರ್‌ಕರ್, ಶಾನಭಾಗ, ಪ್ರಭು, ಪೈ, ನಾಯಕ ಶೆಟ್ಟಿ, ನಾಡೋರ ಕುಟುಂಬಗಳು ಸೊಸೈಟಿಗೆ ತಮ್ಮ ಭೂಮಿ ಕೊಟ್ಟಿರುವುದರಿಂದ ಇವರುಗಳು ಉಪ್ಪಿನ ಸೊಸೈಟಿಯ ಫಲಾನುಭವಿ ಸದಸ್ಯರೂ ಹೌದು.

ಇನ್ನಿತರ ಕಾರಣಗಳಿಂದ 1807ರ ತನಕವೂ ಉಪ್ಪಿನ ಕ್ಷೇತ್ರವನ್ನು ವಿಸ್ತರಿಸುವ ಸಾಣು ನಾಯ್ಕರ ಕನಸು ಮಾತ್ರ ಈಡೇರಲಿಲ್ಲ.) ಉಪ್ಪು ತಯಾರಾಗುವ ಈ ಸ್ಥಳವನ್ನು ಮೊದಲು 'ಹನ್ನೇ ಬಯಲು' ಎಂದು ಕರೆಯುತ್ತಿದ್ದರು. 1863ರ ಬಳಿಕ ಈ ಪ್ರದೇಶಕ್ಕೆ 'ನಾಗರಬಯಲು' ಎಂದು ಹೆಸರು ಬಂತು.

ಬೇರೆಡೆ ಬೋರ್ ನೀರನ್ನು ಬಳಸಿ, ಕೃತಕವಾಗಿ ಉಪ್ಪನ್ನು ತಯಾರಿಸುತ್ತಾರೆ. ಆದರೆ, ಸಾಣೆಕಟ್ಟಾ ಉಪ್ಪು ಮಾತ್ರ ನೈಸರ್ಗಿಕವಾಗಿ ತಯಾರಾಗುವ ಘಟಕ. ಇಲ್ಲಿನ ಉಪ್ಪು ಉತ್ತರ ಕನ್ನಡ, ಹಾವೇರಿ, ಬೆಳಗಾವಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಿಗೆ ಒಂದೊಂದು ಕಿಲೋ ಪ್ಯಾಕ್‌ನಂತೆ ಐವತ್ತು ಕಿಲೋ ತೂಕದ ಚೀಲಗಳ ಮೂಲಕ ರವಾನೆ ಆಗುತ್ತದೆ. ಸದ್ಯ ಈ ಉಪ್ಪಿಗೆ ಕಿಲೋಗೆ ಇಪ್ಪತ್ತು ರೂಪಾಯಿ ಬೆಲೆ ಇದೆ.

ಉಪ್ಪಿನ ಮಾಲೀಕರ ಸಂಘ 'ನಾಗರಬೈಲ್ ಸೊಸೈಟಿ'

ತೊರ್ಕೆ, ಬಿದ್ರಗೇರಿ, ನಾಗರಬೈಲು, ಕಡಮೆ, ಗೊನೆಹಳ್ಳಿ-ಈ ಐದು ಗ್ರಾಮಗಳ ಉಪ್ಪಿನ ಸಾಗುವಳಿ ಮಾಡುವ ಭೂಮಾಲೀಕರು ಸೇರಿ ಹುಟ್ಟುಹಾಕಿದ ಸಹಕಾರಿ ಸಂಸ್ಥೆಯೇ 'ದ ನಾಗರಬೈಲ್ ಸಾಲ್ಟ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ'.

ತನ್ನ ಅಪೂರ್ವ ಕಾರ್ಯವೈಖರಿಯಿಂದ ಉಪ್ಪು ಉತ್ಪಾದನೆಯ ಅನನ್ಯ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಕರ್ನಾಟಕದ ಏಕೈಕ ಸಂಸ್ಥೆ ಇದು.

ಬೆಳ್ಳಂ ಬೆಳಗ್ಗೆ ಊಟದ ತಟ್ಟೆಗೆ ಅಂಬಲಿ ಸುರುವಿ ಅದಕ್ಕೆ ಸ್ವಲ್ಪ ಉಪ್ಪು ಹಾಕಿ ಕದಡಿ ಕುಡಿದು ಮನೆಯಿಂದ ಪತಿ-ಪತ್ನಿ ಜೊತೆಯಾಗಿ ನಡೆದರೆ ಅವರೆಲ್ಲ ಉಪ್ಪಿನ ಆಗರದ ಕೆಲಸಕ್ಕೆ ಹೊರಟರೆಂದೇ ಅರ್ಥ.

ಉಪ್ಪಿನ ತಯಾರಿಗೆ ಅತ್ಯಗತ್ಯವಾಗಿ ಬೇಕಿರುವುದು ಬಿರುಬಿಸಿಲು ಮತ್ತು ಕಡಿಮೆ ಮಳೆ. ವಾತಾವರಣದ ವ್ಯತ್ಯಯಕ್ಕನುವಾಗಿ ಇಲ್ಲಿ ಜನವರಿಯಿಂದ ಮೇ ತಿಂಗಳ ಕೊನೆಯವರೆಗೆ ಮಾತ್ರ ಉಪ್ಪಿನ ಉತ್ಪಾದನೆ ನಡೆಯುತ್ತದೆ.

ಬರಲಿದೆ, ಟೆಟ್ರಾ ಪ್ಯಾಕೆಟ್‌ನಲ್ಲೂ...

ತೇವಾಂಶ ಹೆಚ್ಚಿರುವ ಸಾಣೆಕಟ್ಟಾ ಉಪ್ಪನ್ನು ಅಂಗಡಿ, ಸೊಸೈಟಿಗಳಲ್ಲಿ ಹೊರಗಡೆಯೇ ಇಡುತ್ತಾರೆ. ವರ್ತಕರ ಅಂಗಡಿಯೊಳಗೂ ನಮ್ಮ ಉಪ್ಪು ಹೋಗಬೇಕು, ಟೇಬಲ್ ಮೇಲೆ ಇಟ್ಟರೂ ಕರಗಬಾರದು, ಇನ್ನೊಂದು ಪುಟ್ಟ ಭರಣಿ ಅಥವಾ ಗಾಜಿನ ಬಾಟಲಿಯಲ್ಲಿ ಹಾಕಿಡಬೇಕಾದ ಸ್ಥಿತಿ ಬರಬಾರದು ಎಂದು ಹೊಸ ಮಾದರಿಯ ಟೆಟ್ರಾ ಪ್ಯಾಕೆಟ್‌ನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವ ಚಿಂತನೆ ಸೊಸೈಟಿಯದು.

'ಕೃಷಿ ಪ್ರವಾಸೋದ್ಯಮ'ದ ಮಗ್ಗುಲು

ಗೋಕರ್ಣಕ್ಕೆ ಬರುವ ಪ್ರವಾಸಿಗರು ಸಾಣೆಕಟ್ಟಾದ ಈ ಬಿಳಿ ಮರುಭೂಮಿಯಂತೆ ಕಾಣುವ 'ಬಿಳಿ ಬಂಗಾರದ ಆಗರ' ನೋಡುವುದಕ್ಕಾಗಿಯೇ ಭೇಟಿ ನೀಡುತ್ತಿದ್ದಾರೆ. ಇದು ಕೃಷಿ ಪ್ರವಾಸೋದ್ಯಮಕ್ಕೆ ದೊಡ್ಡ ಅವಕಾಶ ನೀಡುತ್ತದೆ. ಆದರೆ, ಉಪ್ಪಿನ ಕಾರ್ಯಗಳಿಗೆ ಮಾತ್ರ ಈ ಆಯಾಮ ತೊಡಕಾಗಬಾರದು ಅಷ್ಟೇ.

1952ರ ಸೆಪ್ಟೆಂಬರ್ 17ರಂದು ಸಂಘಟಿತ ರೂಪ ಪಡೆದು ನೋಂದಾವಣೆಗೊಂಡ ಉಪ್ಪಿನ ಮಾಲೀಕರ ಈ ಸಹಕಾರಿ ಸಂಘ ಇಂದು ನೂರಾರು ಕುಟುಂಬಗಳ ಬದುಕಿಗೆ ಆಧಾರವಾಗಿದೆ. ಪ್ರಸ್ತುತ 469 ಎಕರೆ ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿರುವ ಉಪ್ಪಿನ ಗದ್ದೆಗಳು ಕೇವಲ ಉಪ್ಪಿನ ಉತ್ಪಾದನಾ ಕೇಂದ್ರಗಳಾಗಿ ಮಾತ್ರ ಉಳಿಯದೆ, ಒಂದು ವಿಶಿಷ್ಟ ಜೀವನಶೈಲಿಯನ್ನು ಪ್ರತಿಬಿಂಬಿಸುವ ಮಾದರಿ ತಾಣಗಳಾಗಿವೆ. ಪ್ರತಿ ವರ್ಷ ಬಿಸಿಲು ಮಳೆಯ ವೈಪರೀತ್ಯವನ್ನು ಹವಾಮಾನದ ವೈಪರೀತ್ಯವನ್ನು ಆಧರಿಸಿ ವೈಜ್ಞಾನಿಕ ರೀತಿಯಲ್ಲಿ 10ರಿಂದ 15ಸಾವಿರ ಮೆಟ್ರಿಕ್ ಟನ್ ಉಪ್ಪಿನ ಉತ್ಪಾದನೆ ಮತ್ತು ಮಾರಾಟವನ್ನು ಸಮರ್ಥವಾಗಿ ನಿರ್ವಹಿಸುತ್ತಾ ರಾಷ್ಟ್ರಾದ್ಯಂತ ಗಮನ ಸೆಳೆದಿರುವ ಈ ಸಂಘದ ಬೆನ್ನೆಲುಬಾಗಿ 363 ಭೂಮಾಲೀಕರಿದ್ದಾರೆ. 1993ರಲ್ಲಿ ಕೇಂದ್ರ ಸರಕಾರದ ನಿರ್ದೇಶನದಂತೆ ಗಳಗಂಡ ರೋಗ ನಿಯಂತ್ರಣಕ್ಕಾಗಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಅಯೋಡಿನ್‌ಯುಕ್ತ ಉಪ್ಪನ್ನು ತಯಾರಿಸಿದ ಉತ್ಪಾದನಾ ಘಟಕ ಎಂಬ ಹೆಗ್ಗಳಿಕೆಯೂ ಈ ಸಂಘಕ್ಕಿದೆ.

ಪತಿ-ಪತ್ನಿಗೆ ಒಂದೇ ಪಗಾರ!

ಉಪ್ಪಿನ ಉತ್ಪಾದನೆಯ ಅವಧಿ ಪ್ರಾರಂಭವಾಗುವುದೇ ಮಳೆಗಾಲ ಮುಗಿದ ಬಳಿಕ. ಉಪ್ಪಿನ ಚೌಕದ ದುರಸ್ತಿ, 100 ಅಡಿ ಉದ್ದ, 20 ಅಡಿ ಅಗಲದ ತಾಕು (ತುಂಡು ನೆಲ)ಗಳ ದುರಸ್ತಿ ಇತ್ಯಾದಿ ಪೂರ್ವಭಾವಿ ಕಾರ್ಯಾಚರಣೆಯ ಬಳಿಕ ಜನವರಿ ತಿಂಗಳ ಕೊನೆಯಲ್ಲಿ ಉಪ್ಪಿನ ಉತ್ಪಾದನೆ ಆರಂಭವಾಗುತ್ತದೆ. ಮೇ ತಿಂಗಳಲ್ಲಿ ಕೊನೆಯ ಮಳೆ ಬರುವ ತನಕವೂ ಉಪ್ಪು ತಯಾರಿಯ ಈ ಕಾಯಕ ಮುಂದುವರಿಯುತ್ತದೆ. ವಿಶೇಷವೆಂದರೆ, ಉಪ್ಪಿನ ಆಗರ(ಗದ್ದೆ)ದಲ್ಲಿ ಕೊಯ್ಲು ಪ್ರಾರಂಭವಾಗುವಾಗ (ಜನವರಿಯಿಂದ ಮಾರ್ಚ್‌ವರೆಗೆ) ನಿತ್ಯವೂ ಬೆಳಿಗ್ಗೆ ಏಳು ಗಂಟೆಯಿಂದ ಹಾಗೆಯೇ ಬಿಸಿಲಿನ ತಾಪ ತೀವ್ರಗೊಳ್ಳುವ ಎಪ್ರಿಲ್ - ಮೇ ಅವಧಿಯಲ್ಲಿ ಬೆಳಿಗ್ಗೆ ಆರು ಗಂಟೆಯಿಂದಲೇ ಚಟುವಟಿಕೆ ಶುರುವಾಗುತ್ತದೆ. ಈ ಸಮಯದಲ್ಲಿ 200-250 ಕಾರ್ಮಿಕರು ಇಲ್ಲಿ ದುಡಿಯುತ್ತಾರೆ. ಸ್ವಾರಸ್ಯವೆಂದರೆ, ಇಲ್ಲಿನ ಉಪ್ಪಿನ ಆಗರಗಳಲ್ಲಿ ಕೆಲಸ ಮಾಡುವ ಬಹುತೇಕರು ದಂಪತಿಗಳೇ. ಒಂದೊಂದು ಚೌಕದಲ್ಲಿಯೂ ಪತಿ-ಪತ್ನಿ ಸಕ್ರಿಯವಾಗಿ ದುಡಿಯುತ್ತಾರೆ.

ಉಪ್ಪು ಸಂಗ್ರಹಿಸಿಡುವ ಮಾವಿನ ಹಲಗೆಯ ಗೋದಾಮು.

ಮಳೆಗಾಲದಲ್ಲಿ ಬೃಹತ್ ಪ್ರಮಾಣದಲ್ಲಿ ಉಪ್ಪನ್ನು ಸಂಗ್ರಹಿಸಿಡುವ ಕಲ್ಲಿನ ಗೋದಾಮು.

ಸಮುದ್ರದ ಭರತಕಾಲದಲ್ಲಿ ಉಕ್ಕುವ ಉಪ್ಪು ನೀರು ಹಾಗೂ ಅಘನಾಶಿನಿ ನದಿಯ ಸಿಹಿ ನೀರಿನೊಂದಿಗೆ ಬೆರೆಯುವಾಗ ಈ ನೀರನ್ನು (ಮುಖಜಭೂಮಿಯಲ್ಲಿರುವ ಗೇಟನ್ನು ತೆರೆದು) ಕಾಲುವೆಯ ಮೂಲಕ ಉಪ್ಪಿನ ಆಗರದ ಒಳಗೆ ಹರಿಸುತ್ತಾರೆ.

ಅರುಣ್ ದಯಾನಂದ ನಾಡಕರ್ಣಿ

'ಎಲ್ಲ ಉಪ್ಪಿನ ಆಗರಗಳನ್ನೂ ನಮಗೇ ಕೊಡಿ!'

'ಎಲ್ಲ ಉಪ್ಪುಗಳನ್ನೂ ನಮಗೇ ಕೊಡಿ!' – ಹೀಗೆಂದು ಸುಮಾರು 20 ವರ್ಷಗಳ ಹಿಂದೆ ಈ ಉಪ್ಪಿಗೆ ಮಾರುಹೋಗಿದ್ದ ಇಸ್ರೇಲ್‌ನಿಂದ ಬಂದ ನಿಯೋಗ ಕೇಳಿಕೊಂಡಿತ್ತು. ಕೆಲವು ವರ್ಷಗಳ ಹಿಂದೆ ದೇಶದ ಪ್ರಸಿದ್ಧ ಟೇಬಲ್ ಸಾಲ್ಟ್ ಕಂಪೆನಿ ಕೂಡ 'ನಮಗೇ ಈ ಉಪ್ಪಿನ ಆಗರ ಕೊಡಿ' ಎಂಬ ಬೇಡಿಕೆ ಮುಂದಿಟ್ಟಿತ್ತು. 'ಉಪ್ಪು ಅಡುಗೆ ಮನೆಯ ವಸ್ತು, ಹೀಗಾಗಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಯಾರಿಗೂ ವಹಿಸಿಕೊಟ್ಟಿಲ್ಲ' ಎನ್ನುತ್ತಾರೆ ಸಂಘದ ಅಧ್ಯಕ್ಷ ಅರುಣ್ ದಯಾನಂದ ನಾಡಕರ್ಣಿ.

ತಾರತಮ್ಯವಿಲ್ಲದೆ ಇಬ್ಬರಿಗೂ ಸಮಾನ ಪಗಾರ. ಇದು ಕೇವಲ ಉದ್ಯೋಗದ ನಿಯಮವಷ್ಟೇ ಅಲ್ಲ, ಪರಸ್ಪರ ಅನ್ಯೋನ್ಯತೆ, ಸೌಹಾರ್ದತೆ, ಒಗ್ಗಟ್ಟಿನ ದೃಷ್ಟಾಂತವೂ ಹೌದು. ಗಂಡ ಉದ್ದನೆಯ ಕೋಲಿಗೆ ಹಲಗೆ ಕಟ್ಟಿ ಉಪ್ಪಿನ ಹರಳು ಎಳೆದರೆ, ಪತ್ನಿ ಅದನ್ನು ದಂಡೆಯ ಮೇಲೆ ರಾಶಿ ಹಾಕುವುದನ್ನು ನೋಡುವುದೇ ಒಂದು ಚಂದ!

ಉಪ್ಪಿನ ಉತ್ಪಾದನೆ ಇಲ್ಲಿ ವಿಜ್ಞಾನ ಮತ್ತು ಪ್ರಕೃತಿಯ ಸಮ್ಮಿಲನ ಸಾಧಿಸಿದೆ. ಸಾಮಾನ್ಯವಾಗಿ ಶೇ. 2.5ರಷ್ಟಿರುವ ಸಮುದ್ರ ನೀರಿನ ಉಪ್ಪಿನಂಶವನ್ನು 19ರಿಂದ 20 ಡಿಗ್ರಿಯವರೆಗೆ ಏರಿಸಲು ಅಘನಾಶಿನಿ ನದಿಯ ನೀರಿನೊಂದಿಗೆ ಮಿಶ್ರವಾದ ಸಮುದ್ರದ ನೀರನ್ನು ಕಾಲುವೆಗಳ ಮೂಲಕ ಉಪ್ಪಿನ ಆಗರ(ಗದ್ದೆ) ಗಳಿಗೆ ಹಾಯಿಸಿ ಮೊದಲು ಆಳವಾದ ಸಣ್ಣ ಕಟ್ಟೆ(ಜಲಾಶಯ ರೂಪ)ಗಳಲ್ಲಿ ನೀರನ್ನು ಸಂಗ್ರಹಿಸಲಾಗುತ್ತದೆ. ಅನಂತರ ಹಂತ ಹಂತವಾಗಿ ಅದರ ಸಾಂದ್ರತೆಯನ್ನು ಹೆಚ್ಚಿಸಲು ಕಡಿಮೆ ಆಳದ ಕಟ್ಟೆಗಳಿಗೆ ಬಿಡಲಾಗುತ್ತದೆ. ಸೂರ್ಯನ ಝಳ ಮತ್ತು ಗಾಳಿಯಿಂದ ನೀರು ಬಾಷ್ಪೀಭವನಗೊಂಡು ನೀರಿನಲ್ಲಿರುವ ಉಪ್ಪು ಸ್ಫಟಿಕ ರೂಪದಲ್ಲಿ ಜಮಾವಣೆಯಾಗುವಂತೆ ಮಾಡಲಾಗುತ್ತದೆ.

75ರ ಸಂಭ್ರಮದತ್ತ...

ಉಪ್ಪಿನ ಸೊಸೈಟಿಗೆ ಪ್ರಥಮ ಹಾಗೂ ಸ್ಥಾಪಕ ಅಧ್ಯಕ್ಷರಾಗಿ 1952ರಲ್ಲಿ ಪದ್ಮನಾಭ ಅನಂತ ನಾಡಕರ್ಣಿ ಸೇವೆ ಆರಂಭಿಸಿದ್ದರು. ಅಂದು ಸ್ಥಾಪಕ ಸದಸ್ಯರಾಗಿ 48 ಸದಸ್ಯರು ಇವರೊಂದಿಗೆ ಹೆಜ್ಜೆ ಹಾಕಿದ್ದರು. ಮುಂದಿನ ವರ್ಷ ಉಪ್ಪಿನ ಸೊಸೈಟಿಗೆ 75ರ ಸಂಭ್ರಮ. ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕರ, ಸಿಬಂದಿಗಳ ಹಾಗೂ ಭೂ ಮಾಲಕ ಸದಸ್ಯರ ಸಹಕಾರ ಈ ಸಂಸ್ಥೆಯ ಹಿತ ಕಾಯುತ್ತಿದೆ.

ಅನಂತರ ತಾಪಮಾನದೊಂದಿಗೆ ಬದಲಾಗುವ ಉಪ್ಪು ನೀರಿನ ಸಾಂದ್ರತೆಯನ್ನು 'ಬಾಮ್ ಮೀಟರ್' (ಬ್ಯುಮಿಯೋ ಮೀಟರ್) ನಲ್ಲಿ ಅಳೆಯುತ್ತಾರೆ.

ಕಂದು-ಗುಲಾಬಿ ಬಣ್ಣದ ಉಪ್ಪು

ಯಾವುದೇ ರಾಸಾಯನಿಕಗಳನ್ನು ಬಳಸದೆ ಉಪ್ಪು ಕಂದು ಮಿಶ್ರಿತ ಗುಲಾಬಿ ಬಣ್ಣದಲ್ಲಿ ಉದುರುದುರಾಗಿ (ಹರಳುಪ್ಪು)ತಯಾರಾಗುತ್ತದೆ. ಈ ಉಪ್ಪು ಅಘನಾಶಿನಿ ಹೊತ್ತು ತರುವ ಅಪರೂಪದ ವನಸ್ಪತಿಗಳ ಸತ್ತ್ವದೊಡನೆ ಸಮುದ್ರ ನೀರಿನಲ್ಲಿರುವ ಮ್ಯಾಗ್ನೀಸಿಯಂ, ಪೊಟ್ಯಾಸಿಯಂ, ಕ್ಯಾಲ್ಸಿಯಂ, ಸೋಡಿಯಂ ಇನ್ನಿತರ ಅಪರೂಪದ ಖನಿಜಗಳಿಂದ ಸಮೃದ್ಧವಾಗಿದೆ. ಶಿರಸಿ ಸೀಮೆಯಲ್ಲಿ ತಯಾರಾಗುವ ಉಪ್ಪಿನಕಾಯಿಗಳಿಗೆ ಇಲ್ಲಿನ ಉಪ್ಪು ಅತ್ಯಂತ ಅಗತ್ಯ. ಜೀರಿಗೆ, ಅಪ್ಪೆ ಮಾವಿನ ಮಿಡಿಗಳ ರಕ್ಷಣೆಗೆ, ಚಟ್ನಿಗೆ ಇದೇ ಉಪ್ಪು ಬಳಕೆಯಾಗುತ್ತದೆ.

ನಾಗರಬೈಲ್ ಸಂಘ ಉಪ್ಪಿನ ಉತ್ಪಾದನೆಯಲ್ಲಷ್ಟೇ ಅಲ್ಲ, ಮಾರುಕಟ್ಟೆಯಲ್ಲಿಯೂ ಮುಂಚೂಣಿಯ ಪ್ರಗತಿ ಸಾಧಿಸಿದೆ. ಉತ್ತರ ಕನ್ನಡ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಇಲ್ಲಿನ ಉಪ್ಪು ವ್ಯಾಪಕವಾಗಿ ಬಳಕೆಯಲ್ಲಿದೆ. ತಲೆತಲಾಂತರದಿಂದ ವ್ಯವಹಾರ ನಡೆಸುವ ಕೆಲವು ವರ್ತಕರ ಮುಖಾಂತರವೇ ಈಗಲೂ ಗ್ರಾಹಕರಿಗೆ ಉಪ್ಪನ್ನು ತಲುಪಿಸುವ ಗ್ರಾಹಕ, ವರ್ತಕ ಮತ್ತು ಸೊಸೈಟಿಯ ತ್ರಿಕೋನ ಸಂಬಂಧ ಭಾವೈಕ್ಯ- ಬಾಂಧ್ಯವಕ್ಕೆ ಕನ್ನಡಿ ಹಿಡಿದಿದೆ.

''ಬಡವ-ಶ್ರೀಮಂತ ಎನ್ನದೆ ಎಲ್ಲರಿಗೂ ಉಪ್ಪು ಬೇಕು. ನಿತ್ಯ ಬಳಕೆಯ ವಸ್ತುವಾದ್ದರಿಂದ ಸಾಧ್ಯ ಇರುವಷ್ಟು ಕಡಿಮೆ ದರದಲ್ಲೇ ಮಾರಾಟ ಮಾಡುತ್ತೇವೆ. ಬೇಡಿಕೆ ಬಂತೆಂದು ಎಲ್ಲ ಉಪ್ಪನ್ನು ಒಂದೇ ಸಲ ಮಾರುವುದಿಲ್ಲ. ನಂಬಿದ ಗ್ರಾಹಕರಿಗೆ ನಿರಂತರವಾಗಿ ತಲುಪಿಸುವ ಜವಾಬ್ದಾರಿ ಕೂಡ ಇದೆ'' ಎನ್ನುತ್ತಾರೆ ಸಂಘದ ಅಧ್ಯಕ್ಷರಾದ ಅರುಣ್ ದಯಾನಂದ ನಾಡಕರ್ಣಿ. ''ಇದೇ ಮಾದರಿಯಲ್ಲಿ ಸೊಸೈಟಿಗಳನ್ನು ರೂಪಿಸಿಕೊಂಡು, ಉಳಿದ ಬೇಸಾಯಗಳಿಗೂ ಉತ್ಪಾದನೆಯಿಂದ ಮಾರುಕಟ್ಟೆಯವರೆಗೆ ಸಹಕಾರಿ ತತ್ತ್ವ ಅಳವಡಿಸಿಕೊಂಡರೆ ಕೃಷಿ ಕೂಡ ಲಾಭದಾಯಕವಾಗಲಿದೆ'' ಎಂಬ ಅಭಿಪ್ರಾಯ ಅವರದು.

''ಸುಮಾರು 250 ಕುಟುಂಬಗಳ ಸದ್ಯಸರಿಗೆ ಉದ್ಯೋಗ ನೀಡಿದ ತೃಪ್ತಿಯೊಂದಿಗೆ ಭೂಮಿಯ ಗಾತ್ರ ಆಧರಿಸಿ ಭೂ ಮಾಲೀಕರಿಗೆ ವರ್ಷದಲ್ಲಿ ಎರಡು ಬಾರಿ ಲಾಭಾಂಶವನ್ನು ಹಂಚಿಕೆ ಮಾಡಲಾಗುತ್ತದೆ'' ಎನ್ನುತ್ತಾರೆ ವ್ಯವಸ್ಥಾಪಕರಾದ ಅನಿಲ್ ನಾಡಕರ್ಣಿ.

ಸವಾಲುಗಳೂ ಇಲ್ಲದಿಲ್ಲ!

ಸಾಣೆಕಟ್ಟಾ ಉಪ್ಪಿನ ಈ ಯಶೋಗಾಥೆಯ ಹಿಂದೆ ಇರುವ ಸವಾಲುಗಳು ಒಂದೆರಡಲ್ಲ. ಹವಾಮಾನ ವೈಪರೀತ್ಯ ಮತ್ತು ಅಕಾಲಿಕ ಮಳೆ - ಇವು ಉತ್ಪಾದನೆಗೆ ದೊಡ್ಡ ಹೊಡೆತ ನೀಡುತ್ತವೆ. ಕೇವಲ ಒಂದು ಇಂಚು ಮಳೆಯೇ ಎಂಟು ದಿನಗಳ ಕಾಲ ಕೆಲಸ ನಿಲ್ಲಿಸುವಷ್ಟು ಪರಿಣಾಮ ಬೀರುತ್ತದೆ. 2021ರಲ್ಲಿ ಅಕಾಲಿಕ ಮಳೆಯಿಂದಾಗಿ ಉಪ್ಪಿನ ಇಳುವರಿ ಸುಮಾರು ಶೇ. 30ರಷ್ಟು ಕುಸಿತ ಕಂಡಿತ್ತು.

ಇನ್ನು ಉಪ್ಪು ಸಂಗ್ರಹಣೆಗಾಗಿಯೇ ಸಾವಿರಾರು ಟನ್ ಸಾಮರ್ಥ್ಯದ ಗೋದಾಮುಗಳು ಇಲ್ಲಿವೆ. ಕಲ್ಲಿನ ಗೋದಾಮುಗಳ ಜೊತೆಗೆ ಉಪ್ಪಿನ ಗುಣ ತಾಳಿಕೊಳ್ಳುವ ಮಾವಿನ ಹಲಗೆಯ ಗೋದಾಮುಗಳೂ ಇವೆ.

ಇವೆಲ್ಲದರ ನಡುವೆಯೂ, ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ನಾಗರಬೈಲ್ ಸಾಲ್ಟ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ತನ್ನ ಪ್ರಾದೇಶಿಕ ವೈಶಿಷ್ಟ್ಯತೆ, ಸಾಂಪ್ರದಾಯಿಕ ಪರಂಪರೆಯನ್ನು ಜತನದಿಂದ ಪೋಷಿಸಿಕೊಂಡು ಬಂದಿರುವುದು ಸಾಮಾನ್ಯ ಸಂಗತಿಯಲ್ಲ.

ಸಾಣೆಕಟ್ಟಾ ಉಪ್ಪಿನಲ್ಲಿ ಕೇವಲ ರುಚಿಯಷ್ಟೇ ಅಲ್ಲ, ಪರಿಶ್ರಮದ ಸಿಹಿಯೂ ಬೆರೆತಿದೆ ಎಂಬುದಕ್ಕೆ ನಾಗರಬೈಲ್ ಸೊಸೈಟಿ ಒಂದು ಒಳ್ಳೆಯ ಉದಾಹರಣೆ. ■

ಕಥೆ

ಹೃದಯ ಕಾಯುತಾ ಇರುವೆ

❑ ರಂಜಿತಾ ಮಹಾಜನ

‘‘ಮಲ್ಲಾಜಿ! ಯೋ ಮಲ್ಲಾಜಿ’’ ಎಂದು ಮಲ್ಲಿಕಾರ್ಜುನನನ್ನು ಗೆಳೆಯ ತುಕಾರಾಮ್ ಕರೆದ.

‘‘ತುಕೋಜಿ! ಏನಯ್ಯ ಇದು ಈ ಸಮಯದಲ್ಲಿ ಬಂದಿದಿಯಾ? ಏನ್ ವಿಷಯ?’’ ಕೇಳಿದ.

ಮನೆ ಹಿಂದುಗಡೆ ಗೆಳೆಯನ ಕರೆತಂದ ತುಕಾರಾಮ. ಜೋಳಿಗೆಯಿಂದ ಚಕ್ಕನೆ ಹೊರತೆಗೆದ ವಸ್ತುವನ್ನು ಕಂಡು ಹೊನ್ನ ಮಿಂಚು ಮೊಗದ ಮೇಲೆ ಲಾಸ್ಯವಾಡಿತು. ತೋರಿದ ವೇಗದಲ್ಲೇ ಫಕ್ಕನೆ ಮುಚ್ಚಿಟ್ಟುಕೊಂಡ.

ನಂಬಲಾಗದೆ ಬಾಯ್ತೆರೆದ ಮಲ್ಲಿಕಾರ್ಜುನ.

ತುಕಾರಾಮ್ ‘‘ಹ್ಮ್! ಅರ್ಧ ಪವನು ತೂಗೋ ಇದ್ದ ಗದ್ಯಾನ ಅಂತಾರೆ. ಭಾಳಾ ಕಷ್ಟಪಟ್ಟು ಪಡ್ಕೊಂಡಿರೋದು. ಈಗ್ಲಾದ್ರೂ ನನ್ಮೇಲೆ ನಂಬಿಕೆ ಬಂತೋ ಇಲ್ವೋ?’’ ಮಾತಿನಲ್ಲೇ ತಿವಿದ.

ಹಲವು ತಿಂಗಳುಗಳಿಂದ ನಡೆಯುತ್ತಿದ್ದ ವಿಚಾರವದು. ವಿಜಯನಗರ ಸಾಮ್ರಾಜ್ಯದ ಪತನದ ಅನಂತರ ಹೂತಿಟ್ಟ ನಿಧಿಯ ಹುಡುಕಿ ಹೊರಡುವ ವಿಚಾರ. ವ್ಯಾಪಾರದ ನಿಮಿತ್ತ ಹೊರಡುವುದಾಗಿ ಸುಳ್ಳು ಹೇಳಿದ್ದ ಮಲ್ಲಿಕಾರ್ಜುನ. ತನ್ನಲ್ಲೇ ಖಚಿತತೆ ಇರದಾಗ ಯಾವ ದಿನ ಎಂದು ಹೇಳಿರಲಿಲ್ಲ. ಈಗ ಇಷ್ಟು ನಿಖರ ನಾಣ್ಯ ತಂದು ತೋರಿದಾಗ ಸುಮ್ಮನಿರಲಾದೀತೇ?

ಬೆಳಿಗ್ಗೆ ಎದ್ದವನೇ ತರಾತುರಿಯಲ್ಲಿ ಅಸನ-ವಸನಗಳ ವ್ಯವಸ್ಥೆ ಮಾಡಿಕೊಳ್ಳುತ್ತಲೇ ತಾನು ಹೋಗುವ ಸುದ್ದಿ ಹೇಳಿದ. ಅಪ್ಪ- ಅಮ್ಮ ಮನಸಾರೆ ಆಶೀರ್ವದಿಸಿದರು.

ಮಡದಿ ಕಾಲು ಸ್ಪರ್ಶಿಸಿ ನಮಸ್ಕರಿಸಿದಳು. ಸ್ನೇಹಿತರ ಮಾತನ್ನು ಅರ್ಧಂಬರ್ಧ ಕೇಳಿದವಳು ಕಣ್ಣೀರಾಗಿ ‘‘ನಂಗೆ ತೊಲೆಗಟ್ಟಲೆ ತೂಗೋ ನಿಮ್ಮೀ ಹೊನ್ನ ತೋಳ್ಬಂಧನದ ಹಾರವೇ ಸಾಕು. ಬೇರೇನೂ ಬೇಡ’’ ಎಂದಳು.

ಹೇಗೊ ಹಿರಿಯರಿಲ್ಲ ಎಂಬ ಅವಕಾಶದಲ್ಲಿ ಆಕೆಯ ತುರುಬು ಹಿಡಿದೆಳೆದು ‘‘ಲಜ್ಜೆಗೆಟ್ಟವಳೇ ಯಾವ ಸೂಳೆಗೂ ಕಮ್ಮಿಯಿಲ್ಲ ನಿನ್ನೀ ಮೋಡಿ ಮಾತು? ಮತ್ತೆ ನನ್ನ ತಡೀತೀಯಾ ಅವ್ಳ ಹತ್ರ ಹೋಗೋಕೆ’’ ಎಂದು ಅವಳನ್ನು ಒರಟಾಗಿ ತಳ್ಳಿಹೋದ.

ಪ್ರಯಾಣ ಸಾಗಿತು.

ಬಿಸುಪು ಕಳೆದುಕೊಂಡ ಮಡದಿಯ ದೇಹ ವರ್ಜ್ಯವಾಗಿದೆ. ಎರಡು ಗಂಡು ಹೆತ್ತುದಕ್ಕೆ ಮಾತ್ರ ಆಕೆಯನ್ನು ಸಹಿಸಿದ್ದಾನೆ ಮಲ್ಲಿಕಾರ್ಜುನ. ದೊಡ್ಡ ಜನರಿಗೆ ಮಾತ್ರ ಲಭ್ಯವಿರುವ ಬೆಲೆವೆಣ್ಣು ಸುಂದ್ರಿಯ ಸುಖವನ್ನು ಒಮ್ಮೆಯಾದರೂ ಪಡೆಯುವಾಸೆ. ಅದಕ್ಕೆ ತಕ್ಕಂತೆ ಆಕೆ ಹಾಕಿದ ಕರಾರಿನಂತೆ ಹಲವು ತಿಂಗಳ ದೇಹ ಬಯಕೆ ತಡೆ ಹಿಡಿದಿದ್ದಾನೆ; ಮಡದಿಗೂ ಶಿಕ್ಷೆ.

ಒಮ್ಮೆ ಆ ನಿಧಿ ಸಿಕ್ಕರೆ ಸಾಕು ಅದರಿಂದ ಸುಂದ್ರಿಗೆ ಆಭರಣ ಮಾಡಿಸಿಕೊಟ್ಟರೆ ತನ್ನವಳಾಗುವ ಆಕೆಯ ಮಾತೇ ಮಲ್ಲಿಕಾರ್ಜುನನ್ನು ಪುಳಕಗೊಳಿಸುತ್ತಿತ್ತು. ಎತ್ತಿನ ಬಂಡಿಯ ಕುಲುಕಾಟಕ್ಕೆ ಮೈ ನೋವು; ನೋವ

ಬದುಕುವ ದಾರಿ ತೋರಿದ ದ್ವಾರದ ಬೆಳಕಿಗಿಂತ ಚೆನ್ನದ ಉಂಗುರದ ಮಿಂಚು ಆವನ ಕಣ್ಣನ್ನು ಮಿನುಗುವಂತೆ ಮಾಡಿತು, ದೇವರು ಕೇಳಿದ ಪ್ರಶ್ನೆಗೆ ಆತ ನೀಡಿದ ಉತ್ತರ ತಪ್ಪಾಗಿತ್ತು!

ಮರೆಸುವ ತುಕಾರಾಮನ ಕತೆಗಳು.

ಪ್ರಯಾಣದ ಹತ್ತನೆಯ ದಿನ.

ರಸಭರಿತ ಪಲ್ಯಗಳು ಖಾಲಿಯಾಗುತ್ತಲಿದ್ದವು.

''ಯೇ! ಮಲ್ಲಾಜಿ, ಹಂಪಿ ವಿಠ್ಠಲ ಗುಡಿಲಿ ತೋರ್ಸಿದ್ದು ನೆನಪಿದೆಯಾ?'' ಕೇಳಿದ.

''ಅದೇ ಕೆತ್ತನೆಲಿ ಕುದುರೆ ಮಾರೋ ಚಿತ್ರ. ಒಬ್ಬು ಕುದ್ರೆ ಹಲ್ಲು ನೋಡಿ ಪರೀಕ್ಷೆ ಮಾಡ್ತಾ ಇದ್ರು, ಅವನ ಮುಂದಿರುವ ವ್ಯಾಪಾರಿಯೊಬ್ಬ ಒಂದು ಅನ್ನೋ ಹಾಗೆ ತೋರ್ಬೆರಳು ತೋರಿಸಿದ ಅಲ್ವಾ?''

''ಸಾಬಾಸ್! ಅದೇ ಒಂದು ಅಂದ್ರೆ ಒಂದು ತಂಬ್ಗೆ ತುಂಬಾ ಮುತ್ತು, ರತುನ, ಬೆಲೆಬಾಳೋ ಮಣಿಗಳು ಅಂತ ಕರ್ಣೋ ಬೇಕೂಫಾ. ಸುಂದ್ರಿಗೆ ಬರೀ ವಂದ್ ಹರಳು ಕೊಡೋಕೆ ನಾವಿಬ್ರು ಪರದಾಡ್ತಾ ಇದೀವಿ. ಆಗ ಬೊಗಸೆ ತುಂಬ ಇವನ್ನೇ ಕೊಟ್ಟು ಕುದ್ರೆ ಖರೀದಿ ಮಾಡ್ತಾ ಇದ್ರಂತೆ. ಅಂದ್ರೆ ನೀನೇ ಲೆಕ್ಕ ಹಾಕು ಯಾಪಾಟಿ ಸಂಪತ್ತು ಇರ್ಬೇಡ ಅವಾಗ?'' ಎಂದು ಪ್ರಶ್ನೆಯಲ್ಲೇ ಉತ್ತರ ಅಡಗಿಸಿ ಹೇಳಿದ.

ಮಲ್ಲಿಕಾರ್ಜುನ ಅಂಥ ಒಂದು ನಿಧಿ ಸಿಕ್ಕರೆ ಸುಂದ್ರಿನ ದಿನವೂ ಅನುಭವಿಸಬಹುದು ಎಂದು ಕನಸು ಕಾಣುತ್ತಿದ್ದ.

ತುಕಾರಾಮ್ ''ಯೇ! ಗೂಬೆ ನನ್ಮಗನೇ, ದಿನಾ ಒಬ್ಳೆ ಸುಂದ್ರಿ ಯಾಕೋ? ಮೂರೊತ್ತು ಬೇರೆ ಬೇರೆ ಸುಂದ್ರಿರು ನಮ್ ಸೇವೆ ಮಾಡ್ಕೊಂಡು ಬಿದ್ದಿರ್ತಾರೆ'' ಎಂದು ಗೆಳೆಯನ ಕನಸು ಅರಿತು ಹೇಳಿದ.

ಇಬ್ಬರೂ ಜೋರಾಗಿ ನಕ್ಕರು.

ಪ್ರಯಾಣದ ಇಪ್ಪತ್ತನೆಯ ದಿನ.

''ತುಕಾರಾಮ್ ಈ ಸಂಪತ್ತನ್ನೆಲ್ಲ ಅಲ್ಲಾವುದ್ದಿನ್ ಖಿಲ್ಜಿ, ತುಘಲಕ್ಕು ಆಕ್ರಮಣ ಮಾಡಿ ಲೂಟಿ ಮಾಡುದ್ರಂತೆ'' ಎಂದ ಹಿಟ್ಟಿನ ಒಣ ಪಲ್ಯಕ್ಕೆ ನೀರು ಹಾಕಿ ತಿನ್ನುತ್ತ.

''ಎಲ್ಲಾ ತಕ್ಕೊಂಡೋದ್ರಂತೋ?'' ಕೇಳಿದ ಮಲ್ಲಿಕಾರ್ಜುನ.

''ಬೇಕೂಫಾ! ಬೇಕೂಫಾ. ಎಲ್ಲಾ ಒಯ್ದಿದ್ರೆ ನಾವೇನ್ ಹುಡ್ಕಿ ಹೊರ್ಟಿರೋದೀಗ ಮತ್ತೆ?'' ಬೈದ. ''ಟಂಕ ಶಾಲೇಲಿ ಒಮ್ಮೆಲೇ ಮೂರು ಸಾವಿರ ವೆಂಕಟ ವರಾಹ ಟಂಕಿಸಿದ್ರಂತೆ. ಒಂದು ಕಡೆ ತಿಮ್ಮಪ್ಪನ ಚಿತ್ರ, ಮತ್ತೊಂದು ಕಡೆಗೆ ದೇವನಾಗರಿಲಿ ಶ್ರೀಕೃಷ್ಣದೇವ್ರಾಯಂತಾ ಕೆತ್ತಿದ್ದು. ತಾಮ್ರ, ಬೆಳ್ಳಿ ನಾಣ್ಯಗಳೂ ಇದ್ದವಂತೆ. ಆದ್ರೆ ಬಂಗರಾನೇ ಹೆಚ್ಚಂತೆ '' ಎಂದ.

ಮಲ್ಲಿಕಾರ್ಜುನನ ಗೊಂದಲದ ಮೊಗ ನೋಡಿ ತುಕಾರಾಮ್ ''ಓಹ್! ನಿಂಗೆ ತೋರಿಸ್ಲಿಲ್ಲ, ವೆಂಕೋಜಿಗೆ ತೋರಿಸಿದೆ. ನಿನ್ನಾಂಗೆ ತಡ ಮಾಡ್ಲಿಲ್ಲ ಅವ್ನು. ತತ್‌ಕ್ಷಣ ಹೊರಟ'' ಎಂದ.

ಅವನೂ ನಿಧಿ ಬೆಂಬತ್ತಿ ಹೋದದ್ದು ಗೊತ್ತು. ಹೋಗಿ ವರ್ಷ ಸಮೀಪವಾಗಿತ್ತು. ಮರಳಿ ಬಂದಿಲ್ಲ.

ತುಕಾರಾಮ್ ''ಆ! ಆಂ! ಅಲ್ಲೇ ಎಲ್ಲಾದ್ರೂ ಸಿಕ್ತಾನಾ ನೋಡುಮಾ'' ಎಂದು ಅದನ್ನು ಮರೆಯಿಸಲು ಮತ್ತೊಂದು ನಾಣ್ಯ ಹೊರತೆಗೆದ. ''ಇದ್ ನೋಡು ಗಜಪತಿ ರಾಜನ ವಿರುದ್ಧ ಒರಿಸ್ಸಾಲ್ಲಿ ಯುದ್ಧವಾಗಿ ಕೃಷ್ಣ ದೇವ್ರಾಯಾ ಗೆದ್ದ, ಅದರ ನೆನಪಿಗಾಗಿ ಇದು. ಇಕಾ ನೀನೇ ಇಟ್ಕಳಪ್ಪಾ ನಾನೆಲ್ರುನೂ ನಿಧಿ ಆಸೆ ತೋರ್ಸಿ ಕಳಸ್ತೀನಿ ಅನ್ನೋ ಅಪವಾದಾ ಬ್ಯಾಡಾ'' ಎಂದು ಮೊಗ ತಿರುವಿ ಕುಳಿತ.

ದೇವನಾಗರಿಯಲ್ಲಿ ಒಂದು ಬದಿ ಶ್ರೀ ಪ್ರತಾಪ ಕೃಷ್ಣ ದೇವರಾಯ, ಮತ್ತೊಂದು ಬದಿ ಬಾಲಕೃಷ್ಣ ಬೆಣ್ಣೆ ತಿನ್ನುವ ಚಿತ್ರವು ಕುಗ್ಗುತ್ತಿದ್ದ ಮಲ್ಲಿಕಾರ್ಜುನನ ಆತ್ಮವಿಶ್ವಾಸವನ್ನು ಹಿಗ್ಗಿಸಿತು.

'ಏನೂಂದ್ರೆ... ಮಗ ನಿಮಗಿಂತ ಬುದ್ಧಿವಂತರೀ, ಎಸ್‌ಎಸ್‌ಎಲ್‌ಸಿ ಪಾಸಾದ!'

ಪ್ರಯಾಣದ ಇಪ್ಪತ್ತನೆಯ ದಿನ.

ಸ್ನಾನ ಮಾಡಲು ಹೋಗಲಿ ಕುಡಿಯಲು ಸಹ ನೀರು ದೊರಕಲಿಲ್ಲ, ರಕ್ಷಿಸಿ ಇಟ್ಟುಕೊಂಡದ್ದನ್ನು ಔಷಧಿಯಂತೆ ಇಷ್ಟಿಷ್ಟೇ ಸೇವಿಸುತ್ತಿದ್ದರು.

ತುಕಾರಾಮ್ ''ಪೆನುಕೊಂಡ ಕೋಟೆಗೆ ಉಳಿದಿರುವ ಸಂಪತ್ತೆಲ್ಲ ತಂದ್ರಂತೆ. ಅಲ್ಲಿ ದಾರಿಲಿ ಒಂದು ಬಂಡೆಗಲ್ಲು ಅನಾಥವಾಗಿ ಬಿದ್ದಿದೆ. ಅದ್ನ ಒದಿದ್ರೆ ಏನಾದರೂ ಸಿಗಬಹುದು. ಮಾಧವಂಗೆ ಹೇಳಿದೀನಿ. ನೋಡುಮಾ'' ಎಂದ.

ಪ್ರಯಾಣದ ಮೂವತ್ತನೆಯ ದಿನ. ಪಕ್ಕದ ರಾಜ್ಯ ಪ್ರವೇಶ.

ತುಕಾರಾಮ್ ''ಹುಂ! ನಿನ್ನ ಅನುಮಾನ ಸರಿ ಇದೆ. ಇನ್ನೊಂದಿಷ್ಟು ಸಂಪತ್ತನ್ನು ದೇವಸ್ಥಾನಗಳಿಗೆ ದಾನ ಕೊಟ್ಟಂತೆ. ಅದ್ರಲ್ಲಿ ತಿರುಪತಿ ತಿಮ್ಮಪ್ಪನ ಗುಡಿಗೆ ದಾನ ಕೊಟ್ಟದ್ದು ತಿರುಮಲನ ಎರಡನೆಯ ಮಗ ವೆಂಕಟಪತಿರಾಯ. ಇವನೇ ಸಾಮ್ರಾಜ್ಯದ ವೈಭವವನ್ನ ಮರಳಿ ತಂದದ್ದು. ಅವನು ದೇವಸ್ಥಾನಕ್ಕೆ ನೀಡಿದ ದಾನದ ನೆನಪಿಗಾಗಿ ಅವನ ಮೂರ್ತಿ ಇದೆ. ಅಜ್ಜನ ಅಂದ್ರೆ ಶ್ರೀ ಕೃಷ್ಣದೇವರಾಯನ ಅನಂತರ ತಿರುಪತಿಯಲ್ಲಿರುವ ಏಕೈಕ ಮೂರ್ತಿ ಅಂದ್ರೆ ಇವನದ್ದೇ.''

ಪ್ರಯಾಣದ ಕೊನೆಯ ಅಥವಾ ನಲವತ್ತೈದನೆಯ ದಿನ.

''ಹೌದು, ಬರೀ ಅದೊಂದೇ ದೇವಸ್ಥಾನ ಅಲ್ಲ, ನಲ್ಲಮಲ ಕಾಡಿನಲ್ಲಿರುವ ಈ ಅಹೋಬಿಲಂ ಗುಡಿಗೂ ಅಷ್ಟು ದಾನ ಕೊಟ್ರಂತೆ. ಈಗ ನಾವಿರುವುದು ಅಲ್ಲಿಯೇಯಾ'' ಎಂದಾಗ ಮಲ್ಲಿಕಾರ್ಜುನನಿಗೆ ನಿಧಿ ಕೈಗೆ ಸಿಕ್ಕಷ್ಟು ಪುಳಕ ಮತ್ತು ಸಂತಸ ಒಟ್ಟೊಟ್ಟಿಗೆ ಆದವು.

ತುಕಾರಾಮ್ ''ಈ ಭಾಗವನ್ನು ಹಿಂದೆ ಹಿರಣ್ಯಕಶ್ಯಪ ಆಳ್ತಿದ್ದ. ಭಗವಾನನು ನರಸಿಂಹ ಅವತಾರ ತಾಳಿ ಹಿರಣ್ಯಕಶ್ಯಪನನ್ನ ವಧೆ ಮಾಡಿದ್ದು ಇದೇ ಜಾಗದಲ್ಲಿಯಾ. ಇಲ್ಲಿ ನಿಧಿಗಾಗಿ ಬಹಳ ಜನ ಬಂದು ಹೋಗವ್ರೆ. ಆದರೆ ನಾನು ಹೇಳಿದಂಗೆ ನಾವು ನಿಧಿ ಸಿಕ್ಕ ಕೂಡಲೇ ಒಂದಷ್ಟು ದಾನ ಧರ್ಮ ಮಾಡುವಾ. ಆಮೇಲೆ ಉಳಿದುದನ್ನು ಹಂಚಿಕೊಳ್ಳುವ. ಯಾಕೆಂದ್ರೆ ಇಲ್ಲಿ ನಿಧಿಗಳ್ಳತನಕ್ಕೆ ಬಂದವರಿಗೆಲ್ಲ ಸಾವೇ ಗತಿಯಾಗಿರೋದು'' ಎಂದಾಗ ಮಲ್ಲಿಕಾರ್ಜುನನ ಹೃದಯ ಕಂಪಿಸಿತು.

ತುಕಾರಾಮ್ ''ಯೇ! ಹೆದರ್ಬೇಡ್ವೊ ಅದ್ಕೆ ನಾನು ಹೇಳ್ತಾ ಇರೋದು. ನಿಧಿ ಸಿಕ್ಕ ತತ್‌ಕ್ಷಣ ಅದ್ರಲ್ಲಿ ಒಂದಷ್ಟು ದಾನ ಮಾಡೋಣ. ಉಳಿದದ್ದು ಇಟ್ಕೊಳೋಣ'' ಎಂದ. ಮಾಡುವ ಪಾಪ ಕಾರ್ಯಕ್ಕೆ ಸ್ವಯಂಪ್ರೇರಿತ ಜುಲ್ಮಾನೆ ಕಟ್ಟಿ ಪಾರಾಗುವ ಬಗೆ.

ಕಲ್ಯಾಣಿಯಲ್ಲಿ ಶುಚಿಯಾಗಿ ಮಾಡುತ್ತಿರುವ ಪಾಪ ಕೆಲಸಕ್ಕೆ ದೇವರ ಆಶೀರ್ವಾದ, ಬೆಂಬಲ ಬೇಡಿದರು. ಅದಕ್ಕೆ ಪ್ರತಿಯಾಗಿ ದಕ್ಕಿದ ನಿಧಿಯಲ್ಲಿ ಒಂದಷ್ಟು ಪಾಲು ದಾನ ಮಾಡುವ ಆಮಿಷವನ್ನು ದೇವರಿಗೇ ಒಡ್ಡುವ ದಾರ್ಷ್ಟ್ಯ.

ಗೆಳೆಯನಿಗೆ ಹೊಸ ಬಟ್ಟೆ ನೀಡಿದ.

ತುಕಾರಾಮ್ ತನ್ನ ಪಾಲಿನ ಅಷ್ಟೂ ಪ್ರಸಾದವನ್ನು ಗೆಳೆಯನಿಗೇ ನೀಡಿದ. ಬಲಿ ನೀಡುವ ಮುನ್ನ ಕುರಿಯನ್ನು ಕೊಬ್ಬಿಸುವಂತೆ,

''ಅಹೋಬಿಲಂ, ಬಿಲಂ ಅಂದರೆ ಬಿಲ ಅಂದ್ರೆ ಗುಹೆ. ದೇವಸ್ಥಾನದ ಪೀಠಾಧಿಪತಿ ಸ್ವಾಮಿ ಪರಾಂಕುಶ ಯತೀಂದ್ರ ಮಹಾದೇಶಿಕನ್ ಅವರು ದೇವರ ಆಭರಣಗಳನ್ನು, ಮೂರ್ತಿಯನ್ನು ಕಳ್ಳರಿಂದ ಕಾಪಾಡಲು ಅವನ್ನೆಲ್ಲ ಎತ್ತಿಕೊಂಡು ಗುಹೆಯಲ್ಲಿ ಹೋದವರು ಮರಳಲಿಲ್ಲ ಎಂದು ಪೂಜಾರಿಯು ಕುತೂಹಲಿಗಳಿಗೆ ಹೇಳುವ ಕತೆ ಇವರ ಕಿವಿಗೂ ಬಿದ್ದಿತು.

ತುಕಾರಾಮ್ ''ನೋಡು ಕೆಲಸ ಆಗ್ಬೇಕಾದ್ರೆ ಇಂಥಾ ನೂರಾರು ಕತೆಗಳು ಭಯ ಹುಟ್ಟಿಸ್ತಾವೆ, ನಾವಿದನ್ನು ಮೆಟ್ಟಿ ಮುಂದೆ ಹೋಗ್ಬೇಕು'' ಎಂದು ಇಚ್ಛಾ ಶಕ್ತಿ ಪೂರಣ ಮಾಡಿದ.

ಮಲ್ಲಿಕಾರ್ಜುನ ತುಸು ಅಧೀರನಾಗಿದ್ದ; ಕಾರಣ ಹೋಗುವವ ಅವನೊಬ್ಬನೇ ಎಂಬುದು ಎಂದೋ ತೀರ್ಮಾನವಾಗಿತ್ತಲ್ಲ? ಈ ಹಿಂದೆ ಹೋದವನು ಮರಳಿ ಬಾರದಿರುವ ನೆನಪು ಮತ್ತೆ ಕಾಡತೊಡಗಿತು.

ಕಾಡು ಹೊಕ್ಕವರಿಗೆ ದೂರದಲ್ಲಿ ಗುಹೆ ಕಾಣಿಸಿತು. ತುಕಾರಾಮ್ ಗೆಳೆಯನಲ್ಲಿ ಸಾಕಷ್ಟು ಆತ್ಮವಿಶ್ವಾಸ ತುಂಬಿದ ''ಅರ್ಜುನನಿಗೆ ಗಿಳಿಯ ಕಣ್ಣು ಕಾಣುವಂತೆ, ನಿನಗೆ ಸದಾ ನಿಧಿ ಕಾಣುತ್ತಿರಲಿ ಗೆಳೆಯ. ಆಗ ಯಾವ ಕಷ್ಟಗಳೂ ನಿನಗೆ ಕಾಣುವುದಿಲ್ಲ; ಕಂಡರೂ ದೊಡ್ಡದು ಎನಿಸುವುದಿಲ್ಲ'' ಕೊನೆಯ ಮಾತೆಂಬಂತೆ ಹೇಳಿದ; ಎಂದೂ ಬತ್ತದ ಚಾಲಕ ಶಕ್ತಿ.

ಮಲ್ಲಿಕಾರ್ಜುನ ಮತ್ತಷ್ಟು ಗಟ್ಟಿಯಾದ.

ದೂರದಿಂದಲೇ ಗೆಳೆಯ ಗುಹೆ ಸಮೀಪಿಸುವುದು ನೋಡುತ್ತಾ ನಿಂತ ತುಕಾರಾಮ್.

ಕೊನೆಯ ತಿರುವಿನಲ್ಲೊಮ್ಮೆ ಗಿಡಮರಗಳ ಮಧ್ಯೆ ಗೆಳೆಯನನ್ನೊಮ್ಮೆ ನೋಡಿದ. ತುಕಾರಾಮ್ ಹಿಂದೆಂದಿಗಿಂತ ಹೆಚ್ಚಿನ ನಗು, ಉತ್ಸಾಹ ತರಿಸಿಕೊಂಡು 'ಹೋಗಿ ಬಾ' ಎಂದು ಕೈ ಬೀಸಿದ. ಮಲ್ಲಿಕಾರ್ಜುನನ ಆತ್ಮವಿಶ್ವಾಸ ಒಮ್ಮೆಲೇ ಹೆಚ್ಚಾಗಿ, ಜೋರಾಗಿ ಕೈ ಬೀಸಿ ನಡೆದ.

ದೂರದಿಂದ ಕಂಡ ಗುಹೆ ಅಷ್ಟೊಂದು ಹತ್ತಿರವಿಲ್ಲ ಎಂಬುದು ಅವನರಿವಿಗೆ ಬಂತು. ಕಲ್ಲು ಮುಳ್ಳುಗಳ ಹಾದಿ. ಕುಡಗೋಲಿನಿಂದ ಸೊಂಟದೆತ್ತರದ ಗಿಡಗಳನ್ನು ಕೊಚ್ಚುತ್ತಾ ಮುಂದೆ ಸಾಗುತ್ತಿದ್ದ.

ಮಧ್ಯಾಹ್ನವಾಯಿತು. ಕಟ್ಟಿಕೊಂಡ ಬೆಳಗಿನ ಪ್ರಸಾದವನ್ನೇ ಬಿಚ್ಚಿ ತಿಂದ.

ಗುಹೆ ಹೊಕ್ಕ; ದೊಡ್ಡ ನಿರಾಸೆ. ಅಲ್ಲಿಂದ ಹೊರಗೆ ಬಂದಾಗ ಮತ್ತೆ ಕಾಡು. ಮತ್ತೊಂದು ಗುಹೆ; ಮತ್ತೆ ಹೊರಗೆ ಬಂದ; ಮತ್ತೆ ಕಾಡು. ಹೀಗೆ ಕಾಣುವ ದ್ವಾರಗಳೆಲ್ಲ ಹುಸಿ ಹೋದವು.

ಅದೆಷ್ಟು ದಿನಗಳಾದವೋ ಲೆಕ್ಕವಿಲ್ಲ, ಹಸಿದಾಗ ಒಮ್ಮೊಮ್ಮೆ ಹಣ್ಣು, ಕಾಯಿ ಸಿಕ್ಕುತ್ತಿದ್ದವು; ಒಮ್ಮೊಮ್ಮೆ ಎಲೆಗಳು. ಒಮ್ಮೊಮ್ಮೆ ಅವುಗಳಿಗೂ ಬರ. ಕೆಲವು ಸಲ ಸಿಕ್ಕ ಎಲೆಗಳು ತಿನ್ನಲು ಅಯೋಗ್ಯ, ಕಾರಣ ಅವು

ವಿಷಕಾರಿ. ತಲೆಗೆದರಿತ್ತು, ಸ್ನಾನವಿಲ್ಲದೆ ಮೈಯೆಲ್ಲಾ ಜಿಡ್ಡುಜಿಡ್ಡಾಗಿತ್ತು. ತೋಳಂಗಿ – ಧೋತರಗಳು ಮುಳ್ಳು ಕಂಟಿಗಳಿಗೆ ಸಿಕ್ಕು ಅಲ್ಲಲ್ಲಿ ಹರಿದಿದ್ದು, ಮಲ್ಲಿಕಾರ್ಜುನನ ನೆತ್ತರ ರುಚಿ ನೋಡಿದ್ದವು.

ಎರಡು ದಿನಗಳಿಂದ ಸಿಹಿಯೆಲೆಗಳು ಹೋಗಲಿ ನೀರೂ ಸಿಗದೆ ಬಳಲಿದ್ದ, ಆಯಾಸವಾಗಿತ್ತು. ಆದರೆ ವಿರಮಿಸಲು ಸರಿಯಾದ ಜಾಗವಿಲ್ಲ, ಚಿಕ್ಕ ಕಲ್ಲುಗಳಿಂದ ಚುಚ್ಚಿಸಿಕೊಳ್ಳುತ್ತಲೇ ಮಲಗಿದ್ದ.

ಒಂದು ದೊಡ್ಡ ಗರ್ಜನೆ ಕೇಳಿಸಿತು. ತತ್‌ಕ್ಷಣ ಎದ್ದು ಕುಳಿತ. ಆಯುಧವನ್ನು ಗಟ್ಟಿಯಾಗಿ ಹಿಡಿದು ಸನ್ನದ್ಧನಾಗಿದ್ದ. ಬಹಳ ಹೊತ್ತಾದ ಮೇಲೆ ಮತ್ತೊಂದು ಗರ್ಜನೆ, ಬಹುದೂರದಲ್ಲಿ ಕೇಳಿಸಿತು. ರಾತ್ರಿಯಿಡೀ ನಿದ್ರೆ ಇಲ್ಲದೆ ಕಾವಲು ಕಾಯ್ದು ಸುಸ್ತಾಗಿದ್ದ.

ಮತ್ತೆ ಗಮ್ಯದತ್ತ ಪಯಣ.

ತೊರೆ ಸಿಕ್ಕಿತು. ದೊಡ್ಡ ನಿಧಿ ಸಿಕ್ಕಷ್ಟು ಸಂತೋಷ. ಚಿಕ್ಕ ಮಗುವಂತೆ ಕುಣಿಯುತ್ತ ಹೋಗಿ ಮೊಗ, ಮೈಮೇಲೆ ನೀರನ್ನು ಬೊಗಸೆಯಲ್ಲಿ ಚೆಲ್ಲಾಡಿ ಆಟವಾಡಿದ. ದಕ್ಕಿಸಿಕೊಳ್ಳುವುದಕ್ಕಿಂತ ಹೆಚ್ಚು ಕುಡಿದು ತೃಪ್ತನಾದ. ತನ್ನ ಈ ಮಗುವಿನಾಟವನ್ನು ನೋಡಲು ಗೆಳೆಯರಿರಬೇಕಿತ್ತು ಅನ್ನಿಸಿತು.

ಮತ್ತೆ ಗಮ್ಯದತ್ತ ನೋಟ.

ಹಣ್ಣುಗಳು ಸಿಕ್ಕವು. ಸಾಕಷ್ಟು ತಿಂದ. ಕಾಯಿಗಳನ್ನು ಉಪಾಯವಾಗಿ ಸೊಂಟ ಬಂಧನದಲ್ಲಿ ಸಿಕ್ಕಿಸಿಕೊಂಡ. ಹತ್ತು ಹೆಜ್ಜೆ ನಡೆದಿದ್ದನಷ್ಟೆ ಗೊತ್ತಾಗದೆ ಇಳಿಜಾರಿನಲ್ಲಿ ಉರುಳುತ್ತ ಬಿದ್ದುಬಿಟ್ಟ, ಕಾಯಿಗಳೆಲ್ಲ ನಜ್ಜುಗುಜ್ಜಾದವು. ಕೊಟ್ಟದ್ದು ತನಗೆ, ಕೂಡಿಟ್ಟದ್ದು ಪರರಿಗೆ.

ಮೊಗ, ಮೈ, ಬಟ್ಟೆಗಳಿಗೆಲ್ಲ ಕೆಸರು ಮೆತ್ತಿಕೊಂಡಿತು. ಅದನ್ನು ತೊಳೆಯಲು ತೊರೆ ಹುಡುಕಿ ಹೊರಟ. ತೊರೆ ಸಿಗಲಿಲ್ಲ, ಮತ್ತೆ ಇಳಿಜಾರಿನಲ್ಲಿ ಬೇಕೆಂತಲೇ ಬಿದ್ದ, ದಾರಿ ಅರಸಿ ಹೋದರೂ ತೊರೆ ಸಿಗಲಿಲ್ಲ, ನಾಲ್ಕೈದು ಹುಡುಕಾಟಕಗಳ ಅನಂತರ ಸ್ಥಾನಪಲ್ಲಟವಾದ ಅರಿವಾಯಿತು. ಮೇಲೆ ಹೋದನಾದರೂ ಅಲ್ಲಿಂದ ಗುಹೆ ಕಾಣಿಸಲೇ ಇಲ್ಲ, ದೊಡ್ಡ ಆಘಾತ.

ಎಷ್ಟೋ ಸಮಯದ ಬಳಿಕ ಗುಹೆ ಕಾಣಿಸಿತು. ಈ ಸರತಿ ಮನ ಅದೇ ಕೊನೆಯ ಗುಹೆ ಎಂದು ಭವಿಷ್ಯ ಹೇಳುತ್ತಿತ್ತು. ನಿಧಿ, ವೇಗದ ಸಿರಿತನ, ಸುಂದ್ರಿಯಂತಹ ಹಲವು ಹೆಣ್ಣಾಳುಗಳಿಂದ ಸೇವೆ, ಹೀಗೆ ಕಲ್ಪನೆಗಳು ಒಂದರ ಹಿಂದೆ ಒಂದು ಉಗಿಬಂಡಿಯಂತೆ ಸಾಗಿದಾಗ ಹೊಸ ಹುಮ್ಮಸ್ಸು.

ಯಾವುದೋ ಮನುಷ್ಯಾಕೃತಿ ಕಂಡಂತಾಯಿತು. ಮನುಷ್ಯನೋ? ದೆವ್ವವೋ ತಿಳಿಯದೆ ತುಸು ಅಧೀರನಾದ. ಕುಡುಗೋಲನ್ನು ಗಟ್ಟಿಯಾಗಿ ಹಿಡಿದ.

ಪೂರ್ತಿ ಕಪ್ಪನೆಯ ಆಕೃತಿ ಹತ್ತಿರ ಬರಲು ಅದು ಮನುಷ್ಯನೇ ಎಂದು ಖಾತ್ರಿಯಾಯಿತು. ಆದರೆ ಇದೇನು ಮೈಮೇಲೆ ಒಂದೆಳೆ ನೂಲೂ ಇಲ್ಲದ ದಿಗಂಬರ ತನ್ನತ್ತಲೇ ಬರುತ್ತಿದ್ದಾನೆ?

ಕ್ಷೌರ ಕಾಣದ ಕೂದಲು, ಬಿಸಿಲಿಗೋ ಅಥವಾ ಆತನ ಮೈಬಣ್ಣವೇ ಕಪ್ಪೋ ತಿಳಿಯದಾಗಿತ್ತು. ಹುಚ್ಚನೋ ಏನೋ? ಗೊತ್ತಾಗದೆ ಅವನ ತಪ್ಪಿಸಲು ಹೋದರೆ ಆತ ಮಲ್ಲಿಕಾರ್ಜುನ ಸಮೀಪಿಸಿದ.

ಆತನ ಹೃದಯ ಜಾಗದಲ್ಲಿ ಏನೋ ಅಸ್ಪಷ್ಟ ಚಲನೆ.

ಒಮ್ಮೆಲೇ ಆತ 'ಹೀssssssಕ್!! ' ಎಂದು ಜೋರಾಗಿ ಕೂಗಲು ಮಲ್ಲಿಕಾರ್ಜುನ ನಡುಗಿದ. ಅಕಾರಣವಾಗಿ ತನ್ನನ್ನು ಹೆದರಿಸಿದ್ದಕ್ಕೆ ಆತನ ಹೊಡೆಯುವಷ್ಟು ಸಿಟ್ಟು ಬಂದು ಅವನ ಅಟ್ಟಾಡಿಸಿಕೊಂಡು ಹೋದ. ಆತ ಸಿಗಬೇಕಲ್ಲ? ಅದೂ ಈ ನಿತ್ರಾಣನಿಗೆ? ಒಂದಷ್ಟು ಕಣ್ಣಾಮುಚ್ಚಾಲೆ ಆಟವಾಡಿಸಿದ.

ಸುಸ್ತಾಗಿ ಕುಳಿತ ಮಲ್ಲಿಕಾರ್ಜುನನಿಗೆ ತಾನೇಕೆ ಇವನ ಬೆನ್ನಟ್ಟಬೇಕು? ಎನಿಸಿತು. ಅವನ ನಿರ್ಲಕ್ಷಿಸಿ ಹೊರಟ. ಅವನು ಮತ್ತೆ ಇವನ ಹಿಂದೆ ಮುಂದೆ ಸುಳಿದಾಡುತ್ತಾ ಹೀಕ್! ಹಿಹೀಕ್!! ಶಬ್ದ ಮಾಡಿದ.

ಸುಸ್ತಾಗಿ ಕುಳಿತಾಗ ಅವನ ಮುಂದೆ ಕುಕ್ಕುರುಗಾಲಿನಲ್ಲಿ ಕುಳಿತ. ಬತ್ತಲೆ ದೇಹವನ್ನು ನೋಡಲಾಗದೆ ಮೊಗ ಕಿವುಚುತ್ತ ಕತ್ತು ಬೇರೆಡೆ ಹೊರಳಿಸಿದ.

ಆತ ತನ್ನ ಕೊಳೆಯಾದ ಕೈಗಳಿಂದ ಮಲ್ಲಿಕಾರ್ಜುನನ ಗದ್ದವನ್ನು ನವಿರಾಗಿ ತನ್ನತ್ತ ಹೊರಳಿಸಿಕೊಂಡ. ತನ್ನೆದೆಗೆ ಬೆರಳು ಮಾಡಿ ತೋರಿದ. ಆತನ ಎಡಭಾಗದ ಎದೆಯ ಮೇಲಣ ಚರ್ಮ ಸುಲಿದಂತಿದ್ದು, ಹೃದಯದ ಅರ್ಧ ಆಕಾರ ಹೇಗಿರುತ್ತದೆ ಎಂಬುದು ಕರಾರುವಾಕ್ ಕಾಣಿಸಿತು. ಅಷ್ಟೇ ಅಲ್ಲದೆ ಅದು ಹೊಡೆದುಕೊಳ್ಳುವ ಸ್ಪಷ್ಟ ಚಲನೆ ಗೋಚರವಾಗುತ್ತಿದ್ದು ಮಲ್ಲಿಕಾರ್ಜುನ ಭಯಭೀತನಾದ.

ಆತ ಮತ್ತೆ ಮತ್ತೆ ತನ್ನ ಹೃದಯ ತೋರಿ, ಮಲ್ಲಿಕಾರ್ಜುನನ ಹೃದಯವನ್ನೂ ತೋರುತ್ತ ಮರಳಿ ಹೋಗುವ ಸನ್ನೆ ಮಾಡಿದ.

ಮಲ್ಲಿಕಾರ್ಜುನನಿಗೆ ತಿಳಿಯಲಿಲ್ಲ, ಆತ ಯಾವುದೋ ಭಾಷೆಯಲ್ಲಿ ಒಂದೆರಡು ವಾಕ್ಯ ಹೇಳಿದ. ಅರ್ಥವಾಗಲಿಲ್ಲ ಎಂಬಂತೆ ಮಲ್ಲಿಕಾರ್ಜುನನ ಭೃಕುಟಿಗಳು ಗಂಟಿಕ್ಕಿದವು.

ಆತ ಓಡಿ ಹೋಗಿ ಹಣ್ಣು ತಂದು ಆನಂದದಿಂದ ಅನುಭವಿಸುತ್ತ ತಿಂದ. ಬೊಗಸೆಯಲ್ಲಿ ನೀರು ಹಿಡಿದು ಆಕಾಶಕ್ಕೆ ಎಸೆದು ಅದು ಮೊಗದ ಮೇಲೆ ಬಿದ್ದಾಗ ಪರಮಾನಂದ ಎನ್ನುವಂತೆ ತೋರಿದ. ಎರಡೂ ತೋಳು ಚಾಚಿ, ಆಕಾಶಕ್ಕೆ ಮೊಗ ಮಾಡಿ, ಕಣ್ಮುಚ್ಚಿ ಒಂದು ಸುತ್ತು ಸುತ್ತುಹಾಕಿದ.

ಮಲ್ಲಿಕಾರ್ಜುನನಿಗೆ ಅರ್ಥವಾಗದೆ ಹೊರಡಲನುವಾದ.

ಆತ ಈತನಿಗೆ ಗುಹೆಯತ್ತ ಸನ್ನೆ ಮಾಡಿ ತಾನು ತೋರುವ ದಾರಿಯಿಂದ ಹೋಗುವಂತೆ ಇಶಾರೆ ಮಾಡಿದ. ಮಲ್ಲಿಕಾರ್ಜುನನಿಗೆ ಇದು ಬೇಗ ಅರ್ಥವಾಯಿತು. ಆತನನ್ನು ನಂಬುವುದೋ? ಬೇಡವೋ ಎಂಬ ಅನುಮಾನದಲ್ಲೇ ಆತ ಹೇಳಿದ ದಿಕ್ಕಿನತ್ತ ಹೊರಟ. ಆತ ಮಾತ್ರ ಮಲ್ಲಿಕಾರ್ಜುನ ಹೋಗುವ ದಾರಿಯನ್ನೇ ನೋಡುತ್ತಿದ್ದ, ಆತನ ಕಣ್ತಪ್ಪಿಸಿ ಮಲ್ಲಿಕಾರ್ಜುನ ಬೇರೆ ದಾರಿಯಲ್ಲಿ ಸಾಗಿದರೆ ಈತ ಮತ್ತೆ ಓಡಿ ಹೋಗಿ ತಾನು ತೋರಿದ ದಿಕ್ಕಿಗೇ ಹೋಗಬೇಕೆಂದು ಬಲವಂತಪಡಿಸುತ್ತಿದ್ದ, ಮೊದಲೇ ಹೊಟ್ಟೆಗಿಲ್ಲದೆ ನಿಶ್ಶಕ್ತಿ, ಈತನ ಬಲವಂತ, ಕಣ್ತಾವಲು ತಪ್ಪಿಸಲಾಗದೆ ಆತ ತೋರಿದ ದಾರಿಯಲ್ಲೇ ಸಾಗಿದ.

ಒಂದಿಡೀ ದಿನ ಕ್ರಮಿಸಿದರೂ ಗುಹೆ ಕಾಣಿಸಲೇ ಇಲ್ಲ, ಯಾಕೋ ಹುಚ್ಚನ ಮಾತು ನಂಬಬಾರದಿತ್ತು ಎನಿಸಿ ಅಲ್ಲಿಯೇ ಪವಡಿಸಿದ. ಬೆಳಗೆದ್ದಾಗ ತನ್ನ ತಾನು ನಂಬಲಸಾಧ್ಯ ಎನ್ನಿಸುವಂತಾಗಿತ್ತು; ಕಾರಣ ಗುಹೆಯ ಮುಂದೆಯೇ ಈತ ಮಲಗಿದ್ದ, ಹುಚ್ಚನಂತೆ ಕುಣಿದಾಡಿದ. ಹಿಂದಿನ ಗುಹೆಗಳಂತಿರದೆ ಬೇರೆಯದೇ ರಚನೆ ಇತ್ತು. ನಾಲ್ಕು ಹೆಜ್ಜೆಗೊಂದರಂತೆ ಮೇಲ್ಗಡೆ ಕಲ್ಲಿನಲ್ಲಿ ರಂಧ್ರಗಳಿದ್ದು ಸಾಕಷ್ಟು ಬೆಳಕು, ಗಾಳಿ ಸುಳಿದಾಡುತ್ತಿತ್ತು. ಸ್ಫೂರ್ತಿ.

ಒಂದೆಡೆ ಈತನ ಪ್ರವೇಶದಿಂದ ತೊಂದರೆಯಾಗಿ ನೂರಾರು ಬಾವಲಿಗಳು ಹೊರಹಾರಿ ಬಂದವು. ಅವುಗಳು ಬಡಿದು ನಿಶ್ಶಕ್ತ ದೇಹಕ್ಕೆ ಮತ್ತಷ್ಟು ನೋವು.

ಕತ್ತಲಿನಲ್ಲಿ ಯಾವುದರ ಮೇಲೆ ಕಾಲಿಟ್ಟಿದ್ದನೋ, ಕಾಲಿಗೆ ಸಣ್ಣಗೆ ಕಚ್ಚಿದ ಅನುಭವ. ತಲೆತಿರುಗಿ ಬಿದ್ದ, ಪುಣ್ಯಕ್ಕೆ ಪ್ರಜ್ಞೆ ತಪ್ಪಿದ್ದನಷ್ಟೇ. ಎಚ್ಚರವಾದಾಗ ತಾನಾರು, ಎಲ್ಲಿದ್ದೇನೆ ಅರಿಯಲು ಕ್ಷಣಗಳೇ ಹಿಡಿದವು. ಸಾವಾಗಲಿಲ್ಲ ಎಂಬ ಖುಷಿ; ಹೊಸ ಪ್ರೇರಣೆ.

ವಾತಾಯನ ಕಡಿಮೆಯಾದಂತೆ, ಭಯ ಹೆಚ್ಚತ್ತೊಡಗಿತು.

ಒಂದು ಬದಿಯಿಂದ ಮತ್ತೊಂದು ಬದಿ ಹೋಗಲು ಒಂದೇ ಒಂದು ಪಾದ ಇಡುವಷ್ಟು ಕಿರಿದಾದ ಸೇತುವೆ. ಜಾರಿದರೆ ಕೆಳಗೆ ಪ್ರಪಾತ. ಸ್ನೇಹಿತನ ಮಾತುಗಳು ಸ್ಮರಣೆಗೆ ಬಂದವು. 'ಅರ್ಜುನ ಚಿತ್ತ– ಕಣ್ಣ ಮೇಲುಂಟು, ತನ್ನ ಚಿತ್ತ – ನಿಧಿಗಂಟು' ಜಪಿಸುತ್ತ ಸೇತುವೆ ದಾಟಿದ. ಎಲ್ಲೆಲ್ಲೂ ಗೋಡೆಯೇ. ದಾರಿಯೇ ಇಲ್ಲ, ಅರ್ಧ ದಿನಗಳೆಯಿತು, ಯಾಕೋ

ವೃದ್ಧಾಶ್ರಮದಲ್ಲಿ

ಸುಕ್ಕು ಗಟ್ಟಿದ ಚರ್ಮದೊಳಗೆ
ಎಣಿಸುವಷ್ಟು ಎಲುಬುಗಳು
ಗವಿಸೇರಿದ ಕಣ್ಗುಡ್ಡೆಗಳು
ಎಲ್ಲರಿದ್ದೂ ಯಾರೂ ಇಲ್ಲದ ಒಂಟಿ ಜೀವಿಗಳು

ಆಗ ಚಕ್ರ ಕಟ್ಕೊಂಡ್ ಕಾಲುಗಳು
ಈಗ, ಕೋಲಿಲ್ದೇ ನಡೀಲಾರದವು
ಜಗತ್ತೇ ಮನೆಯಾಗಿತ್ತಾಗ
ಮನೆಯೇ ಜಗತ್ತಾಗಿದೆ ಈಗ
ಅತಿಯಾಗಿ ತಿಂದೆ ಆಗ
ಮಿತವಾಗಿ ತಿನ್ನು ಈಗ
ಹಲ್ಲಿತ್ತು ಕಡಲೆಯೂ ಇತ್ತಾಗ
ಅದನು ತಿನ್ನೋ ಹಲ್ಲಿಲ್ಲ ಈಗ
ಮಾಡಿದ ಕರ್ಮ ಮರೆತಿಲ್ಲ ನಮ್ಮನ್ನು
ನಾವ್ ಮರೆತೆವು
ಮರೀಬಾರದ್ದನ್ನು
ಇದ್ಯಾವ ಜನ್ಮದ ಕರ್ಮ
ತಿಳೀತಿಲ್ಲದರ ಮರ್ಮ!

❑ ಶಿವಲಿಂಗಯ್ಯ ಹಿರೇಮಠ

ಪ್ರಚಾರದ ವೇಳೆ ಚುರುಮುರಿ ಸವಿದ ಪ್ರಧಾನಿ



'ಇನ್ನು ರಸ್ತೆ ಬದಿ ಚುರುಮುರಿ ತಿನ್ನೋ ಹಾಗಿಲ್ಲ! ಬೇರೆ ಪಕ್ಷಕ್ಕೆ ಬೆಂಬಲಿಸ್ತಿದ್ದೀವಿ ಅಂತಾಗುತ್ತೆ!'

ನಿರಾಸೆ. ಮತ್ತೇನೋ ಹೊಳೆದಂತಾಗಿ ಗೋಡೆ ಮೇಲೆ ಸೂಕ್ಷ್ಮವಾಗಿ ಕೈಯಾಡಿಸಲು ಒಂದು ಕಡೆಗೆ ಸಣ್ಣ ಕುಳಿಯಂತಹ ರಚನೆ. ತನ್ನಲ್ಲಿದ್ದ ನಾಣ್ಯವನ್ನು ಆ ರಚನೆಯಲ್ಲಿ ಹುದುಗಿಸಲು ಶಿಲಾಬಾಗಿಲು ತೆರೆದುಕೊಂಡಿತು. ಇಚ್ಛಾಶಕ್ತಿ ಪ್ರಬಲವಾಯಿತು.

ಕತ್ತಲ ದಾರಿ ಕಿರಿದಾಗುತ್ತಾ ಹೋಯಿತು. ನಡೆಯುತ್ತಾ ಸಾಗಿದ, ಬಗ್ಗಿ ಸಾಗಿದ, ಕುಳಿತು ಸಾಗಿದ, ಕಡೆಗೆ ತೆವಳುತ್ತ ಹೋದ. ತನಗೆ ಕಣ್ಣುಗಳೇ ಇಲ್ಲವೇನೋ ಎನಿಸುವಷ್ಟು ಕಗ್ಗತ್ತಲು.

ಹಸಿವು, ದಾಹ. ಗುಟುಕು ನೀರು ಸಿಕ್ಕರೂ ಸಾಕು ಹಿಂದಿರುಗಿ ಹೋಗುವ ಆಸೆ ಒಂದೆಡೆ. ಇಲ್ಲಿಯವರೆಗೂ ಬಂದು ಹಿಂತಿರುಗಿ ಹೋಗಬಾರದೆನ್ನುವ ಚಾಲಕ ಶಕ್ತಿ ಮತ್ತೊಂದೆಡೆ.

ಯಾವ್ಯಾವುದೋ ಜೀವಿಗಳು ಸರಿದಾಡಿದ ಶಬ್ದ; ಪಕ್ಷಿಗಳು ಹಾರಿದ ಶಬ್ದ. ಹೆದರಿಕೆ ಹೋಗಲಾಡಿಸಲು ಜೋರಾಗಿ ಕೂಗಿದ. ನಿಶ್ಶಕ್ತಿ. ದಾರಿ ಮುಂದಿನದ್ದೋ? ಹಿಂದಿನದ್ದೋ? ದ್ವಂದ್ವದಲ್ಲಿ ನಿದಿರೆಗೆ ಜಾರಿದ.

ಸಣ್ಣ ಸುಳಿಗಾಳಿ ರಂಧ್ರದ ದಾರಿ ತೋರಿತು. ಅಲ್ಲಿ ಹೋಗಿ ಶಕ್ತಿ ಹಾಕಿ ಗುದ್ದಲು ಒಂದಷ್ಟು ಸಣ್ಣ ಕಲ್ಲುಗಳು ಸರಿದಾಡಿದವು. ಮಧ್ಯಾಹ್ನದ ತನಕ ಅವುಗಳ ಸರಿಸಾಡುತ್ತಾ ದಾಟಿ ಹೋಗಲು ಜಾಗ ಮಾಡಿಕೊಂಡ.

ದೊಡ್ಡ ಪ್ರಾಂಗಣ. ದೂರದಲ್ಲಿ ಫಳಫಳ ಹೊಳೆಯುವ ಹೊನ್ನಮೂರ್ತಿ. ಅದರ ಸನಿಹದಲ್ಲೇ ಒಂದು ಅಸ್ಥಿಪಂಜರ. ಅದರ ಮೇಲೆ ಜೀರ್ಣವಾಗಿದ್ದ ಶಲ್ಯ, ಧೋತರಗಳು. ಸ್ವಾಮಿ ಮಹಾದೇಸಿಕನ್ನರ ನೆನಪಾಯಿತು. ಇನ್ನು ನಿಧಿ ಸಿಕ್ಕುವುದು ತಡವಲ್ಲ ಎಂದರಿತ. ಅತ್ತಿತ್ತ ಹುಡುಕಾಡಿದ, ಅಲ್ಲೆಲ್ಲೂ ಏನೂ ಸಿಗಲಿಲ್ಲ. ಪ್ರಾಂಗಣದ ಕಡೆಯ ಅಂಚಿನಲ್ಲಿ ಒಬ್ಬರು ದಾಟಿ ಹೋಗಬಹುದಾದ ಜಾಗ. ಅಲ್ಲಿಂದ ನೇರವಾಗಿ ಹೊರಗಿನ ದಟ್ಟಕಾಡು ಕಾಣಿಸುತ್ತಿತ್ತು; ಆರಾಮಾಗಿ ಹೊರಹೋಗಲು ಜಾಗವೂ ಇತ್ತು.

ಆ ಒಬ್ಬರು ದಾಟುವ ಜಾಗದಲ್ಲಿ ಪೂರ್ತಿ ದೇಹವನ್ನು ಒಮ್ಮೆಲೇ ಸುಲಭವಾಗಿ ದಾಟಲು ಆಗದಂತೆ ನಟ್ಟನಡುವೆ ಹೊರಚಾಚಿದಂಥ ಕಲ್ಲಿನ ರಚನೆಯಿತ್ತು. ದೇಹವನ್ನು ಅತ್ತಿತ್ತ ಹೊರಳಾಡಿಸಿ, ಸಾಕಷ್ಟು ಕುಗ್ಗಿಸಿ ಪ್ರಯತ್ನಿಸಿದ; ಆಗಲಿಲ್ಲ. ಕೆಳಗಿನಿಂದ ಒಂದು ಕಾಲು ಹೊರಚಾಚಿದ, ಮೇಲಿನಿಂದ ಕತ್ತು, ಬಲಗೈಯನ್ನು ಆರಾಮಾಗಿ ದಾಟಿಸಿದ. ಸರಿಯಾಗಿ ಎದೆಯ ಭಾಗಕ್ಕೆ ಉಬ್ಬಿದಂತಿದ್ದ ಕಲ್ಲು ದಾಟಲು ಅಡ್ಡವಾಗಿಬಿಟ್ಟಿತು. ಇಷ್ಟಿಷ್ಟೇ ಸರಿಸುತ್ತಾ ಹೋದಾಗ ದೇಹದ ಅರ್ಧ ಭಾಗ ಮಾತ್ರ ಹೊರಬಂದಿತ್ತು; ಖುಷಿಯಾಯಿತು. ಆದರೆ ಹೊರಚಾಚಿದ ರಚನೆಯಲ್ಲಿ ವಕ್ಷಸ್ಥಲ ಸಿಕ್ಕಿಕೊಂಡುಬಿಟ್ಟಿತು.

ಸಮಯ ಸರಿದಂತೆ ನಿಶ್ಶಕ್ತಿ ಹೆಚ್ಚಾಯಿತು. ನಿಂತಲ್ಲೇ ನಿಂತು, ನಿಂತು ಕಾಲು ಜೋಮು ಹಿಡಿದವು. ಕುಡಗೋಲನ್ನು ಎದೆ ಮತ್ತು ಕಲ್ಲಿನ ನಡುವೆ ಪ್ರಯಾಸಪಟ್ಟು ಸೇರಿಸಿದ. ಆಶ್ಚರ್ಯ! ಸರಿಯುವಿಕೆಗೆ ತುಸು ಬಲ ಬಂತು. ಮತ್ತಷ್ಟು, ಇನ್ನಷ್ಟು, ಹೂ ಮಗದಷ್ಟು ಸರಿದ. ಇನ್ನೇನು ಹೊರಬಂದೇ ಬಿಟ್ಟ ಎನ್ನುವುದರಲ್ಲಿ ಹಾವು ಕಂಡಿತು.

ಆಯ್ಕೆಯೇ ಇಲ್ಲ, ಕಣ್ಮುಚ್ಚಿದ. ಅದು ನಿಧಾನವಾಗಿ ಅವನ ಕಾಲು ಸುತ್ತುತ್ತ, ದೇಹವೇರಿ ಹೊರಚಾಚಿದ ಕಲ್ಲಿನ ಮೇಲೆ ಕುಳಿತಿತ್ತು. ಕಣ್ಣು ತೆರೆದರೆ ಅದನ್ನು ಎದುರಿಗೇ ನೋಡಿ ಭಯವಾಗುವ ಸಂಭವ. ಅದರಿಂದ ತಾನು ಕಿರುಚಿದಾಗ ಕಚ್ಚಿದ್ದರೇ? ಹಾಗಾಗಿ ಎಷ್ಟೋ ಹೊತ್ತು ಕಣ್ಣು ತೆರೆಯಲೇ ಇಲ್ಲ. ತೆರೆದಾಗ ಅದು ಇರಲಿಲ್ಲ.

ಅಷ್ಟೊತ್ತು ಕಾಣದ ಹೊನ್ನವು ಹೊಂಬಿಸಿಲು ತಗ್ಗಿದಂತೆ ಗೋಚರಿಸಿ ಪ್ರಕಾಶಮಾನವಾಗಿ ಹೊಳೆಯತೊಡಗಿತು. ನಿಧಿಯ ಜಾಗ ಗೊತ್ತಾದ ಸಂಭ್ರಮ. ಎದುರಿಗೆ ನಿಧಿ, ಬಲಕ್ಕೆ ಹೊರಹೋಗುವ ಬಾಗಿಲು.

ಅಗಾಧ ಪಿಪಾಸು. ಹುಚ್ಚ ಹೇಳಿದ ನೀರು, ಹಣ್ಣು ಗಾಳಿಗಳ ಮೌಲ್ಯ ಈಗ ಸರಿಯಾಗಿ ಗೊತ್ತಾದವು. ಈ ಮೂಲಭೂತ ಸೌಕರ್ಯಗಳೇ ಸಾಕು ಬದುಕಲು.

ಬಾಲ್ಯದ ಆಟಗಳು, ಸಮೃದ್ಧ ನಿದಿರೆ, ಚಿಂತೆಯಿಲ್ಲದ ಬರೀ ಸುಖದ ಕ್ಷಣಗಳೇ ತುಂಬಿದ ಸಮಯ ನಿಜವಾದ ನಿಧಿ; ನಿಜವಾದ ಸಂಪತ್ತು ಎಂಬ ಅರಿವಾಯಿತು. ತನ್ನ ವ್ಯಾಪಾರಕ್ಕೆ ಅಮ್ಮ ಕೊಟ್ಟ ಬಂಗಾರದ ಬಂಡವಾಳ, ಅಪ್ಪನ ಅನುಭವ ಸ್ಮರಣೆಗೆ ಬಂದವು. ವ್ಯಾಪಾರದಲ್ಲಿ, ಬದುಕಲ್ಲಿ ಯಾರ್ಯಾರು ತನಗೆ ಮೋಸ ಮಾಡಿದ್ದರು ಎಂಬುದು ಮಾತ್ರ ಆಗಾಗ ಸ್ಮರಿಸಿಕೊಳ್ಳುತ್ತಿದವನಿಗೆ ತಾನು ಯಾರ್ಯಾರಿಗೆ ಮೋಸ ಮಾಡಿದ್ದ, ನೋವು ನೀಡಿದ್ದ ಎಂಬುದರ ಪಟ್ಟಿ ಕುಟ್ಟಿ ಕುಟ್ಟಿ ಇಟ್ಟಿತು.

ಕೈ ಹಿಡಿದಾಗಿನಿಂದ ತನ್ನಂತರಂಗ ಅರಿತು ನಡೆಯುವ ಮಡದಿಯ ಬಗೆಗೆ ಹೆಮ್ಮೆಯಾಯಿತು. ಆಕೆ ಆಲಿಸಿದ ತಮ್ಮ ಮಾತನ್ನು ಯಾರಲ್ಲೂ ಹೇಳದಂತೆಯೂ; ಬದಲಾಗಿ ಆಕೆಗೆ ಸಾಕಷ್ಟು ಒಡವೆ ಮಾಡಿಸಿ ಕೊಡುವುದಾಗಿಯೂ ಆಮಿಷವೊಡ್ಡಿದ ನೆನಪಾಯಿತು. ಆ ಆಮಿಷ ಮೀರಿ ಆಕೆ ತನ್ನನ್ನು ಪ್ರೀತಿಸಿದಳು, ಆರಾಧಿಸಿದಳು, ತಾತ್ಸಾರ ತೋರಿದರೂ ಸಹಿಸಿಕೊಂಡು ನಿಷ್ಠೆಯಿಂದ ಸಮರ್ಪಿಸಿಕೊಂಡವಳು. ಛೇ! ಅಂತಹ ಕುಲೀನ ಹೆಣ್ಣನ್ನು ಅವಮಾನಿಸಿದೆ. ಸುಂದ್ರಿಯ ದೇಹಕ್ಕೆ ಹೋಲಿಸಿ ಕೀಳಾಗಿ ಕಂಡೆ.

ಬಲವಂತದ ನಿಯಂತ್ರಣ ಹೇರಿ, ಜೀವಾಪಾಯದ ಕೂಪಕ್ಕೆ ತಳ್ಳಿ ಮೋಜು ನೋಡುವ ಬೆಲೆವೆಣ್ಣ ನಂಬಿದೆ.

ನನ್ನ ಹೊರತಾಗಿ ಬೇರೇನೂ ಬೇಡದ ಬೆಲೆಯಿರುವ ಹೆಣ್ಣನ್ನು ಅಪಮಾನಿಸಿದೆ. ಛೇ! ಪಾಪಿ ನಾನು. ದಕ್ಕಿರುವ ಸುಖಗಳನ್ನು ಒದ್ದು, ದಕ್ಕದರ ಹಿಂದೆ ಬಂದ ಬುದ್ಧಿಗೇಡಿ.

ಬೇಡ ಈ ನಿಧಿ ಬೇಡವೇ ಬೇಡ. ನನ್ನಮ್ಮ, ಅಪ್ಪ, ಮಗು ಮತ್ತು ಹೆಂಡತಿ ಬೇಕು. ಆ ತೃಪ್ತಿಕರ ಜೀವನವೇ ಸಾಕು ಎಂದುಕೊಂಡ.

ದೇವರು ಕಣ್ಮುಚ್ಚಿದಲ್ಲೇ 'ಅಹುದೆ?' ಕೇಳಿದ. ಈತ 'ಹೌದು! ಜೀವ, ಜೀವನವೇ ಬೇಕು. ನಿಧಿಯಲ್ಲ' ಎಂದ.

ಚಿಕ್ಕ ಜೀವಿಗಳ ಸರಿದಾಟದಿಂದ ಹರಳಿನ ಉಂಗುರವೊಂದು ಉರುಳುತ್ತ ಇವನತ್ತ ಬಂತು, ಪರೀಕ್ಷಿಸುವಂತೆ.

ಕಾಲ ಪಕ್ಕ ಉಂಗುರ; ಕಾಲಿನ ನೇರಕ್ಕೆ ಜೀವನದ ದ್ವಾರ.

ದ್ವಾರ ಬೆಳಕಿಗಿಂತ ಉಂಗುರದ ಮಿಂಚು ಆತನ ಮೊಗದ ಮೇಲೆ ಮಂದಹಾಸ ತರಿಸಿತು.

ತಪ್ಪು ಉತ್ತರಕ್ಕೆ ದೇವ ನಕ್ಕುಬಿಟ್ಟ.

'ಇರುವೆ'ಯೊಂದು ಕಾಲಿಗೆ ಕಚ್ಚಲು ಆತ ಅಪ್ರಯತ್ನವಾಗಿ ಮಿಸುಕಾಡಿದ. ಆಯುಧದ ಮೊನೆ 'ಹೃದಯ'ಕ್ಕೆ ತಾಗಿ ಜೀವ ದೇವನ ಪಾಲಾಯಿತು.

ಮಾನವನಾಗಿ ಹುಟ್ಟಿದ ಮೇಲೆ ಬುದ್ಧಿ ಉಪಯೋಗಿಸಿ, ಮೌಲ್ಯಯುತ ಜೀವನ ನಡೆಸುವ 'ಕಾಯ'ದ ಹೃದಯವನ್ನು ದೇವ ಕಾಯುತ್ತಾನೆ. ಲೋಭಿಯಾದರೆ? 'ಕಾಯ' 'ತಾ' ಎಂದು ಕಸಿದುಕೊಂಡು ಹೋಗುತ್ತಾನೆ.

■

ಹೈಕುಗಳು

ಬಿಳಿ ಕಾಗದವ ತೆಗೆದ ಮಗು
ಬಿಳಿ ಪೆನ್ಸಿಲ್‌ನಿಂದ ಚಿತ್ರಿಸುತ್ತದೆ
ಮೃತ ತಾಯಿಯನ್ನು

★ ★ ★

ಎಂಬತ್ತು ವರ್ಷ ಜೊತೆಯಲ್ಲಿದ್ದೂ
ತಂದೆಯ ವಾರ್ಷಿಕ ಶ್ರಾದ್ಧದಲ್ಲಿ
ಭಾಗವಹಿಸಲಿಲ್ಲ ಆತ್ಮವು

★ ★ ★

ಸರಿಯಾಗಿ ಪಾದರಕ್ಷೆಗಳನ್ನು
ಹಾಕಿಕೊಂಡು ನಡೆಯುವ ಮಗುವನ್ನು
ಅಭಿಮಾನಿಸೋಕೆ ಆಗಲಿಲ್ಲ

★ ★ ★

ಕ್ಷಮೆಯಾಚಿಸುತ್ತದೆ
ಮಗುವಿನ ಗೋಡೆಯ ಗೀಚುಗಳನ್ನು
ಒರೆಸುವ ಕುಂಚವು

★ ★ ★

ರಂಧ್ರಗಳು ಹಾಕಿದ ಕತ್ತಲಲ್ಲಿ
ಬೆಳಕನ್ನು ಅಂಟಿಸುತ್ತಾ
ಹಾರುತ್ತವೆ ಮಿಂಚುಹುಳುಗಳು

★ ★ ★

ತೂರುವ ಮೊರದಲ್ಲಿ ಪ್ರಯಾಣಿಸಿ
ಕಸದ ತೊಟ್ಟಿಗೆ ಬೀಳುವವು
ನಿನ್ನೆಯ ಕ್ಲೋರೋಫಿಲ್‌ಗಳು

★ ★ ★

ಹಳೆಯ ವಿದ್ಯಾರ್ಥಿಗಳ ಸಭೆ
ಆಹ್ವಾನ ನೀಡಿದ್ದರೂ
ಹಾಜರಾಗಲಿಲ್ಲ 'ಯೌವನ'

★ ★ ★

ಗುಡುಗಿನ ನಂತರ
ಬಿಟ್ಟ ಸ್ಥಳದಿಂದ ಮಾತನಾಡಲು
ಪ್ರಾರಂಭಿಸಿತು ಮೌನವು

★ ★ ★

ಹಕ್ಕಿಗಳೆಲ್ಲವು ಮರಳಿವೆ
ಎಂದು ಖಚಿತಪಡಿಸಿಕೊಂಡು
ಕಪ್ಪಾಗುತ್ತದೆ ಮುಸ್ಸಂಜೆಯ ಆಗಸ

★ ★ ★

'ತರಗೆಲೆ'ಗಳಾಗುತ್ತವೆ
ಕೀಟಗಳಿಂದ ಉದುರಿದ ಎಲೆಗಳೊಡನೆ
ಗಾಳಿಯಿಂದ ಬಿದ್ದೆಲೆಗಳು.

❑ ಡಾ. ವಿ. ಪುಗಳೇಂದಿ

ಮರೆಯಲಾಗದ ಹತ್ತು ಪರಮಾಣು ದುರಂತಗಳು

❑ಚಿನ್ಮಯ್

ಕಳೆದ ವರ್ಷ ಪಾಕಿಸ್ತಾನದ ಮೇಲೆ ನಡೆದ ಭಾರತೀಯ ಕ್ಷಿಪಣಿಗಳ ದಾಳಿ ಪಾಕಿಸ್ತಾನವನ್ನು ಮಾತ್ರವೇ ಅಲ್ಲ, ದೂರದ ಅಮೆರಿಕಾದ ಡೊನಾಲ್ಡ್ ಟ್ರಂಪ್ ಸರಕಾರವನ್ನು ಕೂಡ ದಿಗಿಲೆಬ್ಬಿಸಿತ್ತು.

2025, ಮೇ ತಿಂಗಳಲ್ಲಿ ಆಪರೇಶನ್ ಸಿಂದೂರ್ ಹೆಸರಿನ ಕಾರ್ಯಾಚರಣೆಯಲ್ಲಿ ಭಾರತೀಯ ಕ್ಷಿಪಣಿಗಳು ಅಪ್ಪಳಿಸಿದ್ದು ಪಾಕಿಸ್ತಾನದ ಕಿರಾನಾ ಹಿಲ್ಸ್ ಎಂಬ ಪ್ರದೇಶದಲ್ಲಿ. ಕೇವಲ ಒಂದೇ ಏಟಿಗೆ ಪಾಕಿಸ್ತಾನ ನಡುಗಿ ಹೋಗಿತ್ತು. ಪಾಕಿಸ್ತಾನಿ ನಾಯಕರು ಅಮೆರಿಕಕ್ಕೆ ಮಧ್ಯರಾತ್ರಿಯ ತುರ್ತು ಕರೆ ಕಳಿಸಿದ್ದರು. ಟ್ರಂಪ್ ಸರಕಾರವನ್ನು ಮಧ್ಯಸ್ಥಿಕೆ ವಹಿಸುವಂತೆ ವಿನಂತಿಸಿ, ಯುದ್ಧ ವಿರಾಮ ಮಾಡಿಸಲು ಗೋಗರೆದಿದ್ದರು.

ಒಂದೇ ಒಂದು ಕ್ಷಿಪಣಿ ದಾಳಿ ಪಾಕಿಸ್ತಾನದ ಎದೆ ನಡುಗಿಸಿದ್ದು ಹೇಗೆ?

ಇದು ಸಾಮಾನ್ಯ ಜಾಗವಾಗಿರಲಿಲ್ಲ. ಕಿರಾನಾ ಹಿಲ್ಸ್‌ನ ಒಳಗೆ ಭೂಗತ ನೆಲೆಯಲ್ಲಿ ಪಾಕಿಸ್ತಾನದ ಅಣ್ವಸ್ತ್ರಗಳ ದಾಸ್ತಾನು ಇದೆ. ಅದೇನಾದರೂ ಒಡೆದು ಬಿದ್ದರೆ ಅನಾಹುತ ಸಂಭವಿಸುವುದು ಖಂಡಿತವಾಗಿತ್ತು.

ಭಾರತೀಯ ಕ್ಷಿಪಣಿ ದಾಳಿ ಕೇವಲ ಒಂದು ಎಚ್ಚರಿಕೆ ಮಾತ್ರವಾಗಿತ್ತು. 'ನಿಮ್ಮ ಅಣ್ವಸ್ತ್ರ ದಾಸ್ತಾನಿನ ತನಕ ತಲಪುವ ಸಾಮರ್ಥ್ಯ ನಮಗಿದೆ ' ಎಂದು ತೋರಿಸಿಕೊಟ್ಟ ದಾಳಿ ಇದಾಗಿತ್ತು.

ಇದೀಗ 2026ರ ಕೊಲ್ಲಿ ಯುದ್ಧದಲ್ಲಿ ಇದೇ ಬೆದರಿಕೆ ಮರುಕಳಿಸಿದೆ. ಇಸ್ರೇಲ್ ಮತ್ತು ಅಮೆರಿಕಾ ಇರಾನ್‌ನ ಪರಮಾಣು ಸ್ಥಾವರವನ್ನು ಪುಡಿಗಟ್ಟುವ ಬೆದರಿಕೆ ಹಾಕಿದ್ದವು. ಇರಾನ್ ಮಾತ್ರವೇ ಅಲ್ಲ, ಜಗತ್ತೇ ಹೈರಾಣಾಗಿತ್ತು. ಯಾಕೆಂದರೆ ಪರಮಾಣು ಸ್ಥಾವರ ಅಥವಾ ಪರಮಾಣು ದಾಸ್ತಾನಿನ ಮೇಲೆ ನಡೆಯುವ ಯಾವುದೇ ದಾಳಿ ಜಗತ್ತನ್ನೇ ವಿನಾಶದತ್ತ ತಳ್ಳಲು ಸಾಧ್ಯವಿದೆ.

ಯಾವುದೇ ಜವಾಬ್ದಾರಿಯುತ ದೇಶ ಇಷ್ಟೊಂದು ಭಯಾನಕ ಕೃತ್ಯ ನಡೆಸುವುದಿಲ್ಲ. ಆದರೆ ಕೊಲ್ಲಿ ಯುದ್ಧಕ್ಕೆ ಕೈಹಾಕಿದ್ದ ದೇಶಗಳು ತಮ್ಮ ಹೊಣೆಗಾರಿಕೆಯನ್ನು ಮರೆತಂತೆ ಕಾಣಿಸಿತ್ತು. ಜಗತ್ತು ಬೆಚ್ಚಿಬೀಳಲು ಇದೇ ಕಾರಣವಾಗಿತ್ತು.

ಇಷ್ಟಕ್ಕೂ ಪರಮಾಣು ಸ್ಥಾವರ ಅಥವಾ ದಾಸ್ತಾನು ಸ್ಫೋಟಿಸಿದರೆ ಏನಾಗಬಹುದು?

ಭಯಾನಕ ಪರಿಣಾಮ!

ಪರಮಾಣು ಸ್ಥಾವರ ಒಡೆಯಲು ಕ್ಷಿಪಣಿ ದಾಳಿಯೇ ನಡೆಯಬೇಕೆಂದಿಲ್ಲ. ಪ್ರಾಕೃತಿಕ ದುರ್ಘಟನೆಗಳು ಅಥವಾ ಅಪಘಾತಗಳ ಕಾರಣದಿಂದ ಕೂಡ ಪರಮಾಣು ಸ್ಥಾವರಗಳು ಸ್ಫೋಟಗೊಳ್ಳಬಹುದು.

ಸಾಮಾನ್ಯ ಅಪಘಾತ, ಅಗ್ನಿ ದುರಂತಗಳಂತೆ ಅಲ್ಲ ಇದು. ಪರಮಾಣು ರಿಯಾಕ್ಟರ್ ಸ್ಫೋಟಿಸಿದರೆ ಆಗುವ ಅಪಾಯ ಕೇವಲ ಒಂದು ನಿರ್ದಿಷ್ಟ ಪ್ರದೇಶಕ್ಕಷ್ಟೇ ಸೀಮಿತವಾಗುವುದಿಲ್ಲ.

ಪರಮಾಣು ರಿಯಾಕ್ಟರ್‌ನಲ್ಲಿ ತಾಂತ್ರಿಕ ಅಡಚಣೆಗಳು ಬಂದರೆ ಅಥವಾ ಅದಕ್ಕೆ ಯಾವುದೇ ಹೊಡೆತ ಬಿದ್ದರೆ ಮೊತ್ತಮೊದಲು ಅದರ ಶೈತ್ಯೀಕರಣ ವ್ಯವಸ್ಥೆ ಕೆಡುತ್ತದೆ. ಆಗ ರಿಯಾಕ್ಟರ್‌ನ ಕೇಂದ್ರದ ಬಿಸಿ ಹತೋಟಿ ಮೀರುತ್ತದೆ. ಈ ಬಿಸಿಯಲ್ಲಿ ಹೈಡ್ರೋಜನ್ ಅನಿಲ ಉತ್ಪತ್ತಿಯಾಗುತ್ತದೆ. ಈ ಅನಿಲ ಸ್ಫೋಟಿಸಿ ರಿಯಾಕ್ಟರ್ ಕಟ್ಟಡದಲ್ಲಿರುವ ಎಲ್ಲ ಅಭೇದ್ಯ ರಕ್ಷಣಾಕವಚಗಳನ್ನು ಛಿದ್ರಗೊಳಿಸುತ್ತದೆ. ಆಸ್ಫೋಟ ಮತ್ತು ಅಪರಿಮಿತ ಶಾಖ ರಿಯಾಕ್ಟರ್‌ನ ಸುತ್ತಲಿನ ಸುಮಾರು ಒಂದು ಮೈಲು ದೂರದ ತನಕ ಇರುವ ಎಲ್ಲ ಕಟ್ಟಡಗಳನ್ನು ನೆಲಸಮ ಮಾಡಲು ಸಾಧ್ಯವಿದೆ. ಆಸ್ಫೋಟದಲ್ಲಿ ಗಾಳಿಯಲ್ಲಿ ಹಾರಿಬೀಳುವ ಕಲ್ಲು, ಉಕ್ಕಿನ ತುಂಡುಗಳು ತೀವ್ರ ಅಪಾಯಕಾರಿಯಾಗಿರುತ್ತವೆ.

ಅಪಾಯ ಇಲ್ಲಿಗೇ ಮುಗಿಯುವುದಿಲ್ಲ.

ರಿಯಾಕ್ಟರ್ ಒಡೆದರೆ ಸೀಸಿಯಮ್-137 ಮುಂತಾದ ವಿಕಿರಣಶೀಲ ವಸ್ತುಗಳು ಗಾಳಿಗೆ ತೂರುತ್ತವೆ. ಅದರ ಸುತ್ತಮುತ್ತಲಿನ ನೂರಾರು ಕಿಲೋಮೀಟರ್ ವಿಸ್ತೀರ್ಣದ ವಿಶಾಲ ಪ್ರದೇಶದಲ್ಲಿ ಹರಡುವ ವಿಕಿರಣದ ವಿಷ ಎಲ್ಲ ಜೀವಿಗಳಿಗೂ ಅಪಾಯ ತರಲು ಸಾಧ್ಯವಿದೆ.

ಸೀಸಿಯಮ್-137ರ ಕಾರಣದಿಂದ ನೂರಾರು ಚದರ ಕಿಲೋಮೀಟರ್ ವಿಸ್ತೀರ್ಣದ ಪ್ರದೇಶಗಳು ಮನುಷ್ಯವಾಸಕ್ಕೆ ಅಯೋಗ್ಯವಾಗುತ್ತವೆ. ವಿಕಿರಣದಿಂದ ಕಲುಷಿತವಾಗುವ ಪರಿಸರ ಮುಂದಿನ ಹತ್ತಾರು ವರ್ಷಗಳ ತನಕ ಉಸಿರಾಟಕ್ಕೆ ಅಯೋಗ್ಯವಾಗಿರುತ್ತದೆ. ಈ ವಿಶಾಲ ಪ್ರದೇಶದಲ್ಲಿ ಕ್ಯಾನ್ಸರ್ (ಮುಖ್ಯವಾಗಿ ಥೈರಾಯ್ಡ್ ಕ್ಯಾನ್ಸರ್) ಮುಂತಾದ ಅಪಾಯಕಾರಿ ರೋಗಗಳು ತಲೆದೋರಬಹುದು.

ಈ ವಿಕಿರಣಶೀಲ ಕಣಗಳು ನೀರನ್ನು ಕೂಡ ವಿಷಮಯಗೊಳಿಸುತ್ತವೆ. ನೀರಿನಲ್ಲಿನ ವಿಕಿರಣದ ವಿಷ ಕೆಲವಾರು ದಶಕಗಳ ಕಾಲ ಉಳಿಯಲು ಸಾಧ್ಯವಿದೆ.

ಇವೆಲ್ಲವೂ ಪರಮಾಣು ಸ್ಥಾವರದ ಅಪಘಾತದಲ್ಲಿ ನಡೆಯಬಹುದಾದ ಅಪಾಯಗಳು. ಇಂಥ ಅಪಘಾತಗಳು ಮಾನವ ಇತಿಹಾಸದಲ್ಲಿ ಎಷ್ಟು ಬಾರಿ ನಡೆದಿವೆ?

ಐತಿಹಾಸಿಕ ಅನಾಹುತಗಳು

1945ರ ಸುಮಾರಿಗೆ ಅಮೆರಿಕಾ ಮತ್ತು ಸೋವಿಯತ್ ರಷ್ಯಾ ದೇಶಗಳಲ್ಲಿ ಪರಮಾಣು ರಿಯಾಕ್ಟರ್‌ಗಳ ನಿರ್ಮಾಣ ಪ್ರಾರಂಭವಾಯಿತು. 1954ರ ಬಳಿಕ ವಿಶ್ವದ ಸುತ್ತ ಅಣುಶಕ್ತಿಯ ಉತ್ಪಾದನೆಗಾಗಿ ಪರಮಾಣು ಸ್ಥಾವರಗಳು ನಿರ್ಮಾಣವಾಗಿದ್ದವು. ಈ ಸ್ಥಾವರಗಳ ಸುರಕ್ಷೆಯ ಬಗ್ಗೆ ಆರಂಭದಿಂದಲೂ ಸಾರ್ವಜನಿಕರಿಗೆ ಕಳವಳ ಇತ್ತು. ಪರಮಾಣು ಸ್ಥಾವರಗಳಲ್ಲಿ ಅನಾಹುತ ನಡೆದರೆ ಭಾರೀ ಪ್ರಮಾಣದ ಸಾವು- ನೋವು ಸಂಭವಿಸಬಹುದು ಎಂಬ ಭಯ ಜನರನ್ನು ಕಾಡುತ್ತಿತ್ತು. ಹೀಗಾಗಿ ಅಣುಶಕ್ತಿ ಉತ್ಪಾದನೆಯನ್ನೇ ನಿಲ್ಲಿಸಬೇಕು ಎಂಬ ಆಗ್ರಹ ಕೇಳಿಸುತ್ತಿತ್ತು.

ಕಾಲಾಂತರದಲ್ಲಿ ಪರಮಾಣು ರಿಯಾಕ್ಟರ್‌ಗಳ ಸುರಕ್ಷೆಯಲ್ಲಿ ಹಲವಾರು ತಂತ್ರಜ್ಞಾನಗಳನ್ನು ರೂಪಿಸಲಾಯಿತು. ಇವುಗಳಿಂದಾಗಿ ಅಪಾಯಗಳ ಸಾಧ್ಯತೆ ಕಡಿಮೆಯಾಗುತ್ತ ಬಂತು. ಹೀಗಿದ್ದರೂ ಅಪಘಾತಗಳು ನಡೆಯುತ್ತಲೇ ಇದ್ದವು.

ಅಣುಶಕ್ತಿ ಉತ್ಪಾದನೆಯ ಕಾರ್ಯಕ್ರಮಗಳಲ್ಲಿ ಈ ತನಕ ನೂರಕ್ಕೂ ಹೆಚ್ಚು ಅಪಘಾತಗಳು ನಡೆದಿವೆ. ಇವುಗಳಲ್ಲಿ 60ಕ್ಕೂ ಹೆಚ್ಚು ಅಪಘಾತಗಳು ಅಮೆರಿಕಾದಲ್ಲಿ ನಡೆದಿವೆ.

ಇಂಟರ್‌ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿ ಪರಮಾಣು ದುರಂತಗಳ ಪ್ರಮಾಣವನ್ನು ಅಳೆಯಲು ಇಂಟರ್‌ನ್ಯಾಷನಲ್ ನ್ಯೂಕ್ಲಿಯರ್ ಆ್ಯಂಡ್ ರೇಡಿಯೋಲಾಜಿಕಲ್ ಇವೆಂಟ್ ಸ್ಕೇಲ್ (ಐಎನ್‌ಇಎಸ್) ಎಂಬ ಮಾನದಂಡವನ್ನು ರೂಪಿಸಿದೆ. ಈ ಮಾನದಂಡದಲ್ಲಿ ಏಳು ಹಂತಗಳಿವೆ. ಮೊದಲ ಮೂರು ಹಂತಗಳನ್ನು 'ಘಟನೆಗಳು' ಎಂದು ಹೆಸರಿಸಲಾಗಿದೆ. 4, 5, 6 ಮತ್ತು 7ನೆಯ ಹಂತಗಳನ್ನು 'ಅಪಘಾತಗಳು' ಎಂದು ಕರೆಯಲಾಗುತ್ತದೆ. ಪ್ರತಿಯೊಂದು ಹಂತದ ಅಪಘಾತ ಅದರ ಹಿಂದಿನ ಹಂತಕ್ಕಿಂತ ಹತ್ತು ಪಟ್ಟು ಹೆಚ್ಚು ತೀವ್ರವಾಗಿರುತ್ತದೆ.

ಏಳನೆಯ ಹಂತದ ಅಪಘಾತ ಎಲ್ಲಕ್ಕಿಂತ ಹೆಚ್ಚು ತೀವ್ರವಾಗಿರುತ್ತದೆ. ಇತಿಹಾಸದಲ್ಲಿ ಈ ತನಕ ಇಂಥ ಕೇವಲ ಎರಡು ದುರ್ಘಟನೆಗಳಷ್ಟೇ ನಡೆದಿವೆ.

ಮಧ್ಯಪೂರ್ವದಲ್ಲಿ ನಡೆದಿರುವ ಯುದ್ಧದಲ್ಲಿ ಇರಾನ್‌ನ ಬುಶೇಹ್ರ್ ಅಣುಶಕ್ತಿ ಸ್ಥಾವರದ ಸುತ್ತ ಕ್ಷಿಪಣಿಗಳು ಅಪ್ಪಳಿಸಿದ ಘಟನೆ ನಡೆದಿದೆ. ಇಡೀ ಸ್ಥಾವರವನ್ನೇ ಬಾಂಬು ದಾಳಿಯಲ್ಲಿ ಉಡಾಯಿಸಿ ಜಗತ್ತನ್ನೇ ವಿನಾಶದ ಅಂಚಿಗೆ ತಳ್ಳುವ ಬೆದರಿಕೆ ಕೂಡ ಹಾಕಲಾಗಿತ್ತು! ಯಾಕೆಂದರೆ, ಯಾವುದೇ ಪರಮಾಣು ದುರಂತ ಊಹೆಗಿಂತಲೂ ಹೆಚ್ಚು ಭಯಾನಕವಾಗಿರುತ್ತದೆ. ಇದರ ಪರಿಣಾಮ ಕೇವಲ ಒಂದು ಪ್ರದೇಶಕ್ಕಷ್ಟೇ ಸೀಮಿತವಾಗುವುದಿಲ್ಲ, ಇಡೀ ಜಗತ್ತಿಗೇ ಮಾರಕವಾಗುತ್ತದೆ.

ಮನುಕುಲ ಪರಮಾಣು ಅನಾಹುತವನ್ನು ಎದುರಿಸುತ್ತಿರುವುದು ಇದೇ ಮೊದಲ ಬಾರಿಗೆ ಅಲ್ಲ. ಕಳೆದ ಎಂಟು ದಶಕಗಳಲ್ಲಿ ನೂರಕ್ಕೂ ಹೆಚ್ಚು ಪರಮಾಣು ದುರಂತಗಳು ದಾಖಲಾಗಿವೆ. ಅಣುಶಕ್ತಿಯ ವಿನಾಶಕಾರಿ ಅಪಘಾತಗಳ ಯಾದಿಯ ಜೊತೆಗೆ ಅಣುಶಕ್ತಿ ಮನುಕುಲಕ್ಕೆ ವರದಾನವೇ? ಶಾಪವೇ? - ಎಂಬ ವಿವೇಚನೆ ಈ ಬಾರಿಯ ಟಾಪ್10 ಲೇಖನದಲ್ಲಿದೆ.

ಪರಮಾಣು ಅಪಘಾತಗಳ ಟಾಪ್10 ಯಾದಿ ಇಲ್ಲಿದೆ. (ಇದರಲ್ಲಿ ಅಮೆರಿಕಾ 1945ರಲ್ಲಿ ಜಪಾನ್ ಮೇಲೆ ಎರಗಿಸಿದ್ದ ಎರಡು ಅಣ್ವಸ್ತ್ರ ಸ್ಫೋಟಗಳನ್ನು ಪರಿಗಣಿಸಲಾಗಿಲ್ಲ. ಯಾಕೆಂದರೆ ಅದು ಅಪಘಾತವಲ್ಲ, ಯಾವ ಮಾನದಂಡಗಳಿಗೂ ನಿಲುಕದ ಘೋರ ಅಪರಾಧವಾಗಿತ್ತು.)

1 ಚೆರ್ನೋಬಿಲ್ ದುರಂತ
ಭೂತಪೂರ್ವ ಸೋವಿಯತ್ ಒಕ್ಕೂಟ

ಮಾನವ ಇತಿಹಾಸದಲ್ಲೇ ಅತ್ಯಂತ ಭಯಾನಕ ಪರಮಾಣು ಅನಾಹುತ ನಡೆದದ್ದು ಎಪ್ರಿಲ್ 26, 1986ರಂದು ರಷ್ಯಾದ ಚೆರ್ನೋಬಿಲ್ ಅಣುಶಕ್ತಿ ಸ್ಥಾವರದಲ್ಲಿ. ಐಎನ್ಇಎಸ್ ಮಾನದಂಡದಲ್ಲಿ 7ನೆಯ ಹಂತ ತಲಪಿದ್ದ ಮೊತ್ತಮೊದಲ ಪರಮಾಣು ಅಪಘಾತ ಇದಾಗಿತ್ತು.

ಚೆರ್ನೋಬಿಲ್ ಸ್ಥಾವರದಲ್ಲಿ ನಡೆಯುತ್ತಿದ್ದ ಒಂದು ಪ್ರಯೋಗದ ಸಂದರ್ಭದಲ್ಲಿ ಭಯಾನಕ ಸ್ಫೋಟವಾಗಿತ್ತು. ಅಣುಸ್ಥಾವರದ ಬುರುಜುಗಳು ಎದೆನಡುಗಿಸುವ ಶಬ್ದದೊಡನೆ ಸಿಡಿದಿದ್ದವು. ಪೂರ್ತಿ ಕಟ್ಟಡ ಕ್ಷಣಗಳಲ್ಲಿ ನುಚ್ಚುನೂರಾಗಿ, ಧೂಳಿನಲ್ಲಿ ಕರಗಿ ಹೋಗಿತ್ತು. ಇಲ್ಲಿಂದ ಅಣುವಿಕಿರಣದ ಮೋಡಗಳೆದ್ದಿದ್ದವು.

ಸ್ಥಾವರ ಇದ್ದ ಜಾಗದಲ್ಲಿ ಭಾರೀ ಶಾಖದ ಬೆಂಕಿ ಉರಿಯುತ್ತಿತ್ತು. ಬೆಂಕಿಯನ್ನು ಆರಿಸಿ, ಅಣುವಿಕಿರಣ ಸೋರುವಿಕೆಯನ್ನು ತಡೆಗಟ್ಟಲು ಒಂಬತ್ತು ದಿನಗಳು ಹಿಡಿದಿದ್ದವು. ಅಷ್ಟರಲ್ಲಿ ಅಸಾಧ್ಯ ಅನಾಹುತಗಳು ನಡೆದಿದ್ದವು. ಅಣುವಿಕಿರಣ ಗಾಳಿಯಲ್ಲಿ ಹರಡಿ ರಷ್ಯಾ ಮತ್ತು ಪಶ್ಚಿಮ ಯುರೋಪ್‌ನ ವಾತಾವರಣವನ್ನು ಕಲುಷಿತಗೊಳಿಸಿತ್ತು.

ರಿಯಾಕ್ಟರ್‌ನ ರಚನೆಯಲ್ಲಿ ಮತ್ತು ಸುರಕ್ಷೆಯ ಕಾರ್ಯಾಚರಣೆಯಲ್ಲಿ ಉಂಟಾಗಿದ್ದ ಯಾವುದೋ ಲೋಪದ ಕಾರಣ ಈ ಅಪಘಾತ ಸಂಭವಿಸಿತೆಂದು ತಜ್ಞರು ತೀರ್ಮಾನಿಸಿದ್ದರು. ಆ ಕಾಲದಲ್ಲಿ ಇದು ಮಾನವ ಇತಿಹಾಸದಲ್ಲೇ ಅತ್ಯಂತ ಭಯಾನಕ ಪರಮಾಣು ಅಪಘಾತವಾಗಿತ್ತು.

ಚೆರ್ನೋಬಿಲ್‌ನ ಸಮೀಪದಲ್ಲೇ ಪ್ರಿಪ್ಯಾತ್ ಎಂಬ ಪಟ್ಟಣದಲ್ಲಿ ಸ್ಥಾವರದ ಉದ್ಯೋಗಿಗಳ ವಸತಿಸ್ಥಾನ ಇತ್ತು. ಅಣುಸ್ಫೋಟದಲ್ಲಿ ಪ್ರಿಪ್ಯಾತ್‌ನ ನೂರಾರು ಜನರು ಅಸುನೀಗಿದ್ದರು. ಹತ್ತುಸಾವಿರಕ್ಕೂ ಹೆಚ್ಚು ಜನರಿಗೆ ಅಣುವಿಕಿರಣದಿಂದ ಘಾಸಿಯಾಗಿತ್ತು. ಸೋವಿಯತ್ ಸರಕಾರ ಸುತ್ತಮುತ್ತಲಿನ ಪ್ರದೇಶಗಳಿಂದ ಮೂರೂವರೆ ಲಕ್ಷ ಜನರನ್ನು ತುರ್ತಾಗಿ ಸ್ಥಳಾಂತರ ಮಾಡಿತ್ತು.

ವಿಕಿರಣದ ಸೋಂಕಿನಿಂದಾಗಿ ಚೆರ್ನೋಬಿಲ್‌ನ ಪರಿಸರದಲ್ಲಿದ್ದ ಅಸಂಖ್ಯ ಜನರಿಗೆ ಕ್ಯಾನ್ಸರ್ ಮುಂತಾದ ಕಾಯಿಲೆಗಳು ತಗುಲಿದ್ದವು. ಚೆರ್ನೋಬಿಲ್ ವಿಕಿರಣದ ಕಾರಣ 4,000ಕ್ಕೂ ಹೆಚ್ಚು ಜನರು ಕ್ಯಾನ್ಸರ್‌ಗೆ ತುತ್ತಾಗಿ ಮರಣಿಸಿದರು ಎಂದು ಅಧಿಕೃತ ದಾಖಲೆಗಳು ಹೇಳುತ್ತವೆ. ಆದರೆ ಈ ಸಂಖ್ಯೆ ಹಲವು ಪಟ್ಟು ಹೆಚ್ಚಾಗಿರಬಹುದು.

ಇಂದು ಚೆರ್ನೋಬಿಲ್ ಅಣುಸ್ಥಾವರವನ್ನು ಕಾಂಕ್ರೀಟಿನ ಬೃಹತ್ ಸಮಾಧಿಯೊಳಗೆ ಮುಚ್ಚಿ ಹಾಕಲಾಗಿದೆ. ಅಲ್ಲಿನ ಅಣುವಿಕಿರಣ ನಿರಂತರವಾಗಿ ಗಾಳಿಯನ್ನು ಪ್ರದೂಷಣೆ ಮಾಡದಂತೆ ಈ ಮುನ್ನೆಚ್ಚರಿಕೆ ವಹಿಸಲಾಗಿದೆ.

1990ರಲ್ಲಿ ಉಕ್ರೇನ್ ದೇಶ ಸ್ವಾತಂತ್ರ್ಯ ಘೋಷಿಸಿ ಸೋವಿಯೆತ್ ಯೂನಿಯನ್‌ನಿಂದ ಹೊರಬಿತ್ತು. ಬಳಿಕ ಚೆರ್ನೋಬಿಲ್ ಮತ್ತು ಪ್ರಿಪ್ಯಾತ್ ಪಟ್ಟಣ ಉಕ್ರೇನ್‌ನ ವಶದಲ್ಲಿದೆ.

2 ಫುಕುಶಿಮಾ ಪರಮಾಣು ದುರಂತ
ಜಪಾನ್

2011ರ ಮಾರ್ಚ್ 11ರಂದು ಜಪಾನ್‌ನ ಫುಕುಶಿಮಾ ಎಂಬಲ್ಲಿ ದಾಯ್ಚಿ ಅಣುಶಕ್ತಿ ಸ್ಥಾವರದಲ್ಲಿ ಭಾರೀ ಅಪಘಾತ ನಡೆದಿತ್ತು.

ಇದಕ್ಕೆ ಕಾರಣ ಒಂದು ಭೂಕಂಪ ಮತ್ತು ಅದರಿಂದ ಹುಟ್ಟಿದ ಸುನಾಮಿ.

ಮಾರ್ಚ್ 11ರ ಮಧ್ಯಾಹ್ನ 2.45 (ಜಪಾನೀ ಸಮಯ)ರ ಸುಮಾರಿಗೆ ತೊಹೋಕು ಎಂಬ ಪ್ರದೇಶದಲ್ಲಿ ಸಮುದ್ರದ ನಡುವೆ ಒಂದು ತೀವ್ರ ಭೂಕಂಪ ನಡೆಯಿತು. ಸುಮಾರು ಆರು ನಿಮಿಷಗಳ ಕಾಲ ನಡೆದ ಈ ಭೂಕಂಪದ ಕಾರಣ

ಚೆರ್ನೋಬಿಲ್ ಅಣುಸ್ಥಾವರದ ಅವಶೇಷಗಳು.

ಉರಿಯುತ್ತಿರುವ ಫುಕುಶಿಮಾದ ದಾಯ್ಚಿ ಅಣುಶಕ್ತಿ ಸ್ಥಾವರ.

ಸಮುದ್ರದಾಳದಿಂದ ಭಾರೀ ಸುನಾಮಿ ಎದ್ದು ಜಪಾನನ್ನು ಅಪ್ಪಳಿಸಿತು. ಈ ಸುನಾಮಿಯ ಅಲೆಗಳಿಂದ ಭಾರೀ ಹಾನಿ ಸಂಭವಿಸಿತು. ಎಲ್ಲಕ್ಕಿಂತ ದೊಡ್ಡ ಅನಾಹುತ ನಡೆದಿದ್ದು ಫುಕುಶಿಮಾ ಅಣುಶಕ್ತಿ ಸ್ಥಾವರದಲ್ಲಿ. ಅಲೆಗಳ ಹೊಡೆತಕ್ಕೆ ಇಲ್ಲಿನ ವಿದ್ಯುತ್ ವ್ಯವಸ್ಥೆಯೇ ಧ್ವಂಸವಾಗಿತ್ತು.

ಅಣುಶಕ್ತಿ ಸ್ಥಾವರದ ಕೇಂದ್ರ ಭಾಗದಲ್ಲಿ ಅಪರಿಮಿತ ಬಿಸಿ ಇರುತ್ತದೆ. ಇದನ್ನು ತಣ್ಣಗೆ ಇರಿಸಲು ಶೈತ್ಯೀಕರಣ ವ್ಯವಸ್ಥೆಗಳು ನಿರಂತರವಾಗಿ ಕೆಲಸ ಮಾಡುತ್ತಿರಬೇಕು. ಫುಕುಶಿಮಾದ ವಿದ್ಯುತ್ ಸರಬರಾಜು ನಿಂತಾಗ ಶೈತ್ಯೀಕರಣ ವ್ಯವಸ್ಥೆಗಳು ಸ್ತಬ್ಧವಾಗಿದ್ದವು, ಕೇಂದ್ರದ ಬಿಸಿ ಮಿತಿಮೀರಿ, ಭಾರೀ ಪ್ರಮಾಣದಲ್ಲಿ ವಿಕಿರಣ ಹೊರಗೆ ಸೋರಿ ಹೋಗಿತ್ತು.

ಐಎನ್‌ಇಎಸ್ ಮಾನದಂಡದಲ್ಲಿ ಇದು ಏಳನೆಯ ಹಂತದ ಅಪಘಾತ. ಚೆರ್ನೋಬಿಲ್ ಬಳಿಕ ಇತಿಹಾಸದ ಅತ್ಯಂತ ದೊಡ್ಡ ಪರಮಾಣು ವಿಕಿರಣ ದುರಂತ ಎಂದು ಇದನ್ನು ವಿಶ್ವಸಂಸ್ಥೆಯ ಸಮಿತಿ ಪರಿಗಣಿಸಿತ್ತು.

ಈ ದುರಂತದಲ್ಲಿ ಕೆಲವರು ಸಿಬಂದಿಗಳು ಸುಟ್ಟ ಗಾಯಗಳೊಡನೆ ಆಸ್ಪತ್ರೆ ಸೇರಿದ್ದರು. ವಿಕಿರಣದ ಕಾರಣ ಏಳು ಜನರಿಗೆ ಕ್ಯಾನ್ಸರ್ ಕಾಯಿಲೆ ಬಂದಿತ್ತು.

ಪರಿಸ್ಥಿತಿಯನ್ನು ನಿಯಂತ್ರಿಸಲು ಜಪಾನೀ ಸರಕಾರ ತುರ್ತು ಕ್ರಮಗಳನ್ನು ತೆಗೆದುಕೊಂಡಿತ್ತು. ಸುತ್ತಮುತ್ತಲಿನ ಪ್ರದೇಶಗಳಿಂದ 1,64,000 ಜನರನ್ನು ಕ್ಷಿಪ್ರವಾಗಿ ಸ್ಥಳಾಂತರಿಸಲಾಯಿತು. ಈ ಕಾರ್ಯಾಚರಣೆಯಲ್ಲಿ 51 ಜನರು ಮೃತಪಟ್ಟಿದ್ದರು. ಅಪಘಾತಕ್ಕಿಂತ ಹೆಚ್ಚಾಗಿ ಸ್ಥಳಾಂತರದ ಕಾರ್ಯಾಚರಣೆಯೇ ಹೆಚ್ಚು ಅಪಾಯಗಳನ್ನು ತಂದಿತೆಂದು ದೂರಲಾಗುತ್ತಿದೆ. ಇಂದಿಗೂ ಸುಮಾರು 41ಸಾವಿರ ಜನರು ತಮ್ಮ ಮನೆಗಳಿಗೆ ಮರಳಲು ಸಾಧ್ಯವಾಗಿಲ್ಲ.

ಫುಕುಶಿಮಾ ದುರಂತದ ಬಳಿಕ ಅದರ ವಿಕಿರಣ ಅನಾಹುತವನ್ನು ತಡೆಯಲು ಮತ್ತು ಅಪಘಾತದಲ್ಲಿ ನೊಂದವರಿಗೆ ಪರಿಹಾರ ಕೊಡಲು ಜಪಾನೀ ಸರಕಾರಕ್ಕೆ 2016ರಲ್ಲಿ ಸುಮಾರು 20 ಟ್ರಿಲಿಯನ್ ಯೆನ್ (ಸುಮಾರು 11,70,000 ಕೋಟಿ ರೂಪಾಯಿ)ವೆಚ್ಚವಾಗಿತ್ತು.

ಈ ದುರ್ಘಟನೆಗೆ ಮುನ್ನ ಜಪಾನಿನಲ್ಲಿ ಶೇ. 30ರಷ್ಟು ವಿದ್ಯುಚ್ಛಕ್ತಿ ಅಣುಶಕ್ತಿಯಿಂದ ತಯಾರಿಸಲಾಗುತ್ತಿತ್ತು. ಫುಕುಶಿಮಾ ದುರಂತದ ಬಳಿಕ ಜಪಾನ್‌ನಲ್ಲಿ ಅಣುಶಕ್ತಿಯ ಬಳಕೆಯನ್ನು ಗಣನೀಯವಾಗಿ ತಗ್ಗಿಸಲಾಗಿದೆ.

3 ಕೈಶ್ಟಿಮ್ ದುರಂತ ಭೂತಪೂರ್ವ ಸೋವಿಯತ್ ಒಕ್ಕೂಟ

ಎರಡನೆಯ ಮಹಾಯುದ್ಧದ ಬಳಿಕ ಸೋವಿಯತ್ ಯೂನಿಯನ್ ಅಣ್ವಸ್ತ್ರಗಳ ಉತ್ಪಾದನೆಯಲ್ಲಿ ಅಮೆರಿಕಾಗಿಂತ ಹಿಂದೆ ಬಿತ್ತು. ಸೋವಿಯತ್ ಸರಕಾರ ಅಮೆರಿಕಾವನ್ನು ಸರಿಗಟ್ಟುವ ಪೈಪೋಟಿಯಲ್ಲಿ ಅಣ್ವಸ್ತ್ರ ಯೋಗ್ಯ ಯುರೇನಿಯಂ ಮತ್ತು ಪ್ಲುಟೋನಿಯಮ್ ತಯಾರಿ ಆರಂಭಿಸಿತು. ಇದಕ್ಕಾಗಿ ರಷ್ಯಾದ ಮಿಲಿಟರಿ 1945-48ರ ನಡುವೆ ಚೆಲ್ಯಾಬಿನ್‌ಸ್ಕ್ ಎಂಬ ನಿಗೂಢ ಪಟ್ಟಣದಲ್ಲಿ ಭಾರೀ ಆತುರದಲ್ಲಿ ಮಾಯಾಕ್ ಪರಮಾಣು ಸ್ಥಾವರವನ್ನು ನಿರ್ಮಿಸಿತು.

ಆ ಕಾಲದಲ್ಲಿ ವಿಜ್ಞಾನಿಗಳಿಗೆ ಪರಮಾಣು ಭೌತಶಾಸ್ತ್ರದ ಬಗ್ಗೆ ಸಾಕಷ್ಟು ಮಾಹಿತಿ ಇರಲಿಲ್ಲ. ಹೀಗಾಗಿ ಮಾಯಾಕ್ ಸ್ಥಾವರದ ನಿರ್ಮಾಣದಲ್ಲಿ ಹಲವಾರು ಲೋಪದೋಷಗಳಿದ್ದವು. ಇದರ ಫಲವಾಗಿ 1957ರ ಸೆಪ್ಟಂಬರ್ 29ರಂದು ಇಲ್ಲೊಂದು ಭಾರೀ ದುರಂತ ಸಂಭವಿಸಿತು.

ಅಪಘಾತದ ಕಾರಣದಿಂದ ಬಿಸಿ ವಿಕಿರಣದ ಕಣಗಳು 52ಸಾವಿರ ಚದರ ಕಿಲೋಮೀಟರ್ ದೂರದ ತನಕ ಹರಡಿದ್ದವು. ಈ ಪ್ರದೇಶದ 22 ಗ್ರಾಮಗಳಲ್ಲಿ ವಾಸವಾಗಿದ್ದ ಸುಮಾರು 2.70 ಲಕ್ಷ ಜನರಿಗೆ ವಿಕಿರಣದ ಝಳ ತಟ್ಟಿತ್ತು. ಇವರನ್ನು ಸ್ಥಳಾಂತರ ಮಾಡಲು ಕೆಲವು ವಾರಗಳು ಹಿಡಿದಿದ್ದವು. ಹೀಗೆ ಮನೆ ಬಿಟ್ಟು ಹೋದವರು ಮರಳಿ ತಮ್ಮ ನೆಲೆಗೆ ಬರಲು ಸಾಧ್ಯವಾದದ್ದು ಹತ್ತು ವರ್ಷಗಳ ಬಳಿಕವೇ.

ಈ ದುರಂತ 'ಕೈಶ್ಟಿಮ್' ಎಂಬ ಪಟ್ಟಣದ ಸಮೀಪ ನಡೆದಿದ್ದ ಕಾರಣ ಇದನ್ನು 'ಕೈಶ್ಟಿಮ್' ದುರಂತ ಎಂದು ಹೆಸರಿಸಲಾಗಿದೆ. 1986ರಲ್ಲಿ ಚೆರ್ನೋಬಿಲ್ ದುರಂತ ನಡೆಯುವ ತನಕ ಇದೇ ಜಗತ್ತಿನ ಅತ್ಯಂತ ಭೀಕರ ಪರಮಾಣು ದುರಂತವೆನಿಸಿತ್ತು.

ಐಎನ್‌ಇಎಸ್ ಮಾನದಂಡದಲ್ಲಿ ಇದನ್ನು ಆರನೆಯ ಹಂತದ ಅಪಘಾತ ಎಂದು ಅಳೆಯಲಾಗಿತ್ತು. ಈ ತನಕ ಆರನೆಯ ಹಂತದ ಏಕಮಾತ್ರ ಪರಮಾಣು ದುರಂತ ಇದಾಗಿದೆ.

4 ಚಾಕ್ ರಿವರ್ ದುರಂತ, ಕೆನಡಾ

ಒಂಟಾರಿಯೋ (ಕೆನಡಾ)ದ 'ಚಾಕ್ ರಿವರ್' ಎಂಬಲ್ಲಿ ಎರಡನೆಯ ಮಹಾಯುದ್ಧದ ಬಳಿಕ ಒಂದು ಪ್ರಯೋಗಾತ್ಮಕ ಅಣುಸ್ಥಾವರ ನಿರ್ಮಾಣವಾಯಿತು. 1952 ಡಿಸೆಂಬರ್ 12ರಂದು ಇಲ್ಲೊಂದು ದುರಂತ ಸಂಭವಿಸಿತು.

ಆರಂಭದಲ್ಲಿ ಇದನ್ನು ಪ್ಲುಟೋನಿಯಂ ಜನರೇಟರ್ ಆಗಿ ರೂಪಿಸಲಾಗಿತ್ತು. ಆದರೆ ಇದನ್ನು ಅಣುಶಕ್ತಿ ಇಂಧನಗಳ ಸಂಶೋಧನೆಗಾಗಿ ಬಳಸಲಾಯಿತು.

ಡಿಸೆಂಬರ್ 12ರ ದುರ್ಘಟನೆಯ ದಿನ ಅಣುಶಕ್ತಿ ಸ್ಥಾವರದ ಓರ್ವ ತಂತ್ರಜ್ಞಾನಿ ರಿಯಾಕ್ಟರ್‌ನ ನಿಯಂತ್ರಣದ ವಾಲ್ವ್‌ಗಳನ್ನು ಪ್ರಮಾದವಶಾತ್ ಮೇಲೆತ್ತಿದ್ದರು. ಇದರಿಂದ ರಿಯಾಕ್ಟರ್‌ನ ಶಕ್ತಿ ವಿಪರೀತ ಉಲ್ಬಣಿಸಿತು.

ಅಪಾಯದ ಅರಿವಾಗುತ್ತಲೇ ತುರ್ತು ಸುರಕ್ಷಾ ಕ್ರಮಗಳನ್ನು ಆರಂಭಿಸಲಾಯಿತು. ರಿಯಾಕ್ಟರನ್ನು ತಣಿಸಲು ಎಲ್ಲ ಕಾರ್ಯಾಚರಣೆ ನಡೆಯಿತು. ಆದರೆ ಅಷ್ಟರಲ್ಲಿ ಯುರೇನಿಯಂ ಇಂಧನದ ಕೊಳವೆಯಲ್ಲಿ ಬಿರುಕು ಬಿಟ್ಟಿದ್ದ ಕಾರಣ ವಿಕಿರಣದ ಕಣಗಳು ಹೊರಸೋರಿದ್ದವು, ಇದರಿಂದಾಗಿ ದೊಡ್ಡ ಸ್ಫೋಟ ಸಂಭವಿಸಿತು.

ಇದೊಂದು ದೊಡ್ಡ ದುರಂತವೇ ಆಗಬಹುದಿತ್ತು. ಆದರೆ ಇದರಲ್ಲಿ ಯಾರಿಗೂ ಪ್ರಾಣಾಪಾಯ ಆಗಲಿಲ್ಲ. ಆ ಕಾಲದಲ್ಲಿ ಜನಸಾಮಾನ್ಯರಿಗೆ ಪರಮಾಣು ತಂತ್ರಜ್ಞಾನದ ಬಗ್ಗೆ ಹೆಚ್ಚು ತಿಳುವಳಿಕೆ ಇಲ್ಲದಿದ್ದ ಕಾರಣ ಸಾರ್ವಜನಿಕ ಪ್ರತಿಕ್ರಿಯೆ ಕೂಡ ಕೇಳಿಬರಲಿಲ್ಲ.

ಈ ಅಪಘಾತದ ಬಳಿಕ ಅಣುಶಕ್ತಿ ಸ್ಥಾವರಗಳ ಬಗ್ಗೆ ಹೆಚ್ಚು ಸುರಕ್ಷಾ ಕ್ರಮಗಳನ್ನು ರೂಪಿಸಲಾಯಿತು. ಮುಂದಿನ ವರ್ಷಗಳಲ್ಲಿ ಜನರು ಅಣುಶಕ್ತಿಯ ಅಪಾಯಗಳ ಬಗ್ಗೆ ಮಾತನಾಡಲು ಆರಂಭಿಸಿದರು. ಸಾರ್ವಜನಿಕ ತಿಳುವಳಿಕೆಯ ಕಾರಣ ಸುರಕ್ಷೆಯ ಬಗ್ಗೆ ಕಾಳಜಿ ಹೆಚ್ಚಾಯಿತು.

ಕೈಶ್ಟಿಮ್ ದುರಂತದ ಒಂದು ದೃಶ್ಯ.

ಕೆನಡಾದ ಚಾಕ್ ರಿವರ್ ಅಣುಸ್ಥಾವರ ಇಂದು ಆಧುನಿಕ ತಂತ್ರಜ್ಞಾನದಿಂದ ಸುಸಜ್ಜಿತವಾಗಿದೆ.

5 ವಿಂಡ್‌ಸ್ಕೇಲ್ ದುರಂತ, ಇಂಗ್ಲೆಂಡ್

1945ಕ್ಕೆ ಮೊದಲು ಅಣ್ವಸ್ತ್ರ ಸಂಶೋಧನೆಯಲ್ಲಿ ಅಮೆರಿಕಕ್ಕೆ ಬ್ರಿಟಿಷ್ ತಂತ್ರಜ್ಞಾನಿಗಳು ನೆರವಾಗಿದ್ದರು. ಆದರೆ ಮಹಾಯುದ್ಧದ ಬಳಿಕ ಅಮೆರಿಕಾ ತನ್ನ ತಂತ್ರಜ್ಞಾನವನ್ನು ಬ್ರಿಟನ್ ಜೊತೆಗೆ ಹಂಚಿಕೊಳ್ಳಲಿಲ್ಲ, ಹೀಗಾಗಿ ದ್ವಿತೀಯ ಮಹಾಯುದ್ಧದ ಬಳಿಕ ಬ್ರಿಟಿಷ್ ಸರಕಾರ ಸ್ವತಃ ಅಣ್ವಸ್ತ್ರಗಳನ್ನು ತಯಾರಿಸಲು ನಿರ್ಧರಿಸಿತು.

ಹೀಗೆ ನಿರ್ಮಾಣವಾದ ಪ್ರಪ್ರಥಮ ಬ್ರಿಟಿಷ್ ಅಣ್ವಸ್ತ್ರ ಪ್ರಯೋಗಶಾಲೆಯಾಗಿತ್ತು ವಿಂಡ್‌ಸ್ಕೇಲ್. ಕಂಬರ್ಲೆಂಡ್ ಬಳಿಯ ಸೀಸ್ಕೇಲ್ ಎಂಬ ಹಳ್ಳಿಯಲ್ಲಿ ನಿರ್ಮಿತವಾಗಿದ್ದ ಎರಡು ದೊಡ್ಡ ಕಾಂಕ್ರೀಟ್ ಕಟ್ಟಡಗಳಲ್ಲಿ 1951ರಿಂದ ಪ್ಲುಟೋನಿಯಂ ಪರಿಷ್ಕರಣೆ ಕಾರ್ಯ ಆರಂಭವಾಯಿತು.

1957ರ ಅಕ್ಟೋಬರ್ 10ರಂದು ಇಲ್ಲೊಂದು ದುರಂತ ಸಂಭವಿಸಿತು. ಇದನ್ನು ಬ್ರಿಟನ್‌ನ ಚರಿತ್ರೆಯಲ್ಲೇ ಅತ್ಯಂತ ಭೀಕರ ಅಣುಶಕ್ತಿ ದುರಂತ ಎಂದು ಕರೆಯಲಾಗುತ್ತದೆ. ಐಎನ್‌ಇಎಸ್ ಮಾನದಂಡದಲ್ಲಿ 5ನೆಯ ಹಂತದ ಅಪಘಾತ ಇದಾಗಿತ್ತು.

ಈ ಅಪಘಾತದಲ್ಲಿ ಅಣುಸ್ಥಾವರದ ಕೇಂದ್ರ ಸಿಡಿದು ಭಾರೀ ಬೆಂಕಿ ಕಾಣಿಸಿತು. ಸತತ ಮೂರು ದಿನಗಳ ಕಾಲ ಉರಿದಿದ್ದ ಈ ಪ್ರಚಂಡಾಗ್ನಿಯಲ್ಲಿ ವಿಕಿರಣದ ಕಣಗಳು ಹೊರಬಿದ್ದು ದೇಶದೆಲ್ಲೆಡೆ ಹರಡಿ ಯುರೋಪ್‌ನ ಮೇಲೆ ಕೂಡ ಹರಡಿತ್ತು.

ಇಂಗ್ಲೆಂಡ್‌ನ ವಿಂಡ್‌ಸ್ಕೇಲ್ ಅಣುಸ್ಥಾವರ.

ಐಸೋಟೋಪ್ ಐಯೋಡಿನ್-131 ಎಂಬ ವಿಕಿರಣದ ಕಣಗಳು ಥೈರಾಯ್ಡ್ ಕ್ಯಾನ್ಸರ್‌ಗೆ ಕಾರಣವಾಗುತ್ತವೆ ಎಂಬ ಭಯ ಯುರೋಪ್‌ನೆಲ್ಲೆಡೆ ಆವರಿಸಿತ್ತು. ಸುಮಾರು 200 ಜನರಿಗೆ ಕ್ಯಾನ್ಸರ್ ರೋಗ ಬರಲಿದೆ ಎಂದು ಆಗ ಲೆಕ್ಕ ಹಾಕಲಾಗಿತ್ತು. ಆದರೆ ಕೇವಲ ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಕ್ಯಾನ್ಸರ್ ತಗಲಿತ್ತು.

ಈ ಅನಾಹುತದ ಬಳಿಕ ಸರಕಾರ ಜನರ ಸ್ಥಳಾಂತರ ಮಾಡಲಿಲ್ಲ, ಆದರೆ ಸುಮಾರು 500 ಚದರ ಕಿಲೋಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ಹಾಲು ಮತ್ತು ಆಹಾರವಸ್ತುಗಳನ್ನು ನಾಶಮಾಡಲಾಗಿತ್ತು.

1957ರ ದುರ್ಘಟನೆಯ ವಿಂಡ್‌ಸ್ಕೇಲ್ ಸ್ಥಾವರದಲ್ಲಿ ಇನ್ನೂ ಹಲವಾರು ಅಗ್ನಿ ಅವಘಡಗಳು ನಡೆದಿದ್ದವು. ಆದರೆ ಬ್ರಿಟಿಷ್ ಸರಕಾರ ಈ ಘಟನೆಗಳನ್ನು ಗೌಪ್ಯವಾಗಿರಿಸಿತ್ತು. ವಾಸ್ತವದಲ್ಲಿ ವಿಂಡ್‌ಸ್ಕೇಲ್ ಸ್ಥಾವರದ ಅಗ್ನಿ ದುರಂತಕ್ಕೆ ಮೊದಲೇ ಇಲ್ಲಿಂದ ಗಣನೀಯ ಪ್ರಮಾಣದಲ್ಲಿ ವಿಕಿರಣ ಸೋರಿಹೋಗಿತ್ತು. ಆದರೆ ಈ ಸತ್ಯ ಬೆಳಕಿಗೆ ಬಂದದ್ದು ಕೆಲವು ದಶಕಗಳ ಬಳಿಕವೇ.

6 ಥ್ರೀ ಮೈಲ್ ಐರ್ಲೆಂಡ್ ದುರಂತ ಪೆನ್ಸಿಲ್ವೇನಿಯಾ, ಅಮೆರಿಕಾ

ಅಮೆರಿಕಾದಲ್ಲಿ ಮೊತ್ತ ಮೊದಲ ಗಂಭೀರ ಪ್ರಮಾಣದ ಅಣುಸ್ಥಾವರ ಅವಘಡ ನಡೆದದ್ದು 1979ರ ಮಾರ್ಚ್ 28ರಂದು, ಪೆನ್ಸಿಲ್ವೇನಿಯಾದ ಥ್ರೀ ಮೈಲ್ ಐರ್ಲೆಂಡ್ ಎಂಬಲ್ಲಿ.

ಪೆನ್ಸಿಲ್ವೇನಿಯಾದ ಥ್ರೀ ಮೈಲ್ ಐರ್ಲೆಂಡ್ ಅಣುಸ್ಥಾವರ.

ಆ ದಿನ ಮುಂಜಾನೆ 4 ಗಂಟೆಗೆ ಇಲ್ಲಿನ ಪರಮಾಣು ಸ್ಥಾವರದಲ್ಲಿ ಯಾಂತ್ರಿಕ ದೋಷದ ಕಾರಣದಿಂದ ಯುನಿಟ್ 2ರ ರಿಯಾಕ್ಟರ್ ಅತೀವ ಬಿಸಿಯೇರಿ ವಿಕಿರಣದ ಅನಿಲಗಳು ವಾತಾವರಣದಲ್ಲಿ ಬೆರೆತವು. ಈ ವಿಕಿರಣ ನದಿಯ ನೀರಿನೊಡನೆ ಸೇರಿಕೊಂಡಿತು.

ಈ ಅಪಘಾತದಲ್ಲಿ ಯಾವುದೇ ಜೀವ ಹಾನಿ ಆಗಿರಲಿಲ್ಲ, ಆದರೆ ಪತ್ರಿಕೆಗಳು ಇದನ್ನೊಂದು ಭಯಾನಕ ದುರಂತ ಎಂಬಂತೆ ವರ್ಣರಂಜಿತವಾಗಿ ವರದಿ ಮಾಡಿದವು. ಕೆಲವೇ ವಾರಗಳ ಹಿಂದೆ ಬಿಡುಗಡೆಯಾಗಿದ್ದ ಒಂದು ಚಲನಚಿತ್ರದಲ್ಲಿ ಅಣುಶಕ್ತಿಯ ಅನಾಹುತದ ಚಿತ್ರಣ ನೋಡಿದ್ದ ಜನರು ಭಯಭೀತರಾಗಿದ್ದರು. ಇದನ್ನು ಐದನೆಯ ಹಂತದ ಅವಘಡ ಎಂದು ಕರೆಯಲಾಗಿತ್ತು.

ಈ ಸ್ಥಾವರದ ಶುದ್ಧೀಕರಣ ಮತ್ತು ದುರಸ್ತಿಗೆ ಕೆಲವು ವರ್ಷಗಳು ಹಿಡಿದವು. ಇದನ್ನು 1985ರಲ್ಲಿ ಪುನರಾರಂಭ ಮಾಡಲಾಯಿತು.

ಈ ಅಪಘಾತದ ಬಳಿಕ ಅಣುಶಕ್ತಿ ರಿಯಾಕ್ಟರ್‌ಗಳ ರಚನೆ ಮತ್ತು ಕಾರ್ಯಾಚರಣೆಯಲ್ಲಿ ಭಾರೀ ಬದಲಾವಣೆಗಳನ್ನು ತರಲಾಯಿತು. ಇಂದಿನ ಅಣುಸ್ಥಾವರಗಳು ಹೆಚ್ಚು ಸುರಕ್ಷಿತವಾಗಲು ಇದೇ ಕಾರಣ.

7 ಗೊಯಾನಿಯಾ ಅನಾಹುತ, ಬ್ರೆಝಿಲ್

ಬ್ರೆಝಿಲ್‌ನ ಗೊಯಾನಿಯಾದಲ್ಲಿ ಪರಮಾಣು ದುರಂತ ನಡೆದದ್ದು 1987ರ ಸೆಪ್ಟಂಬರ್ 13ರಂದು.

ಆ ಅನಾಹುತ ಸಂಭವಿಸಿದ್ದು ಯಾವುದೇ ಅಣುಸ್ಥಾವರದಲ್ಲಿ ಅಲ್ಲ, ಪಟ್ಟಣದ ನಡುವೆ ಒಂದು ಹಾಳುಬಿದ್ದ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದ ರೇಡಿಯೋಥೆರಪಿಯ ಸಾಧನವನ್ನು ರೋಬರ್ಟೋ ಮತ್ತು ವ್ಯಾಗ್ನರ್ ಎಂಬ ಇಬ್ಬರು ಕಳ್ಳರು ಕದ್ದು ಒಯ್ದಿದ್ದರು. ಈ ಸಾಧನದ ಒಳಗೆ ಒಂದು ಸೀಸದ ಕೊಳವೆಯಲ್ಲಿ 93 ಗ್ರಾಮ್ ತೂಕದ ಸೆಸಿಯಮ್ ಕ್ಲೋರೈಡ್ ಎಂಬ ವಿಕಿರಣಶೀಲ ವಸ್ತು ಇತ್ತು.

ಕಳ್ಳರು ರೇಡಿಯೋಥೆರಪಿ ಸಾಧನವನ್ನು ಬಿಚ್ಚಿ, ಅದನ್ನು ರದ್ದಿಯಲ್ಲಿ ಮಾರಲು ಯೋಚಿಸಿದ್ದರು. ಆದರೆ ವಿಕಿರಣದ ಕಾರಣ ವ್ಯಾಗ್ನರ್‌ನ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿದ. ಅಲ್ಲಿ ಆತನ ಬೆರಳುಗಳನ್ನು ಕತ್ತರಿಸಬೇಕಾಗಿ ಬಂತು.

ರೋಬರ್ಟೋ ಹಠ ಬಿಡದೆ ರೇಡಿಯೋಗ್ರಫಿ ಸಾಧನದ ಭಾಗಗಳನ್ನು ಕಳಚಿ ಕೈಗಾಡಿಯೊಳಗೆ ತುಂಬುತ್ತಿದ್ದ. ಆತನಿಗೆ ಸೀಸದ ಕೊಳವೆಯಲ್ಲಿ ವಿಚಿತ್ರ ನೀಲ ಬೆಳಕು ಕಾಣಿಸಿತು. ಅವನು ಸ್ಕ್ರೂಡ್ರೈವರ್ ಹಾಕಿ ಒಳಗಿನಿಂದ ಬೆಳಕು ಬೀರುತ್ತಿದ್ದ ವಸ್ತುವನ್ನು ಒಂದಿಷ್ಟು ಹೊರಗೆ ತೆಗೆದ. ಅದಕ್ಕೆ ಬೆಂಕಿಕೊಟ್ಟಾಗ ಅದು ಉರಿಯಲಿಲ್ಲ, ಮಾರನೆಯ ದಿನ ರೋಬರ್ಟೋ ಕೂಡ ತೀವ್ರ ಅನಾರೋಗ್ಯದಲ್ಲಿ ಆಸ್ಪತ್ರೆ ಸೇರಿದ. ಅವನ ಬಲಗೈ ಮತ್ತು ಕಾಲನ್ನು ಕತ್ತರಿಸಬೇಕಾಗಿ ಬಂತು. ವೈದ್ಯಕೀಯ ತಪಾಸಣೆಯ ವೇಳೆ ಆತನಲ್ಲಿ ವಿಕಿರಣದ ಸೋಂಕು ಪತ್ತೆಯಾಗಿತ್ತು

ರೇಡಿಯೋಗ್ರಫಿ ಸಾಧನದ ಭಾಗಗಳು ಫರೇರಾ ಎಂಬ ಒಬ್ಬ ರದ್ದಿ ವ್ಯಾಪಾರಿಯ ಕೈಸೇರಿದವು. ಆತ ನೀಲ ಬೆಳಕಿನ ಕೊಳವೆಯನ್ನು ತನ್ನ ಮನೆಗೆ ಒಯ್ದ.

ಅಣುಶಕ್ತಿ ಸ್ಥಾವರಗಳು ಎಷ್ಟು ಅಪಾಯಕಾರಿ?

ಭಾರತದ ಮೊತ್ತಮೊದಲ ಅಣುಸ್ಥಾವರ ರಾಜಸ್ಥಾನ ಅಟಾಮಿಕ್ ಪವರ್ ಸ್ಟೇಶನ್ 1963ರಲ್ಲಿ ಆರಂಭವಾಯಿತು. ಇಂದು ಭಾರತದಲ್ಲಿ ಒಟ್ಟು 25 ಅಣುಸ್ಥಾವರಗಳಿವೆ. ಇವುಗಳಿಂದ 8,880 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಇನ್ನೂ 11 ಅಣುಶಕ್ತಿಯ ರಿಯಾಕ್ಟರ್‌ಗಳ ನಿರ್ಮಾಣ ನಡೆಯುತ್ತಿದೆ. 2047ರ ಸುಮಾರಿಗೆ ಭಾರತಕ್ಕೆ 100 ಗಿಗಾವ್ಯಾಟ್ ವಿದ್ಯುತ್ ಪೂರೈಕೆ ಅಣುಶಕ್ತಿಯಿಂದ ಸಿಗಲಿದೆ.

ಜಗತ್ತಿನ 31 ದೇಶಗಳಲ್ಲಿ ಸುಮಾರು 440 ಅಣುಸ್ಥಾವರಗಳಿವೆ. ಇವು ಜಗತ್ತಿನ ಶೇ. 9ರಷ್ಟು ವಿದ್ಯುತ್ ಪೂರೈಕೆ ಮಾಡುತ್ತವೆ. ಸುಮಾರು 60 ಹೊಸ ಅಣುಸ್ಥಾವರಗಳು ನಿರ್ಮಾಣವಾಗುತ್ತಿವೆ. ಇವುಗಳಲ್ಲಿ ಹೆಚ್ಚಿನವು ಚೀನಾದಲ್ಲಿ ತಲೆಯೆತ್ತುತ್ತಿವೆ.

ಅಮೆರಿಕಾ, ಚೀನಾ, ಫ್ರಾನ್ಸ್, ರಷ್ಯಾ ಮತ್ತು ದಕ್ಷಿಣ ಕೊರಿಯಾ ಅತ್ಯಧಿಕ ಅಣುಶಕ್ತಿ ಉತ್ಪಾದನೆಯ ದೇಶಗಳು. ಜಗತ್ತಿನಲ್ಲೇ ಅತ್ಯಂತ ಹಳೆಯ ರಿಯಾಕ್ಟರ್‌ಗಳು ಇರುವುದು ಅಮೆರಿಕಾದಲ್ಲಿ. ಜಗತ್ತಿನಲ್ಲಿ ಅಣುಶಕ್ತಿಯ ಮೇಲೆ ಅತ್ಯಧಿಕ ವಿಶ್ವಾಸ ಇರಿಸಿರುವ ದೇಶ ಫ್ರಾನ್ಸ್. ಈ ದೇಶ ತನ್ನ ಶೇ. 67ರಷ್ಟು ವಿದ್ಯುತ್ತನ್ನು ಅಣುಶಕ್ತಿಯಿಂದ ತಯಾರಿಸುತ್ತಿದೆ.

ಕಳೆದ ಏಳೆಂಟು ದಶಕಗಳಲ್ಲಿ ಇಷ್ಟೆಲ್ಲ ಸ್ಥಾವರಗಳಲ್ಲಿ ನೂರಾರು ದುರ್ಘಟನೆಗಳು ಸಂಭವಿಸಿವೆ. ಆದರೆ ದೊಡ್ಡ ಮಟ್ಟದ ಅವಘಡಗಳು ಮೂರು ಮಾತ್ರ. ಈ ತನಕ ಭಾರತೀಯ ಅಣುಸ್ಥಾವರಗಳಲ್ಲಿ ಕೆಲವೇ ಸಣ್ಣ-ಪುಟ್ಟ ಅಪಘಾತಗಳು ನಡೆದಿವೆ. ಹೆಚ್ಚಿನವು ಅಣುಸ್ಥಾವರ ಬಿಸಿಯೇರಿ ವಿಕಿರಣ ಸೋರಿ ಹೋಗಿರುವ ಘಟನೆಗಳು.

ದೊಡ್ಡ ಪ್ರಮಾಣದ ಫುಕುಶಿಮಾ ದುರಂತ ನಡೆದದ್ದು ಪ್ರಾಕೃತಿಕ ಕಾರಣಗಳಿಂದಾಗಿ. ಅದನ್ನು ಬಿಟ್ಟರೆ ಉಳಿದೆಲ್ಲ ಗಣನೀಯ ಅಣುಶಕ್ತಿ ಅಪಘಾತಗಳು ಸಂಭವಿಸಿರುವುದು ಕಳೆದ ಶತಮಾನದಲ್ಲಿ, ಹಳೆಯ ಕಾಲದ ಸ್ಥಾವರಗಳಲ್ಲಿ. ಇದೀಗ ಆಧುನಿಕ ಕಾಲದ ಅಣುಶಕ್ತಿ ಸ್ಥಾವರಗಳು ಆಧುನಿಕ ತಂತ್ರಜ್ಞಾನಗಳ ಕಾರಣದಿಂದಾಗಿ ಹೆಚ್ಚು ಸುರಕ್ಷಿತವಾಗಿವೆ.

ಯುದ್ಧ, ಭಯೋತ್ಪಾದಕ ಚಟುವಟಿಕೆ ಮುಂತಾದ ಕಾರಣಗಳಿಂದ ಅಣುಶಕ್ತಿ ಸ್ಥಾವರದ ಮೇಲೆ ನೇರ ದಾಳಿ ನಡೆದರೆ ಮಾತ್ರ ಭಾರೀ ಪ್ರಮಾಣದ ಅನಾಹುತ ಸಂಭವಿಸಬಹುದು. ಆದರೆ ಮಾನವ ಇತಿಹಾಸದಲ್ಲಿ ಈ ತನಕ ಇಂಥ ದುರಂತ ಯಾವತ್ತೂ ನಡೆದಿಲ್ಲ.

ಜಗತ್ತಿಗೆ ದಿನದಿಂದ ದಿನಕ್ಕೆ ಹೆಚ್ಚು ವಿದ್ಯುಚ್ಛಕ್ತಿಯ ಅಗತ್ಯ ಬೀಳುತ್ತಿದೆ. ಇದೇ ವೇಳೆಗೆ ಪೆಟ್ರೋಲ್, ಕಲ್ಲಿದ್ದಲು ಮುಂತಾದ ಇಂಧನಗಳು ದುರ್ಲಭವಾಗುತ್ತಿವೆ. ಇವುಗಳಿಂದ ಪರಿಸರ ಮಾಲಿನ್ಯವೂ ಹೆಚ್ಚು. ಸೌರ ಮತ್ತು ಪವನಶಕ್ತಿಗಳು ಸಾಕಷ್ಟು ಸಕ್ಷಮವಾಗಿಲ್ಲ. ಹೀಗಾಗಿ ಭವಿಷ್ಯತ್ತಿನಲ್ಲಿ ಜಗತ್ತಿಗೆ ಅಧಿಕಾಂಶ ವಿದ್ಯುಚ್ಛಕ್ತಿ ಅಣುಶಕ್ತಿಯಿಂದಲೇ ಪೂರೈಕೆಯಾಗಲಿದೆ. ಇದನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವ ಹೊಣೆಗಾರಿಕೆ ಮನುಕುಲಕ್ಕೆ ಸೇರಿದೆ.

ಆತನ ಮನೆಯವರು ಬೆಳಕು ಸೂಸುವ ವಸ್ತುವಿನ ಜೊತೆಗೆ ಆಟವಾಡಿದ್ದರು, ಅದನ್ನು ಮೈಗೆ ಹಚ್ಚಿಕೊಂಡು ಮೋಜು ಮಾಡಿದರು. ಬಂಧು ಮಿತ್ರರನ್ನು ಕರೆದು ಅದರ ಪ್ರದರ್ಶನ ಮಾಡಿದರು.

ಈ ಕೊಳವೆಯನ್ನು ಸ್ಪರ್ಶಿಸಿದ್ದ ಜನರೆಲ್ಲ 24 ಗಂಟೆಗಳ ಒಳಗಾಗಿ ವಿಕಿರಣದ ಸೋಂಕಿನಿಂದಾಗಿ ಆಸ್ಪತ್ರೆ ಸೇರಿದರು. ಪತ್ರಿಕಾ ವರದಿಗಳಿಂದ ಕಾರ್ಯೋನ್ಮುಖರಾದ ಪೊಲೀಸರು ತನಿಖೆ ನಡೆಸಿ ಕೊಳವೆಯನ್ನು ಜಪ್ತಿ ಮಾಡಿದರು. ಅಷ್ಟರಲ್ಲಿ ಸುಮಾರು 250 ಜನರು ವಿಕಿರಣದ ಕಾರಣದಿಂದ ಆಸ್ಪತ್ರೆ ಸೇರಿದರು. ಇವರಲ್ಲಿ ನಾಲ್ವರು ಅಸುನೀಗಿದರು, ಉಳಿದವರು ಅಂಗಾಂಗಗಳನ್ನು ಕಳೆದುಕೊಂಡರು.

ಸರಕಾರ ಎಚ್ಚೆತ್ತು ಪೂರ್ತಿ ಪಟ್ಟಣದಲ್ಲಿ ವಿಕಿರಣದ ತಪಾಸಣೆ ನಡೆಸಿತು. ಸುಮಾರು ಒಂದೂವರೆ ಲಕ್ಷ ಜನರ ಪರೀಕ್ಷೆ ನಡೆಸಲಾಯಿತು.

ಐಎನ್‌ಇಎಸ್ ಮಾನದಂಡದಲ್ಲಿ ಈ ಘಟನೆಯನ್ನು ಐದನೆಯ ಹಂತದ ದುರಂತ ಎಂದು ಪರಿಗಣಿಸಲಾಯಿತು.

ಗೊಯಾನಿಯಾ ಅನಾಹುತದ ಬಳಿಕ ಪಟ್ಟಣದ ಒಂದೂವರೆ ಲಕ್ಷ ಜನರ ವೈದ್ಯಕೀಯ ತಪಾಸಣೆ ಮಾಡಲಾಗಿತ್ತು.

2010ರಲ್ಲಿ ಪಶ್ಚಿಮ ನವದೆಹಲಿಯ ಮಾಯಾಪುರಿ ಎಂಬಲ್ಲಿ ಇದೇ ರೀತಿಯ ಒಂದು ಘಟನೆ ನಡೆಯಿತು. ದೆಹಲಿ ಯುನಿವರ್ಸಿಟಿಯ ಸಂಶೋಧನಾಲಯದಲ್ಲಿದ್ದ ಇರೇಡಿಯೇಟರ್ ಎಂಬ ಒಂದು ಹಳೆಯ ಸಾಧನವನ್ನು ಪ್ರಮಾದವಶಾತ್ ಒಬ್ಬ ರದ್ದಿ ವ್ಯಾಪಾರಿಗೆ ಮಾರಲಾಗಿತ್ತು. ಅವನ ಕೆಲಸಗಾರರು ಇದನ್ನು ಒಡೆದು ಹನ್ನೊಂದು ತುಂಡುಗಳಾಗಿ ಮಾಡಿದ್ದರು. ಈ ತುಂಡುಗಳನ್ನು ಮುಟ್ಟಿದ್ದ, ಸಾಗಿಸಿದ್ದ ಒಟ್ಟು ಎಂಟು ಜನರಿಗೆ ವಿಕಿರಣದ ಗಾಯಗಳಾಗಿ ಆಸ್ಪತ್ರೆ ಸೇರಿದರು. ಇವರಲ್ಲಿ ಒಬ್ಬಾತ ಕಿಡ್ನಿ ವೈಫಲ್ಯದಿಂದ ಅಸುನೀಗಿದ.

ಭಾರತೀಯ ಅಟಾಮಿಕ್ ಎನರ್ಜಿ ರೆಗ್ಯುಲೇಟರಿ ಬೋರ್ಡ್ ದೆಹಲಿ ಪೊಲೀಸರ ಸಹಾಯದಿಂದ ಮಾಯಾಪುರಿಯ ಮಾರುಕಟ್ಟೆಯಲ್ಲಿ ದಿಗ್ಬಂಧನ ಮಾಡಿ ಎಲ್ಲ ಹತ್ತು ತುಂಡುಗಳನ್ನು ವಶಪಡಿಸಿಕೊಂಡಿತು. ಈ ಘಟನೆಯನ್ನು ಐಎನ್‌ಇಎಸ್ ಮಾನದಂಡದಲ್ಲಿ ನಾಲ್ಕನೆಯ ಹಂತದ ದುರ್ಘಟನೆ ಎಂದು ಪರಿಗಣಿಸಲಾಗಿದೆ. ದೆಹಲಿ ಪೊಲೀಸರು ಈ ಘಟನೆಯ ಬಗ್ಗೆ ತನಿಖೆ ನಡೆಸಿ ಇರೇಡಿಯೇಟರನ್ನು ಮಾರಲು ನೆರವಾಗಿದ್ದ ದೆಹಲಿ ಯುನಿವರ್ಸಿಟಿಯ ರಸಾಯನಶಾಸ್ತ್ರದ ಆರು ಪ್ರೊಫೆಸರ್‌ಗಳ ಮೇಲೆ ಖಟ್ಲೆ ಹೂಡಿದರು.

8 ಟೋಕೈಮುರಾ ದುರಂತ, ಜಪಾನ್

1997 ಮಾರ್ಚ್ 11ರಂದು ಜಪಾನ್‌ನ ಇಬರಾಕಿ ಪ್ರಾಂತ್ಯದ ಟೋಕೈಮುರಾ ಎಂಬ ಅಣುಸ್ಥಾವರದಲ್ಲಿ ಬೆಂಕಿ ಹೊತ್ತಿಕೊಂಡಿತು. ದ್ರವೀಕೃತ ಯುರೇನಿಯಂ ಇಂಧನವನ್ನು ಬಳಸುವಲ್ಲಿ ಎಡವಟ್ಟಾದ ಕಾರಣ ಈ ದುರ್ಘಟನೆ ಸಂಭವಿಸಿತು.

ಸುಮಾರು 20 ಗಂಟೆಗಳ ಕಾಲ ಉರಿದಿದ್ದ ಬೆಂಕಿಯಲ್ಲಿ 436 ಸಿಬಂದಿಗಳಿಗೆ ವಿಕಿರಣದ ಸೋಂಕು ತಗಲಿ, ಇಬ್ಬರು ಸ್ಥಳದಲ್ಲೇ ಮೃತಪಟ್ಟರು.



ಟೋಕೈಮುರಾ ದುರಂತದಲ್ಲಿ ವಿಕಿರಣ ಪೀಡಿತ ಹಿಸಾಬಿ ಔಚಿ ಎಂಬ ಕಾರ್ಮಿಕ ಆಸ್ಪತ್ರೆಯಲ್ಲಿ ದಯನೀಯ ಸ್ಥಿತಿಯಲ್ಲಿದ್ದು 83 ದಿನಗಳ ಬಳಿಕ ನಿಧನ ಹೊಂದಿದ.

ಈ ಘಟನೆಯ ಬಳಿಕ ಜಪಾನಿನ ಅಣುಶಕ್ತಿ ಸ್ಥಾವರಗಳ ರಚನೆ ಮತ್ತು ಸುರಕ್ಷತಾ ಕಾರ್ಯಾಚರಣೆಯಲ್ಲಿ ಭಾರೀ ಬದಲಾವಣೆಗಳನ್ನು ತರಲಾಯಿತು.

9 ಎಸ್ಎಲ್ 01 ಪವರ್‌ಸ್ಟೇಶನ್ ದುರಂತ: ಇಡಾಹೋ, ಅಮೆರಿಕಾ

1961ರ ಜನವರಿ 3ರಂದು ಇಡಾಹೋದಲ್ಲಿ ಅಮೆರಿಕನ್ ಸೈನ್ಯ ನಡೆಸುತ್ತಿದ್ದ ಒಂದು ಚಿಕ್ಕ ಗಾತ್ರದ ಸಂಶೋಧನಾತ್ಮಕ ಪರಮಾಣು ಕೇಂದ್ರದಲ್ಲಿ ಒಂದು ಸ್ಫೋಟ ನಡೆದು, ಮೂವರು ಸಿಬಂದಿಗಳು ಸ್ಥಳದಲ್ಲೇ ಅಸುನೀಗಿದರು. ಅಮೆರಿಕಾದಲ್ಲಿ ಈ ತನಕ ನೇರ ಸಾವಿಗೆ ಕಾರಣವಾದ ಏಕಮಾತ್ರ ಪರಮಾಣು ಸ್ಥಾವರ ದುರಂತ ಇದಾಗಿದೆ.

ಪರಮಾಣು ಸ್ಥಾವರವನ್ನು ನಡೆಸುತ್ತಿದ್ದ ಒಬ್ಬ ಸಿಬಂದಿ ಕೇಂದ್ರದ ನಿಯಂತ್ರಣ ದಂಡವನ್ನು ಮೇಲಕ್ಕೆ ಎಳೆದ ಕಾರಣ ರಿಯಾಕ್ಟರ್ ಬಿಸಿಯೆದ್ದು ಸಿಡಿದಿತ್ತು. ಗಣನೀಯ ಪ್ರಮಾಣದ ವಿಕಿರಣಶೀಲ ವಸ್ತುಗಳು ವಾತಾವರಣದೊಡನೆ ಸೇರಿಕೊಂಡಿದ್ದವು. ಆದರೆ ಈ ಸ್ಥಾವರ ಇಡಾಹೋದ ಮರುಭೂಮಿ ಪ್ರದೇಶದಲ್ಲಿ ಇದ್ದ ಕಾರಣ ಜನಸಾಮಾನ್ಯರಿಗೆ ವಿಕಿರಣದ ಅಪಾಯ ತಟ್ಟಲಿಲ್ಲ.

ಎಸ್ಎಲ್01 ಪವರ್‌ಸ್ಟೇಶನ್ ದುರಂತದ ದೃಶ್ಯ.

10 ಸಾನ್ ಲಾರೆನ್ ಅಣುಸ್ಥಾವರ ದುರಂತ, ಫ್ರಾನ್ಸ್

ಫ್ರಾನ್ಸ್‌ನ ಸಾನ್ ಲಾರೆನ್ ಅಣುಶಕ್ತಿ ಸ್ಥಾವರ ಇಂದಿಗೂ ಅಣುಶಕ್ತಿ ಉತ್ಪಾದಿಸುತ್ತಿದೆ.

1969ರ ಅಕ್ಟೋಬರ್ 17ರಂದು ಫ್ರಾನ್ಸ್‌ನ ಒಂದು ಅಣುಸ್ಥಾವರದಲ್ಲಿ 50 ಕಿಲೋ ಯುರೇನಿಯಂ ಕರಗಿತ್ತು. ಇದನ್ನು ಹತೋಟಿಗೆ ತರಲು ಎರಡು ದಿನಗಳು ಬೇಕಾದವು. ಈ ಘಟನೆಯಲ್ಲಿ ಯಾರಿಗೂ ಪ್ರಾಣಾಪಾಯ ಉಂಟಾಗಿರಲಿಲ್ಲ.

ಜಗತ್ತಿನಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಅಣುಶಕ್ತಿಯನ್ನು ಬಳಸುವ ದೇಶ ಫ್ರಾನ್ಸ್. ಈ ದೇಶದ ಅಣುಶಕ್ತಿ ಉತ್ಪಾದನೆಯ ಕಾರ್ಯಾಚರಣೆಯಲ್ಲಿ ಈ ತನಕ ನಡೆದಿರುವ ಅತ್ಯಂತ ಗಂಭೀರ ದುರ್ಘಟನೆ ಎಂದರೆ, 1969ರ ಸಾನ್ ಲಾರೆನ್ ಅನಾಹುತ ಮಾತ್ರ. ■

ಬಂದನೇನು ಅವನು...

ಪೊರೆದು ನಿಂತಿರುವೆ ಒಲವ ಭಾವವನು ಬಂದನೇನು ಅವನು
ತೊರೆದು ಬಂದಿರುವೆ ನಗುತ ಜೀವವನು ಬಂದನೇನು ಅವನು

ತಿಂಗಳನ ಕಾಡುತ ಬೇಡಿ ಬೆಳದಿಂಗಳ ಕಡ ತಂದಿರುವೆ
ಸರಿಸಿ ನಿಂದಿರುವೆ ನಾಚಿಕೆ ತೆರೆಯನು ಬಂದನೇನು ಅವನು

ಹಗಲು ರಾತ್ರಿಗಳ ಪರಿವೆಯಿಲ್ಲದೆ ನಲುಗಿದೆ ಜೀವ ಭಾವ
ಮುಗಿಲ ಹಣತೆಗೆ ಎರೆದಿರುವೆ ಉಸಿರನು ಬಂದನೇನು ಅವನು

ಕಾಲಂದುಗೆ ಗೆಜ್ಜೆನಾದ ಚಿಮ್ಮಿ ಆಸೆ ಹೊಮ್ಮಿಸಿದೆ ಹೆಜ್ಜೆಹೆಜ್ಜೆಗೆ
ಎರವಲು ಪಡೆದೆ ತಾರಕೆ ಹೊಳಪನು ಬಂದನೇನು ಅವನು

ಹೆಪ್ಪಿಟ್ಟ ನೆನಪ ಕುಲುಕಾಟದಿ ಇಂದು ನವ ವಸಂತ ತೇಲಿದೆ
ಕದ್ದುತಂದೆ ಶಶಿಯ ಅಂತರಂಗದ ಬೆಳಕನು ಬಂದನೇನು ಅವನು

❑ ಇಂದಿರಾ ಮೋಟೆಬೆನ್ನೂರು

ಕಥೆ

ಮೂಲ ಹಿಂದಿ ❑ ರೇಖಾ ರಾಜವಂಶಿ
ಕನ್ನಡಕ್ಕೆ ❑ ಡಿ. ಎನ್. ಶ್ರೀನಾಥ್



'ನನಗೆ ತಾಯಿ -ತಂದೆಯ ಪ್ರೀತಿಯ ಅಗತ್ಯವಿತ್ತು. ಆದರೆ ಎಲ್ಲರೂ ಫರ್ಟಿಲಿಟಿ ಕ್ಲಿನಿಕ್ ಮೇಲೆ ಕೇಸ್ ಹಾಕಿ ಕೂತಿದ್ದರು!'

ತಂದೆ ಯಾರು?

ಪ್ರತಿಯೊಂದು ಮಗು ಹುಟ್ಟಲು ಕಾರಣವೊಂದು ಇರುತ್ತದೆ, ಅದಕ್ಕೆ ಅದರದೇ ಆದ ಒಂದು ಅಸ್ತಿತ್ವವಿರುತ್ತದೆ ಎಂದು ಜನ ಸಾಮಾನ್ಯವಾಗಿ ಹೇಳುತ್ತಾರೆ. ನಾನಾಗಿದ್ದೇನೆ, ಆದರೆ ನಾನಲ್ಲ, ನನ್ನ ಅಸ್ತಿತ್ವವಿಲ್ಲ ಎಂಬುವುದು ನನಗೆ ತಿಳಿಯದವರೆಗೆ ನಾನು ಸಹ ಇದನ್ನೇ ನಂಬುತ್ತಿದ್ದೆ. ನೋಡಿ, ನನ್ನನ್ನು ಕಾನೂನುಬಾಹಿರ ಸಂತಾನವೆಂದು ಹೇಳಬೇಡಿ. ನಾನು ಯಾರೊಬ್ಬರ ಪಾಪದ ಚಿಹ್ನೆ ಅಲ್ಲ, ಯಾರೊಬ್ಬರ ಬಲಾತ್ಕಾರದ ಪರಿಣಾಮ ಸಹ ಅಲ್ಲ. ನನ್ನ ತಂದೆ–ತಾಯಿ ಇಬ್ಬರೂ ಇದ್ದಾರೆ. ಆದರೆ ಅವರು ನನ್ನನ್ನು ಒಪ್ಪಿಕೊಳ್ಳದಿದ್ದರೆ ಏನಾಯಿತು? ಅವರು ಪರಸ್ಪರ ಅಪರಿಚಿತರಾಗಿದ್ದರೆ, ಚಿಂತೆಯಿಲ್ಲ. ಇಲ್ಲ–ಇಲ್ಲ, ನನ್ನ ತಾಯಿ ವೇಶ್ಯೆಯಲ್ಲ. ತಾಯಿ ಮತ್ತು ತಂದೆ ಇಬ್ಬರೂ ಒಳ್ಳೆಯ ಜಾಬ್‌ನಲ್ಲಿದ್ದಾರೆ, ಅವರದು ಸಮೃದ್ಧ ಕುಟುಂಬ. ಅವರು ಜನರಿಗೆ ಸಹಾಯ ಮಾಡಲು ಬಯಸುತ್ತಿದ್ದರು; ನಾನು ಸುಳ್ಳಿನ ಆಸರೆಯಿಂದ ಜಗತ್ತಿಗೆ ಬಂದೆ. ಇಲ್ಲ–ಇಲ್ಲ, ನಾನು ಅಥವಾ ನನ್ನ ತಂದೆ–ತಾಯಿ ಸುಳ್ಳು ಹೇಳಲಿಲ್ಲ. ನಾನು ಒಂದು ತಪ್ಪಿನ ಪರಿಣಾಮ, ಅಷ್ಟೆ.

ನನ್ನ ಹೆಸರು ಸ್ಟೀವ್. ನನಗೆ ನೆನಪಿದೆ, ಆಗ ನಾನು ಎರಡು ವರ್ಷ ವಯಸ್ಸಿನ ಮಗುವಾಗಿದ್ದೆ. ನನ್ನ ವಯಸ್ಸಿನ ಬಹುತೇಕ ಮಕ್ಕಳು ಸೊಕ್ಕಿನಿಂದ ತಮ್ಮ ತಂದೆ–ತಾಯಿಯ ಜೊತೆ ಸ್ಟ್ರಾಲರ್‌ನಲ್ಲಿ ಕೂತು ಪೇಟೆಯಲ್ಲಿ ಅಡ್ಡಾಡುತ್ತಿದ್ದರು; ಹೊಸ–ಹೊಸ ಆಟಿಕೆಗಳೊಂದಿಗೆ ಆಡುತ್ತಿದ್ದರು, ಜೋಕಾಲೆಗಳಲ್ಲಿ ಕೂತು ಬೀಗುತ್ತಿದ್ದರು. ಅಂದರೆ ಅವರು ಜಗತ್ತನ್ನು ಅನುಭವಿಸುತ್ತಿದ್ದಾಗ ನಾನು...ನಾನು ನನ್ನ ಅಸ್ತಿತ್ವವನ್ನು ಅರಸುತ್ತಿದ್ದೇನೆ. ನನ್ನ ಬಗ್ಗೆ ಸ್ಪಷ್ಟತೆಯನ್ನು ಕೊಡುತ್ತಿದ್ದೇನೆ. ಭವಿಷ್ಯದಲ್ಲಿ ಯಾವ ಅಪರಿಚಿತ ನನ್ನನ್ನು ಸಾಕಲು ವಿವಶನಾಗುತ್ತಾನೆ ಎಂಬ ಚಿಂತೆ ನನ್ನನ್ನು ಕಾಡುತ್ತಿದೆ.

ನಿಜವೆಂದರೆ, ನಾನು ಒಂದು ತಪ್ಪಿನಿಂದಾಗಿ ಹುಟ್ಟಿದೆ–ಅದೂ ಒಂದು ಸಣ್ಣ ತಪ್ಪಿನಿಂದಾಗಿ! ಈ

ಮಾತಿಗೆ ನಾನು ನಗಲೋ ಅಥವಾ ಅಳಲೋ ತಿಳಿಯುವುದಿಲ್ಲ. ಅವರ ದೃಷ್ಟಿಯಲ್ಲಿ ಇದೊಂದು ಸಣ್ಣ ಟೈಪಿಂಗ್ ಮಿಸ್ಟೇಕ್ ಆಗಿತ್ತು, ಫರ್ಟಿಲಿಟಿ ಕ್ಲಿನಿಕ್‌ನಲ್ಲಿ ಒಂದು ಅನ್‌ಫಾರ್ಚ್ಯೂನೇಟ್ ಮಿಸ್ಟೇಕ್ ಆಗಿತ್ತು. ಇಲ್ಲ... ಇಲ್ಲ... ನೀವು ತಪ್ಪಾಗಿ ತಿಳಿಯುತ್ತಿದ್ದೀರ. ಇದರಲ್ಲಿ ನನ್ನ ತಂದೆ-ತಾಯಿಯ ಯಾವ ತಪ್ಪೂ ಇರಲಿಲ್ಲ.

ವಾಸ್ತವವಾಗಿ ನನ್ನ ತಂದೆ-ತಾಯಿ ನನ್ನ ತಂದೆ-ತಾಯಿ ಅಲ್ಲ. ನನ್ನ ಅಮ್ಮ ನನ್ನನ್ನೆಂದೂ ತನ್ನ ಮಡಿಲಿನಲ್ಲಿ ಎತ್ತಿಕೊಳ್ಳಲಿಲ್ಲ, ನಾನು ರೋದಿಸಿದಾಗ ನನ್ನ ತಂದೆ ಎಂದೂ ತಮ್ಮ ತೋಳುಗಳಲ್ಲಿ ನನ್ನನ್ನು ಎತ್ತಿಕೊಳ್ಳಲಿಲ್ಲ. ಏಕೆಂದರೆ ವಾಸ್ತವವಾಗಿ ಅವರು ನನ್ನ ತಂದೆ ಅಥವಾ ತಾಯಿಯಲ್ಲ. ನಾನು ಮಿಸ್ ಮ್ಯಾಚ್ ಟ್ಯೂಬ್, ತಪ್ಪು ಲೇಬಲ್ ಹಾಗೂ ಎರಡು ಪರಿವಾರಗಳ ಅಗತ್ಯತೆಗಳನ್ನು ಈಡೇರಿಸಲು ಹುಟ್ಟಿದ ಸಂತಾನ. ಇದರಲ್ಲಿ ದೊಡ್ಡ ತಪ್ಪೇನಾಗಿತ್ತೆಂದರೆ, ಈ ಬಗ್ಗೆ ಏನೂ ಯೋಚಿಸದ ಲ್ಯಾಬ್ ಅಸಿಸ್ಟೆಂಟ್‌ನ ಅಥವಾ ನರ್ಸ್‌ನ ತಪ್ಪಾಗಿತ್ತು. ಅವರು ಬಹುಶಃ ಮದ್ಯದ ಅಮಲಿಗೊಳಗಾಗಿದ್ದರೇನೋ. ಅವನು/ಅವಳು ತಪ್ಪು ಮಿಕ್ಸ್‌ಅಪ್ ಮಾಡಿ, ನನ್ನ ಹುಟ್ಟಿನ ಬೀಜವನ್ನು ಬಿತ್ತಿದರು. ಮೊದಲು ನನ್ನನ್ನು ಕೇಳಲಿಲ್ಲ, ತದನಂತರದಲ್ಲಿ ಅವರು ನನ್ನ ಅವಸ್ಥೆಗೆ ನನ್ನನ್ನು ಬಿಟ್ಟರು.

ಬನ್ನಿ, ನನ್ನ ಬಳಿ ಕೂರಿ. ನಿಜವಾದ ಕಥೆಯನ್ನು ಆರಂಭದಿಂದ ನಿಮಗೆ ಹೇಳುತ್ತೇನೆ. ಇದನ್ನು ಯಾರೂ ಮನಬಿಚ್ಚಿ ಹೇಳಲಾರ, ಏಕೆಂದರೆ ಎಲ್ಲವೂ ಅಸ್ತವ್ಯಸ್ತವಾಗಿವೆ.

ವಾಸ್ತವವಾಗಿ, ಇದರ ಆರಂಭ ಸ್ಟಾರ್ ಫರ್ಟಿಲಿಟಿ ಸೆಂಟರ್‌ನಿಂದಾಗಿತ್ತು. ಇದೊಂದು ತುಂಬಾ ಪ್ರಸಿದ್ಧವಾದ ಮತ್ತು ದುಬಾರಿ ಸೆಂಟರ್ ಆಗಿತ್ತು, ಇದು ಸಂತಾನವಿಲ್ಲದ ದಂಪತಿಗಳಿಗೆ ವರವಾಗಿತ್ತು. ಇದು 100% ಸಂತುಷ್ಟಿಗಾಗಿ ಮನೆಮಾತಾಗಿತ್ತು. ಇದು ನಾನು ಹುಟ್ಟುವ ಮೊದಲಿನ ಸಂಗತಿಯಾಗಿದೆ.

ಬೆಳಿಗ್ಗೆಯ ಸುಮಾರು ಒಂಬತ್ತು ಗಂಟೆಯಿರಬೇಕು, ಮಗುವಿನ ಬಯಕೆಯಲ್ಲಿ ಕಾತರಿಸುತ್ತಿದ್ದ ಒಂದು ಜೋಡಿ ಸೆಂಟರ್‌ಗೆ ಬಂತು. ಅವರು ಶ್ರೀಮಂತ, ಸುಂದರ ದಂಪತಿಯಾಗಿದ್ದು ಅವರ ಬಳಿ ಎಲ್ಲವೂ ಇತ್ತು. ಒಳ್ಳೆಯ ನೌಕರಿ, ಬಂಗ್ಲೆ, ಬೆಲೆಬಾಳುವ ಕಾರು ಎಲ್ಲವೂ ಇದ್ದವು. ಆದರೆ ಅವರಿಗೆ ಬೇಕಾದದ್ದು ಮಾತ್ರ ಇರಲಿಲ್ಲ, ಅಂದರೆ ನಾನು. ಅಂದರೆ ನನ್ನಂಥ ಸುಂದರ, ದಷ್ಟ-ಪುಷ್ಟ, ಹಸನ್ಮುಖಿ ಮಗುವಿರಲಿಲ್ಲ. ಅವರು ಇಂಥ ಮಗುವಿಗೆ ಕಾತರರಾಗಿದ್ದರು, ಆದರೆ ಇಂಥ ಮಗುವನ್ನು ಹೆರಲು ಅಸಮರ್ಥರಾಗಿದ್ದರು.

ಫರ್ಟಿಲಿಟಿ ಸೆಂಟರ್‌ನಲ್ಲಿ ಆರ್ಥಿಕವಾಗಿ ದುರ್ಬಲರಾದ ಅಥವಾ ಬೇರೆಯವರಿಗೆ ಸಹಾಯ ಮಾಡಲು ಕಾತರರಾದ ಯುವಕರು ಹಣಕ್ಕಾಗಿ ಸ್ಪರ್ಮ್ ಮತ್ತು ಎಗ್ಸ್ ಡೊನೇಟ್ ಮಾಡುತ್ತಾರೆ. ಈಗ ಡೊನೇಶನ್‌ಗೆ ಎರಡೂ ಜೆಂಡರಿನ ಸಾಕಷ್ಟು ಜನ ಬರುತ್ತಾರೆ, ಆದರೆ ವಿದೇಶದಲ್ಲಿ ಎಲ್ಲವನ್ನೂ ಸಮರ್ಥವಾಗಿಡಲಾಗುತ್ತದೆ. ದಾಖಲೆಗಳನ್ನು ಸೂಕ್ತ ವಿಧದಲ್ಲಿ ಫೈಲ್‌ಗಳಲ್ಲಿಡಲಾಗುತ್ತದೆ. ಇಂಥ ತಪ್ಪಾಗುವುದು ಅಸಂಭವ. ಆದರೆ ಯಾರೋ ಫೈಲ್‌ಗಳಲ್ಲಿ ಅವ್ಯವಸ್ಥೆ ಮಾಡಿದರು. ಸ್ಮಿಥ್ ದಂಪತಿ ಆಯ್ಕೆಮಾಡಿದ ಡೋನರ್ ಸ್ಪರ್ಮ್ ಮತ್ತು ಎಗ್‌ನ್ನು ಉಪಯೋಗಿಸುವುದಕ್ಕೆ ಪ್ರತಿಯಾಗಿ ಅವರು ಡೋನರ್ ಯುವಕನಾದ ಜ್ಯಾಕ್ ಮತ್ತು ಯುವತಿ ಲಿಲಿಯ ಎಗ್ಸ್‌ಗಳನ್ನು ಉಪಯೋಗಿಸಿದರು. ಹೀಗಾಗಿ ಆನುವಂಶಿಕವಾಗಿ, ನಾನು ಅವರ ಮಗುವಾಗಿದ್ದೇನೆ. ಆದರೆ ನಿಲ್ಲಿ, ಲಿಲಿ ಮತ್ತು ಜ್ಯಾಕ್ ಇಬ್ಬರು ಪರಸ್ಪರ ಸಂಬಂಧಿಕರಲ್ಲ. ಅವರು ಒಬ್ಬರಿಗೊಬ್ಬರು ಪರಿಚಯಸ್ಥರಲ್ಲ.

ಅವರಿಗೆ ತಮ್ಮ ತಪ್ಪಿನ ಅರಿವಾದಾಗ ನಾನು ಅಸ್ತಿತ್ವಕ್ಕೆ ಬಂದಿದ್ದೆ. ನನ್ನ ತಾಯಿಯಲ್ಲದ ತಾಯಿಯ ಗರ್ಭದಲ್ಲಿ ಬಂದಿದ್ದೆ. ಅವಳು ನನ್ನನ್ನು ಬಯಸಿಯೇ ಇರಲಿಲ್ಲ. ಅಂದರೆ ಸ್ಮಿಥ್ ದಂಪತಿಗೆ ಬೇರೆ ಯಾವ ಮಗು ಸಹ ಬೇಡವಾಗಿತ್ತು. ನನ್ನ ತಂದೆ ಜ್ಯಾಕ್ ಮತ್ತು ತಾಯಿ ಲಿಲಿಗೆ ಸಹ ಮಗು ಬೇಡವಾಗಿತ್ತು. ಅವರು ಮಗುವಿಲ್ಲದ ದಂಪತಿಗೆ ಸಹಾಯ ಮಾಡಲು ಸ್ಪರ್ಮ್ ಮತ್ತು ಎಗ್ ದಾನ ಮಾಡಿದ್ದರು.

ನಾನು ಮಿಸೆಸ್ ಸ್ಮಿಥ್‌ರ ಗರ್ಭಕ್ಕೆ ಹೋದಾಗ ಸ್ಮಿಥ್ ದಂಪತಿಗೆ, ನಾನು ಅವರ ಅಂಶವಲ್ಲ ಎಂಬುವುದು ತಿಳಿದಿರಲಿಲ್ಲ. ಆದರೆ ಅವರು ನನ್ನನ್ನು ಚೆನ್ನಾಗಿ ಆರೈಕೆ ಮಾಡಿದರು. ಅವರು ನಾನು ಹುಟ್ಟಿದ್ದಕ್ಕೆ ಸಮಾರಂಭವನ್ನು ಏರ್ಪಡಿಸಿದ್ದರು. ಸ್ಮಿಥ್ ದಂಪತಿ ತಮ್ಮ ಉಳಿದ ಎಗ್ಸ್‌ಗಳನ್ನು ಬೇರೊಂದು ಕ್ಲಿನಿಕ್‌ಗೆ ಕಳುಹಿಸುವ ಬಗ್ಗೆ ಹೇಳಿದರು, ಆಗ ಆ ವೇಳೆಯ ತಾಯಿ ಅಂದರೆ ಕ್ಯಾಲಿಯ ಎಲ್ಲಾ ಎಗ್ಸ್‌ಗಳು ಹೇಗಿದ್ದವೋ ಹಾಗೆಯೇ ಇವೆ. ಅಂದರೆ ಅವುಗಳಲ್ಲಿ ಒಂದನ್ನು ಸಹ ಉಪಯೋಗಿಸಲಿಲ್ಲ.

ಈಗ ನಾನು ಯಾರ ಎಗ್ಸ್‌ನಿಂದ ಸೃಷ್ಟಿಯಾದೆ ಎಂಬ ಪ್ರಶ್ನೆ ಉದ್ಭವಿಸಿತು. ನನ್ನ ಅಸಲಿ ತಂದೆ-ತಾಯಿಯ ಪತ್ತೆ-ಕಾರ್ಯ ನಡೆಯಿತು. ಡಿಎನ್ಎ ಟೆಸ್ಟ್‌ನಿಂದ, ನನ್ನ ತಂದೆ ಜ್ಯಾಕ್ ಅಂದರೆ ನನ್ನ ಹುಟ್ಟಿನಲ್ಲಿ ಅವನ ಸ್ಪರ್ಮ್‌ನ್ನು ಉಪಯೋಗಿಸಲಾಗಿತ್ತು ಎಂಬುದು ತಿಳಿಯಿತು. ಜ್ಯಾಕ್ ಓರ್ವ ನಿಶ್ಚಿಂತ, ಹ್ಯಾಂಡ್‌ಸಮ್ ಮತ್ತು ಉತ್ತಮ ಪರಿವಾರಕ್ಕೆ ಸೇರಿದ್ದ. ಅವನು ತನ್ನ ಜೀವನದಲ್ಲಿ ತುಂಬಾ ವ್ಯಸ್ತನಾಗಿದ್ದಾನೆ. ಕ್ಯಾಲಿಯ ಬದಲು ಲಿಲಿಯ ಎಗ್ಸ್‌ನೊಂದಿಗೆ ಸೇರಿಸಲಾಯಿತು. ಈಗ ನನ್ನ ಬಯಾಲಾಜಿಕಲ್ ತಾಯಿಗೆ ನನ್ನ ಬೇಡದ ಹುಟ್ಟಿನ ಬಗ್ಗೆ ಹೇಳಿದಾಗ ಅವಳು ಸಹ ನನ್ನ ಹೊಣೆಯನ್ನು ಹೊರಲು ಬಯಸುತ್ತಿರಲಿಲ್ಲ.

ಇದು ಹೇಗೆ ಸಾಧ್ಯ ಎಂಬುವುದು ಎಲ್ಲರ ಪ್ರಶ್ನೆಯಾಗಿತ್ತು.

ಮಿಸ್ಟರ್ ಸ್ಮಿಥ್ ಏಜೆನ್ಸಿ ವಿರುದ್ಧ ಕೋರ್ಟಿನಲ್ಲಿ ಕೇಸ್ ಹಾಕಿದರು. ನನ್ನ ತಂದೆ-ತಾಯಿ ಜ್ಯಾಕ್ ಮತ್ತು ಲಿಲಿ ಸಹ, ನಮಗೀಗ ಮಗು ಬೇಡವಾಗಿತ್ತು ಎಂದರು. ಮತ್ತೆ ನಾನು? ನನಗೆ ಯಾವುದೇ ಆಯ್ಕೆಯೇ ಇರಲಿಲ್ಲ.

ಅವರೆಲ್ಲರೂ ನನ್ನನ್ನು ಭ್ರಾಮಕರಾಗಿ ನೋಡಿದರು. ನಾನು ಎಲ್ಲರ ಮಿಶ್ರಣವಾಗಿದ್ದೆ ಅಂದರೆ ಕಲಬೆರಕೆಯ ರೂಪವಾಗಿದ್ದೆ. ನನ್ನ ಕಣ್ಣುಗಳು ನೀಲಿಯಾಗಿರದೆ, ಗಾಢ ಖಾಕಿ ಬಣ್ಣವನ್ನು ಹೊಂದಿತ್ತು. ನನ್ನ ಚರ್ಮದ ಬಣ್ಣ ಬಿಳಿಯಾಗಿರದೆ ಹಳದಿಯಾಗಿತ್ತು. ವಾಸ್ತವಿಕತೆ ಎದುರಾದಾಗ ನಾನು ಎಲ್ಲೂ ಸಲ್ಲದಾದೆ. ಈಗ ನನ್ನ ಗತಿ ಏನು? ನಾನೆಲ್ಲಿಗೆ ಹೋಗುವುದು?

ನನಗೊಬ್ಬಳು ತಾಯಿ ಬೇಕಿತ್ತು. ತಂದೆಯೊಬ್ಬನ ಪ್ರೀತಿಯ ಅಗತ್ಯತೆಯಿತ್ತು. ಎಲ್ಲರೂ ಫರ್ಟಿಲಿಟಿ ಕ್ಲಿನಿಕ್ ಮೇಲೆ ಕೇಸ್ ಹಾಕಿ ಕೂತಿದ್ದರು. ಎಲ್ಲರೂ ತಮ್ಮ-ತಮ್ಮ ಹೊಣೆಗಾರಿಕೆಯಿಂದ ಪಾರಾಗುತ್ತಿದ್ದರು. ಎಲ್ಲರಿಗೂ ಹಣ ಬೇಕಿತ್ತು. ನಾನು ಯಾವ ಪರಿವಾರದವನಾಗಿರಲಿಲ್ಲ. ಯಾರು ನನ್ನನ್ನು ಸ್ವೀಕರಿಸುವರು? ನನ್ನ ದುಃಖವನ್ನು ಅರ್ಥ ಮಾಡಿಕೊಳ್ಳಲು ಯಾರೂ ಬಯಸುತ್ತಿರಲಿಲ್ಲ. ಇಬ್ಬರು ತಂದೆ ಮತ್ತು ಇಬ್ಬರು ತಾಯಿ ಇದ್ದಾಗ್ಯೂ ನಾನು ಅನಾಥನಾಗಿದ್ದೆ.

ನನ್ನನ್ನು ಇಟ್ಟುಕೊಳ್ಳಲು ಯಾರೂ ಬಯಸುತ್ತಿರಲಿಲ್ಲ ಎಂಬುವುದು ನನಗೆ ಅರ್ಥವಾಯಿತು. ತೀವ್ರ ಧ್ವನಿಗಳು, ಜಗಳ-ಚರ್ಚೆ, ಕೋರ್ಟ್ ಹಾಲ್, ಎಂಟಿಸೆಪ್ಟಿಕ್ ವಾಸನೆ-ಇವಿಷ್ಟೇ ನನಗೆ ನೆನಪಿವೆ. ಒಮ್ಮೆ ಕ್ಯಾಲಿ ನನ್ನನ್ನು ಮಡಿಲಿನಲ್ಲಿ ಎತ್ತಿಕೊಂಡು ತುಂಬಾ ರೋದಿಸಿದಳು. ನನ್ನನ್ನು ಬಾಹುಗಳಲ್ಲಿ ಹಿಡಿದು ಪಿಸುಗುಟ್ಟುತ್ತಾ, 'ನೀನು ತುಂಬಾ ಚೆನ್ನಾಗಿದ್ದೀಯ, ಆದರೆ ನಾನು ನಿನಗೆ ಹೊಣೆಗಾರಳಲ್ಲ' ಎಂದಳು. ಅವಳಿಗೆ ತನ್ನ ಮಗು ಬೇಕಿತ್ತು; ತನ್ನ ಎಗ್ಸ್ ಮತ್ತು ಅವಳ ಇಷ್ಟದ ಸ್ಪರ್ಮ್‌ನಿಂದ ಹುಟ್ಟಿದ ಮಗು ಬೇಕಿತ್ತು. ಜ್ಯಾಕ್ ನನ್ನನ್ನು ತಾನು ಬಿಡಿಸಲಾಗದ ಗಣಿತದ ಸಮಸ್ಯೆಯಂತೆ ನೋಡಿದ. ಲಿಲಿಯಂತೂ ಈ ಮೊದಲೇ ಕೈಕೊಡವಿದ್ದಳು.

ಇದರಲ್ಲಿ ಸ್ಮಿಥ್ ದಂಪತಿಯನ್ನು ಸಹ ಎಳೆದು ತರಲಾಯಿತು. ನಾನು ಅವರನ್ನು ಅನೇಕ ಬಾರಿ ಕೋರ್ಟಿನ ಕಾರಿಡಾರ್‌ನಲ್ಲಿ ಭೇಟಿಯಾದೆ.

ಆ ನಾಲ್ವರಲ್ಲಿ ಯಾರೊಬ್ಬರು ಸಹ ನನ್ನನ್ನು ಸ್ವೀಕರಿಸಲು ಬಯಸುತ್ತಿರಲಿಲ್ಲ. ಹೀಗಾಗಿ ನಾನು ಒಂದು ಕೇಸ್ ನಂಬರ್ ಆಗಿದ್ದೆ. ಒಂದು ಅಸಂಬದ್ಧ ಕಾನೂನಿನ ಕೇಸ್ ಆಗಿದ್ದೆ. ವಿಜ್ಞಾನ, ಕಾನೂನು ಮತ್ತು ತಪ್ಪಿನಿಂದಾಗಿ ಜನಿಸಿದ ಮಗುವಾಗಿದ್ದೆ. ಕೊನೆಯಲ್ಲಿ ನನ್ನನ್ನು ಫೋಸ್ಟರ್ ಕೇರ್‌ಗೆ ಕಳುಹಿಸಲಾಯಿತು.

ನನಗೆ ಎರಡು ವರ್ಷವಾದಾಗ ನಾನು ಅದುವರೆಗೆ ಮೂರು ಮನೆಗಳಲ್ಲಿದ್ದೆ, ಪ್ರತಿಯೊಂದು ಮನೆ ಹಿಂದಿನ ಮನೆಗಿಂತ ಹೆಚ್ಚು ಅಸ್ಥಿರವೆಂದು ತೋರುತ್ತಿತ್ತು. ಬಹುತೇಕ ಜನರಿಗೆ ನಾನು ಕುತೂಹಲದ ಮತ್ತು ಶಾಂತ ಸ್ವಭಾವದ ಮಗುವಾಗಿ ಇಷ್ಟವಾಗುತ್ತಿದ್ದೆ. ಆದರೆ ನನ್ನ ವಾಸ್ತವಿಕತೆ ಅವರನ್ನು ಹೆದರಿಸಿತ್ತು.

ಒಂದು ದಿನ ಮಧ್ಯಾಹ್ನ ಮಳೆಯಾಗುತ್ತಿತ್ತು. ನನ್ನನ್ನು ಮಿಸೆಸ್ ಬ್ರೌನ್‌ರ ಫಾಸ್ಟರ್ ಕೇರ್‌ಗೆ ಕಳುಹಿಸಲಾಯಿತು. ಅವರು ಹಿರಿಯ ಮಹಿಳೆಯಾಗಿದ್ದು ಅವರಿಂದ ಲ್ಯಾವೆಂಡರ್ ಸುವಾಸನೆ ಸೂಸುತ್ತಿತ್ತು. ಅವರು ದಯಾಮಯಿ ಮಹಿಳೆಯೆಂದು ಅವರನ್ನು ನೋಡಿದೊಡನೆಯೇ ಅರ್ಥವಾಯಿತು. ಆದರೆ ಅವರು ಜೀವನದಲ್ಲಿ ಎಷ್ಟು ದಣಿದಿದ್ದರೆಂದರೆ, ಇವರು ಹೆಚ್ಚು ದಿನ ನನ್ನನ್ನು ನೋಡಿಕೊಳ್ಳಲಾರರು ಎಂದು ಅನ್ನಿಸಿತು.

ನನ್ನೊಂದಿಗೆ ಅವರಿಗಾಗಿ ಒಂದು ಫೈಲ್ ಸಹ ಬಂದಿತ್ತು, ಅದರೊಳಗೆ ಕೋರ್ಟ್‌ನ ದಸ್ತಾವೇಜುಗಳು, ಮೆಡಿಕಲ್ ರೆಕಾರ್ಡ್ಸ್ ಮತ್ತು ಫೋಟೋ ಇದ್ದವು. ಇದು ಅವಶ್ಯವಾಗಿ ಜ್ಯಾಕ್ ಮತ್ತು ಲಿಲಿಯದಾಗಿರಬೇಕು. ನನ್ನ ಮಿಶ್ರಣ ಮಾಡಿದ ದಿನ, ಲ್ಯಾಬ್‌ನಿಂದ ಹೊರ ಬರುತ್ತಿದ್ದ ಓರ್ವ ನರ್ಸ್‌ಳ ಸುರಕ್ಷಾ-ಚಿತ್ರ ಸಹ ಅದರಲ್ಲಿತ್ತು. ಫೋಟೋ ಅಂಚಿನಲ್ಲಿ 'ಲಾರಾ ಡೇವಿಸ್' ಎಂದು ಹೆಸರು ಬರೆಯಲಾಗಿತ್ತು.

ಏಕೋ-ಏನೋ ಅವಳ ಮುಖ ನೋಡಿದಾಗ ಯುವತಿಯಾಗಿದ್ದ ಆ ನರ್ಸ್ ಭಯಗ್ರಸ್ತಳಾಗಿದ್ದಾಳೆಂದು ಅನ್ನಿಸುತ್ತಿತ್ತು. ಅವಳು ಏನು ಮಾಡಿದಳೋ ಹಾಗೆ ಮಾಡಬೇಕೆಂಬುವುದು ಅವಳ ಇಚ್ಛೆಯಾಗಿರಲಿಲ್ಲ ಅಥವಾ ಅವಳು ಏನು ಮಾಡಿದ್ದಾಳೆ ಎಂಬುವುದು ಬಹುಶಃ ಅವಳಿಗೆ ತಿಳಿದೇ ಇರಲಿಲ್ಲ.

ಈಗ ನಾನು ಹತ್ತು ವರ್ಷದವನಾಗಿದ್ದೇನೆ. ಶಾಲೆಗೆ

ಹೋಗುತ್ತೇನೆ. ವಿದ್ಯಾಭ್ಯಾಸ ಮಾಡುತ್ತೇನೆ. ಮಿಸೆಸ್ ಬ್ರೌನರಿಗೆ ಸಹಾಯವನ್ನು ಸಹ ಮಾಡುತ್ತೇನೆ. ಒಂದು ದಿನ ಲಾರಾ ಡೇವಿಸ್ ನನ್ನನ್ನು ಹುಡುಕುತ್ತಾ ಮಿಸೆಸ್ ಬ್ರೌನರ ಬಳಿಗೆ ಬಂದಾಗ ನನಗೆ ಆಶ್ಚರ್ಯವಾಯಿತು. ಅವಳು ಮಿಸೆಸ್ ಬ್ರೌನರೊಂದಿಗೆ ಏಕಾಂತದಲ್ಲಿ ಅದೇನು ಮಾತನಾಡಿದರೋ ತಿಳಿಯದು. ಮಿಸೆಸ್ ಬ್ರೌನ್ ನನಗೆ ಪ್ರೀತಿಯಿಂದ ಹೇಳಿದರು, "ಸ್ಟೀವ್, ನಿನ್ನನ್ನು ತಮ್ಮೊಂದಿಗೆ ಕರೆದೊಯ್ಯಬೇಕೆಂದು ಲಾರಾಳಿಗೆ ಕೋರ್ಟ್ ಆದೇಶಿಸಿದೆ."

"ಅವರು ನನ್ನ ಜೀವನವನ್ನು ಹಾಳು ಮಾಡಿದ್ದಾರೆ, ನಾನು ಅವರೊಂದಿಗೆ ಹೋಗಲ್ಲ" ನಾನು ಜಿಗುಪ್ಸೆ ಮತ್ತು ತಿರಸ್ಕಾರದಿಂದ ಉತ್ತರಿಸಿದೆ.

"ಆದರೆ ಇದು ಚಿಕ್ಕ ನಗರ, ನನ್ನ ಹತ್ರ ನಿನಗೆ ವಿದ್ಯಾಭ್ಯಾಸ ಮಾಡಿಸಲು ಹಣ ಸಹ ಇಲ್ಲ."

"ನಾನು ಓದಬೇಕಿಲ್ಲ, ನಾನು ನಿಮ್ಮೊಂದಿಗೆ ಸಂತಸದಿಂದ ಇದ್ದೇನೆ."

"ಅವಳು ಒಳ್ಳೆಯ ಹೆಂಗಸು. ಹೋಗಿ ಸ್ವಲ್ಪ ದಿನ ಅವಳೊಂದಿಗಿರು. ಕೋರ್ಟ್ ಆದೇಶವನ್ನು ಒಪ್ಪಲೇ ಬೇಕಾಗುತ್ತೆ. ನಾನು ಸಹ ಅಲ್ಲಿಗೆ ಬಂದು-ಹೋಗ್ತಾ ಇರ್ತೀನಿ."

ಮಿಸೆಸ್ ಬ್ರೌನ್ ನನ್ನನ್ನು ಒಪ್ಪಿಸಿದರು. ನಾನು ನನ್ನ ವಸ್ತುಗಳೊಂದಿಗೆ ಮತ್ತೊಮ್ಮೆ ಹೊಸ ಮನೆಗೆ ಹೊರಟೆ.

ಈಗ ನಾನು ಲಾರಾಳೊಂದಿಗೆ ಇರಲಾರಂಭಿಸಿದೆ. ಅವಳು ನನಗೆ ತನ್ನ ಮನೆಯಲ್ಲಿ ರೂಮ್ ಕೊಟ್ಟಳು, ಬಿಸಿ ಊಟ ನೀಡಿದಳು. "ನೀನು ನಿನ್ನ ಮಿಸ್‌ಮ್ಯಾಚ್ ಹುಟ್ಟಿಗೆ ನನ್ನನ್ನು ಹೊಣೆಗಾರಳೆಂದು ತಿಳಿಯುತ್ತೀಯ, ಇದು ನನಗೆ ಗೊತ್ತಿದೆ. ಆದರೆ ನಿಜ ಹೇಳಬೇಕೆಂದರೆ, ಇದರಲ್ಲಿ ನನ್ನ ಯಾವ ತಪ್ಪೂ ಇಲ್ಲ."

"ಹಾಗಾದ್ರೆ ಇದಕ್ಕೆ ಹೊಣೆ ಯಾರು?"

"ಡಾ. ನೆಲ್ಸನ್...ನಿಜವಾಗಿ ಇದು ಡಾ. ನೆಲ್ಸನ್ ಅವರ ತಪ್ಪಾಗಿದೆ."

"ಮತ್ತೆ ನಿಮ್ಮದು...?"

"ನಾನು ಡಾ. ನೆಲ್ಸನ್ ಹೇಳಿದಂತೆ ಮಾಡಿದೆ, ಇದು ನಿಜ."

"ಓಹ್, ನಿಜವಾದ ಅರ್ಥದಲ್ಲಿ ಡಾ. ನೆಲ್ಸನ್ ನನ್ನ ತಂದೆ. ಅವರೇ ನನ್ನನ್ನು ಈ ಜಗತ್ತಿಗೆ ತಂದು ಅನಾಥ ಮಾಡಿದರು."

"ಹೌದು, ನಿಜವಾದ ಅರ್ಥದಲ್ಲಿ ಅವರನ್ನೇ ನಿನ್ನ ತಂದೆ ಎಂದು ತಿಳಿಯಬಹುದು" ಅವಳು ಮೆಲ್ಲನೆ ಹೇಳಿದಳು.

ಅದೊಂದು ದಿನ ನಾನು ಕೇಳಿದೆ, "ಡಾ. ನೆಲ್ಸನ್ ಈಗಲೂ ಅಲ್ಲಿ ಕೆಲಸ ಮಾಡುತ್ತಾರೆಂದು ನಿಮಗೆ ಅನ್ನಿಸುವುದೇ?"

ಲಾರಾ 'ಇಲ್ಲ'ವೆಂಬಂತೆ ತನ್ನ ತಲೆಯನ್ನು ಅತ್ತಿತ್ತ ಮಾಡಿದಳು.

"ಜನರ ದೃಷ್ಟಿಯಲ್ಲಿ ಡಾ. ನೆಲ್ಸನ್ ಕೋರ್ಟ್ ಕೇಸಿನ ಅನಂತರ ಕಣ್ಮರೆಯಾದರು. ಅವರು ವಿದೇಶಕ್ಕೆ ಹೋದರೆಂದು ಜನ ಯೋಚಿಸುತ್ತಾರೆ. ಆದರೆ ನನಗೊತ್ತಿದೆ, ಅವರೆಲ್ಲೂ ಹೋಗಿಲ್ಲ. ಅವರು ಹೇಳಿದ್ದರಿಂದಲೇ ನಾನು ನಿನ್ನನ್ನು ಅಡಾಪ್ಟ್ ಮಾಡಿಕೊಂಡಿದ್ದೇನೆ."

"ಡಾ. ನೆಲ್ಸನ್ ಎಲ್ಲಿದ್ದಾರೆ?" ನಾನು ಕೇಳಿದೆ.

"ಡಾ. ನೆಲ್ಸನ್ ಈಗ ಡಾ. ಪೀಟರ್ ಲವ್ ಎಂಬ ಅಡ್ಡ ಹೆಸರಿನಲ್ಲಿ ತಮ್ಮ ಕ್ಲಿನಿಕ್ ನಡೆಸುತ್ತಿದ್ದಾರೆ. ಅವರೊಂದು ದಿನ ನಿನ್ನನ್ನು ಭೇಟಿಯಾಗಲು ಬರ್ತಾರೆ."

"ಬೇಡ...ನಾನೆಂದೂ ಅವರನ್ನು ಭೇಟಿಯಾಗಲ್ಲ, ಅವರಿಗೆ, ಹೀಗೆ ನನ್ನ ಹುಟ್ಟಿಗೆ ಕಾರಣವಾಗುವ ಯಾವುದೇ ಹಕ್ಕಿರಲಿಲ್ಲ. ಒಂದು ವೇಳೆ ಅವರು ನನ್ನ ತಂದೆಯಾಗಿದ್ದರೆ, ಅದಕ್ಕೆ ಅವರಿಗೆ ನಾಚಿಕೆಯಾಗಬೇಕು. ಅವರು ನನ್ನಿಡೀ ಜೀವನವನ್ನು ಹಾಳು ಮಾಡಿದರು. ನಾನು ಅವರನ್ನು ಭೇಟಿಯಾಗುವ ಮಾತಿರಲಿ, ಅವರ ಮುಖ ನೋಡಲು ಸಹ ನಾನು ಇಷ್ಟಪಡಲ್ಲ" ಹೀಗೆಂದು ನಾನು ರೋದಿಸಿದೆ.

ಲಾರಾ ನನಗೆ ತಿಳಿಯಪಡಿಸಿದಳು, "ಡಾ. ನೆಲ್ಸನ್‌ರಿಗೆ ಈಗ ತಮ್ಮ ತಪ್ಪಿನ ಅರಿವಾಗಿದೆ. ಅವರು ನಿನ್ನನ್ನು ಸ್ವೀಕರಿಸುವ ತೀರ್ಮಾನ ಮಾಡಿದ್ದಾರೆ. ನೀನು ನನ್ನೊಂದಿಗೆ ಅವರ ಮನೆಯಲ್ಲಿರಲು ಬಯಸುತ್ತೀಯಾ? ಅವರು ನಮ್ಮನ್ನು ಭೇಟಿಯಾಗಲು ಆಗಾಗ ಬಂದು-ಹೋಗುತ್ತಾ ಇರ್ತಾರೆ."

ಲಾರಾ ನನ್ನ ತಲೆಗೂದಲುಗಳನ್ನು ನೇವರಿಸುತ್ತಿದ್ದಳು. ಅವಳು ನನ್ನ ಕೈಗೆ ನೀರಿನ ಗ್ಲಾಸ್ ಮತ್ತು ಟಿಶ್ಯೂ ಪೇಪರ್ ಹಾಕಿದಳು.

"ನೋಡು, ನಿನಗೆ ನಿನ್ನ ಡ್ಯಾಡ್ ಸಿಗ್ತಾರೆ. ನಿನ್ನ ನಿಜವಾದ ತಂದೆ ಅವರೇ. ಅವರು ನಿನ್ನನ್ನು ತಮ್ಮ ಎಗ್ಸ್ ಮತ್ತು ಸ್ಪರ್ಮ್ ಮಿಶ್ರಣ ಮಾಡಿ ಸೃಷ್ಟಿಸಿದ್ದಾರೆ, ಬೇಕಾದರೆ ಅದು ತಪ್ಪಾಗಿರಲಿ, ಆದರೆ ನಿನಗೆ ಆಕಾರ ಕೊಟ್ಟರು, ಬಣ್ಣ ಕೊಟ್ಟರು, ಜೀವನವನ್ನು ಕೊಟ್ಟರು. ಅವರು ನಿನಗೆ ತಮ್ಮ ಹೆಸರನ್ನು ಕೊಡ್ತಾರೆ, ನಿನ್ನ ವಿದ್ಯಾಭ್ಯಾಸದ ಖರ್ಚನ್ನು ಹೊರುತ್ತಾರೆ, ನಿನ್ನ ನಿಜವಾದ ಡ್ಯಾಡ್ ನಿನಗೆ ಕೊಡುವ ಎಲ್ಲಾ ಸುಖಗಳನ್ನೂ ಕೊಡ್ತಾರೆ."

ಲಾರಾ ಬಹುಶಃ ಉಚಿತವಾಗಿಯೇ ಹೇಳುತ್ತಿದ್ದಾಳೆ ಎಂದು ನನಗೆ ಅನ್ನಿಸಿತು.

ಕಡೆಗೆ ನಾನು ನನ್ನ ಅಸಲು ಡ್ಯಾಡ್‌ರನ್ನು ಭೇಟಿಯಾಗುತ್ತೇನೆ.

ಎರಡು ದಿನಗಳಾದ ಅನಂತರ ಲಾರಾ ಮತ್ತೆ ಕೇಳಿದಳು "ನೀನು ಅವರನ್ನು ನೋಡಲು ಸಿದ್ಧವಿದ್ದೀಯ?"

"ಯಾರನ್ನು? ಡ್ಯಾಡ್ ಅವರನ್ನು? ಈಗ್ಲೇ?" ನಾನು ಆಶ್ಚರ್ಯವನ್ನು ವ್ಯಕ್ತಪಡಿಸುತ್ತೇನೆ.

ನನ್ನ ಬಾಯಿಯಿಂದ ಅದೇಕೋ 'ಡ್ಯಾಡ್' ಶಬ್ದ ಹೊರಟಿತು.

"ಹೂಂ, ಅವರು ಇನ್ನು ಐದು ನಿಮಿಷದಲ್ಲಿ ನಿನಗೆ ವೀಡಿಯೋ ಕಾಲ್ ಮಾಡ್ತಾರೆ. ಚೆನ್ನಾಗಿ ಸಿದ್ಧವಾಗು."

ನಾನು ತುಂಬಾ ಉತ್ಸುಕನಾಗಿದ್ದೇನೆ. ನನ್ನ ನಿರೀಕ್ಷಣೆಯ ಗಳಿಗೆಗಳು ಬಹು ಕಷ್ಟದಿಂದ ಸರಿಯುತ್ತಿವೆ.

ಇಂದು ನನಗೆ ನನ್ನ ಅಸಲಿ ಡ್ಯಾಡ್ ಸಿಗುತ್ತಾರೆ, ಅವರು ನನ್ನನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆ.

ಐದು ನಿಮಿಷಗಳು ಕಳೆದಿದ್ದು ಗೊತ್ತಾಗಲೇ ಇಲ್ಲ, ನಾವು ಸ್ಟಡಿ ರೂಮಿನೊಳಗೆ ಹೋಗುತ್ತೇವೆ, ಲಾರಾ ಮೂಲೆಯಲ್ಲಿಟ್ಟಿದ್ದ ಕಂಪ್ಯೂಟರ್ ಆನ್ ಮಾಡುತ್ತಾಳೆ.

ಲಾರಾ ಜೂಮ್ ಕಾಲ್ ಹಾಕುತ್ತಾಳೆ-

"ಹಲೋ ಸ್ಟೀವ್! ನಾನು ನಿನ್ನ ತಂದೆ, ಡಾ. ನೆಲ್ಸನ್."

"ಡ...ಡ್ಯಾ...ಡ್ಯಾಡ್" ನನ್ನ ಬಾಯಿಯಿಂದ ಈ ಶಬ್ದಗಳು ಹೊರಡುತ್ತವೆ. ನಾನು ಅವರನ್ನು ಎವೆಯಿಕ್ಕದೆ ನೋಡುತ್ತಿರುತ್ತೇನೆ. ಕೊನೆಗಂತೂ ನನಗೆ ನನ್ನ ಡ್ಯಾಡ್ ಸಿಕ್ಕೇ ಬಿಟ್ಟರು.

ಮೊದಲ ಬಾರಿಗೆ ನನಗೆ, ನನ್ನ ಅಸ್ತಿತ್ವವಿದೆ ಎಂದು ಅನ್ನಿಸುತ್ತಿದೆ. ನೋಡಿ, ನಾನು ನನ್ನ ಕಥೆಯನ್ನು ಎಲ್ಲರಿಗೂ ಹೇಳುತ್ತಿದ್ದೇನೆ. ■

ನಾನು ಹುಟ್ಟಿದ ಬಳಿಕ

ನಾನು ಜನಿಸಿದ ಮರುಕ್ಷಣವೇ ಸತ್ತಿದ್ದೆ.
ನಾನು ಹುಟ್ಟಿದ ಬಳಿಕ ಅಮ್ಮ ಸತ್ತಳು.
ಸತ್ತಳು ಅಂದರೆ ಅವಳು ಶಾಶ್ವತವಾಗಿ ನನಗಾಗಿ
ಸತ್ತವಳಂತೆ ಇರಬೇಕೆಂದು ನಿರ್ಧರಿಸಿದಳು.
ಅಪ್ಪನಂತೂ ಕೇವಲ ಬೀಜವಾಹಕ.
ಅವನು ಎಂದಾದರೂ ಜೀವಂತವಾಗಿರುವುದು
ಅಮ್ಮನಿಗೆ ಮಾತ್ರ ಗೊತ್ತಿರಬೇಕು.
ನನಗಿಂತ ಮೊದಲೇ ಹುಟ್ಟಿದ ಅಣ್ಣ - ಅಕ್ಕಂದಿರಿಗೆ
ಇದರ ಬಗೆಗೆ ಕೇಳಬೇಕೆಂದುಕೊಂಡೆ.
ಆದರೆ ಅವರೂ ಬಂದರು
ತಮ್ಮದೇ ಶ್ರಾದ್ಧದ ಊಟ ಮಾಡಲು.
ಇದೆಲ್ಲ ಏನು ಎಂದು ಜನರಿಗೆ ಕೇಳಬೇಕೆಂದು ಕೊಂಡೆ.
ಆದರೆ ಗೊತ್ತಾಯಿತು
ನನ್ನ ಸಾವಿನುತ್ಸವದ ಆನಂದದಲ್ಲಿ
ಇಡೀ ಊರೇ ಸಾಮೂಹಿಕ ಆತ್ಮಹತ್ಯೆ
ಮಾಡಿಕೊಂಡಿತು ಎಂದು.

ಮರಾಠಿ ಮೂಲ ❑ **ಮೀನಾಕ್ಷಿ ಪಾಟೀಲ**
ಕನ್ನಡಕ್ಕೆ ❑ **ಚಂದ್ರಕಾಂತ ಪೋಕಳೆ**

ಮಹಿಳಾ ಮೀಸಲಾತಿ...
ಮುಗ್ಗರಿಸಿದ ಮೋದಿ ಸರಕಾರ

❑ ಶ್ರೀನಿವಾಸ ಸಿರನೂರಕರ್

ಲೋಕಸಭೆ, ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಸ್ಥಾನಗಳನ್ನು ಕಲ್ಪಿಸುವ ಸಂವಿಧಾನ ತಿದ್ದುಪಡಿ ಮಸೂದೆಗೆ ಸದನದಲ್ಲಿ ಸೋಲು ಖಚಿತ ಎನ್ನುವುದು ಆಡಳಿತಾರೂಢ ಎನ್‌ಡಿಎ ಅದನ್ನು ಮಂಡಿಸಿದ್ದೇಕೆ ಎನ್ನುವುದು ಇನ್ನೂ ನಿಗೂಢವಾಗಿಯೇ ಇದೆ!

ಕಳೆದ ಹನ್ನೆರಡು ವರುಷಗಳ ತನ್ನ ನಿರಂತರ ಆಡಳಿತಾವಧಿಯಲ್ಲಿ ಭಾರತೀಯ ಜನತಾಪಕ್ಷ ನೇತೃತ್ವದ ನರೇಂದ್ರ ಮೋದಿ ಅವರ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್.ಡಿ.ಎ.) ಸರಕಾರ ಇಷ್ಟೊಂದು ಹಿನ್ನಡೆಯನ್ನು ಎಂದೂ ಅನುಭವಿಸಿರಲಿಲ್ಲ. ಈಗ ಸರಕಾರಕ್ಕೆ ಆಗಿರುವುದು ತೀವ್ರ ಹಿನ್ನಡೆಯಷ್ಟೇ ಅಲ್ಲ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರತಿಷ್ಠೆಯ ಮೇಲಿನ ಒಂದು ಪ್ರಹಾರವೂ ಹೌದು. ಇದೇ ಮೊದಲ ಬಾರಿಗೆ ಸರಕಾರದ ಲೆಕ್ಕಾಚಾರ, ಸಂಸದೀಯ ತಂತ್ರಗಾರಿಕೆ ಎಲ್ಲವೂ ಕೈಕೊಟ್ಟಿವೆ. ದೂರ ಸಂವೇದನಾ ನೆಲೆಯಲ್ಲಿ ಸರಕಾರಕ್ಕೆ ಇಂಥದೊಂದು ಹಿನ್ನಡೆ ಆಗಬಹುದು ಎಂಬುದನ್ನು ಕೂಡ ಮೋದಿ-ಅಮಿತ್ ಶಾ ಜೋಡಿಯ ಚಾಣಕ್ಯ ತಂತ್ರಗಾರಿಕೆಗೆ ಹೊಳೆಯದೆ ಹೋದದ್ದು ಸೋಜಿಗವೇ ಸರಿ.

ಲೋಕಸಭೆ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ 2011 ಜನಗಣತಿ ಆಧಾರದ ಮೇಲೆ ಮಹಿಳೆಯರಿಗೆ ಮೂರನೆಯ ಒಂದರಷ್ಟು ಅಂದರೆ, ಶೇ. 33ರಷ್ಟು ಸ್ಥಾನಗಳನ್ನು ಕಲ್ಪಿಸುವ ಮಹದುದ್ದೇಶದ ಸಂವಿಧಾನ (131ನೆಯ ತಿದ್ದುಪಡಿ) 2026 ವಿಧೇಯಕ ಪ್ರಜಾಸದನದಲ್ಲಿ ದಯನೀಯವಾಗಿ ಸೋಲು ಅನುಭವಿಸುವುದರೊಂದಿಗೆ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ನೀಡುವ ಪ್ರಸ್ತಾವ ಮೊದಲು ಎಲ್ಲಿತ್ತೋ ಮತ್ತೆ ಅಲ್ಲಿಯೇ ಉಳಿದುಕೊಂಡಂತಾಗಿದೆ. ಈ ವಿಧೇಯಕದ ಅಂಗೀಕಾರಕ್ಕೆ ಲೋಕಸಭೆಯಲ್ಲಿ ಮೂರನೆಯ ಎರಡರಷ್ಟು ಬಹುಮತ ಪಡೆಯುವಲ್ಲಿ ಸರಕಾರ ವಿಫಲವಾದ್ದರಿಂದ ಮೋದಿ ಸರಕಾರಕ್ಕೆ ಮುಖಭಂಗವಾಗಿರುವುದಂತೂ ನಿಜ. ಇಂಥ ಮಹತ್ತ್ವದ ವಿಧೇಯಕಕ್ಕೆ ವಿರೋಧಪಕ್ಷಗಳ ಬೆಂಬಲ ತೀರಾ ಅಗತ್ಯವಾದದ್ದು. ಈ ವಿಧೇಯಕ 298-230 ಮತಗಳಿಂದ ಸೋಲು ಕಂಡಿದೆ. ವಿಧೇಯಕ ಅಂಗೀಕಾರವಾಗಲು ಸದನದಲ್ಲಿ ಹಾಜರಿದ್ದ 528 ಸದಸ್ಯರ ಪೈಕಿ 352 ಸದಸ್ಯರ ಬೆಂಬಲ ಅಗತ್ಯವಿತ್ತು. ಅಂಗೀಕಾರಕ್ಕೆ 54 ಮತಗಳ ಕೊರತೆ ಕಂಡುಬಂದಿರುವುದು ವಿರೋಧಪಕ್ಷಗಳೆಲ್ಲವೂ ಒಂದಾಗಿ ಮತ ಚಲಾಯಿಸಿರುವ ಪರಿಣಾಮವಾಗಿದೆ. ಪ್ರಜಾಪ್ರಭುತ್ವದಲ್ಲಿ ಶಾಸನ ಸಭೆಗಳಲ್ಲಿ ಸಂಖ್ಯಾಬಲವೇ ಏಕೈಕ ಬಹುಮುಖ್ಯ ಬಲವಾಗಿದೆ ಎಂಬುದನ್ನು ಅರಿತುಕೊಂಡಿದ್ದರೂ ಬಿಜೆಪಿ ಮತ್ತು ಎನ್.ಡಿ.ಎ. ನೆಲಕಚ್ಚಿಕೊಳ್ಳುವ ಪ್ರವೃತ್ತಿಯನ್ನು ಪ್ರದರ್ಶಿಸಿರುವುದು ಆಶ್ಚರ್ಯಕರವಾಗಿದೆ.

ಈ ಸಂಸದೀಯ ಸೋಲಿನಿಂದಾಗಿ ಇದಕ್ಕೆ ಸಂಬಂಧಿಸಿದ ಇನ್ನೆರಡು ಸಾಮಾನ್ಯ ವಿಧೇಯಕಗಳು-ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ, 2026ರ ಮತ್ತು ಕ್ಷೇತ್ರ ಪುನರ್ವಿಂಗಡಣಾ ಮಸೂದೆ, 2026-ಇವುಗಳನ್ನು ಸರಕಾರ ಹಿಂತೆಗೆದುಕೊಳ್ಳುವುದು ಅನಿವಾರ್ಯವಾಯಿತು. ಈ ಎರಡು ಸಾಮಾನ್ಯ ವಿಧೇಯಕಗಳು ಮೂಲ ಸಂವಿಧಾನ ತಿದ್ದುಪಡಿ ಮಸೂದೆಗೆ ನೇರವಾಗಿ ಸಂಬಂಧಿಸಿದವುಗಳಾಗಿದ್ದುದರಿಂದ ಅವುಗಳನ್ನು ಮಂಡಿಸುವುದರಲ್ಲಿ ಅರ್ಥವೇ ಇರಲಿಲ್ಲ.

ಆಡಳಿತಾರೂಢ ಎನ್.ಡಿ.ಎ. ಮೂರನೆಯ ಎರಡರಷ್ಟು ಬಹುಮತ ಇಲ್ಲ ಎಂಬುದು ಸ್ಫಟಿಕದಷ್ಟು ಸ್ಪಷ್ಟವಾಗಿದ್ದರೂ ಅದಾವ ಧೈರ್ಯದ ಮೇಲೆ ಸರಕಾರ ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆಗೆ ಮುಂದಾಯಿತೆಂಬುದು ನಿಗೂಢವಾಗಿಯೇ ಉಳಿದಿದೆ. ಲಾಗಾಯ್ತಿನಿಂದಲೂ, ಅಂದರೆ 2014ರಲ್ಲಿ ಮೋದಿ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಕಾಂಗ್ರೆಸ್, ವಾಮಪಂಥೀಯ ಪಕ್ಷಗಳು ಮತ್ತು ಅವುಗಳ ಸೆಕ್ಯುಲರ್ ಮಿತ್ರಪಕ್ಷಗಳು ಮೋದಿ ಸರಕಾರವನ್ನು ಪ್ರತಿ ಹಂತದಲ್ಲಿಯೂ ಪ್ರತಿರೋಧಿಸುತ್ತಲೇ ಬಂದಿದ್ದವು. ಸತತ ಮೂರು ಚುನಾವಣೆಗಳಲ್ಲಿ ಬಿಜೆಪಿ ಜಯಸಾಧಿಸಿ ಮೋದಿಯವರು ಅಧಿಕಾರದಲ್ಲಿ ಮುಂದುವರಿದ ಮೇಲಂತೂ ಸರಕಾರದ ವಿರುದ್ಧ ಪ್ರತಿಭಟನೆ ಮತ್ತು ಮೋದಿ ನಿಂದನೆ ಅವುಗಳ ಕಾಯಕವೇ ಆಗಿತ್ತು. ಸಂಸತ್ತಿನ ಒಳಗಡೆ ಸರಕಾರವನ್ನು ಹಣಿಯಲು ಪ್ರತಿಪಕ್ಷಗಳು ಕಾಯುತ್ತಿರುವಾಗಲೇ ಅವುಗಳಿಗೆ ಪ್ರಸ್ತುತ ಸಂವಿಧಾನ ತಿದ್ದುಪಡಿ ಮಸೂದೆ ಅಯಾಚಿತ ಅಸ್ತ್ರವಾಗಿ ದೊರೆಯಿತು. ಮಸೂದೆಯ ವಿಷಯ ಎಷ್ಟೇ ಮಹತ್ತ್ವದ್ದಾಗಿರಲಿ, ಅದರ ಹಿಂದಿನ ಉದ್ದೇಶ ಎಷ್ಟೇ ಉದಾತ್ತವಾಗಿರಲಿ ಸರಕಾರವನ್ನು ಪೇಚಿಗೆ ಸಿಲುಕಿಸುವ ಅವಕಾಶವನ್ನು ಅವು ಕೈಜಾರಿ ಹೋಗದಂತೆ ನೋಡಿಕೊಂಡವು. ಅಂತೆಯೇ ಮಸೂದೆ ನಿರ್ಣಾಯಕ ಮತ್ತು ಸಮಗ್ರ ಸೋಲನ್ನು ಅನುಭವಿಸಿತು. ಮಹಿಳಾ ಮೀಸಲಾತಿಯಂಥ ಅತ್ಯಂತ ಮಹತ್ತ್ವದ ಮಸೂದೆಯನ್ನು ಸೋಲಿಸಲು ಕೂಡ ವಿರೋಧಪಕ್ಷಗಳು ಹಿಂದೆ-ಮುಂದೆ ನೋಡಲಿಲ್ಲ. ಲೋಕಸಭಾ ಚುನಾವಣೆಯನ್ನು ಗೆದ್ದಷ್ಟೇ ಖುಷಿಯನ್ನು ಪ್ರತಿಪಕ್ಷಗಳು ಪ್ರದರ್ಶಿಸಿದವು.

ವಿಪಕ್ಷದ ವರ್ತನೆಗೆ ಕಾರಣ...

ಹಾಗಾದರೆ, ವಿರೋಧಪಕ್ಷಗಳ ಈ ವರ್ತನೆಗೆ ಕಾರಣವೇನು? ವಾಸ್ತವದಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬರುವುದನ್ನು ವಿಫಲಗೊಳಿಸಬೇಕೆಂಬ ಉದ್ದೇಶ ಅವುಗಳಿಗೆ ಇದ್ದಿರಲಾರದು. ಕಾರಣ 2023ರಲ್ಲಿಯೇ ಈ ಸಂಬಂಧದ 'ನಾರೀಶಕ್ತಿ ಅಭಿನಂದನ' ವಿಧೇಯಕವನ್ನು ಸಂಸತ್ತು ಅಂಗೀಕರಿಸಿತ್ತು. ಆ ಸಮಯದ ತಿಳಿವಳಿಕೆ ಪ್ರಕಾರ 2026 ಅನಂತರ ನಡೆಯುವ ರಾಷ್ಟ್ರೀಯ ಜನಗಣತಿಯ ಅನಂತರ ಬರುವ ಲೋಕಸಭಾ ಚುನಾವಣೆಯಲ್ಲಿ, ಅಂದರೆ 2034ರ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ ಕನಸು ನನಸಾಗಿಸುವ ಉದ್ದೇಶ ಇತ್ತು. ಆದರೆ ಇದ್ದಕ್ಕಿದ್ದಂತೆ ಮೋದಿ ಸರಕಾರ ಅಷ್ಟು ದೂರ ಕಾಯದೆ 2011ರ ಜನಗಣತಿ ಆಧಾರದ ಮೇಲೆ 2029ರ ಮಹಾಚುನಾವಣೆಯಲ್ಲಿಯೇ ಮೀಸಲಾತಿಯನ್ನು ಜಾರಿಗೆ ಕೊಡಬೇಕೆಂದು ಬಯಸಿತು. ಅದಕ್ಕಾಗಿ ಅತಿ ಮಹತ್ತ್ವದ ಲೋಕಸಭಾ ಸ್ಥಾನಗಳ ಪುನರ್ವಿಂಗಡಣಾ ಮಸೂದೆಯನ್ನು ಸಿದ್ಧಗೊಳಿಸಿತು. ಈ ವಿಧೇಯಕದ ಪ್ರಕಾರ ಕ್ಷೇತ್ರ ಪುನರ್ವಿಂಗಡಣಾ ಕಾರ್ಯವನ್ನು ಕೈಗೊಳ್ಳಲು ಪುನರ್ವಿಂಗಡಣಾ ಆಯೋಗವನ್ನು ರಚಿಸಬೇಕಾಗಿತ್ತು. ಲೋಕಸಭಾ ಸ್ಥಾನಗಳನ್ನು ಈಗಿರುವ 543ರಿಂದ 816ಕ್ಕೆ ಹೆಚ್ಚಿಸುವ ಉದ್ದೇಶವೂ ಇತ್ತು. ಹೀಗೆ ಹೆಚ್ಚಿಸಲಾದ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡುವ ಆಲೋಚನೆ ಸರಕಾರದ್ದಾಗಿತ್ತು.

ಪ್ರತಿಪಕ್ಷಗಳು ಸರಕಾರದ, ಬಿಜೆಪಿಯ 'ರಾಜಕೀಯ ದುರುದ್ದೇಶ'ವನ್ನು ಕ್ಷೇತ್ರ ಪುನರ್ವಿಂಗಡಣಾ ಆಯೋಗದ ಹಿಂದೆ ಕಾಣತೊಡಗಿದ್ದವು. ಇಂಥ ಮಹತ್ತ್ವದ ವಿಷಯವನ್ನು ಪೂರ್ವಭಾವಿಯಾಗಿ ಚರ್ಚಿಸದೆ ನೇರವಾಗಿ ಮಸೂದೆಯ ಮೂಲಕ ಶಾಸನ ಸಭೆಗೆ ತಂದ ಸರಕಾರದ ವೈಖರಿ, ಪ್ರತಿಪಕ್ಷಗಳಿಗೆ ಸರಿ ಬರಲಿಲ್ಲ. ಇದಲ್ಲದೆ ಲೋಕಸಭಾ ಸ್ಥಾನಗಳನ್ನು ಹೆಚ್ಚಿಸುವ ಪ್ರಕ್ರಿಯೆಯಲ್ಲಿ ದಕ್ಷಿಣಭಾರತದ ರಾಜ್ಯಗಳ ಸ್ಥಾನಗಳ ಸಂಖ್ಯೆಯಲ್ಲಿ ಕಡಿತವಾಗಿ ದಕ್ಷಿಣ ಭಾರತೀಯರಿಗೆ ಅನ್ಯಾಯವಾಗುವುದೆಂಬ ಕೂಗನ್ನು ತಮಿಳುನಾಡು, ಕರ್ನಾಟಕ, ಕೇರಳ, ತೆಲಂಗಾಣ ಎಬ್ಬಿಸಿದ್ದವು. ಇದಲ್ಲದೆ ಕ್ಷೇತ್ರ ಪುನರ್ವಿಂಗಡಣೆಯನ್ನು ಬಿಜೆಪಿ ತನ್ನ ಅನುಕೂಲಕ್ಕೆ ತಕ್ಕಂತೆ ಕೈಗೊಳ್ಳುವುದೆಂಬ ದಟ್ಟ ಅನುಮಾನ ಪ್ರತಿಪಕ್ಷಗಳಿಗೆ! ಮೋದಿಯವರು ಯಾವುದೇ ರಾಜ್ಯಕ್ಕೆ ಯಾವುದೇ ರೀತಿಯ ಅನ್ಯಾಯ ಆಗಲಾರದೆಂದು ಪದೇ ಪದೇ ನೀಡಿದ ಭರವಸೆ ಮತ್ತು ದಕ್ಷಿಣದ ಪ್ರತಿ ರಾಜ್ಯದಲ್ಲಿಯೂ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಈಗಿರುವ ಶೇ. 50ರಷ್ಟು ಹೆಚ್ಚಿಸಲಾಗುವುದೆಂಬ ಅಂಶವನ್ನು ಮಸೂದೆಯಲ್ಲಿಯೇ ಅಳವಡಿಸಲಾಗುವುದೆಂಬ ಗೃಹ ಸಚಿವ ಅಮಿತ್ ಶಾ ಅವರ ಬದ್ಧತೆಯನ್ನು ಕೂಡ ಪ್ರತಿಪಕ್ಷಗಳು ಒಪ್ಪಲು ತಯಾರಿರಲಿಲ್ಲ. ಪರಿಣಾಮ, ಮಸೂದೆಗೆ ಸೋಲುಂಟಾಗಿ ಮೋದಿ, ಶಾ ಕೈ ಕೈ ಹಿಸುಕಿಕೊಳ್ಳುವಂತಾಯಿತು.

ಮೋದಿ ಸರಕಾರ ಪ್ರಸ್ತುತ ವಿಷಯದಲ್ಲಿ ವಿರೋಧ ಪಕ್ಷಗಳನ್ನು ಅಷ್ಟಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂದೆನಿಸುತ್ತದೆ. ಕ್ಷೇತ್ರ ಪುನರ್ವಿಂಗಡಣೆಗೆ ಸಂಬಂಧಿಸಿದಂತೆ ಸರ್ವ ಪಕ್ಷಗಳ ಸಭೆ ಕರೆದು ಅವುಗಳ ಮನವೊಲಿಸುವ ಪ್ರಯತ್ನ ಮಾಡಬಹುದಾಗಿತ್ತು. ಮಹಿಳಾ ಮೀಸಲಾತಿಯನ್ನು ಕೇವಲ ಭಾವನಾತ್ಮಕ ವಿಷಯವನ್ನಾಗಿಸಿ ಅದನ್ನು ಪ್ರತಿಪಕ್ಷಗಳು ಒಪ್ಪಿಕೊಳ್ಳುವಂತೆ ಮಾಡುವ ಒತ್ತಡದ ತಂತ್ರಗಾರಿಕೆ ಫಲಿಸಲಿಲ್ಲ. ಪ್ರತಿಪಕ್ಷಗಳ ಈ ನಿಲುವು ಮಹಿಳಾ ವಿರೋಧಿ ಎಂದೂ, ಇದಕ್ಕಾಗಿ ನಾರೀಶಕ್ತಿ ವಿರೋಧ ಪಕ್ಷಗಳಿಗೆ ಪಾಠ ಕಲಿಸದೆ ಇರುವುದಿಲ್ಲ ಎಂಬ ಮೋದಿ-ಶಾ ಅವರ ರಾಜಕೀಯ ದೂಷಣೆ, ವೈಫಲ್ಯವನ್ನು ಮರೆಮಾಚುವ ಉದ್ದೇಶದಿಂದ ಕೂಡಿರಬಹುದು. ಮೋದಿ ಅವರು ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಪಕ್ಷಗಳ ಈ ಕ್ರಮ 'ಭ್ರೂಣ ಹತ್ಯೆ'ಗೆ ಸಮ ಎಂದಿದ್ದಾರೆ.

ಈ ಗದ್ದಲದಲ್ಲಿ ಬಲಿಯಾದದ್ದು ಮಹಿಳಾ ಮೀಸಲಾತಿ. 1996ರಿಂದಲೂ ಪ್ರಯತ್ನ ಮಾಡಲಾಗುತ್ತಿದೆ. ಈ ಮಸೂದೆ ಸಾಕಾರಗೊಳ್ಳುವುದು ಯಾವಾಗ? 2029 ಅಥವಾ 2034? ಪ್ರಾಯಃ ಕಾಲವೇ ಉತ್ತರ ಹೇಳಬೇಕು! ■

ಹಾಸ್ಯ

❑ ವಸಂತ ಕಲ್‌ಬಾಗಲ್

ಕೊಟ್ಟ ಕಿವಿ ಕರೆದ್ಹಾಂಗ!

ಸಂಗೀತ ಕಛೇರಿಗಳಲ್ಲಿ 'ತದರಿನನ...' ಎಂದಾಗ ವ್ಯಾಕರಣ ಅರ್ಥವಾಗದಿದ್ದರೂ ತೂಕಡಿಸುವವರನ್ನು ನೋಡುವುದೇ ಒಂದು ಹವ್ಯಾಸವನ್ನಾಗಿಸಿ ಕಾಲ ಕಳೆಯಬಹುದು!

ಗಣೇಶ, ಶಿವರಾತ್ರಿ, ರಾಮೋತ್ಸವ, ಯುಗಾದಿ ಹಬ್ಬಗಳಲ್ಲಿ ವಾರಗಟ್ಟಲೆ ಸಂಗೀತ ಕಾರ್ಯಕ್ರಮಗಳ ಸರಣಿ ಶುರುವಾದಾಗಲೆಲ್ಲಾ ಸಂಗೀತ ಕಛೇರಿಗಳನ್ನು ಕೇಳುವುದರ ಜೊತೆಗೆ ಅಲ್ಲಿಗೆ ಬರುವ ಸಭಿಕರನ್ನು ನೋಡುವುದೂ ಒಂದು ಒಳ್ಳೆಯ ಕಾಲಹರಣ. ಗಂಡಸರು ಇದಕ್ಕಾಗಿಯೇ ಒಳಗೆ ಎತ್ತಿಟ್ಟ ಗರಿಮುರಿ ಕುರ್ತಗಳನ್ನು ಹೊರತೆಗೆಯುವರು. ಹೆಂಗಸರು ರಂಗುರಂಗಿನ ಸೀರೆಗಳನ್ನು ಹೊಸ ವಿನ್ಯಾಸದ ರವಿಕೆಗಳೊಂದಿಗೆ ಉಟ್ಟು ಮಲ್ಲಿಗೆ ಮುಡಿದು ಬಣ್ಣದ ಕೈಚೀಲ ಹಿಡಿದು ಆಗಮಿಸುವರು.

ಬರುವವರೆಲ್ಲರೂ ಸಾಧಾರಣವಾಗಿ ಇಷ್ಟೋ ಅಷ್ಟೋ ಸಂಗೀತ ತಿಳಿದವರೇ ಇರುತ್ತಾರೆ. ಚಿಕ್ಕಂದಿನಲ್ಲಿ ತಾವು ಕಲಿಯಲು ಆಗದೆ ತಮ್ಮ ಮಕ್ಕಳ ಪ್ರಾಣ ತೆಗೆಯುವವರೂ ಇರುತ್ತಾರೆ. ಇಂದಿನ ಹಿರಿಯರಿಗೆ ಎಲ್ಲಾ ರಾಗಗಳ ಹೆಸರುಗಳು ತಿಳಿಯಬೇಕೆಂದೇನಿಲ್ಲ, ರಾಗಾಲಾಪನೆಯು 'ನಗುಮೋಮು ಗನಲೇನಿ' ಕೀರ್ತನೆಯ ತರಹ ಇದೆ ಎಂದರೆ ಸಾಕು, ಇವರೆಲ್ಲಾ 'ಗೂಗಲ್ ಅನುರಾಗಿಗಳು'; ಶೋಧಕ ರಸಿಕರು. ತತ್ ಕ್ಷಣ ಮೊಬೈಲ್ ಫೋನಿನಲ್ಲಿ ನೋಡಿ 'ಅಭೇರಿ' ರಾಗ ಎಂದು ಜಯಭೇರಿ ಬಾರಿಸುತ್ತಾ ಪಕ್ಕದವರಿಗೆ ತಮ್ಮ 'ನೆಟ್ –ಜ್ಞಾನ ' ಪ್ರಕಟಿಸುತ್ತಾರೆ.

ಇನ್ನು ಕೆಲವರು ಡಿಸೆಂಬರ್ ತಿಂಗಳ ಮದರಾಸಿನ ಮಾರ್ಘಳಿ ಮಾಸದ ಸಂಗೀತ ಕಛೇರಿಗಳನ್ನು ಕೇಳಿಕೊಂಡು ಬಂದು ತಮ್ಮ ಅಗೋಚರ ಕೋಡುಗಳನ್ನು ಆಗಾಗ ಸರಿಪಡಿಸಿಕೊಂಡು, ಸಂಗೀತದ ಪ್ರವಚನ – ಪ್ರದರ್ಶನಗಳ ಬಗ್ಗೆ ಅದು ಇದು ಹೇಳಿ ತಮ್ಮ ಪಾಂಡಿತ್ಯ ತೋರುವವರು; ಜೊತೆಗೆ ಹೊರನಾಡಿನಿಂದ ಬರುವ ಸಂಗೀತ ಕಲಾವಿದರನ್ನು ಸತ್ಕರಿಸುವವರು.

ಸಾಮಾನ್ಯವಾಗಿ ಸಂಗೀತ ಕಛೇರಿಗಳಲ್ಲಿ ಜಗಮಗ ಬೆಳಕಿನ ವೇದಿಕೆಯ ಮೇಲೆ ಕಲಾವಿದರು ಕುಳಿತಿದ್ದರೆ, ಸಭಿಕರು, ಕತ್ತಲೆಯ ಒಳ ಸಭಾಂಗಣದಲ್ಲಿ ಆಸೀನರಾಗಿರುವರು. ಇವರಲ್ಲಿ ಸಂಗೀತದಲ್ಲೇ ತೇಲಿ ಮುಳುಗಿ ಆಳಕ್ಕೆ ಇಳಿದವರು ಮೊದಲ ಸಾಲಿನಲ್ಲಿ ಕೂರುವುದು ಪರಿಪಾಠ. ತಲೆ ಆಡಿಸುತ್ತಾ, ತಾಳವನ್ನು ಎರಡೂ ಕೈಯಲ್ಲಿ ಚಪ್ಪಾಳೆಯಂತೆ ಹಾಕಿ ವೇದಿಕೆ ಮೇಲೆ ಇರುವವರಿಗೆ ಹೆಚ್ಚು ಹೆಚ್ಚು ಉತ್ತೇಜನ ಕೊಡುವುದು ಇವರ ಶ್ರೋತೃ ಧರ್ಮ. ವೇದಿಕೆಯ ಬಲಕ್ಕೆ, ಆಮಂತ್ರಿತರು, ಮುಖ್ಯ ಅತಿಥಿಗಳು, ಸಮಾಜದ ಪ್ರತಿಷ್ಠಿತರು, ಮೊದಲ ಎರಡು ಸಾಲುಗಳಲ್ಲಿ ಕುಳಿತಿರುತ್ತಾರೆ. ಎಡಭಾಗದಲ್ಲಿ ಸಾಮಾನ್ಯವಾಗಿ ಕೂರುವವರು ಕಲಾವಿದರ ಬಳಗದವರು, ಸಂಘದ ಸದಸ್ಯರು, ಸುತ್ತು ಕೆಲಸ ಮಾಡಲು ಟೊಂಕ ಕಟ್ಟಿ ನಿಂತ ನಿರಪೇಕ್ಷಿತರು, ಫೋಟೋಗ್ರಾಫರ್, ಪತ್ರಿಕೆಯವರು ಹೀಗೇ.

ಸಂಗೀತ ಕಛೇರಿ ಆರಂಭವಾದಾಗಲೇ ಈ ಕೆಲಸದ ಸಿಬ್ಬಂದಿಗೆ ಸ್ವಲ್ಪ ವಿರಾಮ ಎನ್ನಬಹುದು. ಆಮಂತ್ರಿತ ಕಲಾವಿದ ಅತಿಥಿಗಳನ್ನು ಹಿಂದಿನ ದಿನ ಕರೆದುಕೊಂಡುಬಂದು, ಹೊಟೇಲಿಗೆ ಬಿಟ್ಟುಬಂದು ರಾತ್ರಿ ತಡವಾಗಿ ಮಲಗಬೇಕಾಗಬಹುದು; ಬೆಳಿಗ್ಗೆ ಬೇಗ ಎದ್ದು ಧಾವಂತದಿಂದ ಬಂದು ಅತಿಥಿಗಳಿಗೆ ಗಡದ್ದಾದ ಉಪಾಹಾರ ಕೊಡಿಸುವ, ಉಪಚಾರಗಳ ಮೇಲುಸ್ತುವಾರಿ ವಹಿಸಿಕೊಂಡ ಪ್ರಮುಖರ ಪೈಕಿ ಪಟ್ಟ ಶಿಷ್ಯರೂ ಇರಬಹುದು.

ಎಡಭಾಗದ ಮೊದಲ ಸಾಲಿನಲ್ಲಿ ಕಾರ್ಯಕರ್ತ ತಾನು ಕೂರಲು ಆರಿಸಿಕೊಳ್ಳುವ ಕುರ್ಚಿ ಬಹಳ ಮುಖ್ಯ. ಏಕೆ ಎಂಬುದು ನಿಮಗೆ ಆಮೇಲೆ ತಿಳಿಯುತ್ತದೆ. ಮೊದಲಿಗೆ ಮೇಲೊಂದು ಹಿತವಾಗಿ ತಿರುಗುವ ಫ್ಯಾನ್ ಇರುವೆಡೆ ಹೋಗಿ ಅಕ್ಕಪಕ್ಕ ಎರಡೂ ಬದಿಯಲ್ಲಿ ಯಾರೂ ಕುಳಿತಿರದ ಕುರ್ಚಿಯನ್ನು ಆರಿಸಿಕೊಂಡು, ಅದರ ಮೇಲೆ ತಮ್ಮ ಬ್ಯಾಗು, ಶಾಲು ಇಟ್ಟು ಬರುವುದು. ಆಗಲೇ ಹೇಳಿದಂತೆ, ಪಾಪ ಇವರಿಗೆ ತಮ್ಮ ಜವಾಬ್ದಾರಿಗಳನ್ನು ತಾತ್ಕಾಲಿಕವಾಗಿ ಹೆಗಲಿನಿಂದ ಜಾರಿಸಿ ಇಳಿಸಿಕೊಳ್ಳುವುದೇ ಕಲಾವಿದರು ವೇದಿಕೆಯ ಮೇಲೆ ಕುಳಿತು ಸಂಗೀತ ಆರಂಭಿಸಿದಾಗ.

ನಿರಾಳವಾಗಿ ಉಸಿರು ಬಿಟ್ಟು ಮೆಲ್ಲನೆ 'ಅಬ್ಬಾ' ಎನ್ನುತ್ತಾ ಸ್ವಲ್ಪವೇ ಬೆನ್ನನ್ನು ಮುರಿದು ಆಸನಕ್ಕೆ ಒರಗಿ ಇನ್ನೇನು ವಿರಮಿಸಿಕೊಳ್ಳಬೇಕು ಎನ್ನುವ ಸನ್ನಾಹದಲ್ಲಿ ಇರುವಷ್ಟರಲ್ಲಿ ವೇದಿಕೆಯ ಮೇಲಿನ ಕಲಾವಿದರಿಗೆ ಧ್ವನಿವರ್ಧಕದಲ್ಲಿ ಅಸಮಾಧಾನವಾಗಿ ಇವರತ್ತಲೇ ನೋಡುತ್ತಾ ಸಹಾಯ ಕೇಳಿಬಿಡುತ್ತಾರೆ. ಹಾಗಾಗಿ ಮೊದಲ ಕಾಲು ಗಂಟೆ ಸ್ವಲ್ಪ ಅನಿಶ್ಚಿತವಾಗಿಯೇ ಇರುವುದರಿಂದ, ಸಿಬ್ಬಂದಿಗಳಿಗೆ ನೆಮ್ಮದಿ ಇರುವುದಿಲ್ಲ. ಎಲ್ಲವೂ ಒಂದು ಹದಕ್ಕೆ ಬಂದು ಮೊದಲ ಸುತ್ತಿನ ಚಪ್ಪಾಳೆಯನ್ನು ಸಭಿಕರಿಂದ ಗಿಟ್ಟಿಸಿಕೊಂಡ ಕಲಾವಿದರು, ತಮ್ಮ ರಾಗಾಲಾಪನೆಯಲ್ಲಿ ಮಗ್ನವಾಗುವ ಸುಸಮಯ ಬಂದೇಬಿಡುತ್ತದೆ. ನಮ್ಮ ಕಾರ್ಯಕರ್ತರಿಗೆ ಈಗಲೇ ಸಿಗುವುದು 'ಬಿಗ್ ಬ್ರೇಕ್!' ಶ್ರೋತೃಗಳೆಲ್ಲಾ ಮಧುರ ಸಂಗೀತದ ಅಲೆಗಳ ರಸದೌತಣವನ್ನು ಮೆಲ್ಲುತ್ತಿದ್ದಂತೆಯೇ ನಮ್ಮ ಕಾರ್ಯಕರ್ತರ ಮೈ ಹಗುರವಾಗುವ ಸಮಯ. ಕಾಲುಗಳು ನಿಧಾನವಾಗಿ ಹೊರಗೆ ಜಾರಿಕೊಳ್ಳುತ್ತವೆ. ಬಿರುಸಿನ ಭುಜಗಳು ಸಡಿಲಗೊಳ್ಳುತ್ತಾ ಧರಾಭಿಮುಖವಾಗುತ್ತವೆ. ತಲೆ ಸ್ವಲ್ಪವೇ ಬಾಗಿ, ಗಲ್ಲ ಕತ್ತನ್ನು ತಗಲುತ್ತಾ, ರಾಗದ ಭಾವಕ್ಕೆ ಲೇಸಾಗಿ ತೂಗುತ್ತದೆ. ಆಹಾ,

ಎಂಥ ಅಪರೂಪದ ಆಲಾಪನಾ ಪ್ರಯೋಗಗಳು ಎಂಬ ಅರ್ಥ ಬರುವಂತೆ ತಲೆ ಎಡದಿಂದ ಬಲಕ್ಕೆ ಧಾರಾಳವಾಗಿ ತೂಗಿದಾಗಲೇ ತಿಳಿಯುವುದು ತಾನು ಸ್ವಲ್ಪ ಜೋರಾಗಿಯೇ ತೂಕಡಿಸಿಬಿಟ್ಟೆ ಎಂದು!!

ತತ್‌ಕ್ಷಣ ಬಲಗೈಯನ್ನು ಮೇಲಕ್ಕೆ ಎತ್ತಿ ಆಲಾಪನೆಯಲ್ಲಿ ಬಂದ ಬಿರ್ಕಗಳಿಗೆ ಒಂದು 'ವಾರೆ ವಾಹ್' ಉದ್ಗಾರ ಕೊಟ್ಟು ಮತ್ತೆ ತಲೆ, ಕತ್ತು ಎರಡನ್ನೂ ಸಂಬಾಳಿಸಿ, ದೇಹವನ್ನು ಸ್ವಸ್ಥಾನಕ್ಕೆ ಇರಿಸಿ ಸಂಗೀತಾಸ್ವಾದನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.

ಇದ್ದಕ್ಕಿದ್ದಂತೆ ಇಡೀ ದೇಹವೇ ಎಡಕ್ಕೆ ವಾಲಿಕೊಂಡಾಗ, ನಮ್ಮ ರಸಿಕ ಧಡಕ್ಕನೆ ನೆಟ್ಟಗಾಗಿ, ರಾಗಾಲಾಪನೆ ಮುಗಿದು ಕೀರ್ತನೆಯನ್ನು ಹಾಡುತ್ತಿದ್ದರೂ ಕೈಯನ್ನು ಎತ್ತಿ ನಾಲ್ಕು ಬಾರಿ ತಾಳ ಬಡಿದು ಹಾಗೇ ಸಪ್ಪಗಾಗಿ, ಮತ್ತೆ ಕಣ್ಣು ಮುಚ್ಚಿ ಸ್ವಸ್ಥಾನಕ್ಕೆ ಬರುವುದೂ ಉಂಟು. ಸ್ವಲ್ಪ ಕಷ್ಟದ ಸ್ಥಿತಿಯೇ ಈಗ ಎಂದು ಅರಿತ ಈ ರಸಿಕ, ತನ್ನ ಎರಡೂ ಕೈಗಳನ್ನು ಒಂದಕ್ಕೊಂದು ಸಾಥ್ ನೀಡುವಂತೆ ಕತ್ತಿಗೆ ಸಹಾಯ ಹಸ್ತ ನೀಡಿ ಗ್ರೀಕ್ ಶಿಲೆ ಥಿಂಕರ್‌ನಂತೆ ಹೊಸ ಭಂಗಿಯಲ್ಲಿ ಕೂರುತ್ತಾ ಸಂಗೀತದ ಆಸ್ವಾದನೆ ತಮ್ಮದೇ ರೀತಿಯಲ್ಲಿ ಮುಂದುವರಿಸುತ್ತಾರೆ.

ಮುಂದೆ, ಸ್ವರಪ್ರಸ್ತಾರಕ್ಕೆ ಸಂಪೂರ್ಣ ಒಪ್ಪಿಗೆ ಇರುವಂತೆ ಕತ್ತು, ತಲೆಯನ್ನು ಮೇಲೆ ಕೆಳಗೆ ಬಾಗಿಸಿ ಎತ್ತಿ ಆಯ ತಪ್ಪಿದಂತಾದಾಗ ಕಾಲುಗಳನ್ನು ಕ್ರಮಬದ್ಧವಾಗಿ ತಟ್ಟುತ್ತಾ ತನ್ನ ಅಭಿವ್ಯಕ್ತಿಯನ್ನು ಪ್ರದರ್ಶಿಸುತ್ತಾ ಹಾಗೆಯೇ ಪುಂಗಿಯ ನಾದಕ್ಕೆ ತಲೆದೂಗಿ ಮತ್ತೆ ಪೆಟ್ಟಿಗೆಯಲ್ಲಿಟ್ಟ ಹಾವಿನಂತೆ ತೆಪ್ಪಗಾಗಿಬಿಡುವ ಸ್ಥಿತಿ ಇವರಿಗೆ ಉಂಟಾಗಿಬಿಡುತ್ತದೆ.

ಪಕ್ಕದ ಕುರ್ಚಿ ಖಾಲಿ ಇದ್ದ ಕಾರಣ ಒಂದು ಕೈಯನ್ನು ಅದರ ಹೆಗಲ ಮೇಲೆ ಹಾಕಿ ಸ್ವಲ್ಪ ತಲೆಗೆ ಸಮತೋಲನ ತರಿಸುವುದು, ಮುಂದಿನ ಅಧ್ಯಾಯ. ಹಾಡು ನಿಂತಾಗ ಧಡಕ್ಕನೆದ್ದು ಜೋರು ತಾಳ ಹಾಕುವುದು; ತಾಳವನ್ನು ಚಪ್ಪಾಳೆಗೆ ಬದಲಿಸಿ ಸಹವಾದ್ಯದವರಿಗೆ 'ಭಲೇ ಭಲೇ!' ಎಂದು ದೊಡ್ಡ ದನಿಯಲ್ಲಿ ಪ್ರೋತ್ಸಾಹ ಕೊಟ್ಟು ಆಡಂಬರದಿಂದ ನಗುತ್ತಾ ಮತ್ತೆ ಗಾಳಿ ಇಲ್ಲದ ಬೆಲೂನಿನಂತೆ ಒರಗಿ ಕೂರುವುದು; ಅನಾವಶ್ಯಕವಾಗಿ ಪಕ್ಕದಲ್ಲಿ ಇರುವ ಮಗುವನ್ನು ಬಾಗಿ ಮಾತನಾಡಿಸುವುದು ಹೀಗೇ ಎಲ್ಲವೂ ಅಸಂಬದ್ಧ, ಅನಿವಾರ್ಯ!

ಅಷ್ಟರಲ್ಲಿ ಹಿಂದಿನಿಂದ ಬಂದ ಪರಿಚಯದ ಸಭಿಕ, ತನ್ನ ಬೇಡಿಕೆಯನ್ನು ಕಾರ್ಯಕರ್ತರಿಗೆ ಹೇಳಿದಾಗ, ಕಲಾವಿದರಿಗೆ ಅದನ್ನು ತಿಳಿಪಡಿಸಲು ವೇದಿಕೆಯನ್ನು ಏರಿ ಹಾಗೇ, ತೆರೆಯ ಪಕ್ಕ ಇರುವ ಕೋಣೆಗೆ ಹೋಗಿ, ಮುಖ ತೊಳೆದು ಇಡೀ ಸಭಾಂಗಣದ ಉಸ್ತುವಾರಿ ಮಾಡುವಂತೆ ಒಂದು ಸುತ್ತು ಗಸ್ತು ಹೊಡೆಯುವುದು ಅಗತ್ಯ. 'ಹಸಿವೆಗೆ ಸವಿ ಬೇಡ, ನಿದ್ದೆಗೆ ಹಾಸಿಗೆ ಬೇಡ' ಎಂದು ಗುನುಗುತ್ತಾ, ಕಡೆಯ ಸಾಲಿನಲ್ಲಿ ಬರೋರು ಎಂದು ಓಡುತ್ತಿರುವ ಫ್ಯಾನ್ ಅಡಿಯಲ್ಲಿ ಯಾವ ಅಳುಕೂ ಇಲ್ಲದೆ ಕುರ್ಚಿ ಎಳೆದು ಕೂತು, ಯಾರ ತಂಟೆಯೂ ಇಲ್ಲದೆ ಮಿಕ್ಕ ಸಂಗೀತ ಸಮಯವನ್ನು ತನ್ನೊಂದಿಗೆ ತಾನೇ 'ಅಹಂ ಬ್ರಹ್ಮಾಸ್ಮಿ' ಎನ್ನುತ್ತಾ ಕಳೆಯುವುದು ವಿಧಿಲಿಖಿತ.

ಹೌದಲ್ಲ, ನೀವೂ 'ಕೊಟ್ಟ ಕಿವಿ ಕರೆದ್ಹಾಂಗ' ಒಮ್ಮೆ ಈ ಸಂಗೀತ ಕಛೇರಿಗಳಿಗೆ ಹೋದಾಗ 'ತದರಿನನ...' ಎಂದಾಗ ಅದರ ವ್ಯಾಕರಣ ಅರ್ಥವಾಗದಿದ್ದರೂ ತೂಕಡಿಸುವವರನ್ನು ನೋಡುವುದೇ ಒಂದು ಲಘು ಹವ್ಯಾಸವನ್ನಾಗಿಸಿ ಸುಲಭವಾಗಿ ಕಾಲ ಕಳೆಯಬಹುದು!

■

ಕಥೆ

ಯುದ್ಧ

ವರ್ಷ 1999ರಲ್ಲಿ. ಕಪ್ಪು ಬಿಳುಪು ಟಿ.ವಿ. ಒಳಗಡೆ ವಾರ್ತಾ ಹೇಳುತ್ತಿದ್ದ ವರದಿಗಾರ ಕೋಟು ಹಾಕಿ, ಕೊರಳಿಗೆ ಟೈಯ್ ಕಟ್ಟಿ, ಎಡಗಡೆ ಬೈತಾಲಿ ತಗೆದು ಅಗದೀ 'ಟಿಪ್ ಟಾಪ್ ' ಆಗಿ ಕುಳಿತು ದೇಶದಲ್ಲಿ ನಡೆದ ಕಾರ್ಗಿಲ್ ಯುದ್ಧದ ಕುರಿತು ಭಯಾನಕವಾಗಿ ಹೇಳುತ್ತಿದ್ದ. 'ಇಂದು ಪಾಕ್ ಸೈನ್ಯ ಎಂಟು ಜನ ಭಾರತೀಯ ಯೋಧರನ್ನು ಕೊಂದರು. ಭಾರತೀಯ ಯೋಧರೂ ಪಾಕ್ ಸೈನಿಕರಿಗೆ ತಿರುಗೇಟು ಕೊಟ್ಟರು. ಸತ್ತವರ ಸಂಖ್ಯೆ ಗಣನೀಯವಾಗಿ ಏರುತ್ತಿದೆ. ಯುದ್ಧ ನಿಲ್ಲುವ ಸಾಧ್ಯತೆ ತುಂಬಾ ಕಡಿಮೆ'. ವರದಿಗಾರ ಹೀಗೆ ಹೇಳುತ್ತ ನಡುನಡುವೆ ಬಾಂಬ್ ಸ್ಫೋಟ ಆಗುವ ವಿಡಿಯೋ ಪ್ರಸಾರ ಮಾಡುವುದನ್ನು ನಾನು ನಮ್ಮೂರ ಗೌಡರ ಮನೆಯ ದಂದಕ್ಕಿಯಲ್ಲಿ ಕುಳಿತು ನೋಡುತ್ತಿರುವಾಗ ನನ್ನ ಚಡ್ಡಿಯೆಲ್ಲಾ ಒದ್ದೆಯಾಗಿರುತ್ತಿತ್ತು.

ಆಗ ನಾನು ಏಳನೆಯ ತರಗತಿ ಓದುತ್ತಿದ್ದೆ. ನನಗಿಂತ ಐದಾರು ವರುಷ ದೊಡ್ಡವರು "ರಾತ್ರಿ ಹೊತ್ತ ಇಮಾನದಾಗ ಬಂದ ಪಾಕ್ ಸೈನಿಕ್ರೂ ನಮ್ಮೂರಮ್ಯಾಗ ಬಂದು ಬಾಂಬ್ ಹಾಕಿ ಹ್ವಾದ್ರೂ ಹೋಗಬಹುದು. ಮಂದಿ ಭಾಳ ಕೂಡಿದಲ್ಲೆ ಹಾಕತಾರ, ಅದಕ್ಕ ನಾವು ಈ ಯುದ್ಧ ಮುಗಿಯುವ ತನಕ ಮನ್ಯಾಗ ಮಲಗೂದ ಬ್ಯಾಡ, ಬಟಾಬಯಲನ್ಯಾಗ ಮಲಗಿದ್ರ ಬಾಂಬ್ ಹಾಕಿದ್ರೂ ನಾಂವ ಸಾಯಾಂಗಿಲ್ಲ" ಅಂತ ತಮ್ಮತಮ್ಮೊಳಗ ಮಾತಾಡೂದು ನಾನು ಕೇಳಸ್ಕೊಂಡಾಗ ಆ ಬಾಂಬ್ ನನ್ನ ಮ್ಯಾಲ ಬಿದ್ಹಂಗ ಆಗಿ ನನ್ನ ಕೈಕಾಲೆಲ್ಲಾ ಥರಾ ಥರಾ ನಡಗಾಕ ಸುರು ಆತು.

"ಬಾಂಬ್ ಹಾಕಾವ್ರು ಆದಷ್ಟ ನಮ್ಮೂರಾಗಿದ್ದ ದೊಡ್ಡ ದೊಡ್ಡ ಮನಿಗಳ ಮ್ಯಾಲ ಹಾಕಿ ಹೋಗ್ಲಪ್ಪಾ. ಆದ್ರ ನನ್ನ ತಗಡಿನ ಮನಿಮ್ಯಾಲ ಬಾಂಬ ಬೀಳದ್ಹಂಗ ನೀನss ನೋಡ್ಕೋರಪ್ಪೋ ದೇವ್ರಾ " ಅಂತ ಊರ ಹೊರಗಿದ್ದ ಹನಮಪ್ಪಗ ಕೈಮುಗದ ಬೇಡ್ಕೊಂಡಿದ್ದೆ.

ಸಾಲಿಗೆ ಹ್ವಾದ್ರೂ ತರಗತಿ ತುಂಬೆಲ್ಲಾ ಬರೀ ಈ ಹಾಳಾದ ಯುದ್ಧ ಮಾತು, ಚರ್ಚೆ. ಅದರಾಗ ತರಗತಿಯೊಳಗ ಅತೀ ಜಾಣ ಅಂದ್ರ ರಮೇಶ. ಟಿ.ವಿ. ಒಳಗ ವಾರ್ತಾ ಹೇಳುವ ವರದಿಗಾರನಕ್ಕಿಂತ ಬಾಯ್ ಮ್ಯಾಲ್ ಕೈ ಇಟಗೋಳುವ್ಹಂಗ ಇದ್ದದ್ದೊಂದು ಇಲ್ಲದ್ದೊಂದು ಹೇಳಿ ಎಲ್ಲಾರನೂ ಪುಕ್ಕಲ ಹಿಡಸ್ತಿದ್ದ.

ನಮ್ಮ ಸಮಾಜ ಶಿಕ್ಷಕರು ಹರಪ್ಪ-ಮೊಹೆಂಜೋದಾರ ನಾಗರಿಕತೆ ಹೇಳಕೋತ ಹೇಳಕೋತ ಪಟಕ್ನ ವಿಷಯ ಪಲ್ಲಟ ಮಾಡ್ಕೊಂಡ ಕಾರ್ಗಿಲ್ ಯುದ್ಧಕ್ಕ ತಂದು ತಮ್ಮ ಬೋಧನೆ ನಿಲ್ಲಿಸುವರು. ನನಗ ಈ ಹಾಳಾದ ಯುದ್ಧದ ಹೆಸರ ಕೇಳದ್ರ ಮೈನಡುಕ. ಹಂತಾದ್ರಾಗ ಶಿಕ್ಷಕರು ಹೇಳುವಾಗ ಅದನ್ನ ಹೆಂಗ ಬ್ಯಾಡ ಅನ್ನಾಕ ಬರ್ತೈತಿ? ಅಂಜಕೋತ ಕೇಳತಿದ್ಯಾ. ಅವರು ಯುದ್ಧಕ್ಕ ಏನ್ ಕಾರಣ, ಯಾತಕ್ಕ ಶುರು ಆತು ಅಂತ ಹೇಳದೆ, ಬರೀ ಬಾಂಬು ಗುಂಡಿನ ವಿವರಣೆ ಕೊಡತೊಡಗಿದರು. ದೊಡ್ಡ ದೊಡ್ಡ ಬಿಲ್ಡಿಂಗ್ ಮೇಲೆ, ಕೈಗಾರಿಕಾ ಕೇಂದ್ರದ ಮೇಲೆ, ದೊಡ್ಡ ದೊಡ್ಡ ಶಹರಗಳ ಮೇಲೆ, ದೊಡ್ಡ ದೇವಸ್ಥಾನಗಳ ಮೇಲೆ ವಿರೋಧಿಗಳು ಬಾಂಬ್ ಹಾಕುವ ಸಾಧ್ಯತೆ ಇರುತ್ತದೆ ಎಂದು ಹೇಳಿದರು. ಹಂಗಾದ್ರೆ ನಮ್ಮಂಥ ತಗಡಿನ ಮನೆಯ ಮೇಲೆ ಅವರು ಬಾಂಬ್ ಹಾಕುವುದಿಲ್ಲ ಅನ್ನುವುದು ನನಗೆ ಸ್ವಲ್ಪ ಖಾತ್ರಿ ಆಯಿತು. ರಮೇಶ ಅಡ್ಡ ಬಾಯಿ ಹಾಕಿ "ಸರ್, ನಮ್ಮ ಸಾಲಿಯಂತ ಕಟ್ಟಡ ಮೇಲೆ ಎಷ್ಟು ಬಾಂಬ್ ಹಾಕಿದರೆ ನಾವೆಲ್ಲಾ ಪುಡಿಪುಡಿಯಾಗುತ್ತೇವೆ" ಎಂದು ಕೇಳಿದಾಗ ನಾನು ಆಗ ಪೂರ ಬೆವುತುಬಿಟ್ಟಿದ್ದೆ. ನಮ್ಮ ಶಿಕ್ಷಕರು ಅವನ ಮಾತಿಗೆ ತುಸು ನಕ್ಕು "ಒಂದೇ ಒಂದು ಸಣ್ಣ ಬಾಂಬು ಸಾಕು ಈ ನಮ್ಮ ಸರಕಾರಿ ಸಾಲಿ ಸುಟ್ಟು ಕರಕಲಾಗಲು" ಎಂದು ಶಿಕ್ಷಕರು ಹೆಮ್ಮೆಯಿಂದ ಹೇಳಿದಂತೆ ನನಗನಿಸಿತು.

ಈ ಯುದ್ಧ ಮಾಡುವವರು ರಾತ್ರಿ ಹೊತ್ತಲ್ಲಿ ಮಾಡುತ್ತಾರೋ ಹಗಲು ಹೊತ್ತಲ್ಲಿ ಮಾಡುತ್ತಾರೋ ಅನ್ನುವ ಗೊಂದಲ ನನ್ನಲ್ಲಿತ್ತು. ನಾನು ನಮ್ಮ ತರಗತಿಯ ಜಾಣ ವಿದ್ಯಾರ್ಥಿ ರಮೇಶನನ್ನು ಕೇಳಲು,

"ನಾವು ಸಾಲಿಗೆ ಹಗಲು ಬರ್ತಿವೋ ರಾತ್ರಿ ಬರ್ತಿವೋ" ಅಂವ ಕೇಳಿದ.

"ಹಗಲು"

"ಮತ್ತss ಯುದ್ಧಾ ಮಾಡಾವರೂ ಹಗಲೀನ ಮಾಡ್ತಾರ, ರಾತ್ರಿ ನಿದ್ದಿಗಣ್ಣಾಗ ಯಾರರ ಯುದ್ಧಾಗಿದ್ದಾ ಮಾಡ್ತಾರನ."

ಅವನಂದ ಮಾತು ಕೇಳಿ ನನಗೆ ಒಂದ ತಟಗ ನೆಮ್ಮದಿ ಸಿಕ್ಕತು. ನಮ್ಮ ಮನಿ ತಗಡಿನ ಮನಿ. ಹಗಲಿ ಇಮಾನದಾಗ ಬಂದ್ರೂ ಅದು ಕಾಣಂಗಿಲ್ಲ, ಈ ಸಾಲಿ ದೊಡ್ಡದೈತಿ, ಸರ್, ಹೇಳಿದ್ಹಂಗ ಒಂದ ಬಾಂಬ್ ಹಾಕಿದ್ರ ಪುಡಿಪುಡಿ ಅಕ್ಕಾರ. ನಾ ಏನರ ನಾಳೆಯಿಂದ ಸಾಲಿಗೆ ಬಂದ್ರ ಪುಡಿಪುಡಿ ಆದ್ರ ಯಪ್ಪಾ! ಹೆಂಗರ ನೆವಾ ಹೇಳಿ ಸಾಲಿ ಬಿಟ್ಟ ನಮ್ಮ ತಗಡಿನ ಮನ್ಯಾಗ ಇರ್ಬೇಕು. ಜೀವಕ್ಕಿಂತ ಸಾಲಿ ದೊಡ್ಡದಲ್ಲ ಅಂತ ಅನಿಸಿತು.

ನಮ್ಮಜ್ಜಿಗೆ ಆರಾಮಿಲ್ಲಂತ ದಿನಾ ಒಂದೊಂದ ನೆವಾ ಹೇಳ್ಕೋತ ಅಕಿ ಮಾಡಿಕೊಟ್ಟ ಕೈರೊಟ್ಟಿ, ಪುಂಡಿಪಲ್ಲೆ, ಕೆಂಪ ಹಿಂಡಿ ತಿನಕೋತ ನಮ್ಮ ತಗಡಿನ ಮನ್ಯಾಗ ಠಿಕಾನಿ ಹೂಡಿದೆ. ಬ್ಯಾಸಗಿ ಬಿಸಲಿನ ಹೊಡತಕ್ಕ ಮೈಯಲ್ಲಾ ತಪಾತಪಾ ಅಂದ್ರೂ ತಾಳ್ಕೊಂಡ ಮನಿ ಹಿಡ್ಕೊಂಡ ಕುಂತ್ಕೊಂಡಿದ್ದೆ.

ಒಂದಿವಸ ಮೂರು ಸಂಜಿಮುಂದ ಊರ ತುಂಬಾ ಗುಲಾಲ್ ಹಾರಸ್ಕೋತ, ಪಟಾಕಿ ಹಚಗೋತ ಮಂದೆಲ್ಲ ದೈ ದೈ ಕುಣಿಯಾಕ ಹತ್ತಿತ್ತು. ಇವಕೇನಾತ ಹಿಂಗ್ಯಾಕ ಮಾಡಾಕತ್ಯಾವೂ ಒಲಿಮುಂದ ಕುಂತ ನಮ್ಮ ಅಜ್ಜಿ ವಟಗೂಡುತ್ತಿದ್ಳು. ನಾನು ಕಳ್ಳ ಬೆಕ್ಕಿನಂತೆ ಮೆಲ್ಲಕ ಆ ಸಂಭ್ರಮ ಪಡುವ ಜಾಗಕ್ಕ ಹೋಗಿ ನಿಂತ್ಗೊಂಡಿದ್ದೆ. ಮುಲ್ಲಾಗೋಳ ಪೀರ್ಯಾ ಓಡಿ ಬಂದವ್ನ ನನ್ನ ಗಲ್ಲದ ತುಂಬಾ ಗುಲಾಲ್ ಸವರಿ, ಮೈತುಂಬಾ ಗೊಜ್ಜಿ 'ಯುದ್ಧದಾಗ ನಮ್ಮ ಭಾರತ ದೇಶ ಗೆದ್ದೈತ್ಲೇ ಹನಮಾ' ಎಂದು ಖುಷಿಲೆ ಕುಣಿದು ಡ್ಯಾನ್ಸ ಮಾಡತೊಡಗಿದ. ಅಂತು ಊರ ಹೊರಗಿನ ಗುಡಿಯಾಗ ಕುಂತ ಹನಮಪ್ಪ ನಮ್ಮ ತಗಡಿನ ಮನಿಗೆ ಯಾವ ದೋಖಾನೂ ಮಾಡಸಲಿಲ್ಲ ಎಂದು ನಾನು ನಿಟ್ಟುಸಿರು ಬಿಟ್ಟೆ.

❑ ತಿರುಪತಿ ಭಂಗಿ

ಧಾರಾವಾಹಿ

ಮುಗಿಯದ ಮೌನ

❑ ಡಾ. ಆರತಿ ವೆಂಕಟೇಶ್

ಹಿಂದಿನ ಸಂಚಿಕೆಯಿಂದ...

ಆಲೋಕನ ದುಃಖ ನೋಡಲಾರದೆ ವಾಸಂತಿ ಮೂರ್ತಿಯವರು ಗೆಳತಿಯ ಸಹಾಯ ಕೇಳಿದರು. ಆದರೆ ತಮ್ಮ ಹೈಸ್ಕೂಲಿನ ವಿದ್ಯಾರ್ಥಿಯನ್ನು ನೋಡಲೆಂದು ಆಸ್ಪತ್ರೆಗೆ ಹೋದ ವಾಸಂತಿಯವರಿಗೆ ಪ್ರಾಂಜಲಿ ಅಲ್ಲಿನ ವೈದ್ಯರನ್ನು ಭೇಟಿಯಾದದ್ದು ತಿಳಿಯಿತು. ಆಸ್ಪತ್ರೆಯಲ್ಲಿ ವಿಷಯವೇನೆಂದು ತಿಳಿಯಲು ಪ್ರಯತ್ನಿಸಿ ಸೋತು, ಅವಳಲ್ಲೇ ಕೇಳಲೆಂದು ಮನೆಗೆ ತೆರಳಿದರು.

ಮುಂದೆ ಓದಿ...

ಸಂಬಂಧಕ್ಕೆ ರೋಗದ ಅಡ್ಡಿ!

ಅಧ್ಯಾಯ – 8

ಪ್ರಾಂಜಲಿ ಬಾಗಿಲು ತೆರೆದಾಗ ನಿಂತಿದ್ದವರು ವಾಸಂತಿ! ಮಗನನ್ನೂ ಜೊತೆಗೆ ಕರೆದುಕೊಂಡು ಬಂದಿದ್ದಾರೋ ಎಂದು ಪ್ರಾಂಜಲಿ ಬಾಗಿಲು ತೆರೆದಳು.

"ಹಲೋ ಅತ್ತೆ, ಬನ್ನಿ."

ಅವಳೆಣಿಸಿದಂತೆ ಆಲೋಕ್ ಅವರ ಜೊತೆ ಇರಲಿಲ್ಲ. ವಾಸಂತಿಯ ಮುಖ ಧುಮುಗುಡುತ್ತಿತ್ತು.

"ನಾನ್ಯಾಕೆ ಬಂದೆ ಅಂತ ಆಶ್ಚರ್ಯ ಆಗಿದೆ ಅಲ್ವಾ? ನನಗೂ ಅಷ್ಟೇ ಆಶ್ಚರ್ಯ ಆಯಿತು, ನಿನ್ನನ್ನು ಇವತ್ತು ಹಾಸ್ಪಿಟಲ್‌ನಲ್ಲಿ ನೋಡಿ!"

ಅವರ ಮಾತು ಕೇಳಿ ಪ್ರಾಂಜಲಿಯ ಮುಖ ವಿವರ್ಣಗೊಂಡಿತು.

"ನೀವು ಹಾಸ್ಪಿಟಲ್‌ಗೆ...?"

ವಾಸಂತಿ ಬಿರುಸಾಗಿ,

"ಸಾಕು ನಿನ್ನ ನಾಟಕ! ಡಾ. ಭಕ್ತವತ್ಸಲಂ ನಿನ್ನ ಸಂಬಂಧಿಕರು. ಅವರ ಜೊತೆ ಗುಟ್ಟಾಗಿ ಮಾತುಕತೆ ನಡೆಸಿ, ನನ್ನ ಮಗನಿಗೆ ತಲೆ ಸರ್‍ಯಾಗಿಲ್ಲ ಅಂತ ಏನಾದ್ರೂ ಸರ್ಟಿಫಿಕೇಟ್ ತಗೊಂಡು ಅವನಿಗೆ ಡೈವೋರ್ಸ್ ಕೊಡ್ಬೇಕೂಂತಿದ್ದೀಯಾ? ನಿಜ ಹೇಳು ಪ್ರಾಂಜಲಿ" ಎಂದಾಗ ಪ್ರಾಂಜಲಿ ಕೆಲವು ಕ್ಷಣಗಳು ತಬ್ಬಿಬ್ಬಾದಳು. ಅನಂತರ ದೃಢವಾಗಿ,

"ನಿಮಗೆ ನನ್ನ ಬಗ್ಗೆ ಇಷ್ಟು ಕೋಪ, ದ್ವೇಷ ಇರೋದಾದ್ರೆ ನಿಮ್ಮ ಮಗನ ಬಾಳಿನಿಂದ ಬಿಡುಗಡೆ ಕೊಡಿಸಿ" ಎಂದಾಗ ವಾಸಂತಿಯ ಆವೇಶ ತಗ್ಗಿತು. ಸೋತುಹೋದವರಂತೆ ಸೋಫಾದ ಮೇಲೆ ಕುಸಿದು ಕುಳಿತರು.

"ಕೊಡಿಸ್ತಿದ್ದೆ ಕಣೇ. ನಿನ್ನಂಥವಳ ಜೊತೆ ಬಾಳೋದು ನನಗೂ ಇಷ್ಟವಿಲ್ಲ. ಆದ್ರೆ ನನ್ನ ಮಗ ನೀನೆಂದರೆ ಪ್ರಾಣ ಇಟ್ಕೊಂಡಿದ್ದಾನೆ. ನೀನೇನಾದ್ರೂ ಡೈವೋರ್ಸ್ ಅನ್ನೋ ಮಾತು ಆಡಿದರೆ ಅವನು ಜೀವ ತೆಗೆದುಕೊಳ್ಳೋಕೂ ಹೇಸುವವನಲ್ಲ. ಏನ್ಮಾಡ್ಲಿ ಹೇಳು? ನನಗೆ ನನ್ನ ಮಗನೇ ಸರ್ವಸ್ವ. ಅವನ ಸಂತೋಷಕ್ಕಾಗಿ ನಾನು ಸೋಲ್ತಾನೇ ಇದ್ದೀನಿ. ನಾನು ನಿನ್ನತ್ತೆ ಅಲ್ಲ, ಒಬ್ಬ ತಾಯಿ ಅಂತ ಕನಿಕರ ತೋರಿಸು. ನನ್ನ ಮಗನ ಜೀವ, ಜೀವನ ಎರಡೂ ನಿನ್ನ ಕೈಲಿದೆ ಪ್ರಾಂಜಲಿ. ಅವನಿಗೇನಾದ್ರೂ ಆದ್ರೆ ನಾನೂ ಖಂಡಿತ ಬದುಕಿರಲ್ಲ!"

"ಅತ್ತೆ ಪ್ಲೀಸ್!" ಪ್ರಾಂಜಲಿ ಆರ್ತಳಾಗಿ ನುಡಿದಳು.

ವಾಸಂತಿ ದುಃಖ, ಕೋಪ, ನಿರಾಶೆಯಿಂದ ವಿವೇಚನೆ ಕಳೆದುಕೊಂಡಿದ್ದರು.

"ಯಾರು ಅತ್ತೆ? ಅತ್ತೆ, ಗಂಡ, ಸಂಸಾರ ಅಂತ ಇದ್ದಿದ್ರೆ ನೀನಿಂಥ ಕೀಳು ಮಟ್ಟಕ್ಕಿಳೀತಾ ಇರಲಿಲ್ಲ. ನನ್ನ ಮಗ ಏನು ಅನ್ಯಾಯ ಮಾಡಿದ್ದ ನಿಂಗೆ? ಯಾಕೆ ನಮ್ಮ ಲೈಫ್‌ನಲ್ಲಿ ಆಟ ಆಡ್ತಿದ್ದೀಯಾ? ನನ್ನ ಮಗನ ಮೇಲಾಣೆ, ನೀನೇನು ಮಾಡ್ತಿದ್ದೀಯ ಅಂತ ನಿಜ ಹೇಳು! ಇಲ್ಲಿದ್ರೆ ನನ್ನ ಮಗನಿಗೆ ವಿಷ ಕೊಟ್ಟು ನಾನೂ ಕುಡಿದು ಸತ್ತುಹೋಗ್ತೀನಿ!" ಎಂದವರೇ ಅವಳ ಕೈಯನ್ನು ತೆಗೆದುಕೊಂಡು ತಮ್ಮ ತಲೆಯ ಮೇಲಿರಿಸಿಕೊಂಡರು.

ಬಿಲ್ಲಿನಂತೆ ಸೆಟೆದು ನಿಂತಿದ್ದ ಪ್ರಾಂಜಲಿ ಈಗ ಬುಡ ಕಡಿದ ಬಾಳೆ ಕಂಬದಂತೆ ಕುಸಿದಳು.

ವಾಸಂತಿ ತಲೆಯನ್ನು ತಗ್ಗಿಸಿ ಸದ್ದಿಲ್ಲದೇ ನೀರವವಾಗಿ ಅಳುತ್ತಿರುವುದನ್ನು ಅವಳು ಕಣ್ಣೆತ್ತಿ ನೋಡಿದಳು.

ವೇದನೆ ತುಂಬಿದ ಅವಳ ಮುಖದಲ್ಲಿ ಯಾವುದೋ ನಿರ್ಧಾರ ಬಂದಂತೆ ಕಾಣಿಸಿತು.

"ನಿಮಗೆ ನಿಜ ತಾನೇ ಬೇಕು? ಒಂದ್ನಿಮಿಷ ಇರಿ" ಎಂದು ಕಣ್ಣೊರೆಸಿಕೊಂಡು ಒಳಗೆದ್ದು ಹೋದಳು.

ಅವಳೇಕೆ ಒಳಗೆ ಹೋದಳೆಂದು ಗೊಂದಲಕ್ಕೆ ಬಿದ್ದರು ವಾಸಂತಿ.

ಒಳಗಡೆ ಕೆವಿನ್ ಇರಬಹುದೇ? ಅವನನ್ನು ಕರೆತಂದು ತಮ್ಮ ಮುಂದೆ ನಿಲ್ಲಿಸುವ ಉದ್ದೇಶದಿಂದ ಒಳಗೆ ಹೋದಳೇ?

ಏನೇನೋ ಯೋಚನೆಗಳಿಂದ ಅವರಿಗೆ ತಲೆಬಿಸಿಯಾಯಿತು.

ಪ್ರಾಂಜಲಿ ರೂಮಿನಿಂದ ಬಂದಾಗ ಅವಳ ಕೈಯಲ್ಲಿ ನೀಲ ಬಣ್ಣದ ಫೈಲ್ ಇತ್ತು. ಅದನ್ನು ತೆರೆದು ಅವರ ಮುಂದಿಟ್ಟಳು.

"ಇದು ನೋಡಿ ಅತ್ತೆ, ನಿಮಗೇ ಅರ್ಥವಾಗುತ್ತೆ."

ಡಾ. ಭಕ್ತವತ್ಸಲಂ ಎಂಬಿಬಿಎಸ್ ಜೊತೆಗೆ ಸಾಲಾದ ಫಾರಿನ್ ಡಿಗ್ರಿಗಳು. ಅವರ ಫೋನ್ ನಂಬರ್ ಎಲ್ಲ ನಮೂದಿಸಿದ ಲೆಟರ್‌ಪ್ಯಾಡ್ ಅದಾಗಿತ್ತು. ಅದರ ಕೆಳಗೆ ಪ್ರಾಂಜಲಿಯ ಹೆಸರು, ವಯಸ್ಸು. ಅಡಿಯಲ್ಲೇ ಮಾತ್ರೆಗಳ ಹೆಸರು.

ಯಾವುದೂ ಅವರಿಗೆ ಅರ್ಥವಾಗಲಿಲ್ಲ.

"ಅಂದ್ರೆ... ನೀನು ಅವರ ಹತ್ರ ಪೇಷೆಂಟಾಗಿ ಹೋಗ್ತಿದ್ದೀಯಾ?"

ಪ್ರಾಂಜಲಿ ಮೌನವಾಗಿ ತಲೆಯಾಡಿಸಿದಳು.

''ಏನಾಗಿದೆ ನಿಂಗೆ?''

''ನೀವೇ ನೋಡಿ, ಇಂಗ್ಲಿಷ್ ಬರುತ್ತೆ ಅಲ್ವಾ ನಿಮಗೆ?'' ಅವಳ ದನಿ ಭಾವರಹಿತವಾಗಿತ್ತು.

ಮಾತ್ರೆಯ ಹಾಳೆಗಳ ಜೊತೆ ವಿವಿಧ ಪರೀಕ್ಷೆಗಳು, ಸ್ಕ್ಯಾನ್ ಮಾಡಿದ ರಿಪೋರ್ಟ್‌ಗಳು ಇದ್ದವು.

ಅಂತಿಮ ರೋಗನಿರ್ಣಯ ಮಲ್ಟಿಪಲ್ ಸ್ಕ್ಲಿರೋಸಿಸ್ ಎಂದು ಬರೆಯಲಾಗಿತ್ತು.

ವಾಸಂತಿ ತಲೆಯೆತ್ತಿ ಪ್ರಾಂಜಲಿಯ ಕಡೆ ನೋಡಿದರು.

''ನಿಂಗೆ... ನಿಂಗೆ... ಮಲ್ಟಿಪಲ್ ಸ್ಕ್ಲಿರೋಸಿಸ್ ಅಂತ ಡಯಾಗ್ನೋಸ್ ಮಾಡಿದ್ದಾರಾ? ಏನು ಕಾಯಿಲೆ ಅದು?''

''ನರಗಳಿಗೆ ಸಂಬಂಧಪಟ್ಟಿದ್ದು'' ಅವಳ ಮುಖ ನಿರ್ವಿಕಾರವಾಗಿತ್ತು.

''ಕೇಳಿದ್ದೀನಿ ಪ್ರಾಂಜಲಿ. ಆದ್ರೆ ಅದರ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲ. ಏನಾಗಿದೆ ನಿಂಗೆ, ಸರ್‍ಯಾಗಿ ಹೇಳು.''

''ಮೆದುಳು ಹಾಗೂ ಸ್ಪೈನಲ್ ಕಾರ್ಡ್ ಕ್ಷೀಣಿಸುವಂಥ ದೀರ್ಘಕಾಲದ ರೋಗ. ಜೀವನಪೂರ್ತಿ ಟ್ರೀಟ್‌ಮೆಂಟ್ ತೊಗೋಬೇಕಾಗುತ್ತೆ'' ಟೀಚರ್ ಮುಂದೆ ವಿದ್ಯಾರ್ಥಿ ಉತ್ತರ ಒಪ್ಪಿಸುವಂತಿತ್ತು ಅವಳ ಮಾತು.

ಅವಳ ಪರಿಸ್ಥಿತಿ ಕಂಡು ವಾಸಂತಿಗೆ ಹೃದಯ ಹಿಂಡಿದಂತಾಯಿತು. ಅವಳ ಕೈಹಿಡಿದು,

''ಬಾ ಕೂತ್ಕೋ, ನಿಧಾನವಾಗಿ ಮಾತಾಡು'' ಎಂದು ತಮ್ಮ ಪಕ್ಕದಲ್ಲಿ ಕೂಡಿಸಿಕೊಂಡರು.

''ಇದರಿಂದ ನಿನ್ನ ಜೀವಕ್ಕೇನಾದ್ರೂ ಅಪಾಯವಿದೆಯೇ?'' ಅವರು ಕೇಳಿದಾಗ ಅವಳ ಮುಖದಲ್ಲಿ ವಿಲಕ್ಷಣ ನಗು ಇಣುಕಿತು.

''ಸದ್ಯಕ್ಕಂತೂ ನಾನು ಸಾಯುವುದಿಲ್ಲ. ಆದ್ರೆ ನಾನು ಅದರ ಜೊತೆ ಬದುಕಬೇಕು. ಅದೇ ಕಷ್ಟ! ಕಾಯಿಲೆಯ ಉಲ್ಬಣತೆ, ಅದರ ಚಿಕಿತ್ಸೆ, ಮಾತ್ರೆಗಳ ದುಷ್ಪರಿಣಾಮಗಳು... ಇವೆಲ್ಲಾ ನನ್ನ ಆಯುಸ್ಸನ್ನು ಕಡಿಮೆ ಮಾಡಬಹುದು.''

ಅವಳ ಜೀವಕ್ಕೆ ತೊಂದರೆ ಇಲ್ಲವೆಂದು ವಾಸಂತಿಗೆ ಸಮಾಧಾನವಾಯಿತು.

''ಅಲ್ಲ, ಹೀಗಾಗಿದೆ ಅಂತ ನಮಗೆ ಒಂದ್ಮಾತು ಹೇಳೋಕ್ಕಾಗ್ಲಿಲ್ವಾ? ಕಾಯಿಲೆ ಮನುಷ್ಯರಿಗಲ್ಲದೆ ಮರಕ್ಕೆ ಬರುತ್ತದೆಯೇ? ಪ್ರಾಣಕ್ಕೆ ತೊಂದರೆ ಇಲ್ಲ, ಇದಕ್ಕೆ ಟ್ರೀಟ್‌ಮೆಂಟ್ ಇದೆ ಅಂತೀಯ. ಅಂದ್ಮೇಲೆ ಇನ್ಯಾಕೆ ಚಿಂತೆ?''

''ನನಗಿಂತ ಚಿಂತೆ ಇರೋದು ಲೋಕಿ ಬಗ್ಗೆ. ಇದನ್ನು ಅವನಿಗೆ ಹೇಗೆ ಹೇಳ್ಬೇಕೂಂತ ತಿಳಿಯದೇ ಇಷ್ಟು ದಿನ ಒದ್ದಾಡ್ತಿದ್ದೆ. ನಿಮಗೂ ಹೇಳುವ ಉದ್ದೇಶ ಇರ್‍ಲಿಲ್ಲ ಅತ್ತೆ. ಆದ್ರೆ ಇವತ್ತು ಅಂಥ ಪರಿಸ್ಥಿತಿ ತಂದುಬಿಟ್ರಿ. ಹೇಳದೆ ನನಗೂ ಬೇರೆ ದಾರಿ ಇರಲಿಲ್ಲ.''

ತಾನು ಪ್ರಾಂಜಲಿಯ ಬಗ್ಗೆ ಎಂತೆಂಥ ಬಿರುಸು ಮಾತುಗಳನ್ನು ಆಡಿದ್ದೆ ಎಂದು ಯೋಚಿಸಿದಾಗ ವಾಸಂತಿಗೆ ತಮ್ಮ ಬಗ್ಗೆಯೇ ಬೇಸರವಾಯಿತು.

''ಸಾರಿ ಪ್ರಾಂಜಲಿ, ತುಂಬಾ ಸಾರಿಕಣಮ್ಮ. ನಿನ್ನ ವಿಷ್ಯ ತಿಳಿಯದೇ ನಾನು ತುಂಬ ದುಡುಕಿಬಿಟ್ಟೆ.''

ತಾವು ಕ್ಷಮೆ ಕೇಳಿದೊಡನೆ ಅವಳು ಅಳುತ್ತಾ ತಬ್ಬಿಕೊಳ್ಳುತ್ತಾಳೆಂದು ಅವರು ಭಾವಿಸಿದ್ದರು.

ಆದರೆ, ಪ್ರಾಂಜಲಿ ಅಲುಗಾಡದೆ ಕಲ್ಲಿನಂತಿದ್ದಳು.

''ಈ ವಿಷಯ ಬೇಕಾದ್ರೆ ನಾನೇ ಆಲೋಕ್‌ಗೆ...''

''ನೋ!'' ತತ್‌ಕ್ಷಣ ಅವರ ಮಾತುಗಳು ಕತ್ತರಿಸಿದಂತೆ ಬಂದೆರಗಿತು ಅವಳ ದನಿ.

ವಾಸಂತಿ ಮಾತು ನಿಲ್ಲಿಸಿ ಆಶ್ಚರ್ಯದಿಂದ ನೋಡಿದರು.

'...ಅಂದ್ರೆ...ಇಲ್ಲಿ ಕೊಡಬೇಡಿ... ಹೊರಗೆ ಕಾಫಿಗೆ ಹೋಗ್ತಿವಲ್ಲ...ಅಲ್ಲಿ ಕೊಡಿ...ಅಷ್ಟು ಗೊತ್ತಾಗಲ್ವೇ...!?'

''ಯಾಕೆ, ವಿಷ್ಯ ತಿಳಿದ್ರೆ ನನ್ನ ಮಗ ನಿನ್ನ ಪರಿಸ್ಥಿತಿ ಅರ್ಥಮಾಡ್ಕೊಳಲ್ವಾ? ಅವನೇನು ಕಟುಕ ಅಂದ್ಕೊಂಡ್ಯಾ? ತಾನೇ ಓಡಾಡಿ ನಿಂಗೆ ಟ್ರೀಟ್‌ಮೆಂಟ್ ಕೊಡಿಸ್ತಾನೆ!''

''ಆಮೇಲೆ?''

ಪ್ರಾಂಜಲಿಯ ಪ್ರಶ್ನೆಗೆ ಅವರು ತಬ್ಬಿಬ್ಬಾದರು.

''ಏನು ಹೇಳ್ತಿದ್ದೀಯ ಪ್ರಾಂಜಲಿ? ನಿನ್ನ ಮನಸ್ಸೇ ಅರ್ಥವಾಗ್ತಿಲ್ಲ.''

''ಅತ್ತೆ, ನಿಮ್ಮಗ ಏನೂಂತ ನಿಮಗಿಂತ ಚೆನ್ನಾಗಿ ನನಗೆ ಗೊತ್ತು. ನೀವು ಅವನಿಗೆ ಜನ್ಮಕೊಟ್ಟು ಬೆಳೆಸಿದ್ದೀರಿ. ಆದ್ರೆ ನಾನು ಜೀವನ ಹಂಚ್ಕೊಂಡಿದ್ದೀನಿ. ನನಗೆ ಹೀಗಾಗಿದೆ ಅಂತ ಚೂರು ಸುಳಿವು ಸಿಕ್ಕಿದ್ರೂ ಸಾಕು, ಅವನು ನನ್ನ ನೆರಳಾಗಿರ್ತಾನೆ. ನಂಜೊತೆ ಅವನೂ ಸಫರ್ ಆಗೋದು ನನಗಿಷ್ಟ ಇಲ್ಲ.''

ಪ್ರಾಂಜಲಿ ಹೇಳುತ್ತಿದ್ದಂತೆ ವಾಸಂತಿ ವ್ಯಥೆಯಿಂದ,

''ಈಗ ಅವನೇನು ಸಂತೋಷವಾಗಿದ್ದಾನಾ? ಪ್ರತಿಕ್ಷಣವೂ ನಿಂಗೋಸ್ಕರ ಹಂಬಲಿಸ್ಕೊಂಡು ಒದ್ದಾಡ್ತಿದ್ದಾನೆ ಪ್ರಾಂಜಲಿ. ಅವನಿಂದ ವಿಷ್ಯ ಮುಚ್ಚಿಟ್ಟು ನೀನಿನ್ನೂ ನೋವು ಕೊಡ್ತಾ ಇದ್ದೀಯ. ನಿಂಗೆ ಈ ತೊಂದರೆಯಾಗಿದೆ ಅಂತ ಒಂದು ಮಾತು ಕೇಳಿದ್ರೂ ಸಾಕು, ಕೋಪ, ಮನಸ್ತಾಪ ಎಲ್ಲ ಮರೆತು ನಿನ್ನ ಹತ್ರ ಬಂದುಬಿಡ್ತಾನೆ!'' ಎನ್ನುವಾಗ ಅವರ ದನಿ ಗದ್ಗದವಾಯಿತು.

''ಅಷ್ಟು ಅಗಾಧವಾಗಿ ಪ್ರೀತಿಸೋನು ಸುಖವಾಗಿರ್ಬೇಕೂಂತ ನನಗಾಸೆ ಇರಲ್ವಾ ಅತ್ತೆ?''

ಅವಳ ಮಾತು ಯಾವುದೋ ಗುಹೆಯೊಳಗಿನಿಂದ ಬಂದಂತಿತ್ತು.

''ಮೋಸದ ಕಾಯಿಲೆ ಇದು. ಪ್ರಾಣಕ್ಕೆ ಅಪಾಯ ಇಲ್ಲ, ಆದ್ರೆ ಹಂತಹಂತವಾಗಿ ಕುಗ್ಗಿಸಿಬಿಡುತ್ತೆ. ನಾನು ಮೊದಲಿನ ಪ್ರಾಂಜಲಿಯಾಗೋಕೆ ಸಾಧ್ಯ ಇಲ್ಲ. ಟ್ರೀಟ್‌ಮೆಂಟ್ ತೊಗೋತಾ ಇರೋವಾಗ ನಾನು ಗರ್ಭಿಣಿಯಾಗಬಾರದು. ಅದು ಮಗು ಮೇಲೆ ಪರಿಣಾಮ ಬೀರುತ್ತೆ. ಬರ್‍ತಾ ಬರ್‍ತಾ ನನಗೆ ನಡೆದಾಡೋಕೆ ಕಷ್ಟವಾಗಬಹುದು, ಹಾಸಿಗೆ ಹಿಡಿಯುವಂಥವಳಾಗಬಹುದು. ಇದೆಲ್ಲ ನಮ್ಮ ಪ್ರೀತಿ ಮುಂದೆ ಏನೂ ಇಲ್ಲ ಅತ್ತೆ. ಎಲ್ಲ ತೃಣ ಆಗುತ್ತೆ. ಅಷ್ಟು ಆಳವಾದ ಪ್ರೀತಿ ನಮ್ಮದು. ಮಕ್ಕಳು ಅಂದ್ರೆ ಪ್ರಾಣಬಿಡೋ ಲೋಕಿ ನನ್ನ ಪರಿಸ್ಥಿತಿ ನೋಡಿ ಮಕ್ಕಳೇ ಬೇಡಾಂತ ಹೇಳ್ತಾನೆ. ನಾನು ನಡೆಯೋಕ್ಕಾಗದೇ ಇದ್ರೆ ಎತ್ಕೊಂಡು ಓಡಾಡಿಸ್ತಾನೆ. ಬೆಡ್ ರಿಡ್ಡನ್ ಆದ್ರೆ ಮಲಗಿದ್ದಲ್ಲೇ ಸೇವೆ ಮಾಡ್ತಾನೆ. ಅಷ್ಟೇನಾ ಅವನ ಜೀವನ? ನನ್ನ ಪ್ರೀತಿಗೋಸ್ಕರ ಅವನ ಬಾಳನ್ನು ತ್ಯಾಗ ಮಾಡ್ಬೇಕಾ? ನೀವೇ ಹೇಳಿ.''

ವಾಸಂತಿ ದಿಙ್ಮೂಢರಾಗಿ ಕುಳಿತುಬಿಟ್ಟಿದ್ದರು.

''ಮೊದಲು ನಿಮ್ಮ ಮಗನಿಗೆ ನನ್ನಿಂದ ಡೈವೋರ್ಸ್ ಕೊಡಿಸಿ. ನನ್ನ ಸ್ಥಿತಿ ಈಗೀಗ ಉಲ್ಬಣವಾಗುತ್ತಿದೆ. ಅವನ ಜೊತೆ ಇದ್ರೆ ನನ್ನ ನೋವು, ನರಳಾಟದಿಂದ ಎಲ್ಲಿ ನಿಜ ಗೊತ್ತಾಗಿಬಿಡುತ್ತೋ ಅಂತ ಉದ್ದೇಶಪೂರ್ವಕವಾಗಿ ಮನಸ್ತಾಪ ಮಾಡ್ಕೊಂಡು ದೂರ ಇದ್ದೀನಿ. ಆದಷ್ಟು ಅವನ್ನ ಈ ಮನೆಗೆ ಕಳಿಸ್ಬೇಡಿ ಅತ್ತೆ. ಬೇಗ ಒಳ್ಳೆ ಲಾಯರ್‌ನ ನೋಡಿ ನಮಗೆ ಮ್ಯೂಚುಯಲ್ ಡೈವೋರ್ಸ್ ಕೊಡಿಸಿ'' ಪ್ರಾಂಜಲಿಯ ಮಾತು ಕೇಳಿ ವಾಸಂತಿ ಕಂಗೆಟ್ಟರು.

''ಇದೆಲ್ಲ ಹೇಳೋಷ್ಟು ಸುಲಭಾನಾ ಪ್ರಾಂಜಲಿ? ನೀನು ಹೇಳಿದ ವಿಷ್ಯ ಕೇಳಿ ನನಗೆಷ್ಟು ಶಾಕ್ ಆಗಿದೆ ಅಂದ್ರೆ ಇನ್ನೂ ಅದನ್ನು ನಂಬೋಕ್ಕಾಗ್ತಿಲ್ಲ! ಎಲ್ಲಾ ಕೆಟ್ಟ ಕನಸು ಅನ್ನಿಸ್ತಿದೆ!''

ತಮಗೇ ಇಷ್ಟು ಆಘಾತವಾಗಿರುವಾಗ ಅದನ್ನೆಲ್ಲಾ ಒಂಟಿಯಾಗಿ ಅನುಭವಿಸಿದ ಪ್ರಾಂಜಲಿ ಎಷ್ಟು ಯಾತನೆ, ಮಾನಸಿಕ ಹಿಂಸೆಪಟ್ಟಿರಬೇಕು?

ಆದರೂ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಎಷ್ಟು ತಟಸ್ಥಳಾಗಿದ್ದಾಳೆ! ಅವರ ಅಂತರಂಗವನ್ನು ಅವರ ಮುಖಭಾವವೇ ಬಯಲು ಮಾಡಿತೇನೋ.

ಪ್ರಾಂಜಲಿ ಶುಷ್ಕ ನಗೆ ಬೀರಿ,

''ನನಗೂ ಹಾಗೇ ಅನ್ನಿಸ್ತು. ಎಷ್ಟೋ ಸಲ ಒಬ್ಳೇ ಕೂತು ಅಳ್ತಾ ಇದ್ದೆ. ರಾತ್ರಿ ನಿದ್ದೆ ಬಾರದೇ ರೂಮಿನಿಂದ ಹೊರಗೆ ಬಂದು ಗಂಟೆಗಟ್ಟಲೆ ಸುಮ್ನೆ ಕುಳಿತುಬಿಡ್ತಾ ಇದ್ದೆ. ನನಗೆ ಎಚ್ಚರವಾಗಿ ಎಲ್ಲ ಕೆಟ್ಟ ಕನಸಾಗಿಬಿಡ್ಲಿ ಅಂತ ದೇವರನ್ನು ಎಷ್ಟು ಬೇಡಿಕೊಂಡಿದ್ದೀನೋ. ಆದ್ರೆ ಸತ್ಯ ಅಗಾಧವಾದ ಬೆಟ್ಟದ ಹಾಗೆ ಕರಗಿಸೋಕ್ಕಾಗಲ್ಲ. ಕಲ್ಲು-ಮುಳ್ಳು ತುಂಬಿರೋ ಹಾದಿ, ನಡೀಲೇಬೇಕು. ಆದ್ರೆ, ನಾನೊಬ್ಬಳೇ ನಡೆಯಬೇಕು ಅತ್ತೆ. ಲೋಕಿ ನನ್ನ ಜೊತೆಯಾಗಿ ಬರಬಾರದು'' ಎಂದು ದೃಢವಾಗಿ ನುಡಿದಳು.

''ಪ್ರಾಂಜಲಿ...'' ಅವಳ ಕೈಹಿಡಿದು ಗದ್ಗದರಾಗಿ ನುಡಿದರು. ಅವರ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಮುಂದೆ ಅವರ ಕೊರಳಿಂದ ಸ್ವರ ಹೊರಡಲಿಲ್ಲ.

''ಅತ್ತೆ, ನಾನೆಂಥ ಹಠಮಾರಿ ಗೊತ್ತಾ? ಒಂದ್ಸಲ ಲೋಕಿ ನನಗಿಷ್ಟ ಇಲ್ಲದೇ ಇರೋ ಸಿನೆಮಾಕ್ಕೆ ಕರ್ಕೊಂಡು ಹೋಗಿದ್ದ. ನಾನು ಆ ಸಿನೆಮಾ ನೋಡಬಾರದು ಅಂತ ಕಿವಿಗೆ ಇಯರ್‌ಫೋನ್ ಹಾಕ್ಕೊಂಡು, ಕಣ್ಣಿಗೆ ಬಟ್ಟೆ ಕಟ್ಕೊಂಡಿದ್ದೆ! ಹುಚ್ಚಿ ಅಂದ್ಕೋತೀರಾ? ಹೌದು, ಸಿನೆಮಾ ಮುಗಿಯೋವರೆಗೂ ಹಾಗೇ ಕೂತಿದ್ದೆ. ನನ್ನ ಹಠ ನಡೆಸ್ಕೊಳ್ಳೋವಾಗ ನಾನು ಯಾರ ಬಗ್ಗೆನೂ ಕೇರ್ ಮಾಡಲ್ಲ! ಒಂದು ಸಿನೆಮಾ ವಿಷಯಕ್ಕೇ ಇಷ್ಟು ಹಠ ಸಾಧಿಸಿದವಳು ಜೀವನದ ನಿರ್ಧಾರಕ್ಕೆ ಬರೋವಾಗ ಯಾವ ಮಟ್ಟಕ್ಕೆ ಹೋಗಬಹುದು ಅಂತ ನೀವೇ ಯೋಚ್ನೆ ಮಾಡಿ. ಲೋಕಿ ದೃಷ್ಟೀಲಿ ನಾನು ಕೆಟ್ಟವಳಾಗಬೇಕು. ಅವನು ನನ್ನನ್ನು ದ್ವೇಷಿಸಿ ದೂರ ಹೋಗ್ಬೇಕು. ಅದೇ ನನ್ನ ಉದ್ದೇಶ!''

ಅವಳ ಒಂದೊಂದು ಮಾತೂ ಅವರ ಹೃದಯವನ್ನು ಸುಡುತ್ತಿತ್ತು. ಯಾವುದನ್ನೂ ಅರಗಿಸಿಕೊಳ್ಳಲಾಗದಂತೆ ಅವರು ಮೌನವಾಗಿ ಕುಳಿತು ಅಂಗೈಯನ್ನು ಕಣ್ಣಿಗೆ ಅಡ್ಡ ಹಿಡಿದಿದ್ದರು. ಅವರು

ಅಳುತ್ತಿದ್ದಾರೆಂದು ಪ್ರಾಂಜಲಿಗೆ ತಿಳಿಯುವುದು ತಡವಾಗಲಿಲ್ಲ.

ಅವಳು ಅವರ ಬಳಿ ಕುಳಿತು ಮೆಲುದನಿಯಲ್ಲಿ,

''ಅತ್ತೆ, ಕಣ್ಣೀರು ಹಾಕಿ ಕಷ್ಟ ಕರಗಿಸೋ ಹಾಗಿದ್ದಿದ್ರೆ ಪ್ರವಾಹಾನೇ ಹರಿದುಹೋಗ್ತಿತ್ತು. ನನ್ನ ದುರಾದೃಷ್ಟ ನನ್ನ ಪಾಲಿಗಷ್ಟೇ ಸಾಕು. ಲೋಕಿಗೆ ಬೇರೆ ಒಳ್ಳೆ ಜೀವನ ಸಿಗಬೇಕು. ಅದು ನಿಮ್ಮ ಜವಾಬ್ದಾರಿ. ಅದಕ್ಕೆ ನೀವು ಧೈರ್ಯ ತಂದ್ಕೊಂಡು ಸಪೋರ್ಟ್ ಮಾಡ್ಬೇಕು.''

ವಾಸಂತಿ ಅಳುತ್ತಲೇ,

''ಆಗ್ತಿಲ್ಲಪ್ರಾಂಜಲಿ. ಏನು ಯೋಚ್ನೆ ಮಾಡೋಕ್ಕೂ ಸಾಧ್ಯ ಆಗ್ತಿಲ್ಲನನಗೆ. ನನ್ನ ಮಗ-ಸೊಸೆ ಮೇಲೆ ಯಾರ ಕೆಟ್ಟ ಕಣ್ಣು ಬಿತ್ತೋ ಏನೋ? ಇದೆಲ್ಲ ಅನುಭವಿಸೋ ಗ್ರಹಚಾರ ನಮ್ಮ ಹಣೇಲಿ ಬರೆದಿದೆ'' ಎಂದು ಕರ್ಚೀಫ್ ತೆಗೆದು ಕಣ್ಣು, ಮೂಗು ಒರೆಸಿಕೊಂಡರು.

''ತುಂಬಾ ಸುಸ್ತಾಗಿದ್ದೀರ, ಕಾಫಿ ಮಾಡ್ಲಾ ಅತ್ತೆ?'' ಭೋರ್ಗರೆವ ಮಳೆ ಸುರಿದ ಮೇಲೆ ತಣ್ಣಗಾದ ತಟಸ್ಥತೆ ಅವಳ ಮುಖದಲ್ಲಿ ತುಂಬಿತ್ತು.

ಅಷ್ಟು ಸಹಜವಾಗಿ ವರ್ತಿಸುವ ಮನೋಬಲ ಹೇಗೆ ಬಂತು ಅವಳಿಗೆ! ತಲೆಯೆತ್ತಿ ಅವಳ ಕಡೆ ನೋಡಿದರು.

ಈಗ ಅವರಿಗೆ ಪ್ರಾಂಜಲಿಯಲ್ಲಾದ ಸೂಕ್ಷ್ಮ ಬದಲಾವಣೆಗಳು ನಿಧಾನವಾಗಿ ಗೋಚರಿಸಿದವು.

ಜಿಂಕೆಯಂತೆ ಓಡಾಡುತ್ತಿದ್ದ ಪ್ರಾಂಜಲಿ ಈಗ ಕೊಂಚ ಆಲಸ್ಯವಾಗಿ ಹೆಜ್ಜೆ ಹಾಕುತ್ತಿದ್ದಳು. ಅವಳ ಚರ್ಮ ಮೊದಲಿನ ಕಾಂತಿಯನ್ನು ತುಸುವಾಗಿ ಕಳೆದುಕೊಂಡಿದ್ದವು. ಮುಖ ಸೊರಗಿದ್ದರೂ ದೇಹದಲ್ಲಿ ಮೊದಲಿಗಿಂತ ಕೊಂಚ ಸ್ಥೂಲತೆ ಬಂದಿದೆ ಎಂದು ನವುರಾಗಿ ಗಮನಿಸಬಹುದಿತ್ತು.

'ಏನೂ ಬೇಡ' ಎನ್ನುವಂತೆ ತಲೆಯಲ್ಲಾಡಿಸಿ ತಮ್ಮ ಹ್ಯಾಂಡ್‌ಬ್ಯಾಗ್‌ನಲ್ಲಿದ್ದ ನೀರಿನ ಬಾಟಲ್ ತೆಗೆದುಕೊಂಡು ಕುಡಿದರು.

ಈ ನೀರು ಕುಡಿದಷ್ಟೇ ಸುಲಭವಾಗಿ ತಾವು ಮುಂದಿನ ಸನ್ನಿವೇಶಗಳನ್ನು ಎದುರಿಸಲಾದೀತೇ?

ಅವರು ಎದ್ದು ಹೊರಡುವಾಗ ಪ್ರಾಂಜಲಿ ಅವರನ್ನು ಬಾಗಿಲವರೆಗೂ ಬೀಳ್ಕೊಡಲು ಬಂದಳು.

''ಅತ್ತೆ, ನಾನು ಹೇಳಿದ್ದು ಜ್ಞಾಪಕ ಇರ್‍ಲಿ, ಮರೆಯಬೇಡಿ. ಟೈಂ ಜಾಸ್ತಿ ಇಲ್ಲ. ಆದಷ್ಟು ಬೇಗ ನಮಗೆ ಡೈವೋರ್ಸ್ ಆಗ್ಬೇಕು.''

ಅವಳನ್ನು ತಬ್ಬಿಕೊಂಡು ಅತ್ತುಬಿಡಬೇಕು ಎನಿಸಿತು ವಾಸಂತಿಗೆ.

ಆದರೆ, ಯಾವ ಭಾವನೆಗಳನ್ನೂ ತೋರಿಸದೆ ನಿಂತ ಸೊಸೆಯ ಬಳಿ ಅಷ್ಟು ನಿಕಟತೆ ವ್ಯಕ್ತಪಡಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಅತ್ತೆಯನ್ನು ಕಳುಹಿಸಿದ ಮೇಲೆ ಪ್ರಾಂಜಲಿ ಬಾಗಿಲು ಹಾಕಿ ಬಂದು ಸೋಫಾದ ಮೇಲೆ ಮೈಚೆಲ್ಲಿದಳು.

ತಾನು ಸಾಗಿಹೋಗುತ್ತಿದ್ದ ದಾರಿಯಲ್ಲಿ ಅನಿರೀಕ್ಷಿತವಾಗಿ ಅತ್ತೆಯ ಆಧಾರ ಸಿಕ್ಕಿದ್ದು ಒಳ್ಳೆಯದೇ ಎನಿಸಿತ್ತು.

ಅಲ್ಲೇ ಇದ್ದ ನೀಲ ಫೈಲನ್ನು ತೆಗೆದು ತೊಡೆಯ ಮೇಲಿಟ್ಟುಕೊಂಡಳು.

ಇದೆಲ್ಲ ಪ್ರಾರಂಭವಾಗಿದ್ದು ತಾನು ಮೊದಲ ಬಾರಿ ಕೆವಿನ್‌ನನ್ನು ಭೇಟಿಯಾದ ದಿನ!

ಮೆಟ್ರೋ ರೈಲಿನಿಂದ ಇಳಿಯುವಾಗ ನಡಿಗೆಯಲ್ಲಿ ಅಸ್ಥಿರವಾಗಿ ಪ್ರಾಂಜಲಿ ಹಳಿಗಳ ಮೇಲೆಯೇ ಬಿದ್ದುಬಿಡುವವಳಿದ್ದಳು. ಅವಳ ಹಿಂದೆಯೇ ಇಳಿದ ಕೆವಿನ್ ಅವಳನ್ನು ಬಿಗಿಯಾಗಿ ಹಿಡಿದುಕೊಂಡ.

ಅಲ್ಲಿದ್ದ ಗಾರ್ಡ್‌ಗಳು ಬಂದು ಆತಂಕದಿಂದ ವಿಚಾರಿಸಿದಾಗ ರೈಲಿನಿಂದಲೇ ಕೆಲವರು ಕುತೂಹಲದಿಂದ ಬಗ್ಗಿ ನೋಡಿದ್ದರು.

ಇದೊಂದು ನಾಟಕೀಯ ದೃಶ್ಯಕ್ಕೆ ತಾನು ಕಾರಣನಾದೆನಲ್ಲ ಎಂದು ಪ್ರಾಂಜಲಿಗೆ ಸಂಕೋಚವಾಯಿತು.

''ಏನೂ ಆಗಿಲ್ಲ. ಐ ಆ್ಯಮ್ ಫೈನ್'' ಎಂದು ಜೋರಾಗಿ ಪ್ರಕಟಿಸಿದಳು.

''ಮೇಡಂ, ಟೇಕ್ ಕೇರ್, ಹುಷಾರಾಗಿದ್ದೀರಿ ತಾನೆ? ನಾನು ಹಿಡ್ಕೊಳ್ದೇ ಇದ್ರೆ ನಿಮ್ಮ ಲೈಫ್‌ಗೇ ಅಪಾಯ ಆಗ್ತಿತ್ತು'' ಕೆವಿನ್ ಹೇಳಿದಾಗ ಪ್ರಾಂಜಲಿ ಸಾವರಿಸಿಕೊಂಡು ಮುಂದೆ ಹೆಜ್ಜೆಯಿಟ್ಟಳು.

ಒಂದೆರಡು ಮೀಟರ್ ನಡೆಯುವಾಗ ಹೆಜ್ಜೆಗಳು ಸರಿಯಾಗಿ ಇಡಲಾಗಲಿಲ್ಲ. ಅನಂತರ ಸರಿಹೋಗಿತ್ತು. ಎಲ್ಲರೂ ಸ್ಟೇಷನ್‌ನಿಂದ ಹೊರಗೆ ಬಂದಂತೆ ಕೆವಿನ್ ಅವಳ ಕಡೆ ತಿರುಗಿ,

''ಎಲ್ಲಿಗೆ ಹೋಗ್ಬೇಕು ನೀವು?'' ಎಂದು ಕೇಳಿದ.

''ಇಲ್ಲೇ ಹತ್ತಿರ, ಪ್ರಸಿದ್ಧ್ ಟೆಕ್ ಪಾರ್ಕ್‌ನಲ್ಲಿ.''

''ನಾನೂ ಅಲ್ಲಿಗೇ ಹೋಗ್ತಿದ್ದೀನಿ. ಎಲ್ಲಿ ವರ್ಕ್ ಮಾಡ್ತಿದ್ದೀರಿ?''

''ಪ್ರೆಸ್ಟೀಜ್ ಎಲೆಕ್ಟ್ರಾನಿಕ್ಸ್‌ನಲ್ಲಿ.''

''ವಾಟ್ ಎ ಕೋ-ಇನ್ಸಿಡೆನ್ಸ್, ನಾನೂ ಅಲ್ಲೇ ವರ್ಕ್ ಮಾಡೋದು'' ಅವನ ಮಾತು ಕೇಳಿ ಅವಳು ಗೊಂದಲದಿಂದ ನೋಡಿದಳು.

''ಫೆಮಿಲಿಯರ್ ಅನ್ನಿಸಲ್ಲ ನೀವು. ಹೊಸದಾಗಿ ಜಾಯಿನ್ ಆಗಿದ್ದೀರಾ?''

''ಯೆಸ್. ಕೆವಿನ್ ಜೋಸೆಫ್'' ಎಂದು ಕೈ ನೀಡಿದ.

''ಪ್ರಾಂಜಲಿ'' ಅವಳೂ ನಗುತ್ತ ಹಸ್ತಲಾಘವವಿತ್ತಳು.

ಕೆವಿನ್, ಪ್ರಾಂಜಲಿಯ ಟೀಮ್‌ನಲ್ಲೇ ಇದ್ದಿದ್ದು ಅವರಿಬ್ಬರ ಸ್ನೇಹಕ್ಕೆ ಇಂಬುಕೊಟ್ಟಿತ್ತು. ಪ್ರಾಂಜಲಿ ಅವನನ್ನು ಆಲೋಕನಿಗೂ ಪರಿಚಯ ಮಾಡಿಸಿದ್ದಳು. ಆಗಾಗ ಕೆವಿನ್ ಜೊತೆ ಕಾಫಿಗೆ ಹೋಗುವುದು ಸಾಮಾನ್ಯವಾಗಿತ್ತು.

ಪಿ. ಜಿ. ನಾರಾಯಣ

'ನಮ್ಮ ತಂಡಕ್ಕೆ ವೈಭವ್ ಸೂರ್ಯವಂಶಿನ ಸೇರಿಸಿಕೊಂಡರೆ ಬೃಹತ್ ಮೊತ್ತದ ರನ್ ಮಾಡಿ ಗೆಲ್ಲಬಹುದು!!!'

ಒಮ್ಮೆ ಪ್ರಾಂಜಲಿ ಆಫೀಸಿನ ಮೆಟ್ಟಿಲುಗಳನ್ನು ಇಳಿಯುತ್ತಿದ್ದವಳು ಕುಸಿದು ಕೆಳಗುರುಳಿದಳು. ನಾಲ್ಕೈದು ಮೆಟ್ಟಿಲುಗಳಿಂದ ಉರುಳಿ ಬಿದ್ದಿದ್ದ ಪರಿಣಾಮ ಅವಳ ಮೊಣಕೈ, ಮೊಣಕಾಲಿಗೆ ಪೆಟ್ಟಾಗಿತ್ತು.

ವಿಷಯ ತಿಳಿದು ಕೆವಿನ್ ಆತಂಕಗೊಂಡ.

''ಜಾಸ್ತಿ ಏಟಾಗಿದ್ಯಾ ಪ್ರಾಂಜಲಿ? ಬೇಕಾದ್ರೆ ಡಾಕ್ಟರ್ ಹತ್ರ ಹೋಗೋಣ!''

''ಏನಿಲ್ಲ, ಕೈಗೆ, ಕಾಲಿಗೆ ಸ್ವಲ್ಪ ಮೂಕ ಪೆಟ್ಟಾಗಿದೆ. ಐ ಆ್ಯಮ್ ಓಕೆ'' ಪ್ರಾಂಜಲಿ ನಗುತ್ತ ಮಾತು ತೇಲಿಸಿದಳು.

ಅದೇ ಸಮಯಕ್ಕೆ ಆಫೀಸಿನ ಕೆಲಸದ ಮೇಲೆ ಆಲೋಕ್ ಮೂರು ವಾರ ಜರ್ಮನಿಗೆ ಹೋಗಿದ್ದ. ಅವನು ಗಾಬರಿಯಾಗುತ್ತಾನೆಂದು ಪ್ರಾಂಜಲಿ ಅವನಿಗೆ ಆ ವಿಷಯ ತಿಳಿಸಲಿಲ್ಲ. ಪೆಟ್ಟು ವಾಸಿಯಾದಂತೆ ಅದನ್ನು ಮರೆತುಬಿಟ್ಟಳು.

ಈಗೀಗ ಪ್ರಾಂಜಲಿಗೆ ಹೆಚ್ಚು ಹೊತ್ತು ಲ್ಯಾಪ್‌ಟಾಪ್ ಮುಂದೆ ಕುಳಿತರೆ ಕಣ್ಣಿಗೆ ಬಹಳ ಆಯಾಸವಾಗುತ್ತಿತ್ತು. ದೃಷ್ಟಿದೋಷ ಇರಬಹುದೆಂದು ಕಣ್ಣಿನ ಡಾಕ್ಟರ್‌ಗೆ ತೋರಿಸಲಾಯಿತು.

''ಕೆಲವರಿಗೆ ಎಲೆಕ್ಟ್ರಾನಿಕ್ ಸಿಸ್ಟಮ್‌ಗಳ ಗ್ಲೇರ್‌ನಿಂದ ಕಣ್ಣಿಗೆ ಸ್ಟ್ರೈನ್ ಆಗುತ್ತೆ. ವರ್ಕ್ ಮಾಡೋವಾಗ ಕನ್ನಡಕ ಹಾಕ್ಕೊಳ್ಳಿ'' ಎಂದು ನೇತ್ರ ವೈದ್ಯರು ಸಲಹೆ ನೀಡಿದರು.

ಕರಿಯ ಫ್ರೇಮಿನ ಕನ್ನಡಕ ಪ್ರಾಂಜಲಿಯ ಬಿಳುಪಾದ ಮುಖದ ಮೇಲೆ ಆಭರಣದಂತೆ ಕಂಗೊಳಿಸತೊಡಗಿತು.

''ನೀನು ಕನ್ನಡಕ ಹಾಕ್ಕೊಂಡ್ರೆ ಇನ್ನೂ ಅಟ್ರಾಕ್ಟಿವ್ ಆಗಿ ಕಾಣ್ತೀಯ'' ಎಂದು ಆಲೋಕ್ ಆಗಾಗ ಅವಳನ್ನು ರೇಗಿಸುತ್ತಿದ್ದುದುಂಟು.

ಆದರೆ, ಕನ್ನಡಕದಿಂದ ಪ್ರಾಂಜಲಿಗೆ ತೊಂದರೆ ಕಡಿಮೆಯಾಗಿರಲಿಲ್ಲ. ಬರುಬರುತ್ತಾ ಕಣ್ಣು ಮಿಟುಕಿಸಿದರೆ, ಕಣ್ಣು ತಿರುಗಿಸಿದರೆ ನೋವು ಕಾಣಿಸಿಕೊಂಡಾಗ ಅವಳಿಗೆ ಆತಂಕವಾಯಿತು.

ಅವಳ ಸಹೋದ್ಯೋಗಿ ಸಂಜನಾ ಅವಳ ಅವಸ್ಥೆ ಕಂಡು,

''ಕಣ್ಣಿನ ತೊಂದ್ರೆಗೆ ಕ್ಯಾರೆಟ್ ತುಂಬಾ ಒಳ್ಳೇದು. ದಿನಾ ಕ್ಯಾರೆಟ್ ಜ್ಯೂಸ್ ಕುಡಿ'' ಎಂದು ಹೇಳಿದ್ದನ್ನು ಪ್ರಾಂಜಲಿ ಪಾಲಿಸಿದಳು.

ಅದೇನು ಕಾಕತಾಳೀಯವೋ ಕ್ರಮೇಣ ಪ್ರಾಂಜಲಿಗೆ ಕಣ್ಣಿನ ತೊಂದರೆ ವಾಸಿಯಾಗಿತ್ತು. ಅಂದಿನಿಂದ ಬಿಡದೇ ಅವಳು ಬೆಳಗ್ಗೆ ಎದ್ದು ಕ್ಯಾರೆಟ್ ರಸ ಕುಡಿಯುತ್ತಿದ್ದಳು.

ಇದೆಲ್ಲ ಕಾಯಿಲೆಯ ಲಕ್ಷಣಗಳೆಂದು ಅವಳಾಗಲಿ, ಆಲೋಕ್ ಆಗಲಿ ಒಂದು ಸಲವೂ ಭಾವಿಸಿರಲಿಲ್ಲ. ಅದನ್ನು ತಮ್ಮ ಜೀವನದಲ್ಲಿ ಸಹಜವಾಗಿ ಸ್ವೀಕರಿಸಿ ಮುಂದೆ ಸಾಗಿದ್ದರು.

ಒಮ್ಮೆ ಲಂಚ್ ಬ್ರೇಕ್‌ನಲ್ಲಿ ಕೆವಿನ್ ಪ್ರಾಂಜಲಿಯನ್ನರಸಿ ಬಂದಾಗ ಅವಳು ತನ್ನ ಕ್ಯಾಬಿನ್‌ನಲ್ಲಿ ಸುಮ್ಮನೇ ಕುಳಿತಿರುವುದನ್ನು ಕಂಡು ಅವಳ ಬಳಿ ಬಂದು ನಿಂತ.

''ಲಂಚ್‌ಗೆ ಹೋಗೋಣ ಬಾ.''

ಇತ್ತೀಚೆಗೆ ಇಬ್ಬರೂ ಏಕವಚನದಲ್ಲೇ ಸಂಬೋಧಿಸಿಕೊಳ್ಳುತ್ತಿದ್ದರು.

ಪ್ರಾಂಜಲಿ ಕುಳಿತ ಜಾಗದಿಂದಲೇ ಅವನತ್ತ ನೋಡಿದಳು.

''ಐ ಕಾಂಟ್...''

''ಯಾಕೆ, ಹಸಿವಿಲ್ವಾ?''

''ಕೈ ಯಾಕೋ ತುಂಬ ಜೋಮು ಹಿಡಿದುಬಿಟ್ಟಿದೆ.

ಹಣ್ಣೆಲೆಯ ಹಾಡು

ಕಿರುಹಣತೆಯ ಬೆಳಕನು
ಬಿರುಗಾಳಿಯು ನುಂಗಿ
ಕಾರಿರುಳ ಮಗುವಿಗೆ
ಅಮಾವಾಸ್ಯೆಯ ಅಂಗಿ

ತಡವರಿಸುವ ಮುಪ್ಪಿಗೆ
ಊರುಗೋಲು ಬಹುದೂರ
ಉದುರುವ ಹಣ್ಣೆಲೆಗೆ
ಭೂತಾಯಿಯೇ ಆಧಾರ

ಮೊಗದ ಮಂದಹಾಸವೆಲ್ಲ
ಸುಕ್ಕಿನೊಳು ಅಡಗಿ
ಸೊಕ್ಕಿನ ದಿನಗಳೆಲ್ಲ
ಕಾಲನ ಹೊಡೆತಕ್ಕೆ ನಲುಗಿ

ಎಷ್ಟು ಹಳಹಳಿಸಿದರೂ
ದಿನ ಬಂದೀತೇ ಮರಳಿ
ದೂರದಲ್ಲೆಲ್ಲೋ ಕೇಳಿದಂತಿದೆ
ಮಂದ್ರಸ್ಥಾಯಿಯ ಮುರಳಿ

❑ **ಗೀತಾ ಮಕ್ಕಿಮನೆ**

ಸೂಜಿ ಚುಚ್ಚಿದ ಹಾಗೆ ಆಗ್ತಾ ಇದೆ. ಕೆವಿನ್, ಕೆಲ್ಸ ಮಾಡೋಕ್ಕೂ ಆಗ್ತಿಲ್ಲ'' ಅವಳ ಮಾತು ಅವನಿಗೆ ಆತಂಕವಾಯಿತು.

''ಆಲೋಕ್‌ನ ಕರೆಯಲಾ?''

''ಅವನು ಆಫೀಸಿಗೆ ಬಂದಿಲ್ಲ. ಮನೆಯಿಂದಾನೇ ವರ್ಕ್ ಮಾಡ್ತಿದ್ದಾನೆ ಇವತ್ತು.''

ಕೆವಿನ್ ಅಸಹಾಯಕತೆಯಿಂದ,

''ಓ... ಹೌದಾ? ಎಲ್ಲಿ ಕೈ ತೋರಿಸು'' ಎಂದು ಅವಳ ಕೈಗಳನ್ನು ಹಿಡಿದು ಶಾಖ ಕೊಡುವಂತೆ ಚೆನ್ನಾಗಿ ಉಜ್ಜಿದ.

''ಈಗ ಕಡಿಮೆ ಆಯ್ತಾ?''

ಪ್ರಾಂಜಲಿ ಸಹಜವಾಗಿ,

''ಸರಿಹೋಗುತ್ತೆ ಬಿಡು. ಎಲ್ಲೋ ಕೆಲ್ಸ ಮಾಡ್ತಾ ಒಂದೇ ಜಾಗದಲ್ಲಿ ಕೈ ಇಟ್ಕೊಂಡು ಕೂತಿದ್ದೆ ಅನ್ಸುತ್ತೆ. ಅದಕ್ಕೆ ಜೋಮು ಹಿಡಿದಿದೆ'' ಎಂದಳು.

ಅವಳಿಗೆ ಕೈಲಿ ಚಮಚ ತೆಗೆದುಕೊಂಡು ತಿನ್ನಲೂ ಸಾಧ್ಯವಾಗಲಿಲ್ಲ. ಕೆವಿನ್ ತಾನೇ ಅವಳಿಗೆ ತಿನ್ನಲು ಸಹಾಯ ಮಾಡಿದ.

ಅಲ್ಲಿ ಬಂದ ಕೆಲವು ಸಹೋದ್ಯೋಗಿಗಳು ಅವರಿಬ್ಬರನ್ನು ಕಂಡು ಮುಖ ಮುಖ ನೋಡಿಕೊಂಡರು. ಆದರೆ, ಅವರ ಮುಂದೆ ಯಾರೂ ಮಾತನಾಡಲಿಲ್ಲ.

''ಆಲೋಕ್ ವರ್ಕ್ ಫ್ರಂ ಹೋಂ'' ಎಂದು ಅರ್ಥಗರ್ಭಿತವಾಗಿ ಮಾತಾಡಿಕೊಂಡಿದ್ದು ಪ್ರಾಂಜಲಿ, ಕೆವಿನ್ ಇಬ್ಬರಿಗೂ ಕೇಳಿಸಿತು.

ಕೆವಿನ್‌ನ ಮುಖ ಬಿರುಸಾಯಿತು.

''ಛೇ, ಡರ್ಟಿ ಮೈಂಡ್'' ಎಂದು ಹಲ್ಲು ಕಚ್ಚಿ ನುಡಿದಾಗ ಪ್ರಾಂಜಲಿಯೇ ಅವನಿಗೆ ಸಮಾಧಾನ ಹೇಳಿದಳು.

''ಪರ್ವಾಗಿಲ್ಲ ಬಿಡು. ಲೋಕಿ ನ್ಯಾರೋ ಮೈಂಡೆಡ್ ಅಲ್ಲ! ಅಷ್ಟು ಸಾಕು ನನಗೆ.''

ಎರಡು ದಿನಗಳಾದರೂ ಪ್ರಾಂಜಲಿಗೆ ಕೈ-ಕಾಲಿನ ಜೋಮು ಉಪಶಮನವಾಗದಾಗ ಆಲೋಕನೂ ಚಿಂತೆಗೊಳಗಾದ.

''ಡಾಕ್ಟರ್ ಹತ್ರ ತೋರಿಸೋಣ ಪ್ರಾಂಜಲಿ!''

''ಅಯ್ಯೋ, ಇದಕ್ಕೆಲ್ಲ ಡಾಕ್ಟರ್ ಯಾಕೆ?'' ಎಂದು ಪ್ರಾಂಜಲಿ ಪ್ರತಿಭಟಿಸಿದರೂ ಕೇಳದೆ, ಆಲೋಕ್ ಮನೆಯ ಬಳಿ ಇದ್ದ ಆಸ್ಪತ್ರೆಯಲ್ಲಿ ಅಪಾಯಿಂಟ್ಮೆಂಟ್ ತೆಗೆದುಕೊಂಡ.

ಆದರೆ ಅಂದು ಅನಿರೀಕ್ಷಿತವಾಗಿ ಆಲೋಕ್‌ನ ಟೀಮ್‌ನಲ್ಲಿ ಲಂಡನ್‌ನಿಂದ ಮೇಲಧಿಕಾರಿಗಳು ಬರುವವರಿದ್ದದ್ದರಿಂದ ಅವನು ಬೆಳಗ್ಗೆಯೇ ಆಫೀಸಿಗೆ ಹೋಗಬೇಕಾಯಿತು.

''ನೀನು ಹೋಗು ಲೋಕಿ. ನಾನೊಬ್ಬೇ ಡಾಕ್ಟರ್ ಹತ್ರ ಹೋಗಿಬರ್ತೀನಿ'' ಪ್ರಾಂಜಲಿ ಅವನಿಗೆ ಅಭಯ ನೀಡಿದಳು.

ಪ್ರಾಂಜಲಿ ಸಿದ್ಧಳಾಗುತ್ತಿದ್ದಂತೆ ಕೆವಿನ್‌ನಿಂದ ಫೋನ್ ಬಂತು.

''ಪ್ರಾಂಜಲಿ, ನಾನು ಕಾರಿನಲ್ಲಿ ಬರ್ತಾ ಇದ್ದೀನಿ. ನಿನ್ನನ್ನು ಪಿಕ್ ಮಾಡ್ಲಾ?''

''ಇಲ್ಲ ಕೆವಿನ್. ಇವತ್ತು ರಜ ಹಾಕಿದ್ದೀನಿ. ಡಾಕ್ಟರ್ ಹತ್ರ ಅಪಾಯಿಂಟ್ಮೆಂಟ್ ಇದೆ.''

ಆಲೋಕ್ ಅವಳ ಜೊತೆ ಇಲ್ಲವೆಂದು ತಿಳಿದಾಗ ಪ್ರಾಂಜಲಿ ಎಷ್ಟು ಬೇಡವೆಂದು ಹೇಳಿದರೂ ಕೇಳದೆ ಕೆವಿನ್ ತಾನೇ ಕಾರಿನಲ್ಲಿ ಅವಳನ್ನು ಆಸ್ಪತ್ರೆಗೆ ಕರೆದೊಯ್ದ.

ಅಲ್ಲಿನ ವೈದ್ಯರು ಪ್ರಾಂಜಲಿ ವಿವರಿಸಿದ ಲಕ್ಷಣಗಳನ್ನು ಕೇಳಿ,

''ನೀವೊಂದು ಸಲ ನ್ಯೂರಾಲಜಿಸ್ಟ್ ಹತ್ರ ತೋರಿಸಿಕೊಳ್ಳೋದು ಒಳ್ಳೇದು'' ಎಂದು ಅಭಿಪ್ರಾಯಪಟ್ಟರು.

''ಅಯ್ಯೋ, ಈ ಡಾಕ್ಟರ್‌ಗಳು ಇಲಿಗಳ್ನ ಹುಲಿ ಮಾಡಿಬಿಡ್ತಾರೆ. ಅವರ್‍ಗೆ ನಮಗಿಂತ ಮೆಡಿಕಲ್ ನಾಲೆಡ್ಜ್ ಜಾಸ್ತಿ ಇರುತ್ತಲ್ಲ. ಅದಕ್ಕೆ ಓವರ್ ಥಿಂಕ್ ಮಾಡ್ತಾರೆ. ಅಂಥದ್ದೇನಾಗಿದೆ ನನಗೆ? ಇವರೇ ಮಾತ್ರೆ ಬರೆದುಕೊಟ್ಟಿದ್ರೆ ಆಗ್ತಿತ್ತು'' ಪ್ರಾಂಜಲಿ ಕೆವಿನ್ ಮುಂದೆ ಗೊಣಗಿದಳು.

''ಇಲ್ಲ ಪ್ರಾಂಜಲಿ... ಒಂದ್ಸಲ ಸ್ಪೆಷಲಿಸ್ಟ್ ಹತ್ರ ತೋರಿಸೋದ್ರಿಂದ ಏನೂ ತೊಂದ್ರೆ ಆಗಲ್ಲ. ನಿನ್ನ ಮನಸ್ಸಿಗೆ ನಿರಾಳ ಆಗುತ್ತೆ'' ಎಂದ ಕೆವಿನ್ ಮಾತಿನ ಮೇರೆಗೆ ಮಣಿದು,

''ನಮ್ಮ ತಂದೆಯ ಫ್ರೆಂಡ್ ಡಾ. ಭಕ್ತವತ್ಸಲಂ ಅಂತ ನ್ಯೂರಾಲಜಿಸ್ಟ್ ಇದ್ದಾರೆ. ಅವರ ಹತ್ರಾನೇ ಹೋಗ್ತೀನಿ'' ಎಂದು ಪ್ರಾಂಜಲಿ ಫೋನ್ ಮಾಡಿ ಅಪಾಯಿಂಟ್ಮೆಂಟ್ ತೆಗೆದುಕೊಂಡಳು.

ಆಲೋಕನಿಗೆ ಅದೇ ಸಮಯದಲ್ಲಿ ಆಫೀಸಿಗೆ ಸಂಬಂಧಪಟ್ಟಂತೆ ಹೆಚ್ಚುವರಿ ಕೆಲಸ! ಪ್ರಾಂಜಲಿ ತಾನೊಬ್ಬಳೇ ಡಾ. ಭಕ್ತವತ್ಸಲಂ ಬಳಿ ಹೋಗಲು ನಿರ್ಧರಿಸಿ,

''ಡಾಕ್ಟರ್ ಅಂಕಲ್ ನನಗೇನು ಹೊಸಬರಲ್ಲ ಲೋಕಿ. ಚಿಕ್ಕಂದಿನಿಂದ ನೋಡಿದ್ದಾರೆ. ನಾನೊಬ್ಬೇ ಹೋಗಿಬರ್ತೀನಿ'' ಎಂದು ಹೇಳಿದಳು.

ಡಾ. ಭಕ್ತವತ್ಸಲಂ ಅರುವತ್ತೈದರ ಶಾಂತ ಮುಖಭಾವದ ವ್ಯಕ್ತಿ. ಬಕ್ಕತಲೆ, ಕಣ್ಣಿಗೆ ಹಾಕಿದ ಕನ್ನಡಕ, ಮೆಲುವಾಗಿ ಮಾತನಾಡುವ ರೀತಿ, ತಾಳ್ಮೆಯಿಂದ ಆಲಿಸುವ ಪ್ರವೃತ್ತಿ ಎಲ್ಲವೂ ಅವರನ್ನು ಜನಪ್ರಿಯ ವೈದ್ಯರನ್ನಾಗಿ ಮಾಡಿಸಿತ್ತು.

''ನೀನು ಕಾಲೇಜಿಗೆ ಹೋಗ್ತಿದ್ದಾಗ ನೋಡಿದ್ದು. ಆಗ್ಲೇ ಮದ್ವೆ ಮಾಡ್ಕೊಂಡು ಸೆಟಲ್ ಆಗ್ಬಿಟ್ಟಿದ್ದೀಯಾ'' ಎಂದು ನಗುತ್ತ ಅವಳನ್ನು ಬರಮಾಡಿಕೊಂಡರು.

''ನೀವು ಸ್ವಲ್ಪಾನೂ ಬದ್ಲಾಯಿಸಿಲ್ಲ ಅಂಕಲ್. ಆದ್ರೆ, ತಲೆ ಮಾತ್ರ ಪೂರ್ತಿ ಬಾಲ್ಡ್ ಆಗ್ಬಿಟ್ಟಿದೆ'' ಪ್ರಾಂಜಲಿ ಹಿಂದಿನ ಸಲುಗೆಯಿಂದಲೇ ಮಾತನಾಡಿದಳು.

''ಏನು ಮಾಡೋದು? ನಮ್ಮ ಪೂರ್ವಿಕರಿಂದ ಬಂದಿರೋ ಉಡುಗೊರೆ ಇದು'' ಎಂದು ತಮ್ಮ ಬಕ್ಕತಲೆಯ ಮೇಲೆ ಕೈಯಾಡಿಸಿಕೊಂಡರು.

ತನ್ನ ತಂದೆ-ತಾಯಿಯ ಬಗ್ಗೆ ಒಂದೆರಡು ಮಾತನಾಡಿದ ಮೇಲೆ ವಿಷಯ ಗಾಂಭೀರ್ಯತೆಗೆ ತಿರುಗಿತು.

''ಏನು ತೊಂದ್ರೆ ನಿಂಗೆ?'' ಎಂದು ಪ್ರಶ್ನಿಸಿದರು.

ಪ್ರಾಂಜಲಿ ತನ್ನ ತೊಂದರೆಗಳನ್ನು ಹೇಳಿಕೊಂಡಾಗ ಅವರು ಅವಳನ್ನೇ ದೀರ್ಘವಾಗಿ ನೋಡಿದರು.

''ಮೊದಲ್ನೇ ಸಲ ನಿಂಗೆ ತೊಂದ್ರೆ ಪ್ರಾರಂಭ ಆಗಿದ್ದು ಯಾವಾಗ?''

ಪ್ರಾಂಜಲಿ ನೆನಪಿಸಿಕೊಳ್ಳುತ್ತ,

'ಕಾಲುಗಳೆಲ್ಲ ಸುಸ್ತಾಗಿತ್ತು. ನಡೆಯೋಕ್ಕೇ ಆಗ್ತಿರ್ಲಿಲ್ಲ. ಆಗ ಮನೆ ಹತ್ರ ಡಾಕ್ಟರ್‌ಗೆ ತೋರಿಸ್ದೆ. ಬಿ.ಕಾಂಪ್ಲೆಕ್ಸ್ ಮಾತ್ರೆ ಕೊಟ್ಟಿದ್ರು. ಹಾಗೇ ವಾಸಿಯಾಯಿತು'' ಎಂದಳು.

''ಯಾವಾಗ ಹೀಗಾಗಿದ್ದು?''

''ಮದ್ವೆಗೂ ಮುಂಚೆ... ಸುಮಾರು ನಾಲ್ಕು ವರ್ಷಗಳ ಹಿಂದೆ.''

''ಆಮೇಲೆ ಮತ್ತೆ ಆ ರೀತಿ ಏನಾದ್ರೂ ತೊಂದ್ರೆಯಾಗಿತ್ತಾ?''

''ಒಂದೆರಡು ಸಲ ಆಗಿದೆ ಅಂಕಲ್. ಕಾಲೆಲ್ಲಾ ಶಕ್ತಿ ಕಳ್ಕೊಂಡ ಹಾಗಾಗುತ್ತೆ. ಆಮೇಲೆ ಸರಿಹೋಯ್ತು.''

''ಮತ್ತೇನಾದ್ರೂ ತೊಂದರೆಗಳು ಕಾಣಿಸ್ಕೊಳ್ಳೋಕೆ ಶುರುವಾಯ್ತಾ?''

''ಹೌದು ಅಂಕಲ್. ಲ್ಯಾಪ್‌ಟಾಪ್ ಮುಂದೆ ಕೂತ್ರೆ ಕಣ್ಣುನೋವು, ಗ್ಲೇರ್ ಆಗಲ್ಲ ಅಂತ ಕನ್ನಡಕ ಹಾಕ್ಕೋತೀನಿ. ಆದ್ರೂ ಆಗಾಗ ಬರ್ತಾ ಇರುತ್ತೆ. ಈ ಸಲ ಅಂತೂ ಕಣ್ಣು ಸುತ್ತಮುತ್ತ ತಿರುಗಿಸಿದ್ರೂ ನೋವಾಗ್ತಿತ್ತು. ಐ ಸ್ಪೆಷಲಿಸ್ಟ್‌ಗೆ ತೋರಿಸ್ದೆ. 'ಆಪ್ಟಿಕ್ ನ್ಯೂರೈಟಿಸ್' ಅಂತೇನೋ ಹೇಳಿದ್ರು. ಆದ್ರೆ ಆಮೇಲೆ ಅದು ವಾಸಿಯಾಯಿತು. ಸುಮ್ಮನಾಗಿಬಿಟ್ಟೆ.''

''ಈ ಕಣ್ಣಿನ ತೊಂದ್ರೆ ಹಿಂದೆ ಯಾವಾಗ್ಲಾದ್ರೂ ಆಗಿತ್ತಾ?''

''ಎರಡು ವರ್ಷಗಳ ಹಿಂದೆ ನಾನು, ಲೋಕಿ ಕಾಶ್ಮೀರಕ್ಕೆ ಹೋಗಿದ್ವಿ. ಅಲ್ಲಿನ ವೆದರ್‌ಗೋ ಏನೋ ನನ್ನ ಬಲಗಣ್ಣು ಮಂಜಾಗಿತ್ತು. ನಿಜ ಹೇಳ್ಬೇಕೂಂದ್ರೆ ಕಲರ್ ಬ್ಲೈಂಡ್‌ನೆಸ್ ಅಂತಾರಲ್ಲ ಹಾಗಾಗಿತ್ತು. ಬಣ್ಣಗಳು ಗುರುತಿಸೋಕ್ಕಾಗ್ತಿರ್ಲಿಲ್ಲ.''

ಡಾ. ಭಕ್ತವತ್ಸಲಂ ಮುಖ ಗಂಭೀರವಾಗಿತ್ತು.

''ಈಗ ನಿಂಗೆ ಕಾಲಿನ ತೊಂದ್ರೆ ಹೇಗಿದೆ?''

''ಬಲಗಾಲು ತುಂಬಾ ವೀಕಾಗಿದೆ ಅನ್ಸುತ್ತೆ ಅಂಕಲ್. ಮೊದ್ಲು ನಾನು ಮೆಟ್ಟಿಲುಗಳು ಹತ್ತಿ ಹೋಗ್ತಾ ಇದ್ದೆ. ಈಗ ಆಗ್ತಾನೇ ಇಲ್ಲ. ಲಿಫ್ಟ್‌ನಲ್ಲೇ ಓಡಾಡ್ತೀನಿ. ಉರಿ ಉರಿ, ಜೋಮು ಹಿಡಿದ ಹಾಗಾಗಿಬಿಟ್ಟಿದೆ.''

ಡಾ. ಭಕ್ತವತ್ಸಲಂ ಕೆಲವು ಕ್ಷಣಗಳು ಹಾಗೇ ಕುಳಿತಿದ್ದರು. ಅನಂತರ ಅವರ ಲೆಟರ್‌ಪ್ಯಾಡ್‌ನಲ್ಲಿ ಬರೆಯುತ್ತ,

''ಕೆಲವು ಬ್ಲಡ್ ಟೆಸ್ಟ್‌ಗಳು, ಇನ್‌ವೆಸ್ಟಿಗೇಶನ್ ಮಾಡಿಸ್ಬೇಕು, ಮಾತ್ರೆಗಳನ್ನೂ ಬರೆದು ಕೊಡ್ತೀನಿ. ಆದ್ರೆ ವಾಸಿಯಾಗುತ್ತೆ ಅಂತ ನೆಗ್ಲೆಕ್ಟ್ ಮಾಡ್ಬೇಡ ಪ್ರಾಂಜಲಿ. ಟೆಸ್ಟ್‌ಗಳು ಮಾಡಿಸ್ಲೇಬೇಕು'' ಎಂದಾಗ ಪ್ರಾಂಜಲಿ ನಸುನಗೆ ಬೀರಿದಳು.

(ಮುಂದುವರಿಯುವುದು

30-4-2026ರಿಂದ 6-5-2026ರವರೆಗೆ)

(ಜನ್ಮರಾಶಿಗನುಗುಣವಾಗಿ)

❒ ಎಸ್. ವಿಶ್ವಮೂರ್ತಿ ಬಡಿಕಿಲ್ಲಾಯ

ಮೇಷ

ಈ ವಾರ ಹೊಸ ಉತ್ಸಾಹದಿಂದ ಕೆಲಸಗಳನ್ನು ಪ್ರಾರಂಭಿಸುತ್ತೀರಿ. ಕಾರ್ಯಕ್ಷೇತ್ರದಲ್ಲಿ ನಿಮ್ಮ ನಿರ್ಧಾರಗಳು ಪ್ರಶಂಸೆಗೆ ಪಾತ್ರವಾಗುತ್ತವೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯ ಅಗತ್ಯವಿದೆ. ಕುಟುಂಬದ ಜೊತೆ ಸಮಯ ಕಳೆಯಲು ಅವಕಾಶ ಸಿಗುತ್ತದೆ. ಸ್ನೇಹಿತರ ನೆರವಿನಿಂದ ಸಮಸ್ಯೆಗಳು ಪರಿಹಾರ ಕಾಣಲಿವೆ. ಆರೋಗ್ಯದ ಬಗ್ಗೆ ಗಮನ ಅಗತ್ಯ.

ವೃಷಭ

ಹೊಸ ಹೊಸ ಅವಕಾಶಗಳು ನಿಮ್ಮನ್ನು ಅರಸಿ ಬರಲಿವೆ. ಶಾಂತಯುತವಾಗಿ ನಡೆಯುವ ಘಟನೆಗಳು ಮುದ ನೀಡಲಿವೆ. ಉದ್ಯೋಗದ ವಿಷಯದಲ್ಲಿ ಹೆಚ್ಚಿನ ಸ್ಥಿರತೆ ಕಾಣಲಿದೆ. ಆರ್ಥಿಕ ವ್ಯವಹಾರದಲ್ಲಿಯೂ ಹೆಚ್ಚಿನ ಲಾಭ ಸಿಗಲಿದೆ. ಒಟ್ಟಾರೆ ಪರಿಶ್ರಮಕ್ಕೆ ಸರಿಯಾದ ಫಲ ಖಂಡಿತ ದೊರಕುತ್ತದೆ. ಆರೋಗ್ಯದ ವಿಷಯದಲ್ಲಿ ಹೆಚ್ಚು ಎಚ್ಚರಬೇಕು.

ಮಿಥುನ

ಹೊಸ ಪರಿಚಯಗಳಿಂದ ಭವಿಷ್ಯದಲ್ಲಿ ಪ್ರಯೋಜನ ಸಿಗಲಿದೆ. ಸಂವಹನ ಕೌಶಲದಿಂದ ಹೊಸ ಆಲೋಚನೆಗಳಿಗೆ ಕಾರ್ಯರೂಪ ಸಿಗಲಿದೆ. ಹಣಕಾಸಿನ ವಿಷಯದಲ್ಲಿ ಏರುಪೇರುಗಳು ಇರುತ್ತವೆ. ಆಸ್ತಿ ಸಂಬಂಧ ಆತ್ಮೀಯರಿಂದಲೇ ಕಿರಿಕಿರಿ ಆಗಬಹುದು. ಆರೋಗ್ಯದ ವಿಷಯದಲ್ಲಿ ಚಿಕ್ಕ ಚಿಕ್ಕ ಸಮಸ್ಯೆಗಳು ಕಾಡುತ್ತವೆ.

ಕರ್ಕಾಟಕ

ಉದ್ಯೋಗ ಕ್ಷೇತ್ರದಲ್ಲಿ ಹೊಸ ಪ್ರಯತ್ನಕ್ಕಿಳಿದು ಯಶಸ್ಸನ್ನು ಸಾಧಿಸುತ್ತೀರಿ. ಕೆಲಸದ ಒತ್ತಡಗಳು ಹೆಚ್ಚಾದ್ದರೆ, ಮಾನಸಿಕವಾಗಿ ದುರ್ಬಲರಾಗುತ್ತೀರಿ. ಕುಟುಂಬದ ಬೆಂಬಲ ಸದಾ ನಿಮ್ಮ ಬೆನ್ನಿಗಿದೆ. ಕೆಲವು ಹಳೆಯ ವಿಷಯಗಳು ಮತ್ತೆ ಮುನ್ನೆಲೆಗೆ ಬರಲಿವೆ. ಆತ್ಮವಿಶ್ವಾಸ ಹೆಚ್ಚಿಸಿಕೊಂಡರೆ ಕೆಲವು ಕಾರ್ಯಗಳಲ್ಲಿ ಜಯ ಸಾಧಿಸುತ್ತೀರಿ. ಹೊಸ ಹೂಡಿಕೆಗಳನ್ನು ಮಾಡಿದರೆ ಲಾಭ ಗಳಿಸುತ್ತೀರಿ.

ಸಿಂಹ

ಉದ್ಯೋಗ ಕ್ಷೇತ್ರದಲ್ಲಿ ನಿಮಗೆ ಹೊಸ ಅವಕಾಶಗಳು ಎದುರಾಗುತ್ತವೆ. ಆರ್ಥಿಕವಾಗಿ ಹೆಚ್ಚು ಲಾಭಗಳಿಸುವ ಸಮಯವಿದು. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿ ಸಕಾರಾತ್ಮಕ ಅಂಶಗಳು ಎದುರಾಗುತ್ತವೆ. ಉದ್ಯೋಗ ಅರಸುವವರಿಗೆ ಒಳ್ಳೆಯ ಉದ್ಯೋಗ ಸಿಗಲಿದೆ. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ ತೊಂದರೆ ಬರುವ ಸಾಧ್ಯತೆಯಿದೆ.

ಕನ್ಯಾ

ವಿವಾಹ ಪ್ರಸ್ತಾವಗಳಿಗೆ ವಿಘ್ನಗಳು ಬರಬಹುದು. ಆರ್ಥಿಕವಾಗಿ ಹೆಚ್ಚಿನ ಲಾಭಗಳಿಸುತ್ತೀರಿ. ಕರ್ಮ ಕ್ಷೇತ್ರದಲ್ಲಿ ಸಕಾರಾತ್ಮಕ ಬದಲಾವಣೆ ಇದೆ. ಸರಕಾರಿ ಕಾರ್ಯಗಳಿಗೆ ತೊಂದರೆ ಬರುತ್ತದೆ. ದಾಂಪತ್ಯ ವಿಷಯದಲ್ಲಿ ಸಹನೆ ಅವಶ್ಯ. ಮಕ್ಕಳಿಗೆ ತೀರಾ ಸಲುಗೆ ನೀಡಬೇಡಿ. ಒತ್ತಡದ ಬದುಕಿನಿಂದ ಹೊರಬಂದರೆ ಒಳ್ಳೆಯದು.

ತುಲಾ

ಕಾರ್ಯಕ್ಷೇತ್ರದಲ್ಲಿ ಪಾರದರ್ಶಕತೆ ಇದ್ದರೆ ಹೊಸ ಅವಕಾಶಗಳು ಲಭಿಸುತ್ತವೆ. ವ್ಯಾಪಾರ, ಉದ್ಯೋಗ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣುತ್ತೀರಿ. ನಿಮ್ಮ ಪ್ರೀತಿ ಪಾತ್ರರೇ ನಿಮ್ಮನ್ನು ವಿರೋಧಿಸಬಹುದು. ಅವಿವಾಹಿತರಿಗೆ ಕಂಕಣ ಭಾಗ್ಯ ಸನಿಹವಿದೆ. ಅನೇಕ ದಿನಗಳಿಂದ ಕಾಡುತ್ತಿದ್ದ ಮಾನಸಿಕ ಒತ್ತಡಗಳು ನಿವಾರಣೆಯಾಗುತ್ತವೆ. ಸ್ವಂತ ವ್ಯವಹಾರಕ್ಕಿಳಿಯಲು ಇದು ಸಮಯವಲ್ಲ.

ವೃಶ್ಚಿಕ

ಔದಾಸೀನ್ಯದಿಂದ ಉತ್ತಮ ಅವಕಾಶಗಳು ಕೈ ತಪ್ಪಲಿವೆ. ಅನಗತ್ಯ ದೂರ ಪ್ರಯಾಣದ ಸಾಧ್ಯತೆಯಿದೆ. ಕೆಟ್ಟ ಹವ್ಯಾಸಗಳು ಭವಿಷ್ಯತ್ತಿಗೆ ಮಾರಕವಾಗಲಿವೆ. ಉದ್ಯೋಗ ಕ್ಷೇತ್ರದಲ್ಲಿ ಅಸ್ತಿತ್ವಕ್ಕಾಗಿ ಹೋರಾಟ ಅನಿವಾರ್ಯ. ಕೌಟುಂಬಿಕ ಜೀವನದಲ್ಲಿ ಸುಧಾರಣೆ ಇದೆ. ಧ್ಯಾನ ಪ್ರಾಣಾಯಾಮಗಳಿಂದ ಒತ್ತಡಗಳನ್ನು ನಿವಾರಿಸಿಕೊಳ್ಳಿ.

ಧನು

ಕ್ರೀಡೆ ಮತ್ತು ಕಲಾಕ್ಷೇತ್ರದಲ್ಲಿರುವವರಿಗೆ ಉನ್ನತ ಮಟ್ಟಕ್ಕೇರುವ ಅವಕಾಶವಿದೆ. ಪಾಲುದಾರಿಕೆ ವ್ಯವಹಾರಗಳು ಹೆಚ್ಚಿನ ಲಾಭ ತಂದು ಕೊಡಲಿವೆ. ವೈಜ್ಞಾನಿಕ ವಿಚಾರಗಳಲ್ಲಿ ಆಸಕ್ತಿ ಹೆಚ್ಚಿಸಿಕೊಳ್ಳಿ. ಕಣ್ಣಿಗೆ ಸಂಬಂಧಿಸಿದ ತೊಂದರೆಗಳನ್ನು ನಿರ್ಲಕ್ಷಿಸಬೇಡಿ. ಮಾತು ತುಟಿ ಮೀರಿ ಹೋಗದಿರಲಿ. ಹೊಸ ಮನೆ ಖರೀದಿಸಬಹುದು.

ಮಕರ

ಆರ್ಥಿಕ ಸ್ಥಿತಿ ಉತ್ತಮವಾದರೂ ಖರ್ಚು ಅಧಿಕವಾಗಬಹುದು. ವ್ಯಾಪಾರ – ವ್ಯವಹಾರ ಕ್ಷೇತ್ರಗಳಲ್ಲಿ ಹೆಚ್ಚಿನ ಹೂಡಿಕೆ ಮಾಡಬೇಡಿ. ಸ್ನೇಹ ಸಂಬಂಧಗಳಲ್ಲಿ ಹಣದ ವ್ಯವಹಾರ ಮಾಡಿ, ಮಾನಸಿಕ ನೆಮ್ಮದಿ ಹಾಳುಮಾಡಿಕೊಳ್ಳಬೇಡಿ. ವಾರದ ಆರಂಭದ ದಿನಗಳಲ್ಲಿ ದೂರ ಪ್ರವಾಸ ಮಾಡಬಹುದು. ರಾಜಕಾರಣದಲ್ಲಿರುವವರಿಗೆ ಗುರುವಿನ ಮಾರ್ಗದರ್ಶನ ಅಗತ್ಯ. ಮಕ್ಕಳ ಪ್ರಗತಿ ಖುಷಿ ಕೊಡಲಿದೆ.

ಕುಂಭ

ಸಣ್ಣ-ಪುಟ್ಟ ವ್ಯಾಪಾರಗಳನ್ನು ಮಾಡುವವರಿಗೆ ಉತ್ತಮ ಸಮಯ. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ. ಸದಾಚಾರ ಹಾಗೂ ಸ್ವಪ್ರಯತ್ನದಿಂದ ಲಾಭ ಹೆಚ್ಚಲಿದೆ. ಉದ್ಯೋಗ ಆಕಾಂಕ್ಷಿಗಳಿಗೆ ಶುಭ ಸುದ್ದಿ ಸಿಗುತ್ತದೆ. ಕೆಲವು ವಿಷಯಗಳನ್ನು ಅತಿಯಾಗಿ ಸಮರ್ಥಿಸಿ ವಿವಾದಗಳನ್ನು ಮೈಗೆಳೆದುಕೊಳ್ಳಬೇಡಿ. ವಾಹನ ಚಾಲನೆಯಲ್ಲಿ ಹೆಚ್ಚು ಜಾಗ್ರತೆ ಬೇಕು.

ಮೀನ

ಹೊಸ ವ್ಯವಹಾರಗಳಿಗೆ ಕೈಹಾಕುವ ಮುನ್ನ ಹಲವು ಬಾರಿ ಯೋಚಿಸಿ. ನೇರ ನಡೆ-ನುಡಿಗಳಿಂದ ಅನ್ಯರ ಮನಸ್ಸನ್ನು ಗೆಲ್ಲುತ್ತೀರಿ. ಸರಕಾರಿ ಉದ್ಯೋಗಕ್ಕಾಗಿ ಮಾಡುವ ಪ್ರಯತ್ನ ಫಲಪ್ರದವಾಗುತ್ತದೆ. ತ್ವರಿತ ನಿರ್ಧಾರಗಳು ಹೆಚ್ಚಿನ ಯಶಸ್ಸನ್ನು ತಂದುಕೊಡಲಿವೆ. ಷೇರು, ಲಾಟರಿ ಇತ್ಯಾದಿ ವ್ಯವಹಾರಗಳಿಂದ ದೂರವಿರುವುದೇ ಒಳಿತು. ಚಿನ್ನಾಭರಣ ಖರೀದಿ ಮಾಡಬಹುದು.

ವಾರದ ವಿಶೇಷ: ಏ. 30-ನರಸಿಂಹ ಜಯತಿ ಮೇ 01-ಕಾರ್ಮಿಕರ ದಿನಾಚರಣೆ 3-ವಿಶ್ವ ಹಾಸ್ಯದಿನ 5- ಸಂಕಷ್ಟಹರ ಚತುರ್ಥಿ 6- ವಿಶ್ವ ಅಸ್ತಮಾ ದಿನ

ತಾರಾತರಂಗ

❑ದಿಯಾ

ಜೈಲರ್ 2 ತೆರೆಗೆ ಸಿದ್ಧ

ಬಹುನಿರೀಕ್ಷಿತ ತಮಿಳು ಚಿತ್ರ 'ಜೈಲರ್ 2' ಚಿತ್ರೀಕರಣ ಪೂರ್ಣಗೊಂಡಿದೆ. ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ ಈ ಪ್ಯಾನ್ ಇಂಡಿಯಾ ಸಿನೆಮಾ ಮತ್ತೊಮ್ಮೆ ಧೂಳೆಬ್ಬಿಸುವ ಸೂಚನೆ ನೀಡಿದೆ. ಇನ್ನು ಚಿತ್ರದ ಓಟಿಟಿ ಹಕ್ಕುಗಳನ್ನು ರೂ. 160 ಕೋಟಿಗಳಿಗೆ ಅಮೆಜಾನ್ ಪ್ರೈಮ್ ಖರೀದಿಸಿದೆ. ಇದು ತಮಿಳು ಚಿತ್ರರಂಗದಲ್ಲಿ ಈವರೆಗಿನ ಅತಿ ದೊಡ್ಡ ಓಟಿಟಿ ವ್ಯವಹಾರ ಎಂದೇ ಗುರುತಿಸಿಕೊಂಡಿದೆ. ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ ಈ ಚಿತ್ರದ ಮೊದಲ ಆವೃತ್ತಿ 2023ರಲ್ಲಿ ತೆರೆಕಂಡು ರೂ. 600 ಕೋಟಿಗೂ ಅಧಿಕ ಗಳಿಕೆ ಕಂಡಿತ್ತು.

ಕೇರಳ, ತಮಿಳುನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಣ ಮುಗಿಸಿದ್ದು, ಈ ವರ್ಷಾಂತ್ಯದೊಳಗೆ ಬಿಡುಗಡೆಗೊಳ್ಳುವ ನಿರೀಕ್ಷೆ ಇದೆ. ಮಲೆಯಾಳದ ಖ್ಯಾತ ನಟರಾದ ಮೋಹನ್‌ಲಾಲ್, ಸೂರಜ್ ವೆಂಜರಮೂಡು, ವಿಜಯ್ ಸೇತುಪತಿ, ರಮ್ಯಕೃಷ್ಣನ್, ಯೋಗಿ ಬಾಬು ಮುಂತಾದ ಕಲಾವಿದರು ಚಿತ್ರದಲ್ಲಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಪಾತ್ರ ಇಲ್ಲೂ ಮುಂದುವರಿಯಲಿದೆಯೇ ಎಂಬುದು ಸದ್ಯದ ಕುತೂಹಲ. 'ಜೈಲರ್' ಮೊದಲ ಭಾಗಕ್ಕೆ ಸೂಪರ್ ಹಿಟ್ ಹಾಡುಗಳನ್ನು ನೀಡಿದ್ದ ಅನಿರುದ್ಧ್ ರವಿಚಂದರ್ ಅವರೇ ಈ ಭಾಗಕ್ಕೂ ಸಂಗೀತ ಸಂಯೋಜನೆ ಮಾಡಿದ್ದಾರೆ.

ಆದರೆ ಚಿತ್ರದ ಸೆಟ್‌ನಿಂದ ತೆಗೆದ ಒಂದು ವಿಡಿಯೋ ಕ್ಲಿಪ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ನಿರ್ಮಾಣ ಸಂಸ್ಥೆಗೆ ತಲೆನೋವು ತಂದಿದೆ. ಇನ್ನೂ ಬಿಡುಗಡೆಯಾಗದ ವಿಜಯ್ ದಳಪತಿ ಅಭಿನಯದ 'ಜನನಾಯಗನ್' ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಸೋರಿಕೆಯಾದಂತೆ 'ಜೈಲರ್ 2' ಚಿತ್ರವೂ ಈ ಸಮಸ್ಯೆಯನ್ನು ಎದುರಿಸುವ ಸಾಧ್ಯತೆಗಳಿವೆ.

ಆ್ಯನಿಮೇಟೆಡ್ ರೂಪದಲ್ಲಿ

ಹೊಂಬಾಳೆ ಸಿನೆಮಾ ನಿರ್ಮಾಣ ಸಂಸ್ಥೆ ಕಳೆದ ವರ್ಷ 'ಮಹಾವತಾರ ನರಸಿಂಹ' ಎಂಬ ಆ್ಯನಿಮೇಟೆಡ್ ಸಿನೆಮಾ ನಿರ್ಮಿಸಿ ಭಾರೀ ಯಶಸ್ಸು ಕಂಡಿತಷ್ಟೆ? ಇದೀಗ ಮತ್ತೊಂದು ಸಿನೆಮಾ 'ಮಹಾವತಾರ ಪರಶುರಾಮ' ಚಿತ್ರದ ನಿರ್ಮಾಣಕ್ಕೆ ತಯಾರಿ ನಡೆದಿದೆ. ಸಿನೆಮಾದ ಮೊದಲ ಪೋಸ್ಟರ್ ಬಿಡುಗಡೆಯಾಗಿದ್ದು, ಮುಂದಿನ ವರ್ಷಾಂತ್ಯಕ್ಕೆ ಚಿತ್ರ ಬಿಡುಗಡೆಯಾಗುವ ಸೂಚನೆಯೂ ದೊರೆತಿದೆ.

ಪರಶುರಾಮ ಜಯಂತಿಯ ಹಿನ್ನೆಲೆಯಲ್ಲಿ ಬಿಡುಗಡೆಯಾದ ವಿಡಿಯೋದಲ್ಲಿ 'ಪರಶುರಾಮ ಆಡಳಿತಗಾರನಲ್ಲ, ಆದರೆ ಅಧರ್ಮದ ವಿರುದ್ಧದ ಶಕ್ತಿ, ಧರ್ಮ ತನ್ನ ಅಸ್ತಿತ್ವ ಕಳೆದುಕೊಂಡಾಗ ಪರಶುರಾಮನ ಉಗಮವಾಗುತ್ತದೆ' ಎಂಬ ಸಂದೇಶವಿದೆ. ಪರಶುರಾಮ ತನ್ನ ಆಯುಧವಾದ ಕೊಡಲಿಯನ್ನು ಹಿಡಿದು ನಡೆಯುವ ದೃಶ್ಯ ಪೋಸ್ಟರ್‌ನಲ್ಲಿದೆ. 'ಮಹಾವತಾರ ನರಸಿಂಹ' ಚಿತ್ರವನ್ನು ನಿರ್ದೇಶಿಸಿದ್ದ ಅಶ್ವಿನ್ ಕುಮಾರ್ ಅವರೇ ಈ ಚಿತ್ರದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.

ಕಳೆದ ವರ್ಷ ತೆರೆಕಂಡಿದ್ದ 'ಮಹಾವತಾರ ನರಸಿಂಹ' ಚಿತ್ರವನ್ನು ಆರು ಕೋಟಿ ರೂ. ವೆಚ್ಚದಲ್ಲಿ ತಯಾರಿಸಲಾಗಿತ್ತು. ಆದರೆ ಅದು 320 ಕೋಟಿ ರೂ.ಗೂ ಅಧಿಕ ಮೊತ್ತದ ಗಳಿಕೆ ಕಾಣುವ ಮೂಲಕ ದೊಡ್ಡ ಲಾಭ ತಂದುಕೊಟ್ಟಿತ್ತು. ಈ ಯಶಸ್ಸಿನಿಂದ ಉತ್ತುಕರಾಗಿರುವ ಹೊಂಬಾಳೆ ನಿರ್ಮಾಣ ಸಂಸ್ಥೆ ಕ್ಲೀಮ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಈ ಬೃಹತ್ ಸರಣಿ ಆಯೋಜಿಸಿದೆ. ಇದೇ ಸರಣಿಯಲ್ಲಿ ಮುಂದಿನ ಕೆಲವು ವರ್ಷಗಳಲ್ಲಿ 'ಮಹಾವತಾರ ರಘುನಂದನ', 'ದ್ವಾರಕಾಧೀಶ', 'ಗೋಕುಲಾನಂದ' ಹಾಗೂ 'ಕಲ್ಕಿ' ಚಿತ್ರಗಳು ತೆರೆಗೆ ಬರಲಿವೆ. ■

ಸೌಖ್ಯ ಸಂವಾದ

❑ **ಡಾ|| ಸಂಧ್ಯಾ ಪೈ**

● ***ಪ್ರಶ್ನೆ:** ನಾನೊಬ್ಬಳು ಗೃಹಿಣಿ. ಮುದ್ದಾದ, ಚುರುಕಾದ ಇಬ್ಬರು ಮಕ್ಕಳು. ಮೂರು ವರ್ಷದವರೆಗೆ ಸ್ಥಳೀಯ ಶಾಲೆಯೊಂದರಲ್ಲಿ ಟೆಂಪರರಿ ಟೀಚರಾಗಿದ್ದೆ. ಆದರೆ ಇತ್ತೀಚೆಗೆ ಅಲ್ಲಿನ ಕಿರಿಕಿರಿ, ನಿಂದನೆಗೆ ಬೇಸತ್ತು ಹೊರಬಂದೆ. ನಾನು ಪುಸ್ತಕ ಓದುತ್ತೇನೆ. ತರಕಾರಿ ಕೃಷಿ ಮಾಡುತ್ತೇನೆ. ಆದರೆ ಇತ್ತೀಚೆಗೆ ಯಾಕೋ ಬೇಸರ. ಕೆಲಸಬಿಟ್ಟು ಮನೆಯೇ ಪ್ರಪಂಚವಾದಾಗ 'ಜೀವನ ಇಷ್ಟೇನಾ' ಎಂದು ಅನ್ನಿಸುತ್ತಿದೆ. 75ರ ಅತ್ತೆ ಮಾಡುವ ಕೆಲಸದ ಅರ್ಧದಷ್ಟೂ ನನಗೆ ಮಾಡಲಾಗುವುದಿಲ್ಲ. ಹಾರಲು ಮರೆತ 'ಹನುಮಂತ'ನ ಕಥೆಯಾಗಿದೆ ನನ್ನದು. ಈ ಗೊಂದಲದ ಪರಿಹಾರ ಹೇಗೆ?*

ರಜನಿ, ವಿಟ್ಲ

ಉತ್ತರ: 'ಹನುಮಂತ'ನ ಸಹಜ ಸ್ವಭಾವ ಹಾರುವುದಲ್ಲ! ಅವನ ಅಗತ್ಯಗಳಿಗೆ ಬೇಕಾಗಿ ಅವನು ಹಾರುವುದನ್ನು ಕಲಿತ, ಮಹತ್ಕಾರ್ಯಕ್ಕಾಗಿ ಅದನ್ನು ಬಳಸಿಕೊಂಡ. ಲಂಕೆಗೆ ಹಾರುವ ದಾರಿಯಲ್ಲಿ ನೂರುಯೋಜನ ವಿಸ್ತಾರವಾದ ಸಾಗರ ಇತ್ತು. 'ಮೈನಾಕ' ಪರ್ವತ ಇತ್ತು, 'ಸುರಮ' ಎಂಬ ರಾಕ್ಷಸಿ ಬಾಯಿ ತೆರೆದು ಕಾಯುತ್ತಿದ್ದಳು. ಎಲ್ಲವನ್ನೂ ಎದುರಿಸಿ, ಯಶಸ್ವಿಯಾಗಿ, ಲಂಕೆಯನ್ನು ಪ್ರವೇಶಿಸಿ, ಸೀತೆಯನ್ನು ಕಂಡು, ರಾವಣನಿಗೆ ಸಂದೇಶ ನೀಡಿದ. ನೀವು ಋಣಾತ್ಮಕವಾಗಿ ಚಿಂತಿಸುತ್ತಿರುವಿರಿ. ಇದು ಸಾಮಾನ್ಯವಾಗಿ, ಬಹುತೇಕ ನಮ್ಮೆಲ್ಲರ ಬದುಕಿನ ಕಥೆ. ಎದ್ದುನಿಂತು ಮೈಕೊಡವಿಕೊಂಡು, ಜಡತ್ವ ತೊರೆದರೆ ಸರಿ! ಹತ್ತು ದಾರಿ ಕಾಣುತ್ತದೆ. ನಿಮಗೂ ಒಂದು ಮಾರ್ಗ ಕಾಯುತ್ತಿದೆ. ಹುಡುಕಿದರೆ ಸಿಕ್ಕುತ್ತದೆ. 'ಗೊಂದಲ'ದಿಂದ ಹೊರಬನ್ನಿ. ಯಾರ ಮೇಲೂ ಅವಲಂಬನೆ ಬೇಡ, ಪ್ರತಿಯೊಬ್ಬರಿಗೂ ಅವರವರದ್ದೇ ಆದ ಬದುಕಿದೆ.
ನಿಮ್ಮಂತೆ ಸಮಸ್ಯೆಗಳಿವೆ. ನಿಮ್ಮ ಹಾದಿ ಸಿಕ್ಕಿದಾಗ ನಮಗೆ ತಿಳಿಸಿ!

● ***ಪ್ರಶ್ನೆ:** ನಾನೊಬ್ಬ ವಿದ್ಯಾರ್ಥಿ. ಸಾಹಿತ್ಯದಲ್ಲಿ ಆಸಕ್ತಿ ಜಾಸ್ತಿ. ಆದರೆ ಪೋಷಕರು ಇಂಜಿನಿಯರಿಂಗ್ ಸೇರಲು ಒತ್ತಾಯಿಸುತ್ತಿದ್ದಾರೆ. ಭವಿಷ್ಯದ ದೃಷ್ಟಿಯಿಂದ ಇದು ಒಳ್ಳೆಯದು ಎಂಬುದು ನನಗೂ ಅರಿವಿದೆ. ಆದರೆ ಸಾಹಿತ್ಯದ ಆಸಕ್ತಿ ನನ್ನನ್ನು ಕಟ್ಟಿ ಹಾಕುತ್ತಿದೆ. ಈ ಗೊಂದಲದಿಂದ ಹೇಗೆ ಹೊರಬರಲಿ?*

ಮಾನವ್, ಬೆಂಗಳೂರು

ಉತ್ತರ: 'ಇಂಜಿನಿಯರ್' ವೃತ್ತಿ, 'ಸಾಹಿತ್ಯ' ಪ್ರವೃತ್ತಿ. ನಾನು ಗೃಹಿಣಿ, ಇದು ನನ್ನ ಬದುಕು. 'ಸಾಹಿತ್ಯ' ನನ್ನ ಪ್ರವೃತ್ತಿ ಹಾಗೂ ಜೀವನದ ಒಂದು ಸುಂದರ ಭಾಗ! ನೀವು ಏನೇ ಆಗಿರಲಿ, ನಿಮ್ಮ ಮೆಚ್ಚುಗೆಯ ಒಂದು ವಿಷಯವನ್ನು ಪೋಷಿಸಿಕೊಂಡರೆ ಅದು ವೃತ್ತಿಯಷ್ಟೇ ಗಾಢವಾಗಿ ನಿಮ್ಮ ಮಾನಸಿಕ ಸಮತೋಲನಕ್ಕೆ ಆಧಾರವಾಗಬಹುದು. ಆದುದರಿಂದ ಇದರಲ್ಲಿ ಗೊಂದಲದ ಪ್ರಶ್ನೆಯೇ ಇಲ್ಲ!

● ***ಪ್ರಶ್ನೆ:** ಎಷ್ಟೇ ಓದಬೇಕೆಂದು ಕುಳಿತರೂ ಗಮನ ಸದಾ ಮೊಬೈಲ್ ಕಡೆಗೆ ಹೋಗುತ್ತದೆ. ಕಣ್ಣಿಗೆ ಕಾಣದಂತೆ ದೂರ ಇಟ್ಟರೂ ಮನಸ್ಸು ಅಲ್ಲೇ ಇರುತ್ತದೆ. ಕೆಲವೊಮ್ಮೆ ನೋಟ್ಸ್ ಬರೆದುಕೊಳ್ಳಲು ಮೊಬೈಲ್ ಹಿಡಿದರೂ ಮುಗಿದಾಕ್ಷಣ ಸಾಮಾಜಿಕ ಜಾಲತಾಣ, ರೀಲ್ಸ್ ಇಲ್ಲವೇ ಗೇಮ್ಸ್ ಕಡೆಗೆ ಮನಸ್ಸು ಸೆಳೆಯುತ್ತದೆ. ಮನಸ್ಸನ್ನು ಹತೋಟಿಗೆ ತರುವುದು ಹೇಗೆ?*

ಕಾವ್ಯಾ, ಬೇಲೂರು

ಉತ್ತರ: ಇದು ಇಂದಿನ ಒಂದು ದೊಡ್ಡ ಸಮಸ್ಯೆ. 'ಮೊಬೈಲ್ ಗೀಳು', ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ, ಎಂಬತ್ತರ ಹರೆಯದ ಮೇಲಿನವರನ್ನೂ ಕಾಡುತ್ತದೆ ಅಥವಾ ಹಿಡಿದಿಡುತ್ತದೆ. ಇದು ನಮ್ಮಂಥ ನಿವೃತ್ತರಿಗೆ ಒಂದು ರೀತಿಯ ವರವೂ ಹೌದು. ಉಪಯುಕ್ತ, ಮನಸ್ಸಿಗೆ ಮುದ ನೀಡುವ ಕೆಲವೊಮ್ಮೆ ಬೇಕೆನಿಸಿದ ಅಗತ್ಯ ವಿಷಯಗಳನ್ನು ತಿಳಿಸುವ ಈ ಜಾಲತಾಣಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ನಮ್ಮನ್ನು ಇವು ಆಳದಂತೆ ನೋಡಿಕೊಂಡರೆ ಸೈ. ನಿಮ್ಮ ಪ್ರಶ್ನೆಯಿಂದ ನೀವೊಬ್ಬ 'ವಿದ್ಯಾರ್ಥಿ' ಎಂದು ಊಹಿಸುತ್ತೇನೆ. ಕೆಲವು ಕಾಲ ನನಗೂ ಹೀಗೇ ಆಗುತ್ತಿತ್ತು. ನನಗೆ ತಿಳಿದುಕೊಳ್ಳಲು ಅಗತ್ಯ ಇರುವ ವಿಷಯ ಬೇರೆ ಎಲ್ಲಿಯೂ ಸಿಕ್ಕದಾಗ ಜೆಮಿನಿ, ಚಾಟ್ ಜಿ.ಪಿ.ಟಿ., ಗೂಗಲ್‌ಗಳನ್ನು ಉಪಯೋಗಿಸುವುದರಿಂದ ಶುರುವಾಗಿ, ಕಡೆಗೆ ಅನಗತ್ಯ ವಿಷಯಗಳಿಗೂ ಮನಸ್ಸು ಹರಿಯತೊಡಗಿ, ಒಂದು ರೀತಿಯ ಗೀಳಾಯಿತು. ತಕ್ಕ ಸಮಯದಲ್ಲಿ ಎಚ್ಚೆತ್ತುಕೊಂಡೆ. ಈಗಲೂ ನಾನು ಇವುಗಳನ್ನು ಉಪಯೋಗಿಸುತ್ತೇನೆ, ಆದರೆ ಮಿತಿಯಲ್ಲಿ. ಕೆಲವು ಕಾಲ ಇವು ನನ್ನನ್ನು ಆಳಿದವು. ಈಗ ನಾನು ಇವುಗಳನ್ನು ಆಳುತ್ತಿದ್ದೇನೆ ಇಷ್ಟೇ.
You should be the master!

● ***ಪ್ರಶ್ನೆ:** ದಿನವಿಡೀ ಒತ್ತಡದ ಕೆಲಸವಿರುತ್ತದೆ. ಮಾನಸಿಕ ಶಾಂತಿಗಾಗಿ ನಾನು ಯಾವ ಸರಳ ಹವ್ಯಾಸಗಳನ್ನು ಅಳವಡಿಸಿಕೊಳ್ಳಬಹುದು?*

ಶ್ರಾವಂತಿ, ಚಿತ್ರದುರ್ಗ

ಉತ್ತರ: ಶಾಂತಿ ಎಂದರೇನು? ಮಾಡುತ್ತಿರುವ ಕೆಲಸ ನಿಮಗೆ ಪ್ರಿಯ ಅಲ್ಲವೇನು? ಇದರಿಂದ ಒತ್ತಡ ಉಂಟಾಗುತ್ತದೇನು? ಯಾವ ಕೆಲಸ ಮಾಡುತ್ತಿರುವಿರೋ ಅದನ್ನು ಆಸಕ್ತಿಯಿಂದ ಆಸ್ವಾದಿಸುತ್ತಾ ಮಾಡಿದಾಗ ಅಲ್ಲಿ ಒತ್ತಡವೂ ಇರುವುದಿಲ್ಲ, ಅಶಾಂತಿಯೂ ಇರುವುದಿಲ್ಲ. ಇನ್ನು ಹವ್ಯಾಸಗಳ ಮಾತಿಗೆ ಬಂದರೆ ಇದು ತುಂಬಾ ಅಗತ್ಯ. ಬದುಕಿನ ಏಕತಾನತೆಯನ್ನು ತಡೆಗಟ್ಟುವಂಥ, ನಿಮಗೆ ಪ್ರಿಯವಾದ ಹವ್ಯಾಸವನ್ನು ಗುರುತಿಸಿ, ಅದರಲ್ಲಿ ಭಾಗಶಃ ತೊಡಗಿಸಿಕೊಳ್ಳುವುದರಿಂದ, ನೀವು ಅನುಭವಿಸುತ್ತಿರುವ 'ಒತ್ತಡ' ಕಡಿಮೆಯಾಗಬಹುದು. ಕಡೆಗೊಂದು ಮಾತು. ಈ 'ಒತ್ತಡ' ಎಂಬ ಶಬ್ದಕ್ಕೆ ಮಹತ್ವ ಬೇಡ. ಕ್ರಮಬದ್ಧವಾಗಿ, ಶಿಸ್ತುಬದ್ಧವಾಗಿ ರೂಪಿಸಿಕೊಂಡರೆ ಬದುಕು ಸುಲಲಿತ!

● ***ಪ್ರಶ್ನೆ:** ಯಾವುದೇ ಕಾರ್ಯಕ್ರಮಕ್ಕೆ ಹೋಗಲಿ, ಇಲ್ಲವೇ ಹೊಸ ಜಾಗಕ್ಕೆ ಭೇಟಿ ನೀಡಲಿ, ಹೊಸಬರೊಂದಿಗೆ ಮಾತನಾಡಲು ಹಿಂಜರಿಯುತ್ತೇನೆ. ಇದೇ ಕಾರಣಕ್ಕೆ ಹಲವು ಅವಕಾಶಗಳನ್ನೂ ಕಳೆದುಕೊಂಡಿದ್ದೇನೆ. ನನ್ನ ಸಂವಹನ ಕಲೆ ಹಾಗೂ ಆತ್ಮವಿಶ್ವಾಸವನ್ನು ಹೇಗೆ ಹೆಚ್ಚಿಸಿಕೊಳ್ಳಲಿ?*

ಭಾವೇಶ್, ಚೆನ್ನೈ

ಉತ್ತರ: ನಮ್ಮ ಸಮಸ್ಯೆ ಸಂವಹನ ಕಲೆಯೂ ಅಲ್ಲ, ಆತ್ಮವಿಶ್ವಾಸವೂ ಅಲ್ಲ. ಬಾಲ್ಯದಲ್ಲಿ ನಡೆದ ಯಾವುದೋ ಒಂದು ಘಟನೆ ಯಾ ಘಟನೆಗಳಿಂದ ನಿಮ್ಮ ಮನಸ್ಸು ಅಪರಿಚಿತರೊಂದಿಗೆ ಬೆರೆಯಲು ಹಿಂಜರಿಯುತ್ತದೆ. ಅದು ಅವಮಾನಕರವಾಗಿರಬಹುದು, ಭಯಾನಕವಾಗಿರಬಹುದು. ಅದು ನಿಮ್ಮ ಸುಪ್ತ ಪ್ರಜ್ಞೆಯಲ್ಲಿ ಅಡಗಿ ಈ ಹಿಂಜರಿಕೆಗೆ ಕಾರಣವಾಗಿದೆ. ನಮ್ಮೆಲ್ಲರಲ್ಲೂ ಹಲವು ವ್ಯಕ್ತಿತ್ವಗಳು ಅಡಗಿಕೊಂಡಿವೆ. ಭೂಮಿಗೆ ಬಿದ್ದ ಕ್ಷಣದಿಂದ ಪಡೆಯುವ ಅನುಭವಗಳು, ನಮ್ಮ ಸುಪ್ತಮನಸ್ಸಿನಲ್ಲಿ ಅಡಗಿ ಕುಳಿತು ಸಮಯ ಸಿಕ್ಕಿದಾಗ ಹೊರಬರಲು ಪ್ರಯತ್ನಿಸುತ್ತವೆ. ಇದನ್ನು ಗುರುತಿಸಿದವರು, ಇದರಿಂದ ತಮಗೆ ಹಾನಿಯುಂಟಾಗುತ್ತದೆ ಎಂದು ತಿಳಿದಾಗ ಇದನ್ನು 'ಕೊಂದು ಹಾಕುತ್ತಾರೆ' ಮತ್ತೆ ಎಂದೂ ಇದು ತೊಂದರೆ ಕೊಡುವುದಿಲ್ಲ. ನೀವು ನಿಮ್ಮ ಕೊರತೆಯನ್ನು ಗುರುತಿಸಲು ಪ್ರಯತ್ನಿಸಿ. ಅಂಥ ವ್ಯಕ್ತಿತ್ವ ನಿಮಗೆ ಕಾಣಿಸಿದರೆ, ಅದನ್ನು ನಾಶಮಾಡಲು ಪ್ರಯತ್ನಿಸಿ. ಮನೋವೈಜ್ಞಾನಿಕ ಚಿಕಿತ್ಸೆಯಲ್ಲಿ ಇದನ್ನು ಪರಿಣತ ವೈದ್ಯರು ಉಪಯೋಗಿಸುತ್ತಾರೆ. ಗುಡ್ ಲಕ್. ■

ನಿಮ್ಮಲ್ಲೂ ಪ್ರಶ್ನೆಗಳಿವೆಯೇ? (ರಾಜಕೀಯ, ಆರ್ಥಿಕ ಹೊರತುಪಡಿಸಿ)
ಇದ್ದರೆ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಿರಿ ಅಥವಾ ಮೇಲ್ ಮಾಡಿ.

ವಿಳಾಸ: ಸಂಪಾದಕರು
'ಸೌಖ್ಯ ಸಂವಾದ' ವಿಭಾಗ
'ತರಂಗ' ವಾರಪತ್ರಿಕೆ ಮಣಿಪಾಲ-576104
ಮೇಲ್: taranga@manipalpress.com

Published by Dr T. Satish U. Pai For Manipal Media Network Limited from Udayavani Building, Press Corner, Manipal – 576 104
and Printed by Mr. B. Narahari at Manipal Technologies Limited, Old Pharmacy College Building, Manipal – 576 104. Editor: Dr U.B.Rajalakshmi

No Chemicals | No Preservatives | Aids Digestion | Highly Nutrient

Available at 13+ Locations Across Karnataka

Dharmasthala | Belthangady | Dharwad | Hassan | Rayapura | Puttur | Moodabidri
Parika Udupi | Kumbalagodu | Bangalore | Bejai | Amruthavarshini and More

Our Products

Pickles | Millets & Value Added Products | Nutritional Food | Kokum Squash | Savouries
Agarbatti | Floor Cleaners | Toilet Cleaners | Handwash | Dishwash | Detergent Powder & Liquid
Apparels - Mens Ethnic and formal Wear | Women Ethnic and formal Wear | Kids Wear and Uniforms

SIRI SHRI DHARMASTHALA SIRI GRAMODYOGA SAMSTHE

Toll Free : 18001026711
www.siridharmasthala.com

TARANGA Illustrated Family Kannada Weekly Member ABC and INS/RNI/36661/83REGD. No.UDP/1256/2024-2026. 9-4-2026
Posted at Manipal Post Office on every Thursday

Since 1938 ಮದುವೆ ಹಾಗೂ ಶುಭಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ

ಬಿ.ಎಸ್.ಚನ್ನಬಸಪ್ಪ & ಸನ್ಸ್

ಕಾಳಿಕಾದೇವಿ ರಸ್ತೆ & ಪಿ.ಜೆ ಬಡಾವಣೆ, ದಾವಣಗೆರೆಯಲ್ಲಿ ಮಾತ್ರ

THE COMPLETE FAMILY STORE

ಸ್ಯಾರೀಸ್ | ಮೆನ್ಸ್‌ವೇರ್ | ಲೇಡೀಸ್‌ವೇರ್ | ಕಿಡ್ಸ್‌ವೇರ್ | ಹೋಮ್ ಫರ್ನಿಶಿಂಗ್